ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಪ್ಲಾಸ್ಟಿಕ್ ತ್ಯಾಜ್ಯವನ್ನು ಕರಗಿಸಲು ಉಪ್ಪನ್ನು ಬಳಸಬಹುದಂತೆ!

ಮಹಿಳಾ ಮತ
ಮಹಿಳಾ ಮೀಸಲಾತಿ: ಜಾರಿಯಲ್ಲಿ ಹತ್ತಾರು ತೊಡಕುಗಳು

‘42 ಲಕ್ಷ ಹೆಕ್ಟೇರ್ ಬೆಳೆ ಹಾನಿ’ 5

ಭಾರತ- ಆಸ್ಟ್ರೇಲಿಯಾ ಕ್ರಿಕೆಟ್ ಸರಣಿ 22ರಿಂದ

ಎಲ್ಐಸಿ ಏಜೆಂಟರ ಗ್ರ್ಯಾಚ್ಯುಟಿ ಮಿತಿ ಏರಿಕೆ 11

ರಾಹುಲ್ ನಾಯಕ: ಮರಳಿದ ಅಶ್ವಿನ್ 12

ಲೋಕಸಭೆ, ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಸ್ಥಾನ ಮೀಸಲು: ತಿದ್ದುಪಡಿ ಮಸೂದೆ

ಮಹಿಳಾ ಮೀಸಲಿಗೆ ಮುಂದಡಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಸ್ಥಾನಗಳನ್ನು ಮೀಸಲಿಡುವ ಸಾಂವಿಧಾನಿಕ ತಿದ್ದುಪಡಿ ಮಸೂದೆಯನ್ನು ಕೇಂದ್ರ ಸರ್ಕಾರ ಲೋಕಸಭೆಯಲ್ಲಿ ಮಂಗಳವಾರ ಮಂಡಿಸಿದೆ.

‘ಇಂಡಿಯಾ’ ಮೈತ್ರಿಕೂಟ ಪಕ್ಷಗಳ ಒಗ್ಗಟ್ಟು ಛಿದ್ರಗೊಳಿಸುವ ಹಾಗೂ ಕೇಂದ್ರದಲ್ಲಿ ಸತತ ಮೂರನೇ ಬಾರಿಗೆ ಅಧಿಕಾರದ ಚುಕ್ಕಾಣಿ ಹಿಡಿಯುವ ಮಹದಾಸೆಯನ್ನು ಸಾಕಾರಗೊಳಿಸಲು ಮತ್ತೊಂದು ತಂತ್ರವಾಗಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಮಹಿಳಾ ಮೀಸಲಾತಿಯ ಮಂತ್ರ ಜಪಿಸಿದೆ.

ಲೋಕಸಭೆ ಹಾಗೂ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ನೀಡುವ ಮಸೂದೆಯನ್ನು ಎಚ್.ಡಿ.ದೇವೇಗೌಡ ಅವರು ಪ್ರಧಾನಿಯಾಗಿದ್ದಾಗ ಮೊದಲ ಬಾರಿಗೆ ಮಂಡಿಸಲಾಗಿತ್ತು. ಪಕ್ಷಗಳ ನಡುವೆ ಒಮ್ಮತದ ಕೊರತೆಯಿಂದಾಗಿ 27 ವರ್ಷಗಳಲ್ಲಿ ಅದಕ್ಕೆ ಅಂಗೀಕಾರ ಸಿಕ್ಕಿರಲಿಲ್ಲ. ಈಗ ಮಹಿಳಾ ಮೀಸಲಾತಿ ಮಸೂದೆಗೆ ಬೆಂಬಲ ನೀಡುವುದಾಗಿ ಬಹುತೇಕ ಪಕ್ಷಗಳು ಪ್ರಕಟಿಸಿವೆ. ಇದರಿಂದಾಗಿ, ಲೋಕಸಭೆ ಹಾಗೂ ರಾಜ್ಯಸಭೆಯಲ್ಲಿ ಈ ಮಸೂದೆಗೆ ಅಂಗೀಕಾರ ಸಿಗುವುದು ಬಹುತೇಕ ಖಚಿತ.

ಆದರೆ, ಹೊಸದಾಗಿ ಜನಗಣತಿ ಮತ್ತು 543 ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆಯ ನಂತರವೇ ಶೇ 33 ಮೀಸಲಾತಿಯನ್ನು ಪರಿಚಯಿಸಲಾಗುವುದು ಎಂದು ಮಸೂದೆ ಹೇಳುತ್ತದೆ. ಹೀಗಾಗಿ, 2029ರ ಲೋಕಸಭಾ ಚುನಾವಣೆಯಲ್ಲಿ ಮಹಿಳಾ ಮೀಸಲಾತಿ ಜಾರಿಗೆ ಬರಬಹುದು ಎಂದು ಅಂದಾಜಿಸಲಾಗಿದೆ.

ಈ ಮಸೂದೆಗೆ ‘ನಾರಿ ಶಕ್ತಿ ವಂದನ್ ಅಧಿನಿಯಂ’ ಎಂದು ಹೆಸರಿಡಲಾಗಿದ್ದು, ಲೋಕಸಭೆಯಲ್ಲಿ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಮಂಗಳವಾರ ಮಂಡಿಸಿದರು. ಮಸೂದೆ ಕುರಿತು ಲೋಕಸಭೆಯಲ್ಲಿ ಬುಧವಾರ ಬೆಳಿಗ್ಗೆ 11ರಿಂದ ಸಂಜೆ 6ರ ವರೆಗೆ ಚರ್ಚೆ ನಡೆಯಲಿದೆ. ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ಅವರು ಆರಂಭದಲ್ಲಿ ಮಾತನಾಡಲಿದ್ದಾರೆ. ಬುಧವಾರವೇ ಮಸೂದೆಗೆ ಅಂಗೀಕಾರ ಸಿಗುವ ಸಾಧ್ಯತೆ ಇದೆ. ರಾಜ್ಯಸಭೆಯಲ್ಲಿ ಗುರುವಾರ ಬೆಳಿಗ್ಗೆಯಿಂದ ಚರ್ಚೆಗಳು ನಡೆಯಲಿವೆ. ಹೊಸ ಸಂಸತ್ತಿನ ಕಟ್ಟಡದಲ್ಲಿ ಮಂಡಿಸಿದ ಮೊದಲ ಮಸೂದೆ ಇದಾಗಿದೆ.

‘ಈ ಮಸೂದೆಯು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ನೀತಿ ನಿರೂಪಣೆಯಲ್ಲಿ ಮಹಿಳೆಯರ ಹೆಚ್ಚಿನ ಭಾಗವಹಿಸುವಿಕೆಯನ್ನು ಸಕ್ರಿಯಗೊಳಿಸುತ್ತದೆ ಮತ್ತು 2047ರ ವೇಳೆಗೆ ದೇಶವನ್ನು ವಿಕಸಿತ ಭಾರತವನ್ನಾಗಿ ಮಾಡುವ ಗುರಿಯನ್ನು ಸಾಧಿಸಲು ಸಹಾಯ ಮಾಡುತ್ತದೆ’ ಎಂದು ಮಸೂದೆಯಲ್ಲಿ ಉಲ್ಲೇಖಿಸಲಾಗಿದೆ.

ದಶಕದಿಂದ ಶೈತ್ಯಾಗಾರ ಸೇರಿದ್ದ ಮಸೂದೆಗೆ ಅಂಗೀಕಾರ ಪಡೆಯುವ ಮೂಲಕ ಒಂದೇ ಕಲ್ಲಿನಲ್ಲಿ ಹಲವು ‘ಹಕ್ಕಿ’ಗಳನ್ನು ಕೊಲ್ಲುವುದು ಬಿಜೆಪಿಯ ತಂತ್ರ. ಮಹಿಳಾ ಮೀಸಲಾತಿ ನೀಡಲು ಮೋದಿ ಅವರೇ ಬರಬೇಕಾಯಿತು ಎಂದು ಬಿಂಬಿಸುವುದು ಪಕ್ಷದ ಮುಖ್ಯ ಗುರಿ. ಈ ಅಸ್ತ್ರವನ್ನೇ ಬಳಸಿಕೊಂಡು ಲೋಕಸಭಾ ಚುನಾವಣೆಯಲ್ಲಿ ಮಹಿಳಾ ಮತಗಳನ್ನು ಸೆಳೆಯುವುದು ಪಕ್ಷದ ಆಲೋಚನೆ.

9ನೇ ಪುಟ ನೋಡಿ

ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವರು, ಸಂಸದರು ನೂತನ ಸಂಸತ್ ಭವನಕ್ಕೆ ಮಂಗಳವಾರ ತೆರಳಿದರು –ಪಿಟಿಐ ಚಿತ್ರ

ಸರ್ವಾನುಮತದಿಂದ ಅಂಗೀಕಾರಕ್ಕೆ ಮೋದಿ ಮನವಿ

‘ಈ ಮಸೂದೆಯು ಹೆಚ್ಚಿನ ಮಹಿಳೆಯರು ಸಂಸತ್ತು, ವಿಧಾನಸಭೆಗಳ ಸದಸ್ಯರಾಗುವುದನ್ನು ಖಚಿತಪಡಿಸುತ್ತದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು. ಸಂಸತ್ತಿನ ಉಭಯ ಸದನಗಳಲ್ಲಿ ಸರ್ವಾನುಮತದಿಂದ ಮಸೂದೆಯನ್ನು ಅಂಗೀಕರಿಸುವಂತೆ ಮನವಿ ಮಾಡಿದರು.

ಮಸೂದೆ ಬಗ್ಗೆ ಹಲವು ವರ್ಷಗಳಿಂದ ಹಲವು ಬಾರಿ ಚರ್ಚೆಗಳು ನಡೆದಿವೆ. ಸಂಸತ್ತಿನ ಮಸೂದೆ ಜಾರಿಗೆ ಹಲವು ಪ್ರಯತ್ನಗಳು ನಡೆದಿವೆ. 1996ರಲ್ಲಿ ಈ ಸಂಬಂಧ ಮಸೂದೆ ಮಂಡಿಸಲಾಗಿತ್ತು. ಅಟಲ್ ಬಿಹಾರಿ ವಾಜಪೇಯಿ ಅವರ ಕಾಲದಲ್ಲಿ ಹಲವು ಪ್ರಯತ್ನಗಳು ನಡೆದಿವೆ. ಆದರೆ, ಸಂಖ್ಯಾಬಲದ ಕೊರತೆಯಿಂದ ಮಹಿಳಾ ಮೀಸಲಾತಿಯ ಕನಸು ಈಡೇರಲಿಲ್ಲ’ ಎಂದು ಹೇಳಿದರು.

‘ಮಹಿಳೆಯರಿಗೆ ಅವರ ಹಕ್ಕುಗಳನ್ನು ಖಚಿತಪಡಿಸಲು ಮತ್ತು ಅವರ ಶಕ್ತಿಯನ್ನು ಹಲವು ಅತ್ಯುತ್ತಮ ಕೆಲಸಗಳಿಗೆ ಬಳಸಲು ದೇವರು ನನ್ನನ್ನು ಆಯ್ಕೆ ಮಾಡಿದ್ದಾನೆ. ಆ ದಿಕ್ಕಿನಲ್ಲಿ ಮತ್ತೊಮ್ಮೆ ನಮ್ಮ ಸರ್ಕಾರ ಅಡಿ ಇಡುತ್ತಿದೆ. ಸೋಮವಾರ ನಡೆದ ಸಂಪುಟ ಸಭೆಯು ಮಸೂದೆಯನ್ನು ಅಂಗೀಕರಿಸಿದೆ. ಸೆಪ್ಟೆಂಬರ್ 19ರ ಈ ದಿನ ಇತಿಹಾಸದಲ್ಲಿ ದಾಖಲಾಗಲಿದೆ. ಮಸೂದೆ ಮೂಲಕ ನಮ್ಮ ಪ್ರಜಾಪ್ರಭುತ್ವ ಬಲಗೊಳ್ಳಲಿದೆ’ ಎಂದು ಅವರು ಹೇಳಿದರು.

ಮಹಿಳೆಯರಿಗೆ ಮೀಸಲಾತಿ ನೀಡುವ ಮೊದಲ ಪ್ರಯತ್ನ ನನ್ನ ಕಾಲದಲ್ಲಿ ಆರಂಭವಾಯಿತು. ಇದೀಗ ಮೀಸಲಾತಿ ನೀಡಲು ಮೋದಿ ಧೈರ್ಯ ತೋರಿದ್ದಾರೆ
ಎಚ್.ಡಿ.ದೇವೇಗೌಡ
ಮಾಜಿ ಪ್ರಧಾನಿ

ಮಹಿಳಾ ಮೀಸಲಾತಿ ಮಸೂದೆ ಜಾರಿಗೆ ಬಂದ ನಂತರ ಲೋಕಸಭೆಯಲ್ಲಿ ಮಹಿಳಾ ಸಂಸದರ ಸಂಖ್ಯೆ 78ರಿಂದ 181ಕ್ಕೆ ಏರಲಿದೆ
ಅರ್ಜುನ್ ರಾಮ್ ಮೇಘವಾಲ್
ಕೇಂದ್ರ ಕಾನೂನು ಸಚಿವ

ಎಸ್‌ಪಿ, ಬಿಎಸ್‌ಪಿ ಷರತ್ತುಬದ್ಧ ಬೆಂಬಲ

ಮಸೂದೆಗೆ ಸಮಾಜವಾದಿ ಪಕ್ಷ (ಎಸ್‌ಪಿ) ಅಧ್ಯಕ್ಷ ಅಖಿಲೇಶ್ ಯಾದವ್ ಹಾಗೂ ಬಿಎಸ್‌ಪಿ ವರಿಷ್ಠೆ ಮಾಯಾವತಿ ಬೆಂಬಲ ವ್ಯಕ್ತಪಡಿಸಿದರು. ಆದರೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ಮಹಿಳೆಯರಿಗೆ ಸಮರ್ಪಕ ಮೀಸಲಾತಿ ನೀಡಬೇಕು ಎಂದು ಒತ್ತಾಯಿಸಿದರು. ಅಲ್ಪಸಂಖ್ಯಾತರಿಗೆ ಮಹಿಳಾ ಕೋಟಾದಲ್ಲಿ ಮೀಸಲಾತಿ ನೀಡಬೇಕು ಎಂದು ಅಖಿಲೇಶ್ ಆಗ್ರಹಿಸಿದರು.

9ನೇ ಪುಟ ನೋಡಿ

ಜಾಹೀರಾತು

ಮಂಡಿನೋವು
ಸರ್ಜರಿ ಇಲ್ಲದೇ ಉಪಶಮನ

೮೦೦೦ಕ್ಕೂ ಹೆಚ್ಚು ಮಂದಿಗೆ ನೋವು ಮುಕ್ತ ಜೀವನವನ್ನು ನೀಡಿದೆ ಅಲಿವಿಯೇಟ್

ಮಂಗಳೂರಿನ ನಿವಾಸಿ ದಿನೇಶ್ ಶರ್ಮಾ ಎಂಬುವವರಿಗೆ ತೀವ್ರ ಮೊಣಕಾಲು ನೋವು ಕಾಣಿಸಿಕೊಂಡಿದ್ದು, ಇದರಿಂದ ಮೂಲಭೂತ ಕೆಲಸಗಳನ್ನು ಮಾಡುವುದು ಕೂಡ ಕಷ್ಟಕರವಾಗಿತ್ತು. ಸಂಧಿವಾತದ ವಿರುದ್ಧದ ಹೋರಾಟದಲ್ಲಿ, ಅವರು ಹಲವಾರು ವೈದ್ಯರನ್ನು ಭೇಟಿಯಾದರು, ವಿವಿಧ ವೈದ್ಯಕೀಯ ವಿಧಾನಗಳಲ್ಲಿ ವಿಫಲರಾಗಿದ್ದರಿಂದ ಅವರ ಹುಡುಕಾಟ ಮುಂದುವರೆಯಿತು. ದಿನಪತ್ರಿಕೆಯ ಲೇಖನವನ್ನು ನೋಡಿದ ಅವರು ಬೆಂಗಳೂರಿನ ‘ಅಲಿವಿಯೇಟ್ ಪೇನ್ ಕ್ಲಿನಿಕ್’ನಲ್ಲಿ ಹೆಸರಾಂತ ನೋವು ತಜ್ಞ ಡಾ. ಸ್ವಾಗತೇಶ್ ಬಸಿಯಾ ಅವರನ್ನು ಭೇಟಿಯಾದರು. ರೋಗ-ನಿರ್ಣಯ ಮಾಡಿದ ಅಲಿವಿಯೇಟ್‌ನ ವೈದ್ಯರು,ನಂತರ ಅವರ ಮೊಣಕಾಲುಗಳ ಸ್ಥಿತಿ ಮತ್ತು ಅವರ ಸ್ಥಿತಿಗೆ ಲಭ್ಯವಿರುವ ಕಾರ್ಯವಿಧಾನಗಳ ಅಗತ್ಯತೆ ಮತ್ತು ಪ್ರಕಾರದ ಬಗ್ಗೆ ಆಳವಾಗಿ ವಿವರಿಸಿದರು. ಮೊಣಕಾಲಿನ ಸಂಧಿವಾತದ ನಿರ್ವಹಣೆಯಲ್ಲಿ ಇತ್ತೀಚಿನ ಲಭ್ಯವಿರುವ ಸಾಬೀತಾದ ಅಂತರರಾಷ್ಟ್ರೀಯ ಪ್ರಗತಿಗಳ ಪ್ರಕಾರ ವೈದ್ಯರು ಅತ್ಯುತ್ತಮ ಚಿಕಿತ್ಸೆಯನ್ನು ನೀಡುವುದಾಗಿ ಭರವಸೆ ಕೊಟ್ಟರು. ಅವರಿಗೆ ಬೊಟೊಕ್ಸ್+ ರೇಡಿಯೊ ಫ್ರೀಕ್ವೆನ್ಸಿ ಅಬ್ಲೇಶನ್ + ಪ್ರೊಲೋಥೆರಪಿ ಚಿಕಿತ್ಸೆಯನ್ನು ನೀಡಲಾಯಿತು. ಇದಾದ ನಂತರ ಒಂದು ತಿಂಗಳಿಗಿಂತ ಕಡಿಮೆ ಅವಧಿಯಲ್ಲಿ ಅವರು ತಮ್ಮ ಕಿರಿಯ ದಿನಗಳಂತೆ ತಮ್ಮ ಸಕ್ರಿಯ, ನೋವು ಮುಕ್ತ ಜೀವನಶೈಲಿಗೆ ಮರಳಿದರು. ದಿನೇಶ್ ಶರ್ಮಾ ರವರು ಈಗ ಹೊಸ ಜೀವನ ಮತ್ತು ಚಲನಶೀಲತೆಯ ಎರಡನೇ ಇನ್ನಿಂಗ್ಸ್ ಅನ್ನು ಸಂತೋಷದಿಂದ ಆನಂದಿಸುತ್ತಿದ್ದಾರೆ.

ಅಲಿವಿಯೇಟ್‌ನಲ್ಲಿ ನೀಡುವ ಕೆಲವು ಚಿಕಿತ್ಸೆಗಳು ಹೀಗಿವೆ:

ಬೊಟೊಕ್ಸ್ ಚುಚ್ಚುಮದ್ದು: ಈ ಚಿಕಿತ್ಸೆಯು ಮೊಣಕಾಲಿನ ಕೀಲುಗಳಿಗೆ ನೇರವಾಗಿ ಚುಚ್ಚುಮದ್ದಿನ ಮೂಲಕ ಕೆಲವು ಔಷಧಿಗಳನ್ನು ನೀಡಲಾಗುತ್ತದೆ. ಇದರಿಂದಾಗಿ ನೋವು ಕ್ರಮ ಕ್ರಮವಾಗಿ ಕಡಿಮೆಯಾಗುತ್ತಾ ಬರುತ್ತದೆ.

ಸ್ಟೆಮ್ ಸೆಲ್ ಥೆರಪಿ: ಇದು ಕನಿಷ್ಠ ಛೇದದಿಂದ ಮಾಡುವ ವಿಧಾನವಾಗಿದ್ದು, ಇದರಲ್ಲಿ ಆರೋಗ್ಯಕರ ಕಾಂಡಕೋಶಗಳನ್ನು ಮೊಣಕಾಲಿನ ಜಂಟಿಗೆ ಚುಚ್ಚಲಾಗುತ್ತದೆ. ಈ ಕಾಂಡಕೋಶಗಳು ಉರಿಯೂತವನ್ನು ಕಡಿಮೆ ಮಾಡುವ ಸಾಮರ್ಥ್ಯವನ್ನು ಹೊಂದಿವೆ ಮತ್ತು ಮೊಣಕಾಲು ಬದಲಿ ಶಸ್ತ್ರಚಿಕಿತ್ಸೆಯ ಅಗತ್ಯವನ್ನು ವಿಳಂಬಗೊಳಿಸುತ್ತದೆ ಅಥವಾ ತಪ್ಪಿಸುತ್ತದೆ.

ಪ್ರೋಲೋಥೆರಪಿ: ಗ್ಲೂಕೋಸ್ ದ್ರಾವಣವನ್ನು ಮೊಣಕಾಲಿನ ಜಂಟಿಗೆ ಈ ವಿಧಾನದಲ್ಲಿ ಚುಚ್ಚಲಾಗುತ್ತದೆ, ಇದು ಹಾನಿಗೊಳಗಾದ ಅಂಗಾಂಶದಲ್ಲಿ ದೇಹದ ರಕ್ಷಣೆ ಮತ್ತು ಗುಣಪಡಿಸುವ ಕಾರ್ಯವಿಧಾನಗಳನ್ನು ಉತ್ತೇಜಿಸುತ್ತದೆ. ಇದು ದೇಹದ ಸ್ವಂತ ಗುಣಪಡಿಸುವ ಶಕ್ತಿಯನ್ನು ಬಳಸಿಕೊಂಡು ಹಾನಿಗೊಳಗಾದ ಅಂಗಾಂಶಗಳನ್ನು ಬಲಪಡಿಸಲು ಸಹಾಯ ಮಾಡುತ್ತದೆ ಮತ್ತು ಇದರಿಂದಾಗಿ ಗಾಯಗೊಂಡ ಅಂಗಾಂಶವನ್ನು ಗುಣಪಡಿಸುತ್ತದೆ. ಈ ಕಾರಣದಿಂದಾಗಿ ಪ್ರೋಲೋಥೆರಪಿ ಪ್ರಪಂಚದಾದ್ಯಂತದ ರೋಗಿಗಳು ಮತ್ತು ವೈದ್ಯರಲ್ಲಿ ಬಹಳ ಜನಪ್ರಿಯವಾಗಿದೆ.

ಜೆನಿಕ್ಯುಲರ್ ನರ ರೇಡಿಯೊಫ್ರೀಕ್ವೆನ್ಸಿ ಅಬ್ಲೇಶನ್: ಜೆನಿಕ್ಯುಲರ್ ನರಗಳ ರೇಡಿಯೊಫ್ರೀಕ್ವೆನ್ಸಿ ಅಬ್ಲೇಶನ್ ಮೆದುಳಿಗೆ ನೋವಿನ ಸಂಕೇತಗಳನ್ನು ಕಳುಹಿಸುವ ಮೊಣಕಾಲಿನ ನರಗಳನ್ನು ಗುರಿಯಾಗಿಸುತ್ತದೆ ಮತ್ತು ನಿಶ್ಚೇಷ್ಟಿತಗೊಳಿಸುತದೆ. ಇದು ಯಾವುದೇ ತೊಡಕುಗಳಿಲ್ಲದೆ ತಕ್ಷಣದಲ್ಲಿಯೇ ನೋವು ಪರಿಹಾರವನ್ನು ನೀಡುತ್ತದೆ.

ನೀವು ಅಸ್ಥಿಸಂಧಿವಾತದಿಂದ ಬಳಲುತ್ತಿರುವ ರೋಗಿಗಳಲ್ಲಿ ಒಬ್ಬರಾಗಿದ್ದರೆ, ಚಿಂತಿಸಬೇಡಿ. ನಿಮ್ಮ ಸಕ್ರಿಯ ಜೀವನಶೈಲಿಯನ್ನು ಮರಳಿ ತರಲು ‘ಅಲಿವಿಯೇಟ್ ಕ್ಲಿನಿಕ್’ ಭರವಸೆ ನೀಡುತದೆ. ಕೂಡಲೇ ಕೆಳಗಿನ ಸಂಖ್ಯೆಗಳಿಗೆ ಕರೆ ಮಾಡಿ.

ಅಲಿವಿಯೇಟ್ ಅನ್ನು ಏಕೆ ಆಯ್ಕೆ ಮಾಡುವುದು?
- ಸರ್ಜರಿ ಇಲ್ಲದೇ ನೋವು ಉಪಶಮನ
- 30 ನಿಮಿಷದ ವಿಧಾನ
- ಆಸ್ಪತ್ರೆ ವಾಸವಿಲ್ಲ
- 48 ಗಂಟೆಗಳಲ್ಲಿ ನಿಮ್ಮ ಕೆಲಸಕ್ಕೆ ತೆರಳಬಹುದು
- ಕಡಿಮೆ ವೆಚ್ಚದ ಚಿಕಿತ್ಸೆ

ಮೊಣಕಾಲು ನೋವಿನ ಹೊರತಾಗಿ, ಈ ಚಿಕಿತ್ಸಾಲಯವು ಬೆನ್ನು, ಕುತ್ತಿಗೆ, ಭುಜ, ಕಾಲು ಮತ್ತು ಪಾದದ, ಕೆಳ ಬೆನ್ನು, ಕ್ಯಾನ್ಸರ್ ನೋವು ಇತ್ಯಾದಿಗಳಿಗೆ ಪರಿಣಾಮಕಾರಿ ಚಿಕಿತ್ಸೆಯನ್ನು ನೀಡುತ್ತಾರೆ.

ಅಲಿವಿಯೇಟ್
ಪೇನ್ ಮ್ಯಾನೇಜ್‌ಮೆಂಟ್ ಕ್ಲಿನಿಕ್ಸ್

ಅಲಿವಿಯೇಟ್ ರವರ ಕ್ಲಿನಿಕ್‌ಗಳು ಬೆಂಗಳೂರಿನಲ್ಲಿ ಇಲ್ಲಿವೆ
ಸದಾಶಿವನಗರ | ಇಂದಿರಾನಗರ
ಜಯನಗರ | ಟಿ. ದಾಸರಹಳ್ಳಿ

CALL NOW 84949 73146 080 23614888

ಕೆನಡಾ ರಾಜತಾಂತ್ರಿಕ ಅಧಿಕಾರಿ ಉಚ್ಚಾಟನೆ

ನವದೆಹಲಿ (ಪಿಟಿಐ): ಖಾಲಿಸ್ತಾನ ಪ್ರತ್ಯೇಕತಾವಾದಿ ನಾಯಕನ ಹತ್ಯೆಯಲ್ಲಿ ಭಾರತದ ಕೈವಾಡವಿದೆ ಎಂದು ಕೆನಡಾದ ಪ್ರಧಾನಿ ಜಸ್ಟಿನ್ ಟ್ರುಡೊ ಅವರು ಮಾಡಿರುವ ಆರೋಪವನ್ನು ಭಾರತ ತಿರಸ್ಕರಿಸಿದೆ. ಅಲ್ಲದೆ ಕೆನಡಾದ ರಾಜತಾಂತ್ರಿಕ ಅಧಿಕಾರಿಯನ್ನು ಉಚ್ಚಾಟಿಸಿದೆ.

10

ಚಿನಕುರಳಿ

ಪ್ರಕಾಶ್ ಶೆಟ್ಟಿ

ನವದೆಹಲಿ: ಕೇಂದ್ರ ಸಚಿವರು, ರಾಜ್ಯ ಸಂಸದರು ಭಾಗಿ

ಕಾವೇರಿ ಬಿಕ್ಕಟ್ಟು: ಇಂದು ಸಭೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾವೇರಿ ನದಿ ನೀರು ಹಂಚಿಕೆ ವಿವಾದ, ಕೇಂದ್ರ ಸರ್ಕಾರದ ಮುಂದೆ ಬಾಕಿಯಿರುವ ರಾಜ್ಯದ ಯೋಜನೆಗಳು ಹಾಗೂ ಬರ ಪರಿಹಾರಕ್ಕೆ ಸಂಬಂಧಿಸಿದಂತೆ ಚರ್ಚಿಸಲು ನವದೆಹಲಿಯಲ್ಲಿ ಬುಧವಾರ ಬೆಳಿಗ್ಗೆ 8.30ಕ್ಕೆ ಮಹತ್ವದ ಸಭೆಯನ್ನು ಆಯೋಜಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ನಡೆಯಲಿರುವ ಸಭೆಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸುವ ಕೇಂದ್ರ ಸಚಿವರು, ಸಂಸದರು ಹಾಗೂ ರಾಜ್ಯಸಭಾ ಸದಸ್ಯರು ಭಾಗವಹಿಸಲಿದ್ದಾರೆ. ಬಳಿಕ ಮುಖ್ಯಮಂತ್ರಿಯವರು ಕೇಂದ್ರ ಸಚಿವರನ್ನು ಭೇಟಿ ಮಾಡಲಿದ್ದಾರೆ.

ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ ಅವರು ಅಧಿಕಾರಿಗಳ ಜತೆಗೆ ಮಂಗಳವಾರ ಪೂರ್ವಭಾವಿ ಸಭೆ ನಡೆಸಿದರು.

ದೇವೇಗೌಡ ಆತಂಕ: ಕಾವೇರಿ ಬಿಕ್ಕಟ್ಟಿನ ಕುರಿತು ರಾಜ್ಯಸಭಾ ಸದಸ್ಯ ಎಚ್.ಡಿ.ದೇವೇಗೌಡ ಅವರು ರಾಜ್ಯಸಭೆಯಲ್ಲಿ ಸೋಮವಾರ ವಿಷಯ ಪ್ರಸ್ತಾಪಿಸಿದರು. ಕಾವೇರಿ ಜಲಾನಯನ ಪ್ರದೇಶದ ವಾಸ್ತವ ಸ್ಥಿತಿಯನ್ನು ಅರಿಯಲು ಅಧಿಕಾರಿಗಳ ತಂಡವನ್ನು ಕಳುಹಿಸಬೇಕು ಎಂದು ಒತ್ತಾಯಿಸಿದರು. ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ಬೆಂಗಳೂರಿಗೆ ಕುಡಿಯುವ ನೀರು ಬೇಕು. ಮುಂದೇನು ಆಗುತ್ತದೆ ಎಂದು ಗೊತ್ತಿಲ್ಲ. ನಮ್ಮ ರಾಜ್ಯ ಸರ್ಕಾರ ತೆಗೆದುಕೊಂಡ ನಿರ್ಣಯ ದುರಂತ. ಯಾವ ಆಧಾರದಲ್ಲಿ ನಿರ್ಧಾರ ತೆಗೆದುಕೊಂಡರೋ ಗೊತ್ತಿಲ್ಲ. ನಾವು ಎಡವಿದ್ದೇವೆ’ ಎಂದರು.

ಮಂಡ್ಯ ಸಂಸದೆ ಸುಮಲತಾ ಅಂಬರೀಷ್ ಅವರು ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಅವರನ್ನು ಸೋಮವಾರ ಭೇಟಿ ಮಾಡಿ ಮನವಿ ಮಾಡಿದರು. ‘ತಮಿಳುನಾಡಿಗೆ ಕಾವೇರಿ ನೀರನ್ನು ನಿರಂತರವಾಗಿ ಬಿಡಲಾಗುತ್ತಿದೆ. ಇದರಿಂದ ಮಂಡ್ಯ ಭಾಗದ ರೈತರ ಪರಿಸ್ಥಿತಿ ಚಿಂತಾಜನಕವಾಗಿದೆ. ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೂ ಹಾಹಾಕಾರ ಎದುರಾಗಲಿದೆ’ ಎಂದು ಗಮನ ಸೆಳೆದರು.

5 ಸಾವಿರ ಕ್ಯೂಸೆಕ್ ನೀರು ಹರಿಸಲು ಆದೇಶ

ತಮಿಳುನಾಡಿಗೆ ಪ್ರತಿದಿನ 5 ಸಾವಿರ ಕ್ಯೂಸೆಕ್ (ಅರ್ಧ ಟಿಎಂಸಿಯಷ್ಟು) ಕಾವೇರಿ ನೀರನ್ನು ಕರ್ನಾಟಕ ಬಿಡಬೇಕು ಎಂಬ ಕಾವೇರಿ ನೀರು ನಿಯಂತ್ರಣ ಸಮಿತಿಯ (ಸಿಡಬ್ಲ್ಯುಆರ್‌ಸಿ) ಶಿಫಾರಸನ್ನು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ (ಸಿಡಬ್ಲ್ಯುಎಂಎ) ಎತ್ತಿ ಹಿಡಿದಿದೆ.

ಪ್ರಾಧಿಕಾರದ ಅಧ್ಯಕ್ಷ ಸೌಮಿತ್ರ ಕುಮಾರ್ ಹಲ್ದಾರ್ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು. ಸೆಪ್ಟೆಂಬರ್ 13ರಿಂದ ಅನ್ವಯವಾಗುವಂತೆ 15 ದಿನಗಳ ಕಾಲ ನೀರು ಹರಿಸುವಂತೆ ಪ್ರಾಧಿಕಾರ ಸೂಚಿಸಿದೆ.

ಕರ್ನಾಟಕದ ಕಾವೇರಿ ಜಲಾನಯನ ಪ್ರದೇಶದಲ್ಲಿ ಬರದ ತೀವ್ರತೆ ಹೆಚ್ಚುತ್ತಿದೆ. ಹೀಗಾಗಿ, ಜಲಾಶಯಗಳಿಗೆ ಒಳಹರಿವು ಸುಧಾರಿಸದೆ ನೀರು ಬಿಡುಗಡೆ ಸಾಧ್ಯವಿಲ್ಲ ಎಂದು ಕರ್ನಾಟಕದ ಅಧಿಕಾರಿಗಳು ಹೇಳಿದರು. ಪ್ರತಿದಿನ 12,500 ಕ್ಯೂಸೆಕ್ ನೀರು ಬಿಡುಗಡೆ ಮಾಡಬೇಕು ಎಂದು ತಮಿಳುನಾಡಿನ ಅಧಿಕಾರಿಗಳು ಪಟ್ಟು ಹಿಡಿದರು. ಬಳಿಕ ಪ್ರಾಧಿಕಾರವು ಬಿಳಿಗುಂಡ್ಲು ಮಾಪನ ಕೇಂದ್ರದಲ್ಲಿ 5 ಸಾವಿರ ಕ್ಯೂಸೆಕ್ ನೀರಿನ ಹರಿವನ್ನು ಖಚಿತಪಡಿಸಬೇಕು ಎಂದು ಕರ್ನಾಟಕಕ್ಕೆ ಸೂಚಿಸಿತು. ಕಾವೇರಿ ನೀರು ನಿರ್ವಹಣಾ ಸಮಿತಿಯ ಮುಂದಿನ ಸಭೆ ಇದೇ 26ಕ್ಕೆ ನಿಗದಿಯಾಗಿದೆ.

ಬಿಜೆಪಿ ಟಿಕೆಟ್ ವಂಚನೆ • ಒಡಿಶಾದಲ್ಲಿ ಸಿಕ್ಕಿಬಿದ್ದ ಹಾಲವೀರಪ್ಪ ಸ್ವಾಮೀಜಿ

ಟಿ–ಶರ್ಟ್, ಚಡ್ಡಿ ಧರಿಸಿದ್ದ ಹಾಲಶ್ರೀ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಟಿಕೆಟ್ ವಂಚನೆ ಪ್ರಕರಣದ ಆರೋಪಿಯಾಗಿರುವ ಅಭಿನವ ಹಾಲವೀರಪ್ಪ ಸ್ವಾಮೀಜಿ ಒಡಿಶಾದಲ್ಲಿ ಸಿಕ್ಕಿಬಿದ್ದಿದ್ದು, ಅವರನ್ನು ವಶಕ್ಕೆ ಪಡೆದಿರುವ ಸಿಸಿಬಿ ಪೊಲೀಸರು ಬೆಂಗಳೂರಿಗೆ ಮಂಗಳವಾರ ಕರೆ ತಂದಿದ್ದಾರೆ.

ಉದ್ಯಮಿ ಗೋವಿಂದ ಬಾಬು ಪೂಜಾರಿಗೆ ಬಿಜೆಪಿ ಟಿಕೆಟ್ ಕೊಡಿಸುವ ಆಮಿಷವೊಡ್ಡಿ ಹಣ ಪಡೆದು ವಂಚಿಸಿದ್ದ ಪ್ರಕರಣ ದಾಖಲಾಗುತ್ತಿದ್ದಂತೆ ಸ್ವಾಮೀಜಿ ತಲೆಮರೆಸಿಕೊಂಡಿದ್ದರು. ಆರೋಪಿ ಚೈತ್ರಾ ಕುಂದಾಪುರ ಹಾಗೂ ಇತರರನ್ನು ಬಂಧಿಸಿದ್ದ ಪೊಲೀಸರು, ಸ್ವಾಮೀಜಿಗಾಗಿ ಹುಡುಕಾಟ ಆರಂಭಿಸಿದ್ದರು.

‘ವಿಜಯನಗರ ಜಿಲ್ಲೆ ಹೂವಿನ ಹಡಗಲಿ ತಾಲ್ಲೂಕಿನ ಹಿರೇಹಡಗಲಿ ಹಾಲಸ್ವಾಮಿ ಮಠದ ಅಭಿನವ ಹಾಲವೀರಪ್ಪ ಸ್ವಾಮೀಜಿ, ಬಂಧನ ಭೀತಿಯಲ್ಲಿ ಬೆಂಗಳೂರು ತೊರೆದು ಒಡಿಶಾಗೆ ಹೋಗಿದ್ದರು. ಈ ಬಗ್ಗೆ ಮಾಹಿತಿ ಕಲೆಹಾಕಿದ್ದ ಪೊಲೀಸರ ವಿಶೇಷ ತಂಡ, ಒಡಿಶಾಗೆ ಹೋಗಿ ಸ್ಥಳೀಯ ಪೊಲೀಸರ ನೆರವಿನಿಂದ ಅವರನ್ನು ಬಂಧಿಸಿ ನಗರಕ್ಕೆ ಕರೆತಂದಿದೆ. ವೈದ್ಯಕೀಯ ಪರೀಕ್ಷೆ ನಡೆಸಿ ಅವರನ್ನು ಬುಧವಾರ ಬೆಳಿಗ್ಗೆ ನ್ಯಾಯಾಲಯಕ್ಕೆ ಹಾಜರುಪಡಿಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದೇವೆ’ ಎಂದು ಸಿಸಿಬಿ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ತಮ್ಮ ಗುರುತು ಸಿಗಬಾರದೆಂದು ಕಾವಿ ಬಟ್ಟೆ ಕಳಚಿಟ್ಟಿದ್ದ ಸ್ವಾಮೀಜಿ, ಟಿ-ಶರ್ಟ್, ಜರ್ಕಿನ್ ಹಾಗೂ ಚಡ್ಡಿ (ಬರ್ಮುಡಾ) ಮಾತ್ರ ಧರಿಸಿದ್ದರು. ಅದೇ ವೇಷದಲ್ಲಿ ನಗರದಿಂದ ನಗರಕ್ಕೆ ಸಾಮಾನ್ಯ ವ್ಯಕ್ತಿಯಂತೆ ಸಂಚರಿಸುತ್ತಿದ್ದರು. ಹೀಗಾಗಿ, ಯಾರೊಬ್ಬರೂ ಗುರುತು ಹಿಡಿದಿರಲಿಲ್ಲ’ ಎಂದು ಹೇಳಿದರು.

10ನೇ ಪುಟ ನೋಡಿ

ಹಿರೇಹಡಗಲಿ ಹಾಲಸ್ವಾಮಿ ಮಠದ ಅಭಿನವ ಹಾಲವೀರಪ್ಪ ಸ್ವಾಮೀಜಿ

ಚೈತ್ರಾ ವಿಚಾರಣೆ ಮುಂದುವರಿಕೆ

ವಿಚಾರಣೆ ವೇಳೆ ಕುಸಿದು ಬಿದ್ದು ಚಿಕಿತ್ಸೆಗೆಂದು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಾಗಿದ್ದ ಚೈತ್ರಾ ಕುಂದಾಪುರ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದ್ದು, ಸೋಮವಾರವೇ ಅವರನ್ನು ಆಸ್ಪತ್ರೆಯಿಂದ ಮಹಿಳಾ ಸಾಂತ್ವನ ಕೇಂದ್ರಕ್ಕೆ ಕಳುಹಿಸಲಾಗಿದೆ. ‘ಚೈತ್ರಾ ಗುಣಮುಖವಾಗಿದ್ದಾರೆ. ಅವರ ವಿಚಾರಣೆ ಮುಂದುವರಿಸಲಾಗಿದೆ. ಮಹಜರು ಹಾಗೂ ಇತರೆ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಬೇಕಿದೆ. ಕಸ್ಟಡಿ ಅವಧಿ ಶುಕ್ರವಾರ ಮುಗಿಯಲಿದ್ದು, ಅಂದೇ ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು’ ಎಂದು ಸಿಸಿಬಿ ಪೊಲೀಸರು ಹೇಳಿದರು.

ಸುಧಾ, ಮಯೂರ ಓದಿರಿ

ನೀರಿನ ಅದಾಲತ್

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ) ವಿವಿಧ ಉಪವಿಭಾಗಗಳಲ್ಲಿ ಸೆ.21 ರಂದು ಬೆಳಿಗ್ಗೆ 9.30ರಿಂದ 11 ಗಂಟೆ ವರೆಗೆ ನೀರಿನ ಅದಾಲತ್ ನಡೆಸಲಿದೆ. ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ಸಹಾಯವಾಣಿ 1916ಕ್ಕೆ ಕರೆ ಮಾಡಬಹುದು ಅಥವಾ ವಾಟ್ಸ್‌ಆ್ಯಪ್ ಸಂಖ್ಯೆ 87622 28888ಗೆ ಸಂದೇಶ ಕಳುಹಿಸಿ ದೂರು ದಾಖಲಿಸಬಹುದು ಎಂದು ಮಂಡಳಿಯ ಪ್ರಕಟಣೆ ತಿಳಿಸಿದೆ.

ಮಳೆ ಅಬ್ಬರ: ಕೆಳಸೇತುವೆಗಳು ಭರ್ತಿ

ಗಣೇಶನ ಹಬ್ಬದ ಸಂಭ್ರಮಕ್ಕೂ ತುಸು ವಿಘ್ನ • ವಿವಿಧ ಜಂಕ್ಷನ್‌ಗಳಲ್ಲಿ ವಾಹನ ಸವಾರರ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸೋಮವಾರ ಸಂಜೆ ಹಾಗೂ ತಡರಾತ್ರಿ ಸುರಿದ ಧಾರಾಕಾರ ಮಳೆಯಿಂದಾಗಿ ಹಲವು ಜಂಕ್ಷನ್ ಹಾಗೂ ಕೆಳಸೇತುವೆಗಳಲ್ಲಿ ನೀರು ಭರ್ತಿಯಾಗಿ ವಾಹನ ಸವಾರರು ಪರದಾಡಿದರು.

ಗಣೇಶ ಹಬ್ಬದ ಸಂಭ್ರಮಕ್ಕೆ ಮಳೆ ತುಸು ಅಡಚಣೆ ಉಂಟು ಮಾಡಿತ್ತು. ಮಳೆ ಹಾಗೂ ಗಾಳಿಗೆ ಅಲ್ಲಲ್ಲಿ ಬೃಹತ್ ಮರಗಳು ಉರುಳಿದ್ದವು.

'ನಗರದಲ್ಲಿ ಬುಧವಾರದಿಂದ ನಾಲ್ಕು ದಿನ ಸಂಜೆ ಅಥವಾ ರಾತ್ರಿ ವೇಳೆ ಧಾರಾಕಾರ ಮಳೆಯಾಗುವ ಸಾಧ್ಯತೆಯಿದೆ' ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮೆಜೆಸ್ಟಿಕ್, ಚಾಮರಾಜಪೇಟೆ, ಸಂಪಂಗಿರಾಮನಗರ, ರಾಜಮಹಲ್ ಗುಟ್ಟಹಳ್ಳಿ, ಮಾರತ್‌ಹಳ್ಳಿ, ಎಚ್. ಗೊಲ್ಲಹಳ್ಳಿ, ಸಾರಕ್ಕಿ, ಪುಲಕೇಶಿನಗರ, ಹೆಮ್ಮಿಗೆಪುರ, ಕೋರಮಂಗಲ, ಬಿಟಿಎಂ ಲೇಔಟ್, ಬೆಳ್ಳಂದೂರು, ಎಚ್‌ಎಸ್‌ಆರ್ ಲೇಔಟ್, ಬೇಗೂರು, ಅರಕೆರೆ, ಹೊಯ್ಸಳ ನಗರ, ದೊಮ್ಮಲೂರು, ಲಕ್ಕಸಂದ್ರದಲ್ಲಿ ಸೋಮವಾರ ರಾತ್ರಿ ಭಾರಿ ಮಳೆ ಸುರಿದಿದೆ.

ಎಚ್‌ಎಎಲ್ ವಿಮಾನ ನಿಲ್ದಾಣದ ಸುತ್ತಮುತ್ತಲ ಪ್ರದೇಶದಲ್ಲಿ ಭಾರಿ ಮಳೆಯಾಗಿದೆ. ನಿಲ್ದಾಣದ ಸಮೀಪದ ಕೆಳಸೇತುವೆಯಲ್ಲಿ ಅಪಾರ ಪ್ರಮಾಣ ನೀರು ಸಂಗ್ರಹವಾಗಿದ್ದು, ಕಾರೊಂದು ನೀರಿನಲ್ಲಿ ಮುಳುಗಿತ್ತು. ಬಿಇಎಲ್ ವೃತ್ತದಿಂದ ಎನ್‌ಜಿಇಎಫ್ ಸಿಗ್ನಲ್ ಕಡೆಗೆ ತೆರಳುವ ಮಾರ್ಗದಲ್ಲಿ ಬೃಹತ್ ಮರ ಉರುಳಿ ಸಂಚಾರ ಬಂದ್ ಆಗಿತ್ತು.

ಹಲಸೂರು ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯ ಗಂಗಾಧರ್ ಚೆಟ್ಟಿ ರಸ್ತೆಯ ತಿರುವಳ್ಳುವರ್ ಜಂಕ್ಷನ್ ಮಳೆ ನೀರಿನಿಂದ ಆವರಿಸಿತ್ತು. ವಾಹನ ಸವಾರರು ಪರ್ಯಾಯ ಮಾರ್ಗದಲ್ಲಿ ತೆರಳಿದರು. ವಿಲ್ಲರ್ ರಸ್ತೆಯ ಸಿಂಧಿ ಕಾಲೊನಿ ಜಂಕ್ಷನ್ ಜಲಾವೃತವಾಗಿತ್ತು. ಬನ್ನೇರುಘಟ್ಟ ರಸ್ತೆಯ ನಾಗಾರ್ಜುನ ಹೋಟೆಲ್ ಬಳಿ ಅಪಾರ ನೀರು ಸಂಗ್ರಹಗೊಂಡು ಸಮಸ್ಯೆ ಉಂಟಾಗಿತ್ತು.

ಶಿವಾನಂದ ವೃತ್ತದ ರೈಲ್ವೆ ಕೆಳಸೇತುವೆ ಜಲಾವೃತಗೊಂಡಿತ್ತು. ನೆಹರೂ ವೃತ್ತದಲ್ಲಿ ಅಪಾರ ಪ್ರಮಾಣದ ನೀರು ಸಂಗ್ರಹಗೊಂಡಿತ್ತು.



ಎಚ್‌ಎಎಲ್ ವಿಮಾನ ನಿಲ್ದಾಣದ ಬಳಿಯ ಕೆಳಸೇತುವೆಯಲ್ಲಿ ಸಂಗ್ರಹವಾಗಿದ್ದ ನೀರಿನಲ್ಲಿ ತೇಲಿದ ಕಾರು (ಮೊದಲ ಚಿತ್ರ). ಶಿವಾನಂದ ವೃತ್ತದ ಬಳಿಯ ರೈಲ್ವೆ ಕೆಳಸೇತುವೆಯಲ್ಲಿ ಆವರಿಸಿದ್ದ ಮಳೆ ನೀರು.

21ಕ್ಕೆ ವಿಷನ್–2030 ವಿಚಾರ ಸಂಕಿರಣ

ಬೆಂಗಳೂರು: ಬೆಂಗಳೂರು ಮ್ಯಾನೇಜ್‌ಮೆಂಟ್ ಅಸೋಸಿಯೇಷನ್‌ನಿಂದ (ಬಿಎಂಎ) ಸೆ.21ರಂದು 'ವಿಷನ್–2030 ಕರ್ನಾಟಕ' ವಿಚಾರಸಂಕಿರಣ ನಗರದ ಹೋಟೆಲ್ ಕ್ಯಾಪಿಟಲ್‌ನಲ್ಲಿ ನಡೆಯಲಿದೆ. ರಾಜ್ಯಪಾಲ ಥಾವರಚಂದ್ ಗೆಹಲೋತ್ ಉದ್ಘಾಟಿಸುವರು.

ಜಯನಗರದಲ್ಲಿ ನೂತನವಾಗಿ ಆರಂಭಗೊಂಡಿರುವ ಕೋರದ 18ನೇ ಮಳಿಗೆಯನ್ನು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರು ಇತ್ತೀಚೆಗೆ ಉದ್ಘಾಟಿಸಿದರು. ಗಂಗಾರಾಮ್ ಸುಂಬದ್, ನೀಲೇಶ್ ಛಾಡ್ವಾ, ಧೀರೇನ್ ಸಿ. ಅಶೋಕ್, ಮಿತೇಶ್ ಸುಂಬದ್ ಅವರು ಹಾಜರಿದ್ದರು

ನಾಳೆ, ನಾಳಿದ್ದು ವಿದ್ಯುತ್ ವ್ಯತ್ಯಯ

ಬೆಂಗಳೂರು: ವಿದ್ಯುತ್ ನಿರ್ವಹಣಾ ಕೇಂದ್ರದಲ್ಲಿ ನಿರ್ವಹಣೆ ಕಾಮಗಾರಿ ಕೈಗೊಂಡಿರುವುದರಿಂದ ಇದೇ 21 ಮತ್ತು 22ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 3ಗಂಟೆವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

21ಕ್ಕೆ ವ್ಯತ್ಯಯವಾಗುವ ಸ್ಥಳಗಳು: ವೀವರ್ಸ್ ಕಾಲೊನಿ 1ನೇ ಕ್ರಾಸ್‌ನಿಂದ 9ನೇ ಕ್ರಾಸ್, ಮಾರುತಿನಗರ, ಪಿಲ್ಲಗಾನಹಳ್ಳಿ, ಗೊಟ್ಟಿಗೆರೆ, ಎಂಎಲ್‌ಎ ಲೇಔಟ್, ಭೋರಾ ಲೇಔಟ್, ಆಶ್ರಮ ರಸ್ತೆ, ಹಿಮಗಿರಿ ಮೆಡೋಸ್, ಕಮ್ಮನಹಳ್ಳಿ, ಬಾಲಾಜಿ ಗಾರ್ಡನ್ ಲೇಔಟ್, ಬಸವನಪುರ, ನೊಬೆಲ್ ರೆಸಿಡೆನ್ಸಿ, ನಂದಿವುಡ್ ಅಪಾರ್ಟ್‌ಮೆಂಟ್, ಎಸ್‌ಎನ್‌ಎನ್ ರಾಜನಗರ ಲೇಕ್, ವಿಶ್ವಿನಿ ರಾಜನಗರ ಲೇಕ್–2, ಮೈಲಸಂದ್ರ, ಹೊಮ್ಮದೇವನಹಳ್ಳಿ, ವಡ್ಡರಪಾಳ್ಯ, ಪ್ರಭಾಕರ ರೆಡ್ಡಿ ಲೇಔಟ್, ಬೇಟದಾಸಪುರ, ಹುಲ್ಲಹಳ್ಳಿ, ಆಸುಪಾಸಿನ ಪ್ರದೇಶಗಳು.

22ಕ್ಕೆ ವಿದ್ಯುತ್ ವ್ಯತ್ಯಯ: ಬೆಳ್ಳಂದೂರು, ಆರ್‌ಎಂಜೆಡ್, ದೇವರಬಿಸನಹಳ್ಳಿ, ಕರಿಯಮ್ಮನಪಾಳ್ಯ, ಅಕ್ಮೆ ಯೋಜನೆಗಳು, ಅನುಪಮಾ, ಟೋಟಲ್ ಮಾಲ್, ಶೋಭಾ ಐರೀಸ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಎಕ್ಸ್–ಸರ್ವೀಸ್‌ಮೆನ್ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ

ನಂ. 652/ಬಿ, 2ನೇ ಮಹಡಿ, ಡಾ॥ ರಾಜಕುಮಾರ್ ರಸ್ತೆ, 'ಡಿ' ಬ್ಲಾಕ್, 2ನೇ ಹಂತ, ರಾಜಾಜಿನಗರ, ಬೆಂಗಳೂರು : 560010. ದೂರವಾಣಿ 080–23521377. ದಿನಾಂಕ : 19–09–2023

2022–23ನೇ ಸಾಲಿನ ಸರ್ವ ಸದಸ್ಯರ ಸಭೆಯ ಸೂಚನಾ ಪತ್ರ

ಎಕ್ಸ್–ಸರ್ವೀಸ್‌ಮೆನ್ ಗೃಹ ನಿರ್ಮಾಣ ಸಹಕಾರ ಸಂಘದ 2022–23ನೇ ಸಾಲಿನ ಸರ್ವಸದಸ್ಯರ ಮಹಾ ಸಭೆಯನ್ನು ದಿನಾಂಕ 23–09–2023ರ ಶನಿವಾರ ಬೆಳಿಗ್ಗೆ 11.00 ಗಂಟೆಗೆ ಸರಿಯಾಗಿ ಸಂಘದ ಅಧ್ಯಕ್ಷರಾದ ಶ್ರೀ. ವಿ ಎಂ. ವಿಶ್ವರೂಪಾಚಾರ್‌ರವರ ಅಧ್ಯಕ್ಷತೆಯಲ್ಲಿ ಶ್ರೀ ಶಂಕರ ಸೇವಾ ಸಮಿತಿ, 4ನೇ 'ಎಂ' ಬ್ಲಾಕ್, ಎಸ್.ಜೆ.ಆರ್. ಕಾಲೇಜು ಎದುರು, ಡಾ॥ ರಾಜಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು–560 010ರಲ್ಲಿ ನಡೆಸಲು ತೀರ್ಮಾನಿಸಲಾಗಿರುತ್ತದೆ.

ಎಲ್ಲಾ ನಿಯತ /ಅರ್ಹ ಸದಸ್ಯರಿಗೆ (Regular Members) ಪ್ರತ್ಯೇಕವಾಗಿ ಸೂಚನಾ ಪತ್ರವನ್ನು ಅಂಚೆ ಮೂಲಕ ಈಗಾಗಲೇ ಕಳುಹಿಸಲಾಗಿದೆ. ಸೂಚನಾ ಪತ್ರ ತಲುಪದೇ ಇದ್ದಲ್ಲಿ, ಈ ಪತ್ರಿಕಾ ಪ್ರಕಟಣೆಯನ್ನೇ ಸೂಚನಾ ಪತ್ರವೆಂದು ಪರಿಗಣಿಸಿ ಮಹಾಸಭೆಯಲ್ಲಿ ಭಾಗವಹಿಸಲು ನಿಯತ/ಅರ್ಹ ಸದಸ್ಯರಿಗೆ ಈ ಮೂಲಕ ಕೋರಲಾಗಿದೆ.

ಸಂಘದ ಅರ್ಹ / ನಿಯತ ಸದಸ್ಯರು ಸಭೆಯಲ್ಲಿ ಭಾಗವಹಿಸಲು ಸಂಘದಿಂದ ನೀಡಿರುವ ಗುರುತಿನ ಚೀಟಿ ಕಡ್ಡಾಯವಾಗಿರುತ್ತದೆ.

ಸಂಘದ ನಿಯತ / ಅರ್ಹ ಸದಸ್ಯರು ಒಟ್ಟು 5 ಸಾಮಾನ್ಯ ಸಭೆಗಳ ಪೈಕಿ 2 ಸಭೆಗಳಿಗೆ ಹಾಜರಾಗಲು ತಪ್ಪಿದ್ದಲ್ಲಿ ಅವರು ಸಾಮಾನ್ಯ ಸಭೆಯಲ್ಲಿ/ ಚುನಾವಣೆಯಲ್ಲಿ ಮತ ಚಲಾಯಿಸಲು ಹಾಗೂ ಸ್ಪರ್ಧಿಸಲು ಅರ್ಹರಾಗಿರುವುದಿಲ್ಲ.

ಕೆಲಸದ ಸಮಯ: ಮಧ್ಯಾಹ್ನ 3:30 ರಿಂದ ಸಂಜೆ: 6:30ರ ವರೆಗೆ: ರಜಾ ದಿನಗಳನ್ನು ಹೊರತು ಪಡಿಸಿ

ಆಡಳಿತ ಮಂಡಳಿ ಪರವಾಗಿ, ಸಹಿ/– ಕಾರ್ಯದರ್ಶಿ

ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿ.,

ಕೇಂದ್ರ ಕಛೇರಿ : ಮಲ್ಲೇಶ್ವರಂ, ಬೆಂಗಳೂರು – 560 055. ದೂರವಾಣಿ: 080–23442648, 23341972

ವಾರ್ಷಿಕ ಮಹಾಸಭೆಯ ತಿಳುವಳಿಕೆ

ಬ್ಯಾಂಕಿನ 2022-2023ನೇ ಸಾಲಿನ 58ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ದಿನಾಂಕ 24.09.2023 ರಂದು ಭಾನುವಾರ ಬೆಳಗ್ಗೆ 9.30 ಘಂಟೆಗೆ ಸರಿಯಾಗಿ ಶ್ರೀ ವೈ. ಮುನಿಸ್ವಾಮಪ್ಪ ಕಲ್ಯಾಣ ಮಂಟಪ, ಯಶವಂತಪುರ (ಗೋಪಾಲ್ ಟಾಕೀಸ್ ಪಕ್ಕ), ಬೆಂಗಳೂರು-22 ಈ ವಿಳಾಸದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಸಿ.ಜಿ ವಿಜಯಕುಮಾರ್ ಇವರ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ, ಸದಸ್ಯರಿಗೆ ಸಭೆಯ ನೋಟೀಸನ್ನು ಅಂಚೆ ಮೂಲಕ ಕಳುಹಿಸಲಾಗಿದ್ದು ನೋಟೀಸ್ ತಲುಪದಿದ್ದಲ್ಲಿ ಈ ಪ್ರಕಟಣೆಯನ್ನೇ ಅಧಿಕೃತ ನೋಟೀಸ್ ಎಂದು ತಿಳಿದು ಮಾನ್ಯ ಸಾಮಾನ್ಯ ಸದಸ್ಯರು ಗುರುತಿನ ಚೀಟಿಯ ಜೊತೆಗೆ ಸಭೆಗೆ ಹಾಜರಾಗಲು ಕೋರಲಾಗಿದೆ.

ವಿಶೇಷ ಸೂಚನೆ:-

ಹಿರಿಯ ಸದಸ್ಯರಿಗೆ ಸನ್ಮಾನ:	ದಿನಾಂಕ:23.09.2023 ರಂದು ಶನಿವಾರ ಬೆಳಿಗ್ಗೆ 10.00 ರಿಂದ 1.00 ಘಂಟೆಯವರೆಗೆ.
ಸಾಂಸ್ಕೃತಿಕ ಕಾರ್ಯಕ್ರಮ:	ದಿನಾಂಕ:23.09.2023 ರಂದು ಶನಿವಾರ ಸಂಜೆ 3.00 ರಿಂದ 5.00 ಘಂಟೆಯವರೆಗೆ.
ಪ್ರತಿಭಾ ಪುರಸ್ಕಾರ ಸಮಾರಂಭ:	ದಿನಾಂಕ:23.09.2023 ರಂದು ಶನಿವಾರ ಸಂಜೆ 5.00 ಘಂಟೆಗೆ.
ಸ್ಥಳ :	ಶ್ರೀ ವೈ. ಮುನಿಸ್ವಾಮಪ್ಪ ಕಲ್ಯಾಣ ಮಂಟಪ, ಯಶವಂತಪುರ (ಗೋಪಾಲ್ ಟಾಕೀಸ್ ಪಕ್ಕ), ಬೆಂಗಳೂರು-560 022.

ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು (ಪ್ರಭಾರ)

ರೈಲು ಗಾಲಿ ಕಾರ್ಖಾನೆ

ಯಲಹಂಕ, ಬೆಂಗಳೂರು–560 064
ವೆಬ್‌ಸೈಟ್: www.rwf.indianrailways.gov.in

ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯೂಎಫ್/ ಡಬ್ಲ್ಯೂ/ 23–24/08 ದಿನಾಂಕ: 15.09.2023

ಇ–ಟೆಂಡರುಗಳು: ಭಾರತದ ರಾಷ್ಟ್ರಪತಿಗಳ ಪರವಾಗಿ ಉಪ ಮುಖ್ಯ ಇಂಜಿನಿಯರ್, ಈ ಕೆಳಕಂಡ ಕೆಲಸಗಳಿಗಾಗಿ ಎಲೆಕ್ಟ್ರಾನಿಕ್ ಟೆಂಡರುಗಳನ್ನು ಆನ್‌ಲೈನ್ ವೆಬ್‌ಸೈಟ್ http://www.ireps.gov.in (Works) ಮೂಲಕ ಆಹ್ವಾನಿಸಿದ್ದಾರೆ.

ಟೆಂಡರ್ ಸಂಖ್ಯೆ: ಡಬ್ಲ್ಯೂ.496/ಆರ್‌ಡಬ್ಲ್ಯೂಎಫ್/ ವೈಎನ್‌ಕೆ/1018
ವಿವರಣೆ: ಪೂರ್ವ ಕಾಲೋನಿ ಮತ್ತು ಪಶ್ಚಿಮ ಕಾಲೋನಿಯಲ್ಲಿರುವ ಕ್ವಾರ್ಟರ್ಸ್ ಮತ್ತು ಸೇವಾ ಕಟ್ಟಡಗಳ ಒಳಬಾಗದ ಪೇಂಟಿಂಗ್ ಕಾಮಗಾರಿ.
ಅಂದಾಜು ಮೌಲ್ಯ: ರೂ. 2,23,43,519.86

ಟೆಂಡರ್ ಸಂಖ್ಯೆ: ಡಬ್ಲ್ಯೂ.496/ಆರ್‌ಡಬ್ಲ್ಯೂಎಫ್/ ವೈಎನ್‌ಕೆ/1019
ವಿವರಣೆ: ಒಂದು ವರ್ಷದ ಅವಧಿಗೆ ಆರ್‌ಡಬ್ಲ್ಯೂಎಫ್ ಕಾರ್ಖಾನೆ ಆವರಣದಲ್ಲಿ ಅಸ್ತಿತ್ವದಲ್ಲಿರುವ ರಚನೆಗಳಿಗೆ ಸೇರ್ಪಡೆಗಳು, ಬದಲಾವಣೆಗಳು ಮತ್ತು ಸುಧಾರಣೆಗಳು, ಕಟ್ಟಡ ಸಾಮಗ್ರಿಗಳ ಸರಬರಾಜು ಇತ್ಯಾದಿ. (ವಲಯ ಸ್ಥಾವರ 2023–24).
ಅಂದಾಜು ಮೌಲ್ಯ: ರೂ. 1,59,23,419.96

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ 13.10.2023, 11.00 ಗಂಟೆಗೆ

ಕಾರ್ಯನಿರ್ವಾಹಕ ಇಂಜಿನಿಯರ್

ಗ್ರಾಮೀಣಾಭಿವೃದ್ಧಿ & ಪಂಚಾಯತ್ ರಾಜ್ ಇಲಾಖೆ

ತಾಲ್ಲೂಕು ಪಂಚಾಯತಿ ಕಾರ್ಯಾಲಯ ಮಾಗಡಿ,
ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ,
ಇ–ಮೇಲ್ : eotpmagadi.mgd@gmail.com

ಸಂಖ್ಯೆ : ತಾ.ಪಂ.ಮಾ./ಕಾ.ನಿ.ಅ./ಲೆಶಾ/ಸಿ2/ಹೊರಗುತ್ತಿಗೆ ಟೆಂ–1/2023–24
ದಿನಾಂಕ : 19–09–2023

ಅಲ್ಪಾವಧಿ ಟೆಂಡರ್ ಪ್ರಕಟಣೆ

2023–24 ನೇ ಸಾಲಿನಲ್ಲಿ ದಿನಾಂಕ : 01–10–2023 ರಿಂದ 31–03–2024 ರವರೆಗೆ ಅಥವಾ ಮುಂದಿನ ಆದೇಶದವರೆಗೆ ತಾಲ್ಲೂಕು ಪಂಚಾಯಿತಿ ಮಾಗಡಿಯ ಸಹಾಯಕ ನಿರ್ದೇಶಕರಿಗೆ ತಾಲ್ಲೂಕಿನ 32 ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿ ನರೇಗಾ ಕಾಮಗಾರಿಗಳ ಪರಿಶೀಲನೆ, ಕಾಮಗಾರಿಗಳ ಅಳತೆ ಪರಿವೀಕ್ಷಣೆ ಹಾಗೂ ತುರ್ತು ಸಂದರ್ಭಗಳಲ್ಲಿ ಗ್ರಾಮ ಪಂಚಾಯಿತಿ ಭೇಟಿ ನೀಡಲು ಡೀಸೆಲ್, ಪೆಟ್ರೋಲ್ ಕಾರನ್ನು ಹೊರಗುತ್ತಿಗೆ ಆಧಾರದಲ್ಲಿ ಪಡೆಯಲು ದ್ವಿ–ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಆಹ್ವಾನಿಸಿರುವ ಬಗ್ಗೆ ಟ್ರಾವೇಲ್ಸ್ / ವಾಹನದ ಮಾಲೀಕರಿಂದ ದ್ವಿ–ಲಕೋಟೆ ಪದ್ಧತಿ (Two Cover System) ಯಲ್ಲಿ ಅಲ್ಪಾವಧಿ ಟೆಂಡರ್‌ನ್ನು ಕರೆಯಲಾಗಿದೆ.

1) ಟೆಂಡರ್ ಪ್ರಕಟಣೆ ದಿನಾಂಕ : 20–09–2023, 2) ಟೆಂಡರ್ ಅರ್ಜಿಯನ್ನು ವಿತರಣೆ ಮಾಡುವ ದಿನಾಂಕ : 20–09–2023 ರ ಬೆಳಿಗ್ಗೆ 11.00 ಗಂಟೆಯಿಂದ, 3) ಟೆಂಡರ್ ಅರ್ಜಿ ನಮೂನೆಯನ್ನು ಪಡೆಯಲು ಕೊನೆಯ ದಿನಾಂಕ : 27–09–2023 ರ ಸಂಜೆ 5.00 ಗಂಟೆ, 4) ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸಲ್ಲಿಕೆಗೆ ಕೊನೆಯ ದಿನಾಂಕ : 29–09–2023 ರ ಸಂಜೆ 4.00 ಗಂಟೆಯೊಳಗೆ, 5) ಟೆಂಡರ್ ತೆರೆಯುವ ದಿನಾಂಕ : (ಎ) ತಾಂತ್ರಿಕ ಬಿಡ್ (ಬಿ) ವಾಣಿಜ್ಯ ಬಿಡ್ : 30–09–2023 ರ ಬೆಳಿಗ್ಗೆ 11.00 ಗಂಟೆಗೆ, 6) ಅಧಿಸೂಚನೆ ಹೊರಡಿಸುವುದು : 30–09–2023 ರ ಸಂಜೆ 4.00 ಗಂಟೆಗೆ.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ತಾಲ್ಲೂಕು ಪಂಚಾಯತ್, ಮಾಗಡಿ, ರಾಮನಗರ ಜಿಲ್ಲೆ, ಇವರನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಮಾಗಡಿ.

ಡಿಐಪಿಆರ್/ರಾಮನಗರ/188/ಮಣಿಪಾಲ್/2023–24

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562 110.

ಸಂ: ಬಿಐಎಎಪಿಎ/ಟಿಪಿ/ಭೂಉಬ/29/2023–24/1307 ದಿನಾಂಕ: 19.09.2023

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಮಹಾಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಕುಮಾರ್ ಬಿ.ಎ ಬಿನ್ ಅಪ್ಪಣ್ಣ	ದೇವನಹಳ್ಳಿ	ಚನ್ನರಾಯಪಟ್ಟಣ	ಬೊಮ್ಮನಹಳ್ಳಿ	29/4	0–34.08	ವ್ಯವಸಾಯ	ವಸತಿ
					29/5	0–03		

ಷರಾ:– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಉದ್ದೇಶಿತ ಜಮೀನುಗಳಲ್ಲಿ ಯೋಜಿತ ಬೆಳವಣಿಗೆಯ ಅಭಿವೃದ್ಧಿಯನ್ನು ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲ ಗ್ರಾಮಸ್ಥರಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುವುದೆಂದೂ ಸದರಿ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾ ಬದ್ಧ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **'ವ್ಯವಸಾಯ ವಲಯ'** ದಿಂದ **'ವಸತಿ ವಲಯ'** ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ

ವಾಸಾಸಂಇ/ವಾಪ್ರ/ಎಎಎ/1346/2023–24

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

General

REQUIRED
FOR A REPUTED BUILDERS HAVING PROJECTS @ NORTH BANGALORE.
❖ CIVIL SUPERVISOR
❖ AUTOCAD DRAFTSMAN
with 1-2 years of experience. Apply immediately
DISHANT PROJECTS PVT. LTD.
No.33, 3rd Cross, Shanthivana, Sahakaranagar, Kodigehalli Main Road, Bangalore-92.
Contact: 70229 22753 70220 08294

CAREER OFFER: For Retired Officials/ Bankers/ Self Employed/ Housewives/ IT Employees. Excellent Income/ Recognition & Reward. Contact:- 9448670516 Phone & WhatsApp.

WANTED HELPERS Lady/ Gents, SSLC, PUC, Diploma, English Typing,Stereo Art Line, Rajajinagar, Bangalore. 9845149431.

SAFEGUARD SYSTEMS: ADMIN MANAGER, OFFICE EXECUTIVES, MARKETING EXECUTIVES, Preferably Graduates Computer Knowledge, Communication Skills. 9343544350 9341220862 safeguard_systems@yahoo.com

St. Lord's International Public School
CBSE Pattern/ State Syllabus
#114/2, 10th Main, Mariyappanpalya, KP Agrahara, Bangalore-23
REQUIRED PE TEACHERS
ACCOUNTS EXECUTIVES
FEMALE FRONT OFFICE EXECUTIVE
SECURITY GUARDS
SUPERVISORS
HOUSE KEEPING (M/F)
WATCHMAN, DRIVERS
In & Around Vijay Nagar, Rajajinagar, Chamarajapet, Magadi Road.
Walk-in Monday to Saturdays
Call: 9886170470
Mail: shree.slips@gmail.com

WANTED DISTRIBUTORS, PROMOTERS, Male/ Female, Marketing Staff for fast moving consumer and Pharma products all over Karnataka. Contact:- 9448041257.

Marketing & Sales

FUTURE KIDS PUBLICATIONS PVT LTD BANGALORE
We have opening for Young & dynamic sales officers at following locations in Bangalore, Mysore, Tumkur, Davanagere, Belgaum, Gulbarga.
Salary : 20 K to 40 K
ESI + PF + Bonus + Conveyance + Incentives
Interested & Experienced candidates, contact Ph: 9986167032, 080-23145345
Email: bangalore@vkpublications.com fkvkbooks@gmail.com

MARKETING EXECUTIVES for CHEMICALS BUSINESS DEVELOPMENT With 5-10Years Experience For South India Market In Bangalore. Apply aabharasayan@gmail.com

WANTED MANAGERS, Sales Executives, field executives, collection executives Telecallers. Opportunity to earn upto 25000. 8867627879

POM POWER — POM SYSTEMS AND SERVICES PVT LTD — JOB OPPORTUNITIES
25 years old Power Electronics Company requires the following for Bangalore, Hyderabad, Kochi, Mumbai & Delhi to Market specialised Power Electronics Products.
REGIONAL MANAGERS MARKETING: 3 to 4 years experience in Electrical and Electronics Industry.
SALES MANAGERS: 2 to 3 years experience in relevant Industry.
MARKETING EXECUTIVES: 1 to 2 years experience in the relevant Industry.
SALES EXECUTIVES: Freshers or 1 to 2 years experience.
TELE MARKETING EXECUTIVES: 1 or 2 years experience.
Call: 90084 16333
E-mail: hr.datapower@gmail.com

WANTED AN Experience Marketing Assistant for our Business Firm, Office at: Cubbonpet, Bangalore. Male Candidate with good experience, Kannada, Telugu, English speaking skill and computer operating. Age between 25-40 years. Salary CTC 2.40 to 2.80 Lacs per annum. Apply with complete bio-data to WhatsApp 9886522955

Wanted

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

Walk-in

KHIVRAJ — We Are Hiring
SALES MANAGER
SALES EXECUTIVE
CUSTOMER RELATIONSHIP EXECUTIVE – SALES AND SERVICE
CASHIER / BILLING EXECUTIVE
SERVICE TECHNICIAN
SEND RESUME or WALK-IN INTERVIEW From 20/09/2023 to 28/09/2023 BETWEEN 11 A.M.- 4 P.M.
KHIVRAJ MOTORS No.10/2 Kasturba Road, Bangalore.
Contact No: 9632068104 / 9980673755
E-mail ID – careers@khivraj.com
Attractive Salary with Incentive Packages

Accounts & Finance

WANTED ACCOUNTANTS B.Com/ M.Com Freshers for Reputed Printing Industry Located in Majestic, Accommodation Provided, Send Resume: bangaloreoffset@yahoo.co.in . 9845151730/ 9900691118.

JOB To Place your Classified Ads Contact: 9886213331

Teachers/ Professors

URGENTLY REQUIRED: Female Teachers in WISOM INTERNATIONAL SCHOOL, Shantinagar, Near TV-9 office for English & Computer Subjects. Walk-in interview-9243104680

OTHERS

Auction Sale

UNDER INSTRUCTION from National Institute of Animal Nutrition & Physiology, Adugodi, Bangalore-560030, auction will be held on 21.09.2023 at 11:30 AM, for Harvesting Coconut auction in NIANP Campus by Royal Auctioneers.

PUBLIC NOTICE

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ಪಿ. ಚಂದ್ರಶೇಖರನ್ ಬಿನ್ ಲೇಟ್ ಪಚಯ್ಯಪ್ಪನ್, ಹಿಂದು, 82 ವರ್ಷ, ವಿಳಾಸ ಡಿ–11, ಮಹಾದೇವನ್ ಅಪಾರ್ಟ್‌ಮೆಂಟ್ಸ್, ನಂ. 172, ಟಿ.ಟಿ.ಕೆ ರೋಡ್, ಅಲ್ವಾರ್‌ಪೇಟ್, ಚೆನ್ನೈ–600 018 ಎಂಬ ನಾನು, ಈ ಕೆಳಗಿನ ಷೆಡ್ಯೂಲ್‌ನಲ್ಲಿ ವಿವರಿಸಲಾಗಿರುವ ಬಸವನಗುಡಿ ಉಪ ನೋಂದಣಿ ಕಚೇರಿಯಲ್ಲಿನ ಡಾಕ್ಯೂಮೆಂಟ್ ನಂ. 2923/1979–80 ಮುಖೇನ ದಿನಾಂಕ 29.12.1979 ರಂದು ನೋಂದಣಿಯಾಗಿರುವ ಮತ್ತು ಎಸ್. ರಾಮರಾವ್ ಎಂಬುವರಿಂದ ನನ್ನ ಹೆಂಡತಿ ಎಸ್. ಮಹಾಲಕ್ಷ್ಮೀ ಹೆಸರಿನಲ್ಲಿ ಖರೀದಿಸಿದ ಲಾಗಾಯ್ತಿನಿಂದ, ಸದರಿ ಸ್ವತ್ತಿನ ಸಂಪೂರ್ಣ ಮಾಲೀಕನಾಗಿರುತ್ತೇನೆ ಮತ್ತು ಸದರಿ ಸ್ವತ್ತು ನಿರಂತರವಾಗಿ ಸಂಪೂರ್ಣ ನನ್ನ ಸ್ವಾಧೀನತೆಯಲ್ಲಿರುತ್ತದೆ ಹಾಗೂ ನನ್ನ ಸಂಪೂರ್ಣ ಮಾಲೀಕತ್ವದಡಿಯಲ್ಲಿ ನನ್ನದೇ ಸ್ವಾನುಭೋಗದಲ್ಲಿರುತ್ತದೆ. ಅತ್ತಿಬೆಲೆ ಉಪ ನೋಂದಣಿ ಕಡತದಲ್ಲಿನ ದಿನಾಂಕ 28.07.2022ರ ಡಾಕ್ಯೂಮೆಂಟ್ ನಂ. 4689/2022–23 ಮುಖೇನ, ಸದರಿ ಸ್ವತ್ತನ್ನು ನನ್ನ ಹೆಂಡತಿಯು ನನಗೆ ಉಡುಗೊರೆಯಾಗಿ ನೀಡಿರುತ್ತಾರೆ. ಸದರಿ ಸ್ವತ್ತಿಗೆ ಸಂಬಂಧಿತ ಖಾತಾ ಮತ್ತು ಖಾತಾ ಎಕ್ಸ್‌ಟ್ರಾಕ್ಟ್ ಕೂಡ ನಾನು ನನ್ನ ಹೆಸರಿಗೆ ಮ್ಯುಟೇಟ್ ಮಾಡಿಸಿಕೊಂಡಿರುತ್ತೇನೆ ಹಾಗೂ ಪ್ರತಿವರ್ಷ ನಿಯಮಿತವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಆಸ್ತಿ ತೆರಿಗೆ ಪಾವತಿಸುತ್ತಿದ್ದೇನೆ. ಸದರಿ ಷೆಡ್ಯೂಲ್‌ನಲ್ಲಿ ಉಲ್ಲೇಖಿಸಲಾಗಿರುವ ನನ್ನ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗೆ/ವ್ಯಕ್ತಿಗಳಿಗೆ ಯಾವುದೇ ಹಕ್ಕು, ಅಧಿಕಾರಿ, ಹಿತಾಸಕ್ತಿ ಅಥವಾ ಕ್ಲೇಮ್‌ಗಳಿದ್ದಲ್ಲಿ, ಅಂತಹವರು ಈ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ 10 ದಿನಗಳೊಳಗೆ ತಮ್ಮ ಆಕ್ಷೇಪಣೆಗಳನ್ನು ದಾಖಲಾತಿ ಪುರಾವೆಗಳ ಸಮೇತ ಇಲ್ಲಿ ಕೆಳಗೆ ಸಹಿ ಹಾಕಿರುವವರಿಗೆ ಲಿಖಿತ ರೂಪದಲ್ಲಿ ಸಲ್ಲಿಸತಕ್ಕದ್ದು, ಇದಕ್ಕೆ ತಪ್ಪಿದಲ್ಲಿ ನಿಗದಿತ ಅವಧಿಯ ನಂತರ ಯಾವುದೇ ಕ್ಲೇಮ್ ಎದುರಾದಲ್ಲಿ ಅದನ್ನು ಪರಿಗಣಿಸಲಾಗುವುದಿಲ್ಲ.

ಷೆಡ್ಯೂಲ್ ಪ್ರಾಪರ್ಟಿ

ಕತ್ರಿಗುಪ್ಪ ಗ್ರಾಮ, ಬೆಂಗಳೂರು ದಕ್ಷಿಣ ತಾಲ್ಲೂಕು, ಎಸ್. ರಾಮರಾವ್ ಬಡಾವಣೆ, ಕತ್ರಿಗುಪ್ಪೆ, ಬನಶಂಕರಿ 3ನೇ ಹಂತ, ಬೆಂಗಳೂರು ವಿಳಾಸದಲ್ಲಿ ಸ್ಥಿತಗೊಂಡಿರುವ ಮತ್ತು ಹಳೆಯ ಬಿಬಿಎಂಪಿ ವಾರ್ಡ್ ನಂ. 54, ಹೊಸ ನಂ. 163, 31ನೇ ಡಿವಿಜನ್ ವ್ಯಾಪ್ತಿಗೊಳಪಡುವ, ಸರ್ವೆ ನಂ. 1/1, 98/2, 99/1ಬಿ, 99/2, 100/1ಎ3, 100/2 ಮತ್ತು 101/2 ಗಳಲ್ಲಿ ಸಂಯೋಜಿತ, ಬೆಂಗಳೂರು ಮಹಾನಗರ ಪಾಲಿಕೆಯ ಪಿಐಡಿ ನಂ. 54–246–106, ಸೈಟ್ ನಂ. 106 ಹೊಂದಿರುವ, 2400 ಚದರ ಅಡಿ ವಿಸ್ತೀರ್ಣವುಳ್ಳ ಖಾಲಿ ನಿವೇಶನ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ:– ಉತ್ತರಕ್ಕೆ: ರಸ್ತೆ; ದಕ್ಷಿಣಕ್ಕೆ: ಸೈಟ್ ನ. 106/1; ಪೂರ್ವಕ್ಕೆ: ಖಾಸಗಿ ಸ್ವತ್ತು; ಪಶ್ಚಿಮಕ್ಕೆ: ಸೈಟ್ ನಮ. 115 ಕ್ಷೇತ್ರಫಲ:– ಉತ್ತರಕ್ಕೆ: 60 ಅಡಿ; ದಕ್ಷಿಣಕ್ಕೆ: 60 ಅಡಿ; ಪೂರ್ವಕ್ಕೆ: 40 ಅಡಿ; ಪಶ್ಚಿಮಕ್ಕೆ: 40 ಅಡಿ ಹಾಗೂ ಬಸವನಗುಡಿ ಜಿಲ್ಲಾ ಉಪ ನೋಂದಣಿ ಮತ್ತು ಜಿಲ್ಲಾ ನೋಂದಣಿ ಕಚೇರಿ ವ್ಯಾಪ್ತಿಗೆ ಒಳಪಡುತ್ತದೆ.

ಸ್ಥಳ: ಬೆಂಗಳೂರು
ದಿನಾಂಕ: 20.09.2023

ಪಿ. ಚಂದ್ರಶೇಖರನ್
ಸ್ವತ್ತಿನ ಮಾಲೀಕರು
9840314550

REAL ESTATE SELLING

Industrial & Factory

Tumkur Road

SALE/ RENT Industrial Warehouse, Commercial, Farm Land around Nelamangala Dabaspet. 1 to 100 acres. 9141326819

Flat

Vishweshwariah Layout

3 BHK fully furnished flat for sale Vishveshwaraiah layout near Ambedkar College Bengaluru. Contact: 9242299427.

Sites

Mysore

50X80 RESIDENTIAL Site for Sale, SBM Layout, Bogadhi, MYSORE, South Facing, Immediate Settlement. MUDA Approved. 9448364054, 9448365873.

REAL ESTATE BUYING

Sites

Tumkur Road

WANTED SITE MEI Layout M.S Ramaiah Enclave, Soundarya Layout, Hesaraghatta Main Road. 9880779326. Brokers Excuse.

PERSONAL

Change of Name

CHANGE OF NAME
I, NISHA NAIR, Residing at No. DF 44, Durgawadi, Caranzalem, North Goa, GOA-403002. I Have Changed my name From NISHA NAIR to NISHA NAIR RICHARD, Vide Affidavit dated 15/09/2023, Sworn Before C.Santhosh, Notary Public, at Bangalore.

AASHA, MOTHER/O 6497672M, SEP, MANISH SINGH, Vill- Kandai Himath, Lohoriya, Itarsi Hoshangabad, Madhya Pradesh changed name AASHA to ASHA, 19/09/2023, Notary K.V. Mani, Bangalore

VARUGHESE K.S, Father/o 6498726P, L/NK, BINSU VARUGHESE, Vill- Eraviperoor, East Othera, Thiruvalla, Pathanamthitta, Kerala changed name VARUGHESE K.S to K.S VARUGHESE, 18/09/2023, Notary K.V. Mani Bangalore

CHANGE OF NAME
I, LOKAPPA D KARURA Residing at 32/9/22 , Venkateshwara Layout, Near Nagappa Layout, Somasandrapalya, HSR Sector-2, Bengaluru- 560102 have changed my name to LOKESH H HOSARANNANAVAR vide affidavit dated 19.09.2023 before Notary C.V. Earappa, Bangalore. Henceforth I shall be known as LOKESH H HOSARANNANAVAR only.

SMT JAYA SHREE, Mother/o 6498966M, SEP, ASIT KUMAR MOHANTY, Vill- Purunahat, Kishorenagar, Cuttack, Odisha changed name SMT JAYA SHREE to JAYASHRI MOHANTY, 16/09/2023, Notary K.V. Mani, Bangalore

CHANGE OF NAME
I, CHINNAMANI. S S/o.Seeni R/at.14-4, I-Line, Behind Visveshwaraiah college, Sriramanagari, Vimanapura, Blr-17 wrongly mentioned my name in LIC documents as MURUGAN. Hereby declaring my actual & correct name is CHINNAMANI. S vide affidavit dated 22/07/2023 before notary Sreedharan Nair P. N, Bangalore.

I ATIYA Banu also known as Shahnaz Banu, residing at No.18, 5th cross, Kaverinagar, Bangalore-32, have changed my name to Shahnaz Begum Atiya Banu, vide affidavit dated 29-08-2022, Before Notary Leela Bangalore.

CHANGE OF NAME
I, SAJIDA BEGUM Residing at #282/B, 5th Cross, Old Airport Road, Behind Canara Bank, Konena Agrahara, Vimanapura, Bengaluru North, Bengaluru-560017 have changed my Name to S B FAROQUI vide affidavit dated 19.09.2023 Sworn to before Advocate and Notary L. Puttaraju, BA, LLB Regd No: Law-LCL-/274/2020, Bengaluru.

BAUJALAL SINGH, father/o 6497672M, SEP, MANISH SINGH, Vill- Kandai Himath, Lohoriya Itarsi Hoshangabad, Madhya Pradesh changed name BAUJALAL SINGH to BHUJBAL SINGH CHOUHAN, 19/09/2023, Notary K.V. Mani, Bangalore

SMT SAILA BALA DEURI, Mother/o 6498968X, SEP/ASH, RAJESH DEURI, Vill- Kalibir, Bindhanima, Tigiria, Cuttack, Odisha changed name SMT SAILA BALA DEURI to SHAILABALA DEURI, 19/09/2023, Notary K.V. Mani, Bangalore

ADMISSION CORNER

MEWA VANGUARD BUSINESS SCHOOL
Bengaluru City University affiliated Course
Admissions Open 2023-24
Last Few Seats Available for BCA/ BBA/ BBA Aviation/ BCom
Bengaluru City University
9611677399 9740735500 info@mewavbs.com www.mewavbs.com
38th Cross, East End Main Rd, Jayanagara 9th Block,B-69

Lost

DOCUMENT LOST
I, Srinivas B R/a #20, 3rd Floor, 1st Cross, Sai Baba Mandir Road, T.R. Nagar, Bangalore- 560028 working as a Manager for N. Manohar Reddy at Richmond Propertes K.H. Road, Bangalore-27 we have lost original sale deed of Document No.1187/70, Reg. 17/04/1970 & GPA Document 46/BK4, 12.01.1995 both have Registred at Chennai, Tamilnadu. Finders Pleases Contact- 9663077999 or inform nearby the police station.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

DH DECCAN HERALD Classifieds More value, more impact — ಪ್ರಜಾವಾಣಿ — JOB HUNT
Get your HIRING NEEDS answered
JOB
Get the right people for your company... Book your Ad with us now !
www.dhclassifieds.com BOOK NOW
For more details contact:
+91 9901641752 | +91 9731810277 | +91 9900428036 | +91 9886213331 | +91 9845114560 | 080-45557163/164

ಬೆಂಗಳೂರಿನ ಜೆ.ಪಿ.ನಗರದ ಪುಟ್ಟೇನಹಳ್ಳಿ ಸತ್ಯಗಣಪತಿ ದೇವಸ್ಥಾನದಲ್ಲಿ ಸತ್ಯಗಣಪತಿ ಶಿರಡಿ ಸಾಯಿ ಟ್ರಸ್ಟ್ ಪ್ರತಿಷ್ಠಾಪಿಸಿರುವ ಗಣೇಶ ಮೂರ್ತಿ ಗಮನ ಸೆಳೆಯುತ್ತಿದೆ. ₹5, ₹10 ಹಾಗೂ ₹20 ನಾಣ್ಯ, ₹10ರಿಂದ ₹500 ವರೆಗಿನ ನೋಟು ಬಳಸಿಕೊಂಡು ಮಾಲೆ ತಯಾರಿಸಿ ಅಲಂಕರಿಸಲಾಗಿದೆ. ₹2.5 ಕೋಟಿಯ ನೋಟು, ₹56 ಲಕ್ಷದ ನಾಣ್ಯ ಬಳಕೆ ಮಾಡಿಕೊಳ್ಳಲಾಗಿದೆ (ಎಡಚಿತ್ರ) ಜಯನಗರದ 8ನೇ ಬ್ಲಾಕ್‌ನ ಶ್ರೀವಿನಾಯಕ ಮಿತ್ರ ಮಂಡಳಿ ಪ್ರತಿಷ್ಠಾಪಿಸಿರುವ ಗಣೇಶ ಮೂರ್ತಿ

ಮನೆ, ಬಡಾವಣೆಗಳಲ್ಲಿ ವಿನಾಯಕನ ಪ್ರತಿಷ್ಠಾಪನೆ • ವಿದ್ಯುತ್ ದೀಪಗಳ ಅಲಂಕಾರ

ನಗರದಲ್ಲಿ ಗಣೇಶೋತ್ಸವ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸೋಮವಾರ ಹಾಗೂ ಮಂಗಳವಾರ ಗಣೇಶೋತ್ಸವದ ಸಂಭ್ರಮ ಮನೆ ಮಾಡಿತ್ತು. ಮನೆಗಳು, ಅಪಾರ್ಟ್‌ಮೆಂಟ್‌ಗಳಲ್ಲಿ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಿ ಭಕ್ತಿಯಿಂದ ಪೂಜಿಸಲಾಯಿತು.

ಸಂಘ–ಸಂಸ್ಥೆಗಳು ತಮ್ಮ ಬಡಾವಣೆಗಳಲ್ಲಿ ವಿನಾಯಕನನ್ನು ಆರಾಧಿಸಿದವು. ಪುಟ್ಟ ಮಕ್ಕಳೂ ತಮ್ಮ ಗಲ್ಲಿಗಳಲ್ಲಿ ಗಣೇಶನ ಮೂರ್ತಿ ಪ್ರತಿಷ್ಠಾಪನೆ ಮಾಡಿದ್ದು ವಿಶೇಷವಾಗಿತ್ತು. ಹಬ್ಬದ ಅಂಗವಾಗಿ ಮನೆಗಳು ಹಾಗೂ ಅಪಾರ್ಟ್‌ಮೆಂಟ್‌ಗಳಿಗೆ ವಿದ್ಯುತ್ ಅಲಂಕಾರ ಮಾಡಲಾಗಿತ್ತು.

ಗಣೇಶನ ಮೂರ್ತಿ ಪ್ರತಿಷ್ಠಾಪಿಸಲಾಗಿದ್ದ ವೇದಿಕೆಗಳು ವಿಶೇಷ ರಂಗು ಪಡೆದುಕೊಂಡಿದ್ದವು. ಮಂಟಪಗಳು ವಿದ್ಯುತ್ ಅಲಂಕಾರದಿಂದ ಕಂಗೊಳಿಸಿದವು.

ಸೋಮವಾರ ಬೆಳಿಗ್ಗೆ ಮಹಿಳೆಯರು ಮನೆಗಳಲ್ಲಿ ಗೌರಿ ಪೂಜೆ ನೆರವೇರಿಸಿದ್ದರು. ಮಧ್ಯಾಹ್ನದ ಬಳಿಕ ಗಣೇಶನ ಮೂರ್ತಿ ಪ್ರತಿಷ್ಠಾಪಿಸಿ ಆರಾಧಿಸಲಾಯಿತು. ಸಿಹಿ ಖಾದ್ಯ ತಯಾರಿಸಲಾಗಿತ್ತು. ಮಕ್ಕಳು, ಮಹಿಳೆಯರು ಹಬ್ಬಕ್ಕೆ ಹೊಸಬಟ್ಟೆ ಧರಿಸಿ ಸಂಭ್ರಮಿಸಿದ್ದು ಕಂಡುಬಂತು.

ವಿವಿಧ ಬಳಗಗಳು ಗಣೇಶೋತ್ಸವದ ಅಂಗವಾಗಿ ರಂಗೋಲಿ ಸೇರಿದಂತೆ ಗ್ರಾಮೀಣ ಆಟೋಟ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಮಹಿಳೆಯರು ಸ್ಪರ್ಧೆಯಲ್ಲಿ ಪಾಲ್ಗೊಂಡು ಸಂಭ್ರಮಿಸಿದರು. ಜೆ.ಪಿ.ನಗರದ ಪುಟ್ಟೇನಹಳ್ಳಿ ಸತ್ಯಗಣಪತಿ ದೇವಸ್ಥಾನದಲ್ಲಿ ಸತ್ಯಗಣಪತಿ ಶಿರಡಿ ಸಾಯಿ ಟ್ರಸ್ಟ್ ಪ್ರತಿಷ್ಠಾಪಿಸಿರುವ ಗಣೇಶ ಮೂರ್ತಿ ಗಮನ ಸೆಳೆಯುತ್ತಿದೆ. ನಾಣ್ಯ ಹಾಗೂ ನೋಟು ಬಳಸಿಕೊಂಡು ಮಾಲೆ ತಯಾರಿಸಿ ಅಲಂಕರಿಸಲಾಗಿದೆ.

ನಗರದ ಕಬ್ಬನ್‌ಪೇಟೆ ಮುಖ್ಯರಸ್ತೆಯಲ್ಲಿ ಗಣೇಶ ಹಬ್ಬದ ಪ್ರಯುಕ್ತ ವಿವಿಧ ಬಳಗಗಳು ಸೇರಿಕೊಂಡು ಪ್ರತಿಷ್ಠಾಪಿಸಿರುವ ಪಂಜುರ್ಲಿ ವೇಷದ ಗಣೇಶ ಸೇರಿದಂತೆ ವಿಭಿನ್ನ ಬಗೆಯ ಮೂರ್ತಿಗಳು ಗಮನ ಸೆಳೆಯುತ್ತಿವೆ.

ಬಿಬಿಎಂಪಿ ಕೇಂದ್ರ ಕಚೇರಿಯ ನೌಕರರ ಭವನದಲ್ಲಿ ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಮಂಗಳವಾರ ಆಯೋಜಿಸಲಾಗಿದ್ದ ಗೌರಿ ಗಣಪತಿ ಉತ್ಸವದಲ್ಲಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಸಂಘದ ಅಧ್ಯಕ್ಷ ಎ. ಅಮೃತ್ ರಾಜ್ ಹಾಗೂ ಸಿಬ್ಬಂದಿ ಭಾಗವಹಿಸಿದ್ದರು

ನಗರದ ಕಬ್ಬನ್‌ಪೇಟೆ ಮುಖ್ಯರಸ್ತೆಯಲ್ಲಿ ಗಣೇಶ ಹಬ್ಬದ ಪ್ರಯುಕ್ತ ವಿವಿಧ ಬಳಗಗಳು ಪ್ರತಿಷ್ಠಾಪಿಸಿ ಪೂಜಿಸಿರುವ ಪಂಜುರ್ಲಿ ವೇಷದ ಗಣೇಶ ಮೂರ್ತಿ ಸೇರಿದಂತೆ ವಿಶೇಷ ಮೂರ್ತಿಗಳು ಗಮನ ಸೆಳೆದವು – ಪ್ರಜಾವಾಣಿ ಚಿತ್ರಗಳು

ಗಣೇಶನ ಕಲಾಕೃತಿಗಳ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನರ್ತಿಸುತ್ತಿರುವ, ಮಲಗಿರುವ ಸೇರಿ ಹಲವು ಭಂಗಿಗಳ ಹಾಗೂ ವಿವಿಧ ವಿನ್ಯಾಸದ 50ಕ್ಕೂ ಅಧಿಕ ಗಣೇಶನನ್ನು ಒಂದೇ ಸೂರಿನಡಿ ಕಣ್ತುಂಬಿಕೊಳ್ಳಬಹುದಾಗಿದೆ.

ಕಲಾವಿದರು ಗಣೇಶನ ಬಗೆಗಿನ ತಮ್ಮ ಪರಿಕಲ್ಪನೆಗಳಿಗೆ ಜೀವ ತುಂಬುವ ಕೆಲಸವನ್ನು ಮಾಡಿದ್ದು, ಪಂಚಮುಖಿ ಸೇರಿ ವಿಶಿಷ್ಟ ರೂಪಗಳು ಕ್ಯಾನ್ವಾಸ್ ಮೇಲೆ ಮೂಡಿವೆ. ಗಣೇಶ ಚತುರ್ಥಿ ಪ್ರಯುಕ್ತ ಆಕಾಂಕ್ಷಾ ಕಲಾವಿದರ ಸಮೂಹವು 'ವಕ್ರತುಂಡ ಮಹಾಕಾಯ' ಶೀರ್ಷಿಕೆಯಡಿ ಬಸವನಗುಡಿಯ ಬಿ.ಪಿ. ವಾಡಿಯಾ ರಸ್ತೆಯಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ (ಐಐಡಬ್ಲ್ಯುಸಿ) ಚಿತ್ರಕಲಾ ಪ್ರದರ್ಶನವನ್ನು ನಡೆಸುತ್ತಿದೆ. ಇದೇ 24ರವರೆಗೆ ನಡೆಯಲಿರುವ ಈ ಪ್ರದರ್ಶನದಲ್ಲಿ 50ಕ್ಕೂ ಅಧಿಕ ಕಲಾವಿದರು ರಚಿಸಿದ ಕಲಾಕೃತಿಗಳು ಪ್ರದರ್ಶನದಲ್ಲಿವೆ. ಇದರಿಂದಾಗಿ ಕಲಾ ಪ್ರೇಮಿಗಳು ಒಂದೇ ಸೂರಿನಡಿ ಗಣೇಶನ ವಿವಿಧ ಕಲಾಕೃತಿಗಳನ್ನು ವೀಕ್ಷಿಸಬಹುದಾಗಿದೆ.

ತಂಡವು ಇದೇ ಮೊದಲ ಬಾರಿ ಗಣೇಶನ ಕಲಾಕೃತಿಗಳ ಪ್ರದರ್ಶನವನ್ನು ನಡೆಸುತ್ತಿದೆ. ವಿವಿಧ ಅಳತೆಯ ಕಲಾಕೃತಿಗಳಿದ್ದು, ಮಾರಾಟಕ್ಕೂ ಅವಕಾಶ ಕಲ್ಪಿಸಲಾಗಿದೆ. ದರ ₹ 1 ಸಾವಿರದಿಂದ ಪ್ರಾರಂಭವಾಗಲಿದೆ. 3x4 ಅಡಿ ಅಳತೆಯ ಪಂಚಮುಖಿ ಗಣೇಶನ ಕಲಾಕೃತಿಗೆ ₹ 2 ಲಕ್ಷ ನಿಗದಿಪಡಿಸಲಾಗಿದ್ದು, ಇದು ಪ್ರದರ್ಶನದಲ್ಲಿ ಇರಿಸಲಾದ ಕಲಾಕೃತಿಗಳಲ್ಲಿ ಗರಿಷ್ಠ ಮೌಲ್ಯ ಹೊಂದಿದೆ.

'ಕಲಾ ಪ್ರದರ್ಶನಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ವಿವಿಧ ಮಾಧ್ಯಮಗಳಲ್ಲಿ ಕಲಾಕೃತಿಗಳನ್ನು ರಚಿಸಲಾಗಿದೆ. ಗಣೇಶ ಚತುರ್ಥಿಗೆ 21 ಗಣೇಶನನ್ನು ನೋಡಬೇಕೆಂಬ ಪ್ರತೀತಿ ಇದೆ. ಆದರೆ, ಇಲ್ಲಿ 50ಕ್ಕೂ ಅಧಿಕ ಗಣೇಶನನ್ನು ನೋಡಬಹುದು' ಎಂದು ಕಲಾವಿದರು ವಿವರಿಸಿದರು.

'10 ವರ್ಷಗಳಿಂದ ಕಲಾಕೃತಿಗಳ ಪ್ರದರ್ಶನವನ್ನು ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ನಡೆಸುಕೊಂಡು ಬಂದಿದ್ದೇವೆ. ಇದೇ ಮೊದಲ ಬಾರಿ ಗಣೇಶನಿಗೆ ಸಂಬಂಧಿಸಿದ ಕಲಾಕೃತಿಗಳ ಪ್ರದರ್ಶನ ನಡೆಸುತ್ತಿದ್ದೇವೆ. 75ಕ್ಕೂ ಅಧಿಕ ವರ್ಷಗಳ ಇತಿಹಾಸ ಹೊಂದಿರುವ ಐಐಡಬ್ಲ್ಯುಸಿಗೆ ಹಲವು ಖ್ಯಾತ ನಾಮರು ಭೇಟಿ ನೀಡಿದ್ದಾರೆ. ಹಾಗಾಗಿ, ಇಲ್ಲಿ ಈ ಬಾರಿ ಪ್ರದರ್ಶನ ಆಯೋಜಿಸಿದ್ದೇವೆ. ತಮಿಳುನಾಡು, ಆಂಧ್ರಪ್ರದೇಶ, ನವದೆಹಲಿ, ಪಶ್ಚಿಮ ಬಂಗಾಳ, ಒಡಿಶಾ ಸೇರಿ ಹಲವು ರಾಜ್ಯಗಳ ಕಲಾವಿದರ ಕಲಾಕೃತಿಗಳು ಪ್ರದರ್ಶನದಲ್ಲಿವೆ. ಬಹುತೇಕ ಕಲಾವಿದರು ಮಹಿಳೆಯರಾಗಿದ್ದಾರೆ' ಎಂದು ಆಕಾಂಕ್ಷಾ ಕಲಾವಿದರ ಸಮೂಹದ ಸಂಸ್ಥಾಪಕಿ ಶ್ಯಾಮಲಾ ರಾಮಾನಂದ ತಿಳಿಸಿದರು.

ಕಲಾ ಪ್ರದರ್ಶನದ ಸಮಯ: ಬೆಳಿಗ್ಗೆ 10.30ರಿಂದ ಸಂಜೆ 7

ಕಲಾ ಪ್ರದರ್ಶನದಲ್ಲಿ ಜನರು ಕುತೂಹಲದಿಂದ ಗಣೇಶನ ಕಲಾಕೃತಿಗಳನ್ನು ಮಂಗಳವಾರ ವೀಕ್ಷಿಸಿದರು–ಪ್ರಜಾವಾಣಿ ಚಿತ್ರ

58 ಕಲಾವಿದರಿಂದ ಪ್ರದರ್ಶನ

ಜಗದೀಶ್ ಕಡೂರು, ಉಷಾ ಶಾಂತಾರಾಮ್, ಶೇಖರ್ ಬಳ್ಳಾರಿ, ರಘು ಪುತ್ತೂರು, ಶಿವಯೋಗಿ, ಬನಾನಿ ಕುಂದು, ಬಿಜಿ ನಾಗೇಶ್, ಜೋಶೀಲಾ ಎಸ್.ವಿ., ವಿ. ಜಯಶ್ರೀ, ವಿದ್ಯಾ ವಿಶ್ವನಾಥ್, ಲಾಸ್ಯ ಉಪಾಧ್ಯಾಯ, ಜಯ ದ್ವಿವೇದಿ, ಪ್ರಮೀಳಾ ದಾಸ್, ಲವ್ಲಿ ಅಗರವಾಲ್, ಜಯಂತಿ ಭಟ್ಟಾಚಾರ್, ಜಯಶ್ರೀ ಮಹಾಪಾತ್ರ, ಅನುಪಮಾ ಪಿ.ಜಿ., ತುಹಿನಾ ರೂಪೇಶ್, ವೀಣಾ ಪ್ರಿಯರಂಜನ್, ಸುವಿಧಾ ಬೋಳಾರ್, ಆಶಾ ವಿವೇಕ್, ಮಧುಬಾಲ ಭೋಸಲೆ, ಪೂಜಾ ರಾಯ್ಕರ್, ಸುಭದ್ರ ಸರ್ಕಾರ್, ಶ್ಯಾಮಲಾ ವೆಂಕಟೇಶ್, ಮಂಗಳ ಮಧುಚಂದ್, ಸುಬ್ರತಾ ಸುದರ್ಶಿನಿ ಬೆಹೆರಾ, ರಿತು ಸೋಂಧ್, ಪ್ರಿಯಾ ಸತೀಶ್, ಶ್ವೇತಪದ್ಮ ಮಾಝಿ, ಸೌಮ್ಯ ಮುರಳಿ, ವೈಶಾಲಿ ಗೋಯೆಲ್, ಸೌಮ್ಯಾ ಪಾಠಕ್, ರೋಹಿಣಿ ರಾವ್, ಸಂಹಿತಾ ದಾಸ್, ಬಿನಿತಾ ಶೋಮ್ ವೋರಾ, ವಿಧು ಪಿಳ್ಳೈ, ಚೇತನ್ ಎಸ್., ಉಷಾ ರೈ, ರೂಪಾ ಲಕ್ಷ್ಮಿ, ಸುನಂದಾ ಚಕ್ರವರ್ತಿ, ಪ್ರಭಾ ಪಂಥ್, ರಾಣಿ ಭಾಸ್ಕರ್, ಗೀತಾ ಮಹೇಶ್, ಪ್ರಿಯಾ ಮಣಿಕಂಡನ್, ಉಮಾ ಆದವ್, ಸ್ನೇಹಾ ಮುರಳೀಧರ್, ಕವಿತಾ ಕುಮಾರ್, ಗೀತಾ ಶಂಕರ್, ಮೋನಿಕಾ ಗುಪ್ತಾ, ಶ್ಯಾಮಲಾ ರಮಾನಂದ್, ನಂದಿನಿ ಕಮಲಾಕರ್, ಸಂಜಯ್ ಚಾಪ್ರೋಲ್ಕರ್, ಜನನಿ ವಿನೋತ್, ಸೌಮ್ಯ ಬೀನಾ, ವೇದಾ ಶ್ರೀರಾಮ್, ಜಾಹ್ನವಿ ಆಯಾಚಿತಮ್, ರಂಜಿನಿ ರಮೇಶ್ ಹಾಗೂ ಆರತಿ ಹುನಗುಂದ

ನಾಗಸಂದ್ರದ ವಿಕಾಸನಗರ ಹಾಗೂ ವಿನಾಯಕನಗರದಲ್ಲಿ ಶ್ರೀ ಮುನೇಶ್ವರ ಗೆಳೆಯರ ಬಳಗ ಆಯೋಜಿಸಿದ್ದ 17ನೇ ಗಣೇಶೋತ್ಸವದಲ್ಲಿ ರಂಗೋಲಿ ಸ್ಪರ್ಧೆ ನಡೆಯಿತು

10 ಸಾವಿರಕ್ಕೂ ಹೆಚ್ಚು ಪಿಒಪಿ ಗಣಪ

1.53 ಲಕ್ಷ ಮೂರ್ತಿ ವಿಸರ್ಜನೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಸೋಮವಾರ 1,53,965 ಗಣೇಶ ಮೂರ್ತಿಗಳನ್ನು ವಿಸರ್ಜನೆ ಮಾಡಲಾಗಿದೆ. ಇದರಲ್ಲಿ 10 ಸಾವಿರಕ್ಕೂ ಹೆಚ್ಚು ಪಿಒಪಿ ಮೂರ್ತಿಗಳಾಗಿವೆ.

ದಕ್ಷಿಣ ವಲಯದಲ್ಲಿ ಅತಿಹೆಚ್ಚು ಮೂರ್ತಿಗಳನ್ನು ಸೋಮವಾರ ವಿಸರ್ಜಿಸಲಾಗಿದ್ದು, ಪಿಒಪಿ ಮೂರ್ತಿಗಳ ಸಂಖ್ಯೆಯೂ ಈ ವಲಯದಲ್ಲೇ ಹೆಚ್ಚಾಗಿದೆ. ದಾಸರಹಳ್ಳಿ ವಲಯದಲ್ಲಿ ಅತಿ ಕಡಿಮೆ ಮೂರ್ತಿಗಳು ವಿಸರ್ಜನೆಯಾಗಿವೆ. ಮಹದೇವಪುರದಲ್ಲಿ 18 ಪಿಒಪಿ ಮೂರ್ತಿಗಳು ವಿಸರ್ಜನೆಯಾಗಿವೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

1,53,965
ಒಟ್ಟು ಮೂರ್ತಿಗಳ ವಿಸರ್ಜನೆ

1,43,608
ಮಣ್ಣಿನ ಮೂರ್ತಿಗಳು

10,357
ಪಿಒಪಿ ಮೂರ್ತಿಗಳು

ಕೆರೆ/ ಕಲ್ಯಾಣಿಗಳು

90,113
ಮಣ್ಣಿನ ಮೂರ್ತಿಗಳೂ

8,843
ಪಿಒಪಿ ಮೂರ್ತಿಗಳು

ತಾತ್ಕಾಲಿಕ ಕಲ್ಯಾಣಿಗಳು

19,037
ಮಣ್ಣಿನ ಮೂರ್ತಿಗಳು

714
ಪಿಒಪಿ ಮೂರ್ತಿಗಳು

ಮೊಬೈಲ್ ಟ್ಯಾಂಕ್‌ಗಳು

32,730
ಮಣ್ಣಿನ ಮೂರ್ತಿಗಳು

800
ಪಿಒಪಿ ಮೂರ್ತಿಗಳು

'ಸಾಮಾಜಿಕ ಜಾಲತಾಣ ಬಳಕೆಗೂ ವಯೋಮಿತಿ ನಿಗದಿ ಸಾಧ್ಯವೇ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮತದಾನಕ್ಕೆ 21 ವರ್ಷಗಳನ್ನು ನಿಗದಿ ಮಾಡಿರುವ ರೀತಿಯಲ್ಲಿಯೇ ಸಾಮಾಜಿಕ ಜಾಲತಾಣ ಬಳಕೆಗೂ ವಯೋಮಿತಿ ನಿಗದಿ ಮಾಡಲು ಸಾಧ್ಯವೇ ಎಂಬುದರ ಬಗ್ಗೆ ಚಿಂತನೆ ನಡೆಸಿ' ಎಂದು ಕೇಂದ್ರ ಸರ್ಕಾರಕ್ಕೆ ಹೈಕೋರ್ಟ್ ಮೌಖಿಕ ಸಲಹೆ ನೀಡಿದೆ.

ಎಕ್ಸ್ ಕಾರ್ಪ್ (ಟ್ವಿಟರ್) ಸಲ್ಲಿಸಿರುವ ಮೇಲ್ಮನವಿಯನ್ನು ನ್ಯಾಯಮೂರ್ತಿ ಜಿ. ನರೇಂದರ್ ಮತ್ತು ವಿಜಯಕುಮಾರ್ ಎ. ಪಾಟೀಲ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ನ್ಯಾಯಪೀಠವು, 'ಶಾಲೆಗೆ ಹೋಗುವ ಮಕ್ಕಳೂ ಸಾಮಾಜಿಕ ಮಾಧ್ಯಮಗಳ ದಾಸರಾಗಿದ್ದಾರೆ. 17 ಅಥವಾ 18 ವಯೋಮಿತಿಯ ಮಕ್ಕಳಿಗೆ ದೇಶದ ಹಿತಾಸಕ್ತಿಗೆ ಪೂರಕ ಯಾವುದು ಮಾರಕ ಯಾವುದು ಎಂಬುದನ್ನು ನಿರ್ಧರಿಸುವ ಪ್ರೌಢಿಮೆ ಇರುವುದಿಲ್ಲ. ಹೀಗಾಗಿ, ಕೇಂದ್ರ ಸರ್ಕಾರವು ಸಾಮಾಜಿಕ ಮಾಧ್ಯಮ ಬಳಕೆಗೆ ಕನಿಷ್ಠ ವಯೋಮಿತಿ ನಿಗದಿಪಡಿಸಬೇಕು' ಎಂದು ಹೇಳಿತು.

'ಆಕ್ಷೇಪಾರ್ಹ ವಿಷಯವು ಮಾಹಿತಿ ತಂತ್ರಜ್ಞಾನ ಕಾಯ್ದೆಯ ಕಲಂಗಳಾದ 69–ಎ (1) ಮತ್ತು (2) ಅನ್ನು ಉಲ್ಲಂಘಿಸುತ್ತವೆಯೇ ಎಂಬುದನ್ನು ಪರಿಶೀಲಿಸಬೇಕಿದೆ. ಇದನ್ನು ಉಲ್ಲಂಘಿಸುವುದು ಕಂಡುಬಂದರೆ ಎಕ್ಸ್ ಕಾರ್ಪ್ ನಿರ್ಬಂಧದ ಆದೇಶಗಳನ್ನು ಪಾಲಿಸಬೇಕಾಗುತ್ತದೆ' ಎಂದು ನ್ಯಾಯಪೀಠವು ತಿಳಿಸಿತು. ಮಧ್ಯಂತರ ಅರ್ಜಿಗೆ ಸಂಬಂಧಿಸಿದ ಆದೇಶವನ್ನು ಬುಧವಾರ (ಸೆ.20) ಪ್ರಕಟಿಸುವುದಾಗಿ ಹೇಳಿ, ವಿಚಾರಣೆ ಮುಂದೂಡಿತು. ಕೇಂದ್ರ ಸರ್ಕಾರದ ಪರ ವಕೀಲ ಎಂ. ಎನ್. ಕುಮಾರ್ ಹಾಜರಿದ್ದರು.

ಕೆಲವು ವೈಯಕ್ತಿಕ ಖಾತೆಗಳ ಮೇಲೆ ನಿರ್ಬಂಧ ವಿಧಿಸಿ ಕೇಂದ್ರ ಸರ್ಕಾರ 2021ರ ಫೆಬ್ರುವರಿ ಮತ್ತು 2022ರ ಅವಧಿಯಲ್ಲಿ ಮಾಡಿದ್ದ ಆದೇಶಗಳನ್ನು ಪ್ರಶ್ನಿಸಿದ್ದ ಅರ್ಜಿ ವಜಾಗೊಳಿಸಿದ್ದ ಏಕಸದಸ್ಯ ನ್ಯಾಯಪೀಠದ ತೀರ್ಪು ಪ್ರಶ್ನಿಸಿ ಎಕ್ಸ್ ಕಾರ್ಪ್ ಈ ಮೇಲ್ಮನವಿ ಸಲ್ಲಿಸಿದೆ.

ನಾಳೆ ಮೆಟ್ರೊ ಸಂಚಾರದಲ್ಲಿ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷ್ಣರಾಜಪುರದಿಂದ ಗರುಡಾಚಾರ್‌ಪಾಳ್ಯ ನಡುವೆ ಸೆ.21 (ಗುರುವಾರ)ರಂದು ಇಡೀ ದಿನ ಮೆಟ್ರೊ ರೈಲು ಸೇವೆ ಸ್ಥಗಿತಗೊಳ್ಳಲಿದೆ.

ಅಂದೇ ಬೈಯಪ್ಪನಹಳ್ಳಿ ಮತ್ತು ಇಂದಿರಾನಗರದ ನಡುವೆ ಮಧ್ಯಾಹ್ನ 1.30ರಿಂದ ಸಂಜೆ 4.30ರ ತನಕ ಮೆಟ್ರೊ ರೈಲು ಸೇವೆ ಸ್ಥಗಿತಗೊಳ್ಳಲಿದೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ಬೈಯಪ್ಪನಹಳ್ಳಿಯಿಂದ ಕೃಷ್ಣರಾಜಪುರ ನಡುವೆ ಹೊಸದಾಗಿ ನಿರ್ಮಿಸಿರುವ ಮಾರ್ಗವನ್ನು ಗುರುವಾರ ರೈಲ್ವೆ ಸುರಕ್ಷತಾ ಆಯುಕ್ತರು (ದಕ್ಷಿಣ ವೃತ್ತ) ಪರಿಶೀಲನೆ ನಡೆಸಲಿದ್ದು, ರೈಲ್ವೆ ಕಾರ್ಯಾಚರಣೆಯಲ್ಲಿ ಬದಲಾವಣೆ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವೈಟ್‌ಫೀಲ್ಡ್ (ಕಾಡುಗೋಡಿ) ಮತ್ತು ಗರುಡಾಚಾರ್ ಪಾಳ್ಯ ನಡುವೆ ಪೂರ್ಣದಿನ ಹಾಗೂ ಇಂದಿರಾ ನಗರದ ಮತ್ತು ಕೆಂಗೇರಿ ನಡುವೆ ಮಧ್ಯಾಹ್ನ 1.30ರಿಂದ 4.30ರ ತನಕ ಮೆಟ್ರೊ ರೈಲು ಸೇವೆ ಲಭ್ಯವಿರಲಿದೆ. ಮಧ್ಯಾಹ್ನ 1.30ರ ವರೆಗೆ ಹಾಗೂ ಸಂಜೆ 4.30ರ ನಂತರ ಬೈಯಪ್ಪನಹಳ್ಳಿ- ಕೆಂಗೇರಿ ಮೆಟ್ರೊ ನಿಲ್ದಾಣಗಳ ನಡುವೆ ರೈಲು ಸೇವೆ ಎಂದಿನಂತೆ ರಾತ್ರಿ 11ರವರೆಗೆ ಇರಲಿದೆ ಎಂದು ಪ್ರಕಟಣೆ ತಿಳಿಸಿದೆ.

ಪ್ರಜ್ವಲ್ ಅನರ್ಹತೆ: 'ಸುಪ್ರೀಂ' ತಾತ್ಕಾಲಿಕ ತಡೆಯಾಜ್ಞೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಹಾಸನ ಸಂಸದ ಸ್ಥಾನದಿಂದ ಪ್ರಜ್ವಲ್ ರೇವಣ್ಣ ಅವರನ್ನು ಅನರ್ಹಗೊಳಿಸಿದ ಕರ್ನಾಟಕ ಹೈಕೋರ್ಟ್‌ನ ಆದೇಶಕ್ಕೆ ಸುಪ್ರೀಂಕೋರ್ಟ್ ಸೋಮವಾರ ತಾತ್ಕಾಲಿಕ ತಡೆಯಾಜ್ಞೆ ನೀಡಿದೆ.

ಹೈಕೋರ್ಟ್ ಆದೇಶ ಪ್ರಶ್ನಿಸಿ ಪ್ರಜ್ವಲ್ ಅವರು ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ತ್ರಿಸದಸ್ಯ ಪೀಠವು, ನಾಲ್ಕು ವಾರಗಳ ತಡೆಯಾಜ್ಞೆ ನೀಡಿತು.

ಇದೇ ವೇಳೆ ಪೀಠವು ಕೆಲವೊಂದು ಷರತ್ತುಗಳನ್ನು ವಿಧಿಸಿತು. ಪ್ರಜ್ವಲ್ ಅವರು ಲೋಕಸಭಾ ಅಧಿವೇಶನದಲ್ಲಿ ಪಾಲ್ಗೊಳ್ಳಬಹುದು. ಆದರೆ, ಅವರಿಗೆ ಯಾವುದೇ ಮತದಾನದ ಹಕ್ಕುಗಳು ಇರುವುದಿಲ್ಲ. ಸರ್ಕಾರದ ಭತ್ಯೆಗಳನ್ನು ಪಡೆಯುವಂತಿಲ್ಲ ಎಂದು ಪೀಠ ಹೇಳಿತು.

ಹಾಸನ ಕ್ಷೇತ್ರದಿಂದ ಸಂಸದರಾಗಿ ಪ್ರಜ್ವಲ್ ರೇವಣ್ಣ ಆಯ್ಕೆಯಾಗಿರುವುದನ್ನು ಅಸಿಂಧುಗೊಳಿಸಿ ನ್ಯಾಯಮೂರ್ತಿ ಕೆ. ನಟರಾಜನ್ ಅವರ ಪೀಠ ಸೆ.1ರಂದು ತೀರ್ಪು ನೀಡಿತ್ತು. ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವ ವರೆಗೆ ತಡೆಯಾಜ್ಞೆ ನೀಡುವಂತೆ ಕೋರಿ ಪ್ರಜ್ವಲ್ ಸಲ್ಲಿಸಿದ್ದ ಮಧ್ಯಂತರ ಅರ್ಜಿಯನ್ನೂ ಹೈಕೋರ್ಟ್ ವಜಾಗೊಳಿಸಿತ್ತು.

ಮಂಗಳವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಪ್ರಜ್ವಲ್ ರೇವಣ್ಣ, 'ಸುಪ್ರೀಂಕೋರ್ಟ್ ಮಧ್ಯಂತರ ಆದೇಶ ನೀಡಿದೆ. ಅಂತಿಮ ಆದೇಶ ಬರುವ ತನಕ ಮಧ್ಯಂತರ ಆದೇಶ ಜಾರಿಯಲ್ಲಿ ಇರಲಿದೆ. ನನ್ನ ಜತೆಗೆ ಉಳಿದವರ ವಿಚಾರಕ್ಕೂ ತಡೆಯಾಜ್ಞೆ ನೀಡುವಂತೆ ಮನವಿ ಮಾಡಿದ್ದೆವು' ಎಂದರು.

ನಗರದಲ್ಲಿ ಇಂದು

'ಮಂಥನ': ಅತಿಥಿಗಳು: ಜಿ. ಪರಮೇಶ್ವರ, ಡಾ.ಎಂ.ಸಿ. ಸುಧಾಕರ್, ಅಧ್ಯಕ್ಷತೆ: ಬಿ.ವಿ. ಗೋಪಾಲ್ ರೆಡ್ಡಿ, ಉಪಸ್ಥಿತಿ: ಪ್ರಶಾಂತ್ ಪ್ರಕಾಶ್, ಆಯೋಜನೆ ಮತ್ತು ಸ್ಥಳ: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ, ಸರ್ ಎಂ.ವಿ ಸಭಾಂಗಣ, ಎಫ್‌ಕೆಸಿಸಿಐ, ಕೆ.ಜಿ. ರಸ್ತೆ, ಸಂಜೆ 3ರಿಂದ

ರಾಜಶೇಖರ ಮಠಪತಿ (ರಾಗಂ) ಅವರ ಜನ್ಮದಿನಾಚರಣೆ, ಕವಿತೆ ವಾಚನ: ನಿರ್ಮಲಾ ನಾದನ್, ಅಧ್ಯಕ್ಷತೆ: ಸಿದ್ಧನಗೌಡ ಪಾಟೀಲ, ಅತಿಥಿಗಳು: ಮಾಂತೇಶ್ ಬಿರಾದಾರ, ಶ್ರೀಕೀರ್ತಿ, ವೈ. ವೆಂಕಟೇಶಪ್ಪ, ಉಪಸ್ಥಿತಿ: ರಾಜಶೇಖರ ಮಠಪತಿ, ಆಯೋಜನೆ: ರಂಗಮಂಡಲ ಮತ್ತು ರಂಗಪ್ರಹರಿ, ಸ್ಥಳ: ಸಿವಗಂಗ ರಂಗಮಂದಿರ, ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆ, 1ನೇ ಹಂತ ಕೆಂಗೇರಿ ಉಪನಗರ, ಸಂಜೆ 4.30

ಗಣೇಶ ಚತುರ್ಥಿ ವಿಶೇಷ

ಗಣೇಶೋತ್ಸವ: ದೇವರಿಗೆ ಸರ್ವಾಭಿಷೇಕ ಅಲಂಕಾರ ಬೆಳಿಗ್ಗೆ 6.30ಕ್ಕೆ, ರುದ್ರಹೋಮ ಹಾಗೂ ಸುಬ್ರಹ್ಮಣ್ಯ ಹೋಮ ಬೆಳಿಗ್ಗೆ 9.30ಕ್ಕೆ, ಮಹಾಮಂಗಳಾರತಿ ತೀರ್ಥಪ್ರಸಾದ ವಿನಿಯೋಗ ಮಧ್ಯಾಹ್ನ 12.30ಕ್ಕೆ, ದೇವರಿಗೆ ಶಾಕಾಂಬರಿ ಅಲಂಕಾರ ಸಂಜೆ 5.30ಕ್ಕೆ, ಮಹಾಮಂಗಳಾರತಿ ತೀರ್ಥಪ್ರಸಾದ ವಿನಿಯೋಗ ಸಂಜೆ 7.30ಕ್ಕೆ, ಆಯೋಜನೆ ಮತ್ತು ಸ್ಥಳ: ವಿಜಯ ಮಹಾಗಣಪತಿ ದೇವಸ್ಥಾನ, ಜಯನಗರ

ವಿದ್ಯಾಗಣಪತಿ ಪೂಜಾ ಮಹೋತ್ಸವ: ಕರ್ನಾಟಕ ಸಂಗೀತ: ಗಾಯನ: ವರದ ಕುಲಕರ್ಣಿ, ಪಿಟೀಲು: ವಿಶ್ವಜಿತ್ ಮತ್ತೂರು, ಮೃದಂಗ: ನಾಗೇಂದ್ರ, ಅತಿಥಿಗಳು: ಪಿಯೂಷ್ ಜೈನ್, ಸದಾಶಿವ ರಾವ್, ಆಯೋಜನೆ ಮತ್ತು ಸ್ಥಳ: ಬ್ರಾಹ್ಮಣ ವಿದ್ಯಾರ್ಥಿ ಸಹಾಯ ಸಂಘ, ಎನ್.ಎಸ್. ಐಯ್ಯಂಗಾರ್ ಬೀದಿ, ಶೇಷಾದ್ರಿಪುರ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ವಿನಾಯಕೋತ್ಸವ-2023: ಆರ್ಕೆಸ್ಟ್ರಾ: ಗಾಯನ: ಅನುರಾಧ ಭಟ್, ಕಂಬದ ರಾಮಯ್ಯ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ವಿನಾಯಕ ಮಿತ್ರ ಮಂಡಳಿ, ಜಯನಗರ, 8ನೇ ಬ್ಲಾಕ್, ಸಂಜೆ 6.30ರಿಂದ

ಮಿಲ್ಕ್ ಕಾಲೊನಿ ಗಣೇಶ ಹಬ್ಬ-2023: ಸಿಂಗಾರಿಮೇಳ ಮತ್ತು ಡಿ.ಜೆ: ಪ್ರಸ್ತುತಿ: ಮೂಕಾಂಬಿಕಾ ಚಂಡೆ, ಆಯೋಜನೆ ಮತ್ತು ಸ್ಥಳ: ಸ್ವಸ್ತಿಕ್ ಯುವಕರ ಸಂಘ, ಮಿಲ್ಕ್ ಕಾಲೊನಿ, ರಾಜಾಜಿನಗರ, 2ನೇ ಹಂತ, ಸಂಜೆ 7





ಗರ್ಭಾಶಯಕ್ಕೇ ಕುತ್ತು!

ಕೊಳ್ಳೇಗಾಲ ಶರ್ಮ

ಕಳೆದ ವಾರ ವೈಜ್ಞಾನಿಕ ಜಗತ್ತಿನಲ್ಲಿ ಎರಡು ಸುದ್ದಿಗಳು ಪ್ರಸಾರವಾದವು. ಮೊದಲನೆಯದು, ತಂದೆ ಎನ್ನುವ ಜೀವದ ಅಸ್ತಿತ್ವವನ್ನೇ ಪ್ರಶ್ನಿಸಿದ ತಂತ್ರಜ್ಞಾನದ ಜನಕ ಅಯಾನ್ ವಿಲ್ಮಟ್ಟನ ಸಾವು. ಎರಡನೆಯದು, ತಾಯಿ ಎನ್ನುವ ಜೀವದಾಸರೆಯೇ ಬೇಡ ಎನ್ನುವ ಇನ್ನೊಂದು ತಂತ್ರಜ್ಞಾನ ಸಿದ್ಧವಾಗುತ್ತಿರುವುದರ ಸುಳಿವು.

ಅಯಾನ್ ವಿಲ್ಮಟ್ 1996ನೇ ಇಸವಿಯಲ್ಲಿ ಡಾಲಿ ಎನ್ನುವ ಮೊತ್ತ ಮೊದಲ ತದ್ರೂಪಿಯನ್ನು ಸೃಷ್ಟಿಸಿದ್ದರು. ತಂದೆಯ ವೀರ್ಯವೇ ಇಲ್ಲದೆ, ಇಬ್ಬರು ತಾಯಂದಿರ ಜೀವಕೋಶಗಳಿಂದ ಹುಟ್ಟಿದ ಜೀವಿ ಇದು. ಹೀಗೆ ತಂದೆಯ ಅಗತ್ಯವೇ ಇಲ್ಲದೆ ಸಂತಾನೋತ್ಪತ್ತಿ ಸಾಧ್ಯ ಎಂದು ತೋರಿಸಿತ್ತು. ಆದರೆ ಅದನ್ನು ಬೆಳೆಸಲು ತಾಯಿಯ ಗರ್ಭದ ಆಸರೆ ಅಗತ್ಯವಿತ್ತು. ಈಗ ತಾಯಿಯ ಈ ಆಸರೆಯೂ ಬೇಡವಂತೆ. ಮಾನವ ಪಿಂಡಗಳನ್ನು ಕೃತಕ ಗರ್ಭಗಳಲ್ಲಿ ಇಟ್ಟು ಬೆಳೆಸುವ ಪ್ರಯೋಗಗಳನ್ನು ಅಮೆರಿಕೆಯ ಕಂಪೆನಿ ಫಿಲಿಡೆಲ್ಫಿಯಾದ ಮಕ್ಕಳ ಆಸ್ಪತ್ರೆ ಆರಂಭಿಸಲಿದೆಯಂತೆ.

ಕೃತಕ ಗರ್ಭಾಶಯದ ಬಗ್ಗೆ ಸಂಶೋಧನೆಗಳು ಕಳೆದ ದಶಕದದಲ್ಲಿ ಬಿರುಸಾಗಿದ್ದುವು. ಆದರೆ ಈ ಎಲ್ಲ ಸಂಶೋಧನೆಗಳೂ ಪ್ರಾಣಿಗಳ ಪಿಂಡಗಳನ್ನು ಬೆಳೆಸಲಷ್ಟೆ ಮೀಸಲಾಗಿದ್ದುವು. ಉದಾಹರಣೆಗೆ, ಫಿಲಿಡೆಲ್ಫಿಯಾ ಮಕ್ಕಳ ಆಸ್ಪತ್ರೆಯ ವಿಜ್ಞಾನಿ ಹಾಗೂ ಇದೀಗ ಮಾನವಪಿಂಡಗಳ ಮೇಲೆ ಪ್ರಯೋಗವನ್ನು ನಡೆಸಲು ಉದ್ಯುಕ್ತವಾಗಿರುವ ವೈದ್ಯ ಆರು ವರ್ಷಗಳ ಹಿಂದೆ ಆಡು, ಕುರಿಗಳ ಪಿಂಡಗಳನ್ನು ಹೀಗೆ ಬೆಳೆಸಲು ಸಾಧ್ಯವೇ ಎಂದು ಪರಿಶೀಲಿಸಿದ್ದ. ಪ್ಲಾಸ್ಟಿಕ್ಕಿನ ಚೀಲವೊಂದರೊಳಗೆ ತಾಯಿಯ ಗರ್ಭಾಶಯದಲ್ಲಿ ಇರುವಂತಹ ದ್ರವವನ್ನೇ ಇರಿಸಿ, ರಕ್ತ ಹಾಗೂ ಆಮ್ಲಜನಕವನ್ನು ಪಂಪು ಮಾಡುತ್ತ ಆಡಿನ ಪಿಂಡವೊಂದನ್ನು ಬೆಳೆಸಲು ಪ್ರಯತ್ನಿಸಲಾಗಿತ್ತು. ಅದು ಸಫಲವೂ ಆಗಿತ್ತು.



ಹೊಕ್ಕುಳಬಳ್ಳಿಯ ಮೂಲಕ ಹರಿದ ರಕ್ತವನ್ನು ಭ್ರೂಣದ ಹೃದಯವೇ ಪಂಪು ಮಾಡಿ ಮರಳಿ ಹೊಕ್ಕುಳಬಳ್ಳಿಗೆ ಕಳಿಸುತ್ತದೆ.

ಇದೀಗ ಅದೇ ಪ್ರಯತ್ನವನ್ನು ಮಾನವ ಪಿಂಡಗಳ ಮೇಲೆ ನಡೆಸಲ ಸಿದ್ಧ ಎನ್ನುವ ಪ್ರಸ್ತಾವವನ್ನು ಫ್ಲೇಕ್ ತಂಡ ಎಫ್‌ಡಿಎ ಮುಂದೆ ಇಟ್ಟಿದೆ. ಇದರ ಸಾಧ್ಯಾಸಾಧ್ಯತೆಗಳನ್ನು ಪರಿಶೀಲಿಸಲು ಅಮೆರಿಕೆಯ 'ಫುಡ್ ಅಂಡ್ ಡ್ರಗ್ ಅಡ್ಮಿನಿಸ್ಟ್ರೇಶನ್' (ಎಫ್‌ಡಿಎ) ರಚಿಸಿರುವ ಸಮಿತಿ ಈ ಪ್ರಸ್ತಾವವನ್ನು ಇಂದು ಪರಿಶೀಲಿಸಲಿದೆ. ಈ ಪ್ರಸ್ತಾವ ಒಪ್ಪಿಗೆಯಾದಲ್ಲಿ, ಅವಧಿಗೂ ಮುನ್ನವೇ ಹೆರಿಗೆಯಾಗುವ ಪಿಂಡಗಳನ್ನು ಇಂತಹ ಕೃತಕ ಗರ್ಭಾಶಯದಲ್ಲಿಟ್ಟು, ಅವು ನವಮಾಸಗಳ ಬೆಳೆವಣಿಗೆಯನ್ನು ಪೂರೈಸುವಂತೆ ಮಾಡಬಹುದು ಎನ್ನುವುದು ಇವರ ಉದ್ದೇಶ.

ಸದ್ಯಕ್ಕೆ ಅವಧಿಗೆ ಮುನ್ನವೇ ಹುಟ್ಟುವ ಇಂತಹ ಮಕ್ಕಳನ್ನು 'ಇಂಕುಬೇಟರು' ಎನ್ನುವ ಬಿಸಿಪೆಟ್ಟಿಗೆಯಲ್ಲಿ ಇಟ್ಟು ಬೆಳೆಸುವುದುಂಟು. ಬಸಿರಿನ ಏಳು ಅಥವಾ ಎಂಟನೇ ತಿಂಗಳಲ್ಲಿಯೇ ಹುಟ್ಟುವ ಮಕ್ಕಳನ್ನು ಹೀಗೆ ಬೆಳೆಸುವ ಮಕ್ಕಳ ಐಸಿಯು ವಾರ್ಡುಗಳು ಬಹುತೇಕ ಆಸ್ಪತ್ರೆಗಳಲ್ಲಿ ಇವೆ. ಸೋಂಕು ಉಂಟಾದವರು, ಡಯಾಬಿಟೀಸ್ ಅಥವಾ ಅತಿ ರಕ್ತದೊತ್ತಡದಿಂದ ನರಳುತ್ತಿರುವ ಇಲ್ಲವೇ ದೇಹದಲ್ಲಿನ ಹಾರ್ಮೋನುಗಳ ವ್ಯತ್ಯಾಸದಿಂದಾಗಿ ಕೆಲವೊಮ್ಮೆ ಬಸುರಿಯರು ನವಮಾಸ ತುಂಬುವ ಮೊದಲೇ ಹೆರುವುದು ಉಂಟು. ವಿಶ್ವಸಂಸ್ಥೆಯ ಪ್ರಕಾರ 2020ನೇ ಇಸವಿಯಲ್ಲಿ ಹೆಚ್ಚು ಕಡಿಮೆ ಒಂಬತ್ತು ಲಕ್ಷ ಮಕ್ಕಳು ಹೀಗೆ ಕಣ್ತೆರೆಯುವ ಮುನ್ನವೇ ಕಣ್ಮುಚ್ಚಿದ್ದುವು. ಅಲ್ಲದೆ ಒಂದೂವರೆ ಕೋಟಿ ಮಕ್ಕಳು ಐಸಿಯು ನೆರವಿನಿಂದ ಹುಟ್ಟಿದ್ದುವು.

ಏಳು ತಿಂಗಳು ಬಸುರಲ್ಲಿ ಕಳೆದ ಮಕ್ಕಳು ಅವಧಿಗೆ ಮುನ್ನವೇ ಹುಟ್ಟಿದರೂ ಬದುಕಿ ಉಳಿಯುವ ಸಾಧ್ಯತೆಗಳು ಹೆಚ್ಚು. ಆದರೆ ಅದಕ್ಕೂ ಮುನ್ನ ಅಂದರೆ ಐದು ಅಥವಾ ಆರು ತಿಂಗಳಲ್ಲಿ ಹುಟ್ಟಿದಂತಹ ಮಕ್ಕಳ ಉಳಿವು ಕಷ್ಟ. ಐಸಿಯೂವಿನಲ್ಲಿಟ್ಟು ಬೆಳೆಸಿದರೂ ಆಸ್ತಮಾ, ಅತಿ ರಕ್ತದೊತ್ತಡ, ಇಲ್ಲವೇ ಮಿದುಳು ಸರಿಯಾಗಿ ಬೆಳೆಯದೆ ಸೆರೆಬ್ರಲ್ ಪಾಲ್ಸಿಯಂತಹ ದೋಷಗಳು ಕಾಣಿಸಿಕೊಳ್ಳಬಹುದು. 'ಸೆರೆಬ್ರಲ್ ಪಾಲ್ಸಿ' ಎಂದರೆ ಕೈ-ಕಾಲುಗಳ ಮೇಲೆ ಹಿಡಿತವಿಲ್ಲದಂತಹ ಬೆಳೆವಣಿಗೆ. ಇದಕ್ಕೆ ಮೂಲಕಾರಣ ಮಿದುಳು ಮತ್ತು ಶ್ವಾಸಕೋಶಗಳು ಕೊನೆಯಲ್ಲಿ ಬೆಳೆದು, ಬಲಿಯುವ ಅಂಗಗಳು. ತಾಯಿಯ ಗರ್ಭದಾಚೆ, ಐಸಿಯೂವಿನಲ್ಲಿ, ಇವು ಪರಿಪೂರ್ಣವಾಗಿ ಬೆಳೆಯದೆ ಇರುವುದರಿಂದ ಈ ತೊಂದರೆಗಳು ಕಾಣಿಸಿಕೊಳ್ಳುತ್ತವೆ. ಸ್ವೀಡನ್ ದೇಶದಲ್ಲಿ ಇಪ್ಪತ್ತೈದು ಲಕ್ಷ ಮಕ್ಕಳ ಅಧ್ಯಯನವೊಂದರಲ್ಲಿ ಹೀಗೆ ಅವಧಿಗೂ ಮುನ್ನ ಹುಟ್ಟಿದ ಮಕ್ಕಳಲ್ಲಿ ಶೇ. 78ರಷ್ಟು ಮಕ್ಕಳಿಗೆ ಒಂದಲ್ಲ ಒಂದು ಶ್ವಾಸಕೋಶ ಹಾಗೂ ನರಮಂಡಲದ ಸಮಸ್ಯೆಗಳು ಇದ್ದುದು ಪತ್ತೆಯಾಗಿದೆ. ಸಾಮಾನ್ಯವಾಗಿ ಹುಟ್ಟುವ ಮಕ್ಕಳಲ್ಲಿ ಕಾಣುವ ಪ್ರಮಾಣದ ಮೂರು ಪಟ್ಟು ಇದು.

ಮಿದುಳು ಮತ್ತು ಶ್ವಾಸಕೋಶಗಳು ಪರಿಪೂರ್ಣವಾಗಿ ಬೆಳೆಯಲು ಬೇಕಾದ ಪರಿಸರವನ್ನು ಹೀಗೆ ತಾಯಿಯ ಗರ್ಭದಾಚೆ ಕಟ್ಟಿಕೊಡಬಹುದೇ ಎನ್ನುವುದು ಫ್ಲೇಕ್ ಅವರ ತಂಡದ ಪ್ರಶ್ನೆ. ಇದೇ ಪ್ರಶ್ನೆಯನ್ನು ಸುಮಾರು ಎಪ್ಪತ್ತು ವರ್ಷಗಳಿಂದಲೂ ಕೇಳುತ್ತಲೇ ಬರಲಾಗಿದೆ. ಕೃತಕ ಗರ್ಭವನ್ನು ತಯಾರಿಸುವ ಪ್ರಯತ್ನಗಳೂ ನಡೆದಿವೆ. ಆದರೆ ಅವು ಯಾವುವೂ ಸಫಲವಾಗಿರಲಿಲ್ಲ. ಫ್ಲೇಕ್ ತಂಡ ಕೆಲವು ವರ್ಷಗಳ ಹಿಂದೆ ಇದಕ್ಕೊಂದು ಉಪಾಯ ಹೂಡಿತ್ತು. ಗರ್ಭಾಶಯದೊಳಗೆ ಇರುವಂತಹದ್ದೇ ದ್ರವವನ್ನು ಕೃತಕವಾಗಿ ತಯಾರಿಸಿ, ಅದನ್ನು ಮೃದುವಾದೊಂದು ಪಾಲಿಮರ್ ಚೀಲದೊಳಗಿಟ್ಟು ಗರ್ಭವನ್ನು ಸೃಷ್ಟಿಸಿತ್ತು. ಇದರೊಳಗೆ ಆಡಿನ ಪಿಂಡವೊಂದನ್ನಿಟ್ಟು, ಅದರ ಹೊಕ್ಕಳಬಳ್ಳಿಗೆ ಹೊರಗಿನಿಂದ ಆಕ್ಸಿಜನ್ ಅನ್ನು ಸರಬರಾಜು ಮಾಡುವ ಆಕ್ಸಿನರೇಟರನ್ನು ಜೋಡಿಸಿದ್ದರು. ಹೀಗೆ ಪಿಂಡ ಸಹಜವಾಗಿ ತನ್ನದೇ ಹೃದಯದ ಮೂಲಕ ರಕ್ತವನ್ನು ಪಂಪು ಮಾಡುವಂತೆ ಮಾಡಿದ್ದರಲ್ಲದೆ, ಆಕ್ಸಿಜನ್‌ನ ಸರಬರಾಜು ಕುಂದದಂತೆ ಮಾಡಿದ್ದರು. ಐಸಿಯೂವಿನಲ್ಲಿ ಆಕ್ಸಿಜನ್ ನೀಡಿದರೂ, ಶ್ವಾಸಕೋಶ ಇನ್ನೂ ಪೂರ್ಣವಾಗಿ ಬೆಳೆಯದೆ ಇರುವುದರಿಂದ ಅದು ವಿವಿಧ ಅಂಗಗಳನ್ನು ಯುಕ್ತ ಪ್ರಮಾಣದಲ್ಲಿ ತಲುಪುವುದು ಕಡಿಮೆ.

ಆಡಿಗೆಂದು ತಯಾರಿಸಿದ್ದ ಈ ಗರ್ಭಚೀಲದಲ್ಲಿ ಹಲವಾರು ಆಡಿನ ಮರಿಗಳನ್ನು ಕೃತಕವಾಗಿ ಬೆಳೆಸಿದ್ದಾರೆ. ಜಪಾನು, ನೆದರ್ಲೆಂಡ್, ಸ್ಪೇನ್, ಆಸ್ಟ್ರೇಲಿಯಾ, ಸಿಂಗಪೂರಿನ ವೈದ್ಯರುಗಳೂ ಇಂತಹ ಕೃತಕ ಗರ್ಭಾಶಯಗಳನ್ನು ತಯಾರಿಸುವಲ್ಲಿ ನಿರತರಾಗಿದ್ದಾರೆ. ಆದರೆ ಫಿಲಾಡೆಲ್ಫಿಯಾದ ಮಕ್ಕಳ ಆಸ್ಪತ್ರೆಯ 'ಬಯೋಬ್ಯಾಗ್' ಎನ್ನುವ ಈ ಕೃತಕ ಗರ್ಭಾಶಯ ಮಾನವರ ಮೇಲೆ ಪ್ರಯೋಗಿಸಲು ಸಿದ್ಧವಾಗಿದೆ ಎನ್ನುತ್ತದೆ, 'ನೇಚರ್' ಪತ್ರಿಕೆ. ನಾಳೆ ಐದರಿಂದ ಆರು ತಿಂಗಳ ಬಸಿರು ಕಳೆಯುವಷ್ಟರಲ್ಲಿಯೇ ಆತುರವಾಗಿ ಹುಟ್ಟುವ ಶಿಶುಗಳನ್ನೂ ಹೀಗೇ ತಾಯಿಯ ಗರ್ಭಾಶಯದ ಹೊರಗೆ ಇಟ್ಟು ಬೆಳೆಸಬಹುದು. ಪ್ರತಿವರ್ಷ ಸಾಯುವ ಲಕ್ಷಾಂತರ ಮಕ್ಕಳನ್ನು ಉಳಿಸಬಹುದು ಎನ್ನುವುದು ಫ್ಲೇಕ್ ತಂಡದ ಆಶಯ.

ತಂದೆಯ ವೀರ್ಯ, ತಾಯಿಯ ಅಂಡಗಳಿಲ್ಲದೆ ಭ್ರೂಣಗಳನ್ನು ಹುಟ್ಟು ಹಾಕುವುದು ಸ್ಟೆಮ್ ಸೆಲ್ ತಂತ್ರಜ್ಞಾನದಿಂದ ಸಾಧ್ಯವಾಗಿದೆ. ಭ್ರೂಣಗಳು ಬೆಳೆಯಲು ತಾಯಿಯ ಗರ್ಭಾಶಯದ ಅಗತ್ಯವಿತ್ತು. ಅದನ್ನೂ ಇಲ್ಲವಾಗಿಸಿದಲ್ಲಿ, ಬಹುಶಃ ಗಂಡು-ಹೆಣ್ಣು, ಮದುವೆ, ವಿವಾಹ ಎನ್ನುವುದೆಲ್ಲ ಮರೆಯಾಗಬಹುದೇ? ❖



ಕೃತಕ ಗರ್ಭಾಶಯದಲ್ಲಿ ಆಡಿನ ಭ್ರೂಣ

ಪ್ಲಾಸ್ಟಿಕ್ ತ್ಯಾಜ್ಯ ನಿವಾರಣೆಗೆ ಉಪ್ಪು

ಕ್ಷಮಾ ವಿ. ಭಾನುಪ್ರಕಾಶ್

'ಉಪ್ಪಿಗಿಂತ ರುಚಿಯಿಲ್ಲ, ತಾಯಿಗಿಂತ ಬಂಧುವಿಲ್ಲ' ಎಂಬುದು ಎಲ್ಲರಿಗೂ ಗೊತ್ತೇ ಇರುವ ಗಾದೆ. ಇಲ್ಲಿ ಉಪ್ಪೇ ಆಪ್ತಬಂಧುವಾದ ಕಥೆಯುಂಟು ಗೊತ್ತಾ? ಇದು ನಡೆದದ್ದು ಅಮೆರಿಕದ ಮಿಶಿಗನ್ ವಿಶ್ವವಿದ್ಯಾಲಯದ ಪ್ರಯೋಗಾಲಯದಲ್ಲಿ. ಅಲ್ಲಿ ಪ್ಲಾಸ್ಟಿಕ್ ಮರುಬಳಕೆ ಮಾಡುವ ಬಗ್ಗೆ ಪ್ರಯೋಗಗಳು ನಡೆಯುತ್ತಿದ್ದವು. ರಸಾಯನವಿಜ್ಞಾನ, ಭೌತವಿಜ್ಞಾನದ ಅನೇಕ ತರ್ಕಗಳನ್ನು, ಪ್ರಕ್ರಿಯೆಗಳನ್ನು ಬಳಸಿ ಪರೀಕ್ಷೆ ನಡೆಸಲಾಗುತ್ತಿತ್ತು.

ಪ್ಲಾಸ್ಟಿಕ್‌ನ ಮರುಬಳಕೆ ಎಂಬುದು ಒಳ್ಳೆಯ ಉದ್ದೇಶದ ಹಿಂದಿನ ಧನವ್ಯಯವಷ್ಟೇ ಎಂಬಂತಾಗಿದೆ ಈಗ. ಮರುಬಳಕೆ ಮಾಡಲಾಗದ ಪ್ಲಾಸ್ಟಿಕ್ಕೇ ಹೆಚ್ಚಿನ ಪ್ರಮಾಣದಲ್ಲಿ ಮಾರುಕಟ್ಟೆಯಲ್ಲಿ ಲಭ್ಯ. ಯಾವುದೇ ಸರ್ಕಾರ ಬಂದರೂ, ಇದನ್ನು ಮಾತ್ರ ನಿಯಂತ್ರಿಸಲು ಸಾಧ್ಯವಾಗದಂತಹ ಪರಿಸ್ಥಿತಿ. ಇನ್ನು ಮರುಬಳಕೆ ಮಾಡಬಲ್ಲಂತಹ ಗುಣಮಟ್ಟದ ಪ್ಲಾಸ್ಟಿಕ್ ಕೂಡ ಅನೇಕ ಬಾರಿ ತಿಪ್ಪೆರಾಶಿಯ ಭಾಗವಾಗಿಯೇ, ಭೂಮಿಯ ಒಡಲಾಳದಲ್ಲಿ ಕ್ಯಾನ್ಸರ್‌ನಂತೆ ಉಳಿದುಬಿಡುತ್ತದೆ ಅಥವಾ ಸುಟ್ಟು ಅಪಾಯಕಾರಿ ವಿಷಾನಿಲವಾಗಿ ಹೊರಬಂದು, ಮಾಲಿನ್ಯಕ್ಕೆ ತನ್ನ ಕೊಡುಗೆಯನ್ನು ನೀಡುತ್ತದೆ. ಇದನ್ನು ತಡೆಯಲೆಂದೇ, ಅದೆಷ್ಟೋ ಪ್ಲಾಸ್ಟಿಕ್ ಮರುಬಳಕೆ ಘಟಕಗಳನ್ನು ಸ್ಥಾಪಿಸಿದರೂ, ಅವುಗಳಿಂದ ಉದ್ದೇಶ ಸಫಲವಾಗುವುದು ಅಷ್ಟಕ್ಕಷ್ಟೇ. ಇದಕ್ಕೆ ಎರಡು ಕಾರಣಗಳು: ಮೊದಲನೆಯದಾಗಿ, ಮರುಬಳಕೆ ಮಾಡಲಾದ ಪ್ಲಾಸ್ಟಿಕ್‌ನಿಂದ ತಯಾರಿಸಲಾದ ವಸ್ತುಗಳನ್ನು ಹಣ ಕೊಟ್ಟು ಕೊಳ್ಳುವ ಜನ ಕಡಿಮೆಯೇ; ಎರಡನೆಯದಾಗಿ, ಮರುಬಳಕೆ ಮಾಡಲು ಕೋಟ್ಯಂತರ ರೂಪಾಯಿಗಳು ಖರ್ಚಾಗುತ್ತವೆ. ಇಲ್ಲಿ ಪ್ಲಾಸ್ಟಿಕ್ ಬಾಟಲಿಯನ್ನು ಪೇಂಟ್‌ನಿಂದ ಅಲಂಕಾರ ಮಾಡಿ ಹೂದಾನಿಯಾಗಿಸುವ ಮರುಬಳಕೆಯ ಬಗ್ಗೆ ಚರ್ಚಿಸುತ್ತಿಲ್ಲ; ಸಾವಿರಾರು ಟನ್‌ಗಟ್ಟಲೇ ಸಂಗ್ರಹವಾದ ಪ್ಲಾಸ್ಟಿಕ್‌ತ್ಯಾಜ್ಯವನ್ನು ಬೃಹತ್ ಕುಲುಮೆಗಳಲ್ಲಿ, ವಿಶೇಷ ರಾಸಾಯನಿಕಗಳ ಸಹಾಯದಿಂದ ಸರಳೀಕರಿಸುವ ಮರುಬಳಕೆಯ ಬಗ್ಗೆ ಮಾತಾಡುತ್ತಿದ್ದೇವೆ. 'ಪೈರೋಲೈಸಿಸ್' ಎಂಬ ಈ ಪ್ರಕ್ರಿಯೆಯಲ್ಲಿ, ಗ್ರೀಕ್‌ಮೂಲದ ಈ ಹೆಸರಿಗೆ ತಕ್ಕ ಹಾಗೆ 'ಪೈರೋ' ಎಂದರೆ 'ಶಾಖ'ವನ್ನು ಬಳಸಿ 'ಲೈಸಿಸ್' ಅಂದರೆ ಮುರಿಯುವುದು, ವಿಘಟಿಸಿ ಸರಳೀಕರಿಸುವುದು ಸಾಧ್ಯವಾಗುತ್ತದೆ. ಆಮ್ಲಜನಕರಹಿತ ವಾತಾವರಣವಾದ ಈ ಬೃಹತ್ ಕುಲುಮೆಗಳಲ್ಲಿ ಬಗೆಬಗೆಯ ಪ್ಲಾಸ್ಟಿಕ್‌ನಂತಹ ಪಾಲಿಮರ್‌ಗಳನ್ನು ಕರಗಿಸಲು, ಸರಳ ಉತ್ಪನ್ನಗಳನ್ನು ಪಡೆಯಲು, ಬೇಕಾಗುವ ತಾಪಮಾನ 350 ಡಿಗ್ರಿ ಸೆಲ್ಸಿಯಸ್‌ನಿಂದ 1000 ಡಿಗ್ರಿ ಸೆಲ್ಸಿಯಸ್‌ನವರೆಗೆ; ಅದಕ್ಕೆ ಸಿಕ್ಕಾಪಟ್ಟೆ ಇಂಧನ ಬೇಕಾಗುತ್ತದಲ್ಲ? ಹಾಗಾಗಿ, ಕೆಲವು 'ಕ್ಯಾಟಲಿಸ್ಟ್', ಎಂದರೆ ವೇಗವರ್ಧಕಗಳನ್ನು ಬಳಸಿ, ಈ ರಾಸಾಯನಿಕ ಪ್ರಕ್ರಿಯೆಗೆ ಬೇಕಾದಂತಹ ನಿಗದಿತ ತಾಪಮಾನ ತಗ್ಗಿಸಬಹುದು. ಆದರೆ ಇಲ್ಲಿ ಬಳಸಲಾಗುವ ವೇಗವರ್ಧಕಗಳ ಬೆಲೆಯೆಷ್ಟೆಂದು ಕೇಳಿದರೆ ಹೌಹಾರಲೇಬೇಕು!

ಇಲ್ಲಿ ಬಳಕೆಯಾಗುವುದು ಚಿನ್ನಕ್ಕಿಂತಲೂ ದುಬಾರಿಯಾದ ಪ್ಲಾಟಿನಂನಂತಹ ಲೋಹಗಳು, ವಿವಿಧ ಲೋಹಗಳ ಮತ್ತು ಸಂಯುಕ್ತ ಪದಾರ್ಥಗಳ ಮಿಶ್ರಣಗಳು - ಹೀಗೆ.

ಇಂಥ ವೇಗವರ್ಧಕಗಳು ಮತ್ತು ಅಪಾರ ಇಂಧನದ ಮೇಲೆ ಖರ್ಚು ಮಾಡಿ, ದೊರೆಯುವ ಸರಳೀಕರಿಸಿದ ಉಪ ಉತ್ಪನ್ನಗಳ ಬೆಲೆ ಕಡಿಮೆಯೇ. ಹಾಗಾಗಿ, ರಾಸಾಯನಿಕವಾಗಿ ಪ್ಲಾಸ್ಟಿಕ್ ಮರುಬಳಕೆಯ ವೆಚ್ಚವನ್ನು ತಗ್ಗಿಸುವ ನಿಟ್ಟಿನಲ್ಲಿ ಅನೇಕ ಪ್ರಯೋಗಗಳು ನಡೆಯುತ್ತಲೇ ಇವೆ. ಅಂತಹದ್ದೇ ಪ್ರಯೋಗ ನಡೆಸುತ್ತಿದ್ದರು, ಮಿಶಿಗನ್ ವಿಶ್ವವಿದ್ಯಾಲಯದ ವಿಜ್ಞಾನಿ ರಬ್ನವಾರ್ಝ್. ಇವರು ದುಬಾರಿ ವೇಗವರ್ಧಕಗಳ ಬದಲು, ಕಡಿಮೆ ಹಣ ಖರ್ಚುಮಾಡಿ ಬಳಸಬಲ್ಲ ವೇಗವರ್ಧಕಗಳ ಹುಡುಕಾಟದಲ್ಲಿದ್ದಾಗ, ಇವರಿಗೆ ಹೊಳೆದದ್ದು ಎಲ್ಲರೂ ದಿನನಿತ್ಯವೂ ಆಹಾರದಲ್ಲಿ ಸೇವಿಸುವ ಉಪ್ಪಿನ ಬಗ್ಗೆ. ನೀರಿಗೆ ಹಾಕಿದಾಗ ಕರಗುವ, ಬೆಂಕಿಗೆ ಹಾಕಿದಾಗ ಸಿಡಿಯುವ ಉಪ್ಪಿನ ಬಗ್ಗೆ ರಾಸಾಯನಿಕವಾಗಿ ಸಾಕಷ್ಟು ಈಗಾಗಲೇ ಗೊತ್ತಿರುವುದರಿಂದ, ಹಾಗೂ ಅದರ ಸುಲಭಲಭ್ಯತೆಯ ಕಾರಣದಿಂದ ತಕ್ಷಣವೇ ಬಳಸಿ ನೋಡಲಾಯ್ತು; ಆಗಲೇ ಉಪ್ಪು ಎಂತಹ ಆಪ್ತಬಂಧು ಎಂಬುದು ಮನದಟ್ಟಾಗುವಂತಹ ಫಲಿತಾಂಶ ಬಂದದ್ದು. ಪ್ಲಾಸ್ಟಿಕ್ ಅನ್ನು ತ್ವರಿತವಾಗಿ ಸರಳೀಕರಿಸುವ ಪ್ರಕ್ರಿಯೆಯನ್ನು ಕಡಿಮೆ ತಾಪಮಾನದಲ್ಲಿ ಸಾಧ್ಯವಾಗಿಸಿದ ಉಪ್ಪು, ಈ ಪ್ರಕ್ರಿಯೆಯ ಖರ್ಚನ್ನು ಮುಕ್ಕಾಲು ಪಾಲು ಕಡಿಮೆ ಮಾಡಿತ್ತು. ಬಂಡವಾಳದ ಉಳಿತಾಯ, ಈ ಪ್ರಕ್ರಿಯೆಗೆ ಬೇಕಾದ ಶಾಖದಲ್ಲಿ ಇಳಿಕೆ. ಇವಷ್ಟೇ ಅಲ್ಲದೇ, ಇಲ್ಲಿ ಮತ್ತೊಂದು ಅನುಕೂಲ ಕಂಡುಬಂದಿತ್ತು. ಸಾಮಾನ್ಯವಾಗಿ ಪ್ಲಾಸ್ಟಿಕ್ ಅನ್ನು ಹೀಗೆ 'ಪೈರೋಲೈಸಿಸ್ಗೆ' ಒಳಪಡಿಸಿದಾಗ ದೊರೆಯುವ ಉತ್ಪನ್ನಗಳು ಮೇಣದಂತಹ ಘನಪದಾರ್ಥ ಮತ್ತು ಇಂಧನಗಳಾಗಿ ಬಳಸಬಲ್ಲ ಕೆಲವು ದ್ರವಗಳು ಮತ್ತು ಅನಿಲಗಳು. ಇಲ್ಲಿ ಮೇಣದಂತಹ ಘನಪದಾರ್ಥದ ಉಪಯುಕ್ತತೆ ಹೆಚ್ಚೇನೂ ಇಲ್ಲ. ಅನಿಲ ಮತ್ತು ದ್ರವಗಳು ಬಳಕೆಯಾಗಬಹುದಷ್ಟೇ. ಆದರೆ, ಉಪ್ಪನ್ನು ಬಳಸಿ ಪ್ಲಾಸ್ಟಿಕ್‌ಅನ್ನು ಮರುಬಳಕೆ ಮಾಡುವ ಮುಖಾಂತರ ಹೊರಬಂದ ಉತ್ಪನ್ನಗಳಲ್ಲಿ ಬಹುಪಾಲು, ಇಂಧನವಾಗಿ ಬಳಕೆಯಾಗಬಲ್ಲ ದ್ರವಗಳು ಹಾಗೂ ಅನಿಲಗಳೇ ಇವೆ ಎನ್ನುತ್ತಾರೆ, ರಬ್ನವಾರ್ಝ್. ಹೀಗೆ ತಯಾರಾದ ದ್ರವರೂಪೀ ಇಂಧನಗಳ ರಾಸಾಯನಿಕ ರಚನೆ ಕೂಡ ಸರಳವಾಗಿದ್ದು, ಡೀಸೆಲ್‌ನಂತೆ ಬಳಸಬಹುದಾಗಿದೆ ಎನ್ನುತ್ತಾರೆ, ಸಂಶೋಧಕರು.

'ಅಡ್ವಾನ್ಸ್ಡ್ ಸಸ್ಟೇನೆಬಲ್ ಸಿಸ್ಟಮ್ಸ್' ಎಂಬ ಜರ್ನಲ್‌ನಲ್ಲಿ ಪ್ರಕಟವಾದ ಈ ಸಂಶೋಧನೆಯು, ವಿಜ್ಞಾನಲೋಕದಲ್ಲಿ ಸಂಚಲನ ಮೂಡಿಸಿರುವುದು ಈ ಕಾರಣಗಳಿಂದಾಗಿಯೇ. ಅದರಲ್ಲೂ 'ಪಾಲಿಆಲ್ಫಿನ್' ಎಂಬ ವಿಘಟಿಸಲು ಕಷ್ಟವೆನಿಸುವ ಪ್ಲಾಸ್ಟಿಕ್ ಅನ್ನೂ ಸುಲಭವಾಗಿ ಸರಳೀಕರಿಸಿದೆ ಈ ಸರಳ ಉಪ್ಪು. ಉಪಯುಕ್ತವಲ್ಲದ ಮೇಣದಂತಹ ಉತ್ಪನ್ನದ ಪ್ರಮಾಣವನ್ನೂ ತಗ್ಗಿಸಿರುವ ಉಪ್ಪು, ಮತ್ತಷ್ಟು ಭರವಸೆ ಮೂಡಿಸಿದೆ. ಯಾವುದೇ ವೇಗವರ್ಧಕವಾಗಲಿ, ಅದು ಇತರ ರಾಸಾಯನಿಕಗಳಂತೆ ಪ್ರಕ್ರಿಯೆಯಲ್ಲಿ ಬಳಕೆಯಾಗುವುದಿಲ್ಲ. ಆ ರಾಸಾಯನಿಕಗಳು ರಾಸಾಯನಿಕ ಪ್ರಕ್ರಿಯೆಗೆ ಒಳಪಡುವಾಗ, ವೇಗವರ್ಧಕವು ತಟಸ್ಥವಾಗಿದ್ದು, ಪ್ರಕ್ರಿಯೆಯ ವೇಗವನ್ನು ಹೆಚ್ಚಿಸುವುದಷ್ಟೇ ಇದರ ಕೆಲಸ. ರಾಸಾಯನಿಕ ಕ್ರಿಯೆ ಸಂಪೂರ್ಣವಾದ ಮೇಲೆ, ಬಳಸಿದ ವೇಗವರ್ಧಕವನ್ನು ಪುನಃ ಬೇರ್ಪಡಿಸಿ, ಮುಂದಿನ ಸಲ ಬಳಸಲು ಸಂಗ್ರಹಿಸಿಟ್ಟುಕೊಳ್ಳಬಹುದು. ಆದರೆ, ಹೀಗೆ ಬೇರ್ಪಡಿಸಲು ಕೂಡ ಅನೇಕ ಪ್ರಕ್ರಿಯೆಗಳನ್ನು ಬಳಸಬೇಕಾಗುತ್ತದೆ ಮತ್ತು ಕೆಲವು ಅಷ್ಟು ಸರಳವೂ ಇರವು. ಆದರೆ, ಇಲ್ಲಿ ಬಳಸಲಾದ ವೇಗವರ್ಧಕವು ಸರಳವಾದ ಉಪ್ಪಲ್ಲವೇ? ಹಾಗಾಗಿ, ಕೇವಲ ನೀರನ್ನು ಬಳಸಿ, ನೀರಿನಲ್ಲಿ ಕರಗಿಸಿ, ತೈಲೋತ್ಪನ್ನಗಳಿಂದ ಬೇರ್ಪಡಿಸಿದರೆ ಸಾಕು. ಉಪ್ಪುನೀರನ್ನು ಕುದಿಸಿ, ಮರಳಿ ಉಪ್ಪನ್ನು ಪಡೆಯಲು ಮನುಷ್ಯನಿಗೇನೂ ಹೊಸದಾಗಿ ಹೇಳಿಕೊಡಬೇಕಿಲ್ಲವಲ್ಲ! ಹಾಗಾಗಿ, ವಾಣಿಜ್ಯಕವಾಗಿ, ರಾಸಾಯನಿಕವಾಗಿ, ಪರಿಸರೀ ಯವಾಗಿ - ಹೀಗೆ ಅನೇಕ ಆಯಾಮಗಳಿಂದಲೂ ಉಪ್ಪಿನ ಬಳಕೆಯು, ಸಮರ್ಥ ಹಾಗೂ ಸಮರ್ಪಕ ಎಂಬುದನ್ನು ವಿಜ್ಞಾನಿಗಳು ಸಾಬೀತುಪಡಿಸಿ, ಪ್ಲಾಸ್ಟಿಕ್-ತ್ಯಾಜ್ಯದ ಸಮಸ್ಯೆಗೆ ಹೊಸದೊಂದು ಭರವಸೆದಾಯಕ ಉತ್ತರವನ್ನು ಕಂಡುಕೊಂಡಿದ್ದಾರೆ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ: ಗಣಿತ

ಅಧ್ಯಾಯ–1 ಸಮಾಂತರ ಶ್ರೇಢಿ

ಅಭ್ಯಾಸ 1.1

1. ಈ ಕೆಳಗಿನ ಯಾವ ಸಂದರ್ಭಗಳಲ್ಲಿ ಕೊಟ್ಟಿರುವ ಸಂಖ್ಯಾ ಪಟ್ಟಿಯು ಸಮಾಂತರ ಶ್ರೇಢಿಯನ್ನುಂಟು ಮಾಡುತ್ತದೆ ಮತ್ತು ಏಕೆ?

iv) ಆರಂಭಿಕ ಠೇವಣಿ ರೂ. 10000ಕ್ಕೆ 8% ಚಕ್ರಬಡ್ಡಿಯಂತೆ ಪ್ರತಿವರ್ಷ ಆಗುವ ಮೊತ್ತ

ಪರಿಹಾರ: (.........ಹಿಂದಿನ ಸಂಚಿಕೆಯಿಂದ)

ಮೊದಲನೇ ವರ್ಷದ ನಂತರದ ಮೊತ್ತ

$$= Rs.10000\left(1+\frac{8}{100}\right) = a_1$$

ಎರಡನೇ ವರ್ಷದ ನಂತರದ ಮೊತ್ತ

$$= Rs.10000\left(1+\frac{8}{100}\right)^2 = a_2$$

ಮೂರನೇ ವರ್ಷದ ನಂತರದ ಮೊತ್ತ

$$= Rs.10000\left(1+\frac{8}{100}\right)^3 = a_3$$

ಹೀಗೆಯೇ ಮುಂದುವರಿಯುತ್ತದೆ

ಆದ್ದರಿಂದ ಸಾಮಾನ್ಯ ವ್ಯತ್ಯಾಸ(d) ಸ್ಥಿರವಾಗಿಲ್ಲ ಹೀಗಾಗಿ

$$a_2 - a_1 \neq a_3 - a_2$$

ಆದ್ದರಿಂದ ಸಮಾಂತರ ಶ್ರೇಢಿಯನ್ನುಂಟು ಮಾಡಲಾರದು

2) ಮೊದಲನೆ ಪದ a, ಸಾಮಾನ್ಯ ವ್ಯತ್ಯಾಸ d ಈ ಕೆಳಗಿನಂತಿರುವ ಸಮಾಂತರ ಶ್ರೇಢಿಯ ಮೊದಲ ನಾಲ್ಕು ಪದಗಳನ್ನು ಕಂಡುಹಿಡಿಯಿರಿ.

i) $a = 10, \ d = 10$ ii) $a = -2, \ d = 0$

iii) $a = -1, \ d = ½$

ಪರಿಹಾರ: (i) $a = 10, d = 10$

ಸಮಾಂತರ ಶ್ರೇಢಿಯು ಕೆಳಗಿನ ರೂಪದಲ್ಲಿದೆ

$a, \ a + d, \ a + 2d, \ a + 3d, \ldots$

$10, \ \mathbf{10 + 10}, \ 10 + 2(10), \ \mathbf{10 + 3(10)}, \ldots$

$10, 20, 30, 40, \ldots$

ಪರಿಹಾರ: (ii) $a = -2, \ d = 0$

ಸಮಾಂತರ ಶ್ರೇಢಿಯು ಕೆಳಗಿನ ರೂಪದಲ್ಲಿದೆ

$a, \ a + d, \ a + 2d, \ a + 3d, \ldots$

$-2, -2+0, -2+0, -2+0, \ldots$

$-2, -2, -2, -2 \ldots$

ಪರಿಹಾರ: (iii) $a = -1, \ d = \frac{1}{2}$

ಸಮಾಂತರ ಶ್ರೇಢಿಯು ಕೆಳಗಿನ ರೂಪದಲ್ಲಿದೆ

$a, \ a + d, \ a + 2d, \ a + 3d, \ldots$

$$-1, -1+\frac{1}{2}, -1+2\left(\frac{1}{2}\right), -1+3\left(\frac{1}{2}\right), \ldots$$

$$-1, -\frac{1}{2}, -1+\frac{1}{4}, -1+\frac{3}{2} \ldots$$

$$\Rightarrow -1, -\frac{1}{2}, -\frac{3}{4}, \frac{1}{2}, \ldots$$

3) ಇವುಗಳಲ್ಲಿ ಯಾವುವು ಸಮಾಂತರ ಶ್ರೇಢಿಗಳಾಗಿವೆ? ಸಮಾಂತರ ಶ್ರೇಢಿಗಳಾಗಿದ್ದಲ್ಲಿ ಸಾಮಾನ್ಯ ವ್ಯತ್ಯಾಸ ಕಂಡುಹಿಡಿದು ಅದರ ಮುಂದಿನ ಮೂರು ಪದಗಳನ್ನು ಬರೆಯಿರಿ

(i) $2, 4, 8, 16, \ldots$

(ii) $2, \ 5/2, \ 3, \ 7/2 \ldots$

(iii) $-1.2, -3.2, -5.2, -7.2, \ldots$

(iv) $-10, -6, -2, 2, \ldots$

(v) $3, \ 3+\sqrt{2}, \ 3+2\sqrt{2}, \ 3+3\sqrt{2}, \ldots$

(vi) $0.2, \ 0.22, \ 0.222, \ 0.2222, \ldots$

(vii) $0, -4, -8, -12, \ldots$

(viii) $-\frac{1}{2}, -\frac{1}{2}, -\frac{1}{2}, -\frac{1}{2} \ldots$

(ix) $1, 3, 9, 27, \ldots$

(x) $a, \ 2a, \ 3a, \ 4a, \ldots$

(xi) $a, \ a^2, \ a^3, \ a^4, \ldots$

(xii) $\sqrt{2}, \sqrt{8}, \sqrt{18}, \sqrt{32} \ldots$

(xiii) $\sqrt{3}, \sqrt{6}, \sqrt{9}, \sqrt{12} \ldots$

(xiv) $1^2, 3^2, 5^2, 7^2, \ldots$

(xv) $1^2, 5^2, 7^2, 73, \ldots$

ಪರಿಹಾರ: i) $2, 4, 8, 16, \ldots$

$$a_2 - a_1 = 4 - 2 = 2 \Rightarrow a_3 - a_2 = 8 - 4 = 4$$

$$a_4 - a_3 = 16 - 8 = 8$$

ಇಲ್ಲಿ $a_2 - a_1 \neq a_3 - a_2$ ಆದ್ದರಿಂದ ಸಮಾಂತರ ಶ್ರೇಢಿಯನ್ನುಂಟು ಮಾಡಲಾರದು

(ii) 2, 5/2, 3, 7/2 ....

ಪರಿಹಾರ:

$$2, \ \frac{5}{2}, \ 3, \ \frac{7}{2}, \ldots$$

$$a_2 - a_1 = \frac{5}{2} - 2 = \frac{1}{2}$$

$$a_3 - a_2 = 3 - \frac{5}{2} = \frac{1}{2}$$

$$a_4 - a_3 = \frac{7}{2} - 3 = \frac{1}{2}$$

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ

ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d = \frac{1}{2}$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿವೆ.

ಮುಂದಿನ ಮೂರು ಪದಗಳು

$$\frac{7}{2} + \frac{1}{2} = 4$$

$$4 + \frac{1}{2} = \frac{9}{2}$$

$$\frac{9}{2} + \frac{1}{2} = 5$$

(iii) – 1.2, – 3.2, – 5.2, – 7.2, ...

ಪರಿಹಾರ:

$-1.2, -3.2, -5.2, -7.2, \ldots$

$$a_2 - a_1 = -3.2 - (-1.2) = -3.2 + 1.2 = 2.0$$

$$a_3 - a_2 = 5.2 - (-3.2) = -5.2 + 3.2 = 2.0$$

$$a_4 - a_3 = -7.2 - (-5.2) = -7.2 + 5.2 = 2.0$$

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ

ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d = -2.0$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿದೆ.

ಮುಂದಿನ ಮೂರು ಪದಗಳು

$$-7.2 + (-2.0) = -9.2$$

$$-9.2 + (-2.0) = -11.2$$

$$-11.2 + (-2.0) = -13.2$$

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC BIOLOGY

REPRODUCTION

Reproduction in flowering plants

10. Draw a labelled diagram of the sectional view of a mature pollen grain of angiosperms. Explain the functions of any two of its parts.

Ans:-



Functions-

(i) Exine – Made of most resistant biological substance sporopollenin, it provides protection to pollen grain.

(ii) Intine - Made of cellulose and pectin, it later grows to form pollen tube.

(iii) Generative cell – It gives rise to two male gametes.

11. In the adjacent figure of a typical dicot embryo, label the parts (1), (2) and (3). State the function of each of the labelled part.



Ans:- (1) Plumule, (2) Cotyledons, (3) Radicle

Functions:-

Plumule – To form shoot system

Radicle - To form root system

Cotyledons (seed layers) – storage of food

12. Explain Anemophily.

Ans:- Anemophily is a mode of cross pollination performed through the agency of wind. It is more common of the two abiotic pollinations.

Air currents pick up pollen grains from the dehiscing anthers and carry the same to different places. Receptive stigmas pick up the pollen floating in the air.

13. Mention the characteristics of Anemophilous Flowers.

Ans:- Characteristics of Anemophilous Flowers are-

(i) Flowers are small and inconspicuous. They are often packed in inflorescence.

(ii) Non-essential floral parts are reduced or absent.

(iii) Flowers are usually colorless, nectarless and odourless.

(iv) Flowers are developed above the foliage, usually in hanging spikes or catkins.

(v) Male flowers are more abundant in case of unisexual flowers. In bisexual flowers stamens are more abundant.

(vi) Anthers are exerted and versatile.

(vii) Anthers burst forcefully and suddenly to throw the pollen grains in air as in case of urtica. It is called gunpowder mechanism.

(viii) Pollen grains are small, smooth, nonsticky and light. They may have air sacs or wings. Such pollens can float in air for long distances, upto 1300 km in pine.

(ix) Pollen grains are dry and unwettable. This protects the pollen from moisture present in the air.

(x) Stigmas are exserted, hairy, feathery or branched to capture the pollen grains. The cob of Maize has elongated stigmas and styles which sway in wind to trap pollen grains.

(xi) A very large number of pollen grains are produced, e.g., 500000 per flower in Cannabis, 25 million by a tassel of Maize and 135 million by Mercurialis.

(xii) Pistils commonly possess single ovules.

Eg:- Anemophily is common in grasses. Other examples are Amaranthus, Cannabis, Chenopodium, Coconut, Date, Mulberry, Poplar, Willow, etc.

14. What is the significance of Anemophily?

Ans:- The Significance of Anemophily are -

(i) It is a highly wasteful phenomenon because it is non-directional.

(ii) Rate of successful pollination is low.

(iii) Air borne pollen of same plants cause hay fever and bronchial allergy.

15. Explain Hydrophily.

Ans:- Hydrophily is a mode of pollination brought about through the agency of water. It occurs in about 30 genera of mostly monocotyledonous aquatic plants, *e.g., Lemna, vallisneria, Ceratophylum, Zostera.*

Many aquatic plants use other modes of pollination (*e.g.,* Water Hyacinth, Water Lily) because water is not a good transport medium for pollen grains. They emerge out of water and are pollinated by wind or insects. Many workers believe that distribution of bryophytes and pteridophytes is limited because of the dependence of their sperms on water for transport.

16. Mention the characteristics of Hydrophilous Flowers.

Ans:- Some characteristics of Hydrophilous Flowers are -

(i) Flowers are small, inconspicuous and light.

(ii) Perianth is unwettable.

(iii) Flowers are without nectar and odour.

(iv) Light and unwettable pollen grains. They are generally surrounded by mucilaginous covering.

(v) Long, sticky and unwettable stigma.

17. Mention the two types of Hydrophily.

Ans:- Hydrophily is of two types – hypohydrophily and epihydrophily.

18. What is hypohydrophily?

Ans:- Hypohydrophily is a mode of pollination which takes place below the surface of water. ***Eg:*** *Ceratophyllum, Zostera* (Sea Grass).

19. How does pollination take place in Ceratophyllum?

Ans:- Ceratophyllum is submerged fresh water plant having both male and female flowers. Male flower has 30-45 stamens. On maturation anthers break, rise to the surface and release pollen grains. Pollen grains are small, rounded, thin walled and without exine. They slowly sink downwardly to effect pollination. Stigma is quite long and sticky.

(Contd.....)

ಬಿಬಿಎಂಪಿ: ಇಂದಿರಾ ಕ್ಯಾಂಟೀನ್ ಕಾರ್ಯನಿರ್ವಹಣೆ ವೇಳೆಯಲ್ಲೇ ಕಾಮಗಾರಿ

ಕ್ಯಾಂಟೀನ್: ತಿಂಗಳಲ್ಲಿ ದುರಸ್ತಿ

• ಆರ್. ಮಂಜುನಾಥ್

ಪ್ರಜಾವಾಣಿ ವಿಶೇಷ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಇಂದಿರಾ ಕ್ಯಾಂಟೀನ್‌ಗಳ ದುರಸ್ತಿ ಕಾರ್ಯ ಆರಂಭವಾಗಿದ್ದು, ಇನ್ನೊಂದು ತಿಂಗಳಲ್ಲಿ ಎಲ್ಲ ಕಾಮಗಾರಿಗಳೂ ಮುಗಿಯಲಿವೆ.

ಸರ್ಕಾರದ ನಿರ್ದೇಶನದ ಮೇರೆಗೆ ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಇಂದಿರಾ ಕ್ಯಾಂಟೀನ್‌ಗಳಿಗೆ ಹೊಸ ರೂಪ ನೀಡುವ ಕಾಮಗಾರಿ ಆರಂಭವಾಗಿವೆ. ಹಿಂದಿನ ಸರ್ಕಾರದಲ್ಲಿ ಇಂದಿರಾ ಕ್ಯಾಂಟೀನ್‌ಗಳಿಗೆ ಹೆಚ್ಚಿನ ಅನುದಾನ ನೀಡಿರಲಿಲ್ಲ. ಹೀಗಾಗಿ, ಕ್ಯಾಂಟೀನ್‌ಗಳ ಸ್ಥಿತಿ ಬಗ್ಗೆ ಆದ್ಯತೆ ನೀಡಿರಲಿಲ್ಲ. ಎಲ್ಲ ಕ್ಯಾಂಟೀನ್ ಸುಸ್ಥಿತಿಯಲ್ಲಿರಬೇಕು ಎಂಬ ಸರ್ಕಾರದ ಆದೇಶದ ಮೇರೆಗೆ ಕಾರ್ಯ ಆರಂಭವಾಗಿದೆ.

ನಗರದಲ್ಲಿರುವ ಇಂದಿರಾ ಕ್ಯಾಂಟೀನ್‌ಗಳ ಪೈಕಿ 100 ಕ್ಯಾಂಟೀನ್‌ಗಳಲ್ಲಿ ದುರಸ್ತಿ ಕಾರ್ಯ ಬಹುತೇಕ ಪೂರ್ಣಗೊಂಡಿದೆ. ಅಡುಗೆ ಮನೆಯಲ್ಲಿ ದುಸ್ಥಿತಿ, ಆಹಾರ ನೀಡುವ ಸ್ಥಳ, ಊಟ ಮಾಡುವ ಜಾಗದಲ್ಲಿ ಅವ್ಯವಸ್ಥೆ, ಒಳಚರಂಡಿ, ಕುಡಿಯುವ ನೀರಿನ ಮಾರ್ಗದಲ್ಲಿ ಸಮಸ್ಯೆ ಸೇರಿದಂತೆ ಹಲವು ದುರಸ್ತಿ ಕಾಮಗಾರಿಗಳನ್ನು ಪೂರೈಸಲಾಗುತ್ತಿದೆ. ಕ್ಯಾಂಟೀನ್‌ನಲ್ಲಿ ಆಹಾರ ಒದಗಿಸುವ ಜೊತೆಗೆ ದುರಸ್ತಿ ಕೆಲಸಗಳೂ ನಡೆದಿವೆ.

ಇನ್ನೂ 69 ಕ್ಯಾಂಟೀನ್‌ಗಳಲ್ಲಿ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿದ್ದು, ಕೆಲವು ಟೆಂಡರ್ ಪ್ರಕ್ರಿಯೆಯಲ್ಲಿವೆ. ಇನ್ನೊಂದು ತಿಂಗಳಲ್ಲಿ ಎಲ್ಲ ಇಂದಿರಾ ಕ್ಯಾಂಟೀನ್‌ಗಳಲ್ಲಿ ಯಾವುದೇ ರೀತಿಯ ಸಮಸ್ಯೆಗಳಿಲ್ಲದಂತೆ ಮಾಡಲಾಗುತ್ತದೆ. ಎಲ್ಲ ವ್ಯವಸ್ಥೆಯೂ ಸುಸ್ಥಿತಿಯಲ್ಲಿ, ಸ್ವಚ್ಛವಾಗಿರುತ್ತವೆ ಎಂದು ಅಧಿಕಾರಿಗಳು ತಿಳಿಸಿದರು.

'ಪ್ರತಿಯೊಂದು ವಾರ್ಡ್‌ಗೆ ಒಂದು ಇಂದಿರಾ ಕ್ಯಾಂಟೀನ್ ಇರಬೇಕು ಎಂಬುದು ಸರ್ಕಾರದ ಸೂಚನೆಯಾಗಿದೆ. ಈಗಿರುವ 169 ಕ್ಯಾಂಟೀನ್‌ಗಳ ಜೊತೆಗೆ ಇನ್ನೂ 56 ಕ್ಯಾಂಟೀನ್‌ಗಳನ್ನು ಹೊಸದಾಗಿ ನಿರ್ಮಿಸಲು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಕ್ಯಾಂಟೀನ್‌ನ ಆಹಾರದ ಮೆನು ಬಗೆಯೂ ಪ್ರಸ್ತಾವ ಸಲ್ಲಿಸ ಲಾಗಿದ್ದು, ಅಲ್ಲಿಂದ ಅನುಮೋದನೆಯಾದ ಮೇಲೆ ಅನುಷ್ಠಾನ ಮಾಡಲಾಗುವುದು. 36 ಮೊಬೈಲ್ ಕ್ಯಾಂಟೀನ್‌ಗಳು ಕಾರ್ಯನಿರ್ವಹಿಸುತ್ತಿವೆ' ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಡಾ. ತ್ರಿಲೋಕ್ ಚಂದ್ರ ತಿಳಿಸಿದರು.

ಇಂದಿರಾ ಕ್ಯಾಂಟೀನ್

ದೊಡ್ಡ ವಾರ್ಡ್‌ಗೆ ಎರಡು 'ನಮ್ಮ ಕ್ಲಿನಿಕ್'!

ಬಿಬಿಎಂಪಿ ವ್ಯಾಪ್ತಿಯಲ್ಲಿ 232 'ನಮ್ಮ ಕ್ಲಿನಿಕ್' ಕಾರ್ಯನಿರ್ವಹಿಸುತ್ತಿವೆ. ಪ್ರಸ್ತಾಪಿಸಿರುವ 225 ವಾರ್ಡ್‌ಗಳಿಗಿಂತ ಹೆಚ್ಚಿದ್ದರೂ, ಕೆಲವು ದೊಡ್ಡ ವಾರ್ಡ್‌ಗಳಿಗೆ ಒಂದು ಕ್ಲಿನಿಕ್ ಸಾಲುತ್ತಿಲ್ಲ. ಹೀಗಾಗಿ ಎರಡು 'ನಮ್ಮ ಕ್ಲಿನಿಕ್' ಸ್ಥಾಪಿಸಲು ಬಿಬಿಎಂಪಿ ಯೋಜಿಸುತ್ತಿದೆ.

'ಕೆಲವು ದೊಡ್ಡ ವಾರ್ಡ್‌ಗಳಲ್ಲಿ ಮತ್ತೊಂದು 'ನಮ್ಮ ಕ್ಲಿನಿಕ್'ಗೆ ಬೇಡಿಕೆ ಇದೆ. ಇದರ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ. ಯಾವ ವಾರ್ಡ್‌ಗೆ ಇನ್ನೊಂದು ಕ್ಲಿನಿಕ್ ನೀಡಬೇಕು ಅಥವಾ ವಾರ್ಡ್‌ಗಳ ಗಡಿಯಲ್ಲಿ ಸ್ಥಾಪಿಸಿದರೆ ಎರಡು ವಾರ್ಡ್‌ಗಳ ಪ್ರದೇಶಗಳ ಜನರಿಗೆ ಅನುಕೂಲವಾಗುತ್ತದೆಯೇ ಎಂಬುದನ್ನು ಅಂತಿಮ ವರದಿ ಸಿದ್ಧಪಡಿಸಲಾಗುವುದು. ಅದನ್ನು ಸರ್ಕಾರಕ್ಕೆ ಸಲ್ಲಿಸಿ, ಅಲ್ಲಿನ ಸೂಚನೆಯಂತೆ ಮುಂದುವರಿಯಲಾಗುವುದು' ಎಂದು ಡಾ. ತ್ರಿಲೋಕ್ ಚಂದ್ರ ತಿಳಿಸಿದರು.

'ಬೆಂಗಳೂರು ಜಿಲ್ಲೆಗೆ ಪ್ರತ್ಯೇಕ ಆರೋಗ್ಯ ವ್ಯವಸ್ಥೆ ಅನುಷ್ಠಾನದ ಬಗ್ಗೆ ಯೋಜನೆ ರಚಿಸಲು ಪ್ರಾಥಮಿಕ ಚರ್ಚೆಗಳು ನಡೆದಿವೆ. ಎಲ್ಲ ವ್ಯವಸ್ಥೆಗಳು ಒಂದು ಕೇಂದ್ರದಡಿ ಬರಬೇಕು ಎಂಬ ಆಲೋಚನೆ ಇದೆ. ಈ ಬಗ್ಗೆ ವಿಸ್ತೃತ ಚರ್ಚೆ ನಡೆಸಿ, ಅಂತಿಮ ಗೊಳಿಸಲಾಗುವುದು' ಎಂದರು.

ಆದಿತ್ಯ ಎಲ್1: 110 ದಿನಗಳ ಸೂರ್ಯ ಯಾತ್ರೆ ಆರಂಭ

ಬೆಂಗಳೂರು (ಪಿಟಿಐ): ಸೂರ್ಯನ ಅಧ್ಯಯನ ನಡೆಸಲಿರುವ ಆದಿತ್ಯ ಎಲ್-1 ನೌಕೆಯು ಮಂಗಳವಾರ ಭೂಕಕ್ಷೆಯಿಂದ ಲಗ್ರಾಂಜಿಯನ್ ಬಿಂದು ಎಲ್1 ಕಡೆಗೆ ಯಶಸ್ವಿಯಾಗಿ ಪಯಣ ಬೆಳೆಸಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ತಿಳಿಸಿದೆ.

ಲಗ್ರಾಂಜಿಯನ್ ಬಿಂದುವಿನತ್ತ ಬಾಹ್ಯಾಕಾಶ ನೌಕೆಯನ್ನು ಕಳಿಸಲು ಕೊನೆ ಹಂತದ ಕಕ್ಷೆ ಬದಲಾವಣೆ ಪ್ರಕ್ರಿಯೆಯು ಯಶಸ್ವಿಯಾಗಿ ನಡೆಯಿತು. ನೌಕೆಗೆ ಭೂಮಿಯಿಂದ ಅಂತಿಮ ವಿದಾಯ ಹೇಳಲಾಗಿದೆ. ಈಗ ಭೂಮಿ ಮತ್ತು ಸೂರ್ಯನ ನಡುವಿನ ಎಲ್1 ಪಾಯಿಂಟ್ ಕಡೆಗೆ ನೌಕೆ 110 ದಿನಗಳ ಪ್ರಯಾಣ ಆರಂಭಿಸಿದೆ ಎಂದು ಇಸ್ರೊ ತಿಳಿಸಿದೆ.

ಸೆ. 3, 5, 10, 15ರಂದು ನೌಕೆಯ ಕಕ್ಷೆ ಬದಲಾವಣೆ ಪ್ರಕ್ರಿಯೆ ಪೂರ್ಣಗೊಂಡಿತ್ತು. ಸೆ.2ರಂದು ಶ್ರೀಹರಿಕೋಟದಿಂದ ಈ ನೌಕೆಯನ್ನು ಉಡ್ಡಯನ ಮಾಡಲಾಗಿತ್ತು.

ಆಟೊದಲ್ಲಿ ಅಪಹರಣ: ಕತ್ತು ಕೊಯ್ದು ಸ್ನೇಹಿತನ ಹತ್ಯೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಸಂಪಿಗೆಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಫಾರೂಕ್ ಖಾನ್ (26) ಅವರನ್ನು ಅಪಹರಣ ಮಾಡಿ ಕತ್ತು ಕೊಯ್ದು ಹತ್ಯೆ ಮಾಡಲಾಗಿದ್ದು, ಈ ಸಂಬಂಧ ಮೂವರು ಸ್ನೇಹಿತರನ್ನು ಪೊಲೀಸರು ಬಂಧಿಸಿದ್ದಾರೆ.

'ಸುಹೇಲ್ ಖಾನ್, ಮುಬಾರಕ್, ಹಾಗೂ ಅಲಿ ಅಕ್ರಂ ಬಂಧಿತರು. ಸಂಪಿಗೆಹಳ್ಳಿ ಬಳಿಯ ಅರ್ಕಾವತಿ ಬಡಾವಣೆಯ 3ನೇ ಹಂತದ ನಿವಾಸಿ ಫಾರೂಕ್ ಖಾನ್ ಅವರನ್ನು ಸೆ. 17ರಂದು ಕೊಲೆ ಮಾಡಲಾಗಿದೆ. ಫಾರೂಕ್ ಸಹೋದರ ನೀಡಿರುವ ದೂರು ಆಧರಿಸಿ, ಮೂವರನ್ನು ಸೆರೆ ಹಿಡಿಯಲಾಗಿದೆ' ಎಂದು ಪೊಲೀಸರು ಹೇಳಿದರು.

'ಫಾರೂಕ್ ಹಾಗೂ ಆರೋಪಿಗಳು, ಹಲವು ವರ್ಷಗಳ ಸ್ನೇಹಿತರು. ಸೆ. 17ರಂದು ಮಧ್ಯಾಹ್ನ ಆಟೊದಲ್ಲಿ ಫಾರೂಕ್ ಅವರನ್ನು ಅಪಹರಿಸಿಕೊಂಡು ಹೋಗಿದ್ದ ಆರೋಪಿಗಳು, ಚಾಕುವಿನಿಂದ ಕತ್ತು ಕೊಯ್ದು ಕೊಲೆ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದರು.

ಮೊಬೈಲ್ ಕಸಿದುಕೊಂಡಿದ್ದಕ್ಕೆ ಕೊಲೆ: 'ಫಾರೂಕ್ ಆರೋಪಿ ಸುಹೇಲ್ ಖಾನ್‌ಗೆ ₹ 10 ಸಾವಿರ ಸಾಲ ನೀಡಿದ್ದರು. ನಿಗದಿತ ಸಮಯಕ್ಕೆ ಸುಹೇಲ್ ಸಾಲ ವಾಪಸು ಕೊಟ್ಟಿರಲಿಲ್ಲ. ಇದೇ ವಿಚಾರವಾಗಿ ಹಲವು ಬಾರಿ ಮಾತುಕತೆ ನಡೆದು, ಜಗಳವಾಗಿತ್ತು. ಹೀಗಾಗಿ, ಇಬ್ಬರ ನಡುವೆ ವೈಷಮ್ಯ ಬೆಳೆದಿತ್ತು' ಎಂದು ಪೊಲೀಸರು ಹೇಳಿದರು.

'ಕೆಲ ದಿನದ ಹಿಂದೆಯಷ್ಟೇ ಸುಹೇಲ್ ಬಳಿ ಹೋಗಿದ್ದ ಫಾರೂಕ್, ಸಾಲ ವಾಪಸು ನೀಡುವಂತೆ ಪಟ್ಟು ಹಿಡಿದಿದ್ದರು. ಆದರೆ, ತನ್ನ ಬಳಿ ಹಣ ವಿಲ್ಲವೆಂದು ಸುಹೇಲ್ ಹೇಳಿದ್ದ. ಅದಕ್ಕೆ ಒಪ್ಪದ ಫಾರೂಕ್, ಸುಹೇಲ್ ಬಳಿಯ ಮೊಬೈಲ್ ಕಸಿದುಕೊಂಡಿದ್ದ. ಪೊಲೀಸರಿಗೂ ದೂರು ನೀಡುವುದಾಗಿ ಬೆದರಿಸಿದ್ದ.'

'ಮೊಬೈಲ್‌ನಲ್ಲಿ ತಾಯಿ ಹಾಗೂ ಸಂಬಂಧಿಕರ ಫೋಟೊಗಳಿದ್ದವು. ಹೀಗಾಗಿ, ಮೊಬೈಲ್ ವಾಪಸು ನೀಡುವಂತೆ ಸುಹೇಲ್ ಮನವಿ ಮಾಡಿದ್ದ. ಆದರೆ, ಫಾರೂಕ್ ಮೊಬೈಲ್ ಕೊಟ್ಟಿರಲಿಲ್ಲ. ಹಲವು ದಿನ ತನ್ನ ಬಳಿಯೇ ಮೊಬೈಲ್ ಇಟ್ಟುಕೊಂಡಿದ್ದ' ಎಂದು ಪೊಲೀಸರು ತಿಳಿಸಿದರು.

'ಮೊಬೈಲ್ ಕೊಡದಿದ್ದರಿಂದ ಕೋಪಗೊಂಡಿದ್ದ ಸುಹೇಲ್ ತನ್ನ ಸಹಚರರ ಜೊತೆ ಸೇರಿ ಫಾರೂಕ್ ಅವರನ್ನು ಕೊಲೆ ಮಾಡಲು ಸಂಚು ರೂಪಿಸಿದ್ದ. ನಂತರ, ಆರೋಪಿಗಳು ಆಟೊದಲ್ಲಿ ಹೋಗಿ ಮಾತುಕತೆ ನೆಪದಲ್ಲಿ ಫಾರೂಕ್ ಅವರನ್ನು ಅಪಹರಿಸಿದ್ದರು.'

'ಮೊಬೈಲ್ ವಾಪಸು ನೀಡುವಂತೆ ಕೇಳಿದ್ದ ಆರೋಪಿ, ಆರಂಭದಲ್ಲಿ ಫಾರೂಕ್ ಕೈಗೆ ಚಾಕು ಇರಿದಿದ್ದ. ತಪ್ಪಿಸಿ ಕೊಳ್ಳಲು ಯತ್ನಿಸಿದ್ದ ಫಾರೂಕ್, ಆರೋಪಿಯನ್ನು ತಳ್ಳಾಡಿದ್ದ. ಇದೇ ಸಂದರ್ಭದಲ್ಲಿ ಆರೋಪಿ ಬಳಿಯ ಚಾಕು ಕುತ್ತಿಗೆಗೆ ತಾಗಿತ್ತು. ತೀವ್ರ ರಕ್ತಸ್ರಾವವಾಗಿ ಫಾರೂಕ್ ಮೃತಪಟ್ಟಿದ್ದಾರೆ. ಈ ಬಗ್ಗೆ ಆರೋಪಿಗಳು ಹೇಳಿಕೆ ನೀಡಿದ್ದಾರೆ' ಎಂದು ಪೊಲೀಸರು ಹೇಳಿದರು.

ಯುವಕ ಸಾವು

ನೆಲಮಂಗಲ: ತಾಲ್ಲೂಕಿನ ಮೈಲನಹಳ್ಳಿಯ ಕಲ್ಲು ಕ್ವಾರಿಯಲ್ಲಿ ಸಂಗ್ರಹಗೊಂಡಿದ್ದ ನೀರಿನಲ್ಲಿ ಸೋಮವಾರ ಈಜಲು ತೆರಳಿದ್ದ ಮಹಮದ್ ಅಜ್ಮಲ್ ಸಿದ್ದಿಕ್ (20) ಮೃತಪಟ್ಟಿದ್ದಾರೆ.

₹71 ಕೋಟಿ ಮೌಲ್ಯದ ಆಸ್ತಿ ಮುಟ್ಟುಗೋಲು

ಹಿಂದುಸ್ತಾನ್ ಇನ್‌ಫ್ರಾಕಾನ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್‌ನಿಂದ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಠೇವಣಿದಾರರಿಗೆ ₹ 199.54 ಕೋಟಿ ವಂಚಿಸಿದ ಆರೋಪ ಎದುರಿಸುತ್ತಿರುವ ಹಿಂದುಸ್ತಾನ್ ಇನ್‌ಫ್ರಾಕಾನ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್‌ಗೆ ಸೇರಿದ ₹ 71.48 ಕೋಟಿ ಮೌಲ್ಯದ ಸ್ಥಿರಾಸ್ತಿಗಳನ್ನು ಜಾರಿ ನಿರ್ದೇಶನಾಲಯ (ಇ.ಡಿ) ಮುಟ್ಟುಗೋಲು ಹಾಕಿಕೊಂಡಿದೆ.

2010ರಿಂದ 2015ರ ಅವಧಿಯಲ್ಲಿ ಹಿಂದುಸ್ತಾನ್ ಇನ್‌ಫ್ರಾಕಾನ್ ಕಂಪನಿಯು ಹೆಚ್ಚಿನ ಬಡ್ಡಿ ನೀಡುವ ಆಮಿಷವೊಡ್ಡಿ ಸಾರ್ವಜನಿಕರಿಂದ ₹ 389 ಕೋಟಿಯಷ್ಟು ಠೇವಣಿ ಸಂಗ್ರಹಿಸಿತ್ತು. ಈ ಪೈಕಿ ₹ 199.54 ಕೋಟಿಯನ್ನು ಠೇವಣಿದಾರರಿಗೆ ಹಿಂದಿರುಗಿಸದೇ ವಂಚಿಸಿತ್ತು. ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ಕಂಪನಿ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗಿತ್ತು. ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ಇ.ಡಿ ಪ್ರತ್ಯೇಕ ಮೊಕದ್ದಮೆ ದಾಖಲಿಸಿಕೊಂಡು ತನಿಖೆ ನಡೆಸುತ್ತಿದೆ.

ಮೈಸೂರು, ಬೆಂಗಳೂರು ಮತ್ತು ಆಂಧ್ರಪ್ರದೇಶದ ಅನಂತಪುರದಲ್ಲಿ ಹಿಂದುಸ್ತಾನ್ ಇನ್‌ಫ್ರಾಕಾನ್ ಕಂಪನಿ ಹೊಂದಿದ್ದ ₹ 71.48 ಕೋಟಿ ಮೌಲ್ಯದ ಕೃಷಿ ಯೇತರ ಜಮೀನು, ವಸತಿ ಕಟ್ಟಡ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಇ.ಡಿ ಅಧಿಕಾರಿಗಳು ತಿಳಿಸಿದ್ದಾರೆ.

ಠೇವಣಿದಾರರಿಂದ ಕಂಪನಿ ಸಂಗ್ರಹಿಸಿದ್ದ ಮೊತ್ತವನ್ನು ಭಾರತ್ ಬಿಲ್ಡರ್ಸ್, ಹಿಂದುಸ್ತಾನ್ ಮೆಗಾ ಶಾಫಿ ಇಂಡಿಯಾ ಲಿಮಿಟೆಡ್ (ಸಹವರ್ತಿ ಸಂಸ್ಥೆ), ವಜ್ರ ಪ್ರಾಪರ್ಟೀಸ್ ಮತ್ತು ಕೆ. ಲಲಿತಾ ಹೆಸರಿಗೆ ವರ್ಗಾವಣೆ ಮಾಡಲಾಗಿತ್ತು. ಆ ಮೊತ್ತವನ್ನು ಬಳಸಿಕೊಂಡು ಸ್ಥಿರಾಸ್ತಿ ಖರೀದಿಸಿದ್ದರು. ವೈಯಕ್ತಿಕ ಖರ್ಚಿಗೂ ಬಳಸಿಕೊಂಡಿದ್ದರು ಎಂದು ಇ.ಡಿ ಹೇಳಿದೆ.

ನಟ ಪ್ರಕಾಶ್ ರಾಜ್‌ಗೆ ಜೀವಬೆದರಿಕೆ: 'ವಿಕ್ರಮ್ ಟಿ.ವಿ' ವಿರುದ್ಧ ಎಫ್‌ಐಆರ್

ಬೆಂಗಳೂರು: ನಟ ಪ್ರಕಾಶ್ ರಾಜ್ (58) ಹಾಗೂ ಅವರ ಕುಟುಂಬದವರಿಗೆ ಜೀವ ಬೆದರಿಕೆಯೊಡ್ಡಿರುವ ವಿಡಿಯೊಗಳನ್ನು ಹರಿಬಿಟ್ಟಿರುವ ಯೂಟ್ಯೂಬ್‌ನ 'ವಿಕ್ರಮ್ ಟಿ.ವಿ' ಚಾನೆಲ್ ವಿರುದ್ಧ ಅಶೋಕನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ನಟ ಪ್ರಕಾಶ್ ರಾಜ್ ಅವರು ದೂರು ನೀಡಿದ್ದಾರೆ. ಅದನ್ನು ಆಧರಿಸಿ ವಿಕ್ರಮ್ ಟಿ.ವಿ ಯೂಟ್ಯೂಬ್ ಚಾನೆಲ್ ಮುಖ್ಯಸ್ಥರು ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಎಲ್ಲರಿಗೂ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

ದೂರಿನ ವಿವರ: 'ನಟ ಹಾಗೂ ನಿರ್ದೇಶಕನಾಗಿರುವ ನಾನು, ರಾಜ್ಯದಾದ್ಯಂತ ಪ್ರವಾಸ ಕೈಗೊಂಡು ವಿವಿಧ ವಿಷಯಗಳ ಚರ್ಚೆ–ಸಂವಾದದಲ್ಲಿ ಪಾಲ್ಗೊಳ್ಳುತ್ತಿದ್ದೇನೆ. ಸೆ. 14ರಂದು ವಿಕ್ರಮ್ ಟಿ.ವಿ. ಯೂಟ್ಯೂಬ್ ಹಾಗೂ ಫೇಸ್‌ಬುಕ್‌ನಲ್ಲಿ ಎರಡು ವಿಡಿಯೊ ವೀಕ್ಷಣೆ ಮಾಡಿದೆ. ಎರಡೂ ವಿಡಿಯೊದಲ್ಲಿ ನನ್ನ ಜೀವಕ್ಕೆ ಅಪಾಯವಾಗುವ ಸಂಗತಿಗಳಿದ್ದವು' ಎಂದು ಪ್ರಕಾಶ್ ರಾಜ್ ದೂರಿನಲ್ಲಿ ತಿಳಿಸಿದ್ದಾರೆ.

'ಬೆದರಿಕೆ ಹಾಕುವ ಸ್ಟಾಲಿನ್, ಪ್ರಕಾಶ್ ರಾಜ್‌ನಂಥವರನ್ನು ಮುಗಿಸಬೇಕೆ...? ಹಿಂದೂಗಳು ಮಾಡಬೇಕಾಗಿರುವುದು ಏನು...? ಸನಾತನ ಧರ್ಮ/ಹಿಂದೂಗಳೇ ಮಲಗೇ ಇರ್ತಿರಾ...? ಎಂಬಿತ್ಯಾದಿ ಶಬ್ದಗಳನ್ನು ಬಳಸಿ ವಿಡಿಯೊ ಮಾಡಲಾಗಿದೆ. ಇದೇ ವಿಡಿಯೊವನ್ನು ಸಾವಿರಾರು ಮಂದಿ ವೀಕ್ಷಿಸಿದ್ದಾರೆ.

ವಿಡಿಯೊದಲ್ಲಿರುವ ಅಂಶಗಳು ನನಗೆ ಹಾಗೂ ನನ್ನ ಕುಟುಂಬದವರಿಗೆ ಜೀವ ಬೆದರಿಕೆಯೊಡ್ಡುವಂತಿವೆ. ಇಂಥ ವಿಡಿಯೊ ಮಾಡಿರುವ ವಿಕ್ರಮ್ ಟಿ.ವಿ ಯೂಟ್ಯೂಬ್ ಚಾನೆಲ್ ಮುಖ್ಯಸ್ಥರು ಹಾಗೂ ಇತರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ' ಎಂದು ಅವರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಹೋಟೆಲ್, ಬಾರ್, ಪಬ್ ಮೇಲೆ ಪೊಲೀಸರ ದಾಳಿ

ಮದ್ಯ, ತಂಬಾಕು ಮಾರಾಟ: 136 ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪ್ರಾಪ್ತರಿಗೆ ಮದ್ಯ ಹಾಗೂ ತಂಬಾಕು ಉತ್ಪನ್ನ ಮಾರುತ್ತಿದ್ದ ಮಾಹಿತಿ ಮೇರೆಗೆ ನಗರದ 633 ಸ್ಥಳಗಳ ಮೇಲೆ ಪೊಲೀಸರು ದಾಳಿ ಮಾಡಿದ್ದು, ನಿಯಮ ಉಲ್ಲಂಘನೆ ಆರೋಪದಡಿ 136 ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ಹೋಟೆಲ್, ಬಾರ್ ಆ್ಯಂಡ್ ರೆಸ್ಟೋರೆಂಟ್, ಪಬ್ ಸೇರಿದಂತೆ 633 ಸ್ಥಳಗಳ ಮೇಲೆ ಶನಿವಾರ ಹಾಗೂ ಭಾನುವಾರ ದಾಳಿ ಮಾಡಿ ಪರಿಶೀಲಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'18 ವರ್ಷ ಒಳಗಿನ ಮಕ್ಕಳಿಗೆ ಹಲವೆಡೆ ತಂಬಾಕು ಉತ್ಪನ್ನ ಹಾಗೂ ಮದ್ಯವನ್ನು ಮಾರಲಾಗುತ್ತಿದೆ. ಇದರಿಂದಾಗಿ ಶಾಲೆ ವಿದ್ಯಾರ್ಥಿಗಳು ದುಶ್ಚಟಕ್ಕೆ ದಾಸರಾಗುತ್ತಿದ್ದಾರೆ. ಈ ಬಗ್ಗೆ ಪೋಷಕರು ಹಾಗೂ ಶಾಲಾ ಶಿಕ್ಷಕರು, ನಿರಂತರವಾಗಿ ದೂರು ನೀಡುತ್ತಿದ್ದಾರೆ. ಇದೇ ಕಾರಣಕ್ಕೆ ಪ್ರತ್ಯೇಕ ತಂಡಗಳನ್ನು ರಚಿಸಿ, ಕಾರ್ಯಾಚರಣೆ ನಡೆಸಲಾಗುತ್ತಿದೆ' ಎಂದರು.

'ಕೋರಮಂಗಲ, ಎಚ್‌ಎಸ್‌ಆರ್ ಲೇಔಟ್, ಇಂದಿರಾನಗರ, ಬ್ರಿಗೇಡ್ ರಸ್ತೆ, ಚರ್ಚ್‌ಸ್ಟ್ರೀಟ್, ಎಂ.ಜಿ.ರಸ್ತೆ ಹಾಗೂ ಇತರೆ ಪ್ರದೇಶಗಳಲ್ಲಿರುವ 633 ಸ್ಥಳಗಳಲ್ಲಿ ಶೋಧ ನಡೆಸಲಾಯಿತು. ಬಹುತೇಕ ಕಡೆ ಅಪ್ರಾಪ್ತರಿಗೆ ಪ್ರವೇಶ ನೀಡಿದ್ದು ಕಂಡುಬಂತು. ಅವರಿಗೆ ಮದ್ಯ ಹಾಗೂ ತಂಬಾಕು ಉತ್ಪನ್ನ ಮಾರಾಟ ಮಾಡುತ್ತಿರುವುದು ಪತ್ತೆಯಾಯಿತು' ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

'ನಿಯಮ ಉಲ್ಲಂಘಿಸಿದ್ದವರ ವಿರುದ್ಧ ಐಪಿಸಿ, ಬಾಲ ನ್ಯಾಯ ಕಾಯ್ದೆ, ಅಬಕಾರಿ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ. ನಿರ್ಬಂಧಿತ ಸ್ಥಳಗಳಲ್ಲಿ ಧೂಮಪಾನ ಮಾಡಿದ್ದ ಸಂಬಂಧ 2,426 ಲಘು ಪ್ರಕರಣಗಳನ್ನು ಪ್ರತ್ಯೇಕವಾಗಿ ದಾಖಲಿಸಿಕೊಳ್ಳಲಾಗಿದ್ದು, ತಪ್ಪಿತಸ್ಥರಿಗೆ ಸ್ಥಳದಲ್ಲೇ ದಂಡ ವಿಧಿಸಲಾಗಿದೆ. ಎಲ್ಲರಿಗೂ ಎಚ್ಚರಿಕೆ ನೀಡಲಾಗಿದೆ' ಎಂದರು.

'ಹೋಟೆಲ್, ಬಾರ್ ಆ್ಯಂಡ್ ರೆಸ್ಟೋರೆಂಟ್, ಪಬ್ ಸೇರಿದಂತೆ ವಿವಿಧ ಸ್ಥಳಗಳ ಕೆಲ ಮಾಲೀಕರು ಹಾಗೂ ಸಿಬ್ಬಂದಿಗೆ ನೋಟಿಸ್ ನೀಡಲಾಗಿದೆ. ಪದೇ ಪದೇ ನಿಯಮ ಉಲ್ಲಂಘನೆ ಮಾಡುವುದು ಕಂಡುಬಂದರೆ, ಪರವಾನಗಿ ರದ್ದುಪಡಿಸಲು ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಲಾಗಿದೆ' ಎಂದು ಅಧಿಕಾರಿ ಹೇಳಿದರು.

ಧೂಮಪಾನದ ವಿರುದ್ಧ ಕ್ರಮ: 'ಸಾರ್ವಜನಿಕ ಸ್ಥಳ ಹಾಗೂ ನಿರ್ಬಂಧಿತ ಸ್ಥಳಗಳಲ್ಲಿ ಧೂಮಪಾನ ನಿಷೇಧಿಸಲಾಗಿದೆ. ಶಾಲೆ ಅಕ್ಕ–ಪಕ್ಕದಲ್ಲೂ ತಂಬಾಕು ಉತ್ಪನ್ನ ಮಾರಾಟ ನಿರ್ಬಂಧಿಸಲಾಗಿದೆ. ಯಾರಾದರೂ ಈ ನಿಯಮ ಉಲ್ಲಂಘಿಸಿದರೆ, ಅವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು' ಎಂದು ಪೊಲೀಸರು ಹೇಳಿದರು.

ನಾಯಿಕೊಡೆಗಳಂತೆ ಜಾಹೀರಾತು ಫಲಕ: ಹೈಕೋರ್ಟ್ ಕಳವಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ ಚುನಾವಣಾ ಅನಧಿಕೃತ ಜಾಹೀರಾತು ಫಲಕಗಳು ನಾಯಿಕೊಡೆಗಳಂತೆ ತಲೆ ಎತ್ತುತ್ತಿದ್ದು ಇದರಿಂದ ಶ್ರೀ ಸಾಮಾನ್ಯರು ಅತೀವ ತೊಂದರೆ ಅನುಭವಿಸುತ್ತಿದ್ದಾರೆ' ಎಂದು ಹೈಕೋರ್ಟ್ ಕಳವಳ ವ್ಯಕ್ತಪಡಿಸಿದೆ.

'ಅನಧಿಕೃತ ಜಾಹೀರಾತು ಫಲಕಗಳ ಹಾವಳಿ ತಡೆಯಲು ಬಿಬಿಎಂಪಿಗೆ ನಿರ್ದೇಶಿಸಬೇಕು' ಎಂದು ಕೋರಿ ಸಾಮಾಜಿಕ ಕಾರ್ಯಕರ್ತ ಮಾಯಿಗೇಗೌಡ ಮತ್ತಿತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬಿಬಿಎಂಪಿ ಪರ ವಕೀಲರು ನ್ಯಾಯಪೀಠಕ್ಕೆ ಮೆಮೊ (ಜ್ಞಾಪನಾ ಪತ್ರ) ಸಲ್ಲಿಸಿ, 'ಅನಧಿಕೃತ ಜಾಹೀರಾತು ಫಲಕ ಅಳವಡಿಕೆಗೆ ಸಂಬಂಧಿಸಿದಂತೆ 2022ರಲ್ಲಿ 76, 2021ರಲ್ಲಿ 19, 2020ರಲ್ಲಿ 120 ಪ್ರಕರಣ ದಾಖಲಾಗಿವೆ. 2023ರ ಆಗಸ್ಟ್ 30ರಿಂದ ಈತನಕ 701 ಪ್ರಕರಣಗಳನ್ನು ದಾಖಲಿಸಲಾಗಿದೆ. ಒಟ್ಟು 164 ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಶಿಕ್ಷೆಯಾಗಿದೆ. 17 ಪ್ರಕರಣ ಇತ್ಯರ್ಥಗೊಂಡಿವೆ. 132 ಪ್ರಕರಣ ಬಾಕಿ ಇವೆ. 2023ರ ಆಗಸ್ಟ್ ತಿಂಗಳ ಒಂದರಲ್ಲೇ 327 ಪ್ರಕರಣ ದಾಖಲಾಗಿವೆ' ಎಂದು ತಿಳಿಸಿದರು.

ಇದಕ್ಕೆ ಬೇಸರ ವ್ಯಕ್ತಪಡಿಸಿದ ನ್ಯಾಯಪೀಠ, 'ಪಾಲಿಕೆ ಅಧಿಕಾರಿಗಳು ಸೂಕ್ತ ರೀತಿಯಲ್ಲಿ ತಮ್ಮ ಕರ್ತವ್ಯ ನಿರ್ವಹಿಸುತ್ತಿಲ್ಲ ಹಾಗೂ ಅನಧಿಕೃತ ಜಾಹೀರಾತು ಫಲಕಗಳ ಅಳವಡಿಕೆ ಬಗ್ಗೆ ಸಂಪೂರ್ಣ ನಿರ್ಲಕ್ಷ್ಯ ವಹಿಸಿದ್ದಾರೆ ಎಂಬ ಅರ್ಜಿದಾರರ ವಾದ ನ್ಯಾಯಸಮ್ಮತವಾಗಿದೆ. ಜಾಹೀರಾತುಗಳ ಹಾವಳಿಯಿಂದ ಸಾರ್ವಜನಿಕರು, ಅದರಲ್ಲೂ ಮುಖ್ಯವಾಗಿ ಬೆಂಗಳೂರು ನಗರದ ನಾಗರಿಕರು ಬಳಲುತ್ತಿದ್ದಾರೆ' ಎಂದು ಅಧಿಕಾರಿಗಳ ಕಾರ್ಯವೈಖರಿಗೆ ಅತೃಪ್ತಿ ವ್ಯಕ್ತಪಡಿಸಿತು.

'ಅನಧಿಕೃತ ಚುನಾವಣಾ ಜಾಹೀರಾತು, ಫ್ಲೆಕ್ಸ್ ಮತ್ತು ಬ್ಯಾನರ್‌ಗಳಿಂದ ವಾಹನ ಮತ್ತು ಪಾದಚಾರಿಗಳ ಸುಗಮ ಸಂಚಾರಕ್ಕೆ ಗಂಭೀರ ಅಡಚಣೆ ಉಂಟಾಗುತ್ತಿದೆ. ಇದನ್ನು ತಡೆಯುವ ನಿಟ್ಟಿನಲ್ಲಿ ಬಿಬಿಎಂಪಿ ಕಾರ್ಯೋನ್ಮುಖವಾಗಬೇಕು. ಈ ಕುರಿತಂತೆ ಸಮಗ್ರವಾದ ವರದಿಯನ್ನು ಮೂರು ವಾರಗಳಲ್ಲಿ ಸಲ್ಲಿಸಬೇಕು' ಎಂದು ಸೂಚಿಸಿ ವಿಚಾರಣೆಯನ್ನು ಅಕ್ಟೋಬರ್ 11ಕ್ಕೆ ಮುಂದೂಡಿತು.

ಪೊಲೀಸ್ ಇನ್‌ಸ್ಪೆಕ್ಟರ್ ನೇರ ಹೊಣೆ

'ಅನಧಿಕೃತ ಜಾಹೀರಾತು ಫಲಕ ಅಳವಡಿಸಿರುವುದು ಕಂಡುಬಂದರೆ ಸಂಬಂಧಪಟ್ಟ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಅವರನ್ನೇ ನೇರ ಹೊಣೆಗಾರರನ್ನಾಗಿ ಮಾಡಿ, ಮುಂದಿನ ಇಲಾಖಾ ಶಿಸ್ತು ಕ್ರಮಕ್ಕೆ ನಗರ ಪೊಲೀಸ್ ಆಯುಕ್ತರ ಕಚೇರಿಗೆ ವರದಿ ಕಳುಹಿಸಿಕೊಡುವಂತೆ ಎಲ್ಲಾ ಸಹಾಯಕ ಪೊಲೀಸ್ ಆಯುಕ್ತರಿಗೆ ನಿರ್ದೇಶಿಸಲಾಗಿದೆ' ಎಂದು ರಾಜ್ಯ ಸರ್ಕಾರ ನ್ಯಾಯಪೀಠಕ್ಕೆ ಸಲ್ಲಿಸಿರುವ ವರದಿಯಲ್ಲಿ ತಿಳಿಸಲಾಗಿದೆ.

'ಕರ್ನಾಟಕ ಮುಕ್ತ ಪ್ರದೇಶಗಳ ವಿರೂಪ ತಡೆ ಕಾಯ್ದೆ–1981ರ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಸೂಚಿಸಿ ನಗರದ ಎಲ್ಲಾ ವಲಯಗಳ ಉಪ ಪೊಲೀಸ್ ಆಯುಕ್ತರು, ಸಹಾಯಕ ಪೊಲೀಸ್ ಆಯುಕ್ತರು, ಪೊಲೀಸ್ ಠಾಣೆಗಳ ಇನ್‌ಸ್ಪೆಕ್ಟರ್‌ಗಳಿಗೆ ಬೆಂಗಳೂರು ನಗರ ಪೊಲೀಸ್ ಆಯುಕ್ತರು 2023ರ ಆಗಸ್ಟ್ 23ರಂದು ನಿರ್ದೇಶಿಸಲಾಗಿದೆ' ಎಂದು ವಿವರಿಸಲಾಗಿದೆ.

'ಗಸ್ತು ತಿರುಗುವ ವೇಳೆ ಅನಧಿಕೃತ ಜಾಹೀರಾತು ಫಲಕಗಳ ಅಳವಡಿಕೆ ಕಂಡು ಬಂದಲ್ಲಿ, ಅಂತಹವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು. ಎಲ್ಲಾ ಸ್ಥಳಗಳನ್ನು ಪರಿಶೀಲಿಸಿ ಪ್ರಕರಣ ದಾಖಲಿಸಬೇಕು. ಈ ನಿಟ್ಟಿನಲ್ಲಿ ಬಿಬಿಎಂಪಿ ಅಧಿಕಾರಿಗಳ ನೆರವು ಪಡೆದು ಕ್ರಮ ಜರುಗಿಸಬೇಕು' ಎಂದು ತಿಳಿಸಿರುವುದಾಗಿ ವರದಿ ಹೇಳಿದೆ.

132 ಎಪಿಪಿಗಳಿಗೆ ನೇಮಕಾತಿ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: '132 ಎಪಿಪಿಗಳಿಗೆ (ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್) ನೇಮಕಾತಿ ಆದೇಶ ಕಳುಹಿಸಲಾಗಿದ್ದು, 49 ಎಪಿಪಿಗಳಿಗೆ ಹಿರಿಯ ಪಬ್ಲಿಕ್ ಪ್ರಾಸಿಕ್ಯೂಟರ್ ಹುದ್ದೆಗೆ ಬಡ್ತಿ ನೀಡಲಾಗಿದೆ' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ರಾಜ್ಯದಾದ್ಯಂತ ಖಾಲಿ ಇರುವ ಪಿಪಿಗಳ ನೇಮಕಾತಿಗೆ ಸಂಬಂಧಿಸಿದಂತೆ ಹೈಕೋರ್ಟ್ ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ವಕೀಲರು ನ್ಯಾಯಪೀಠಕ್ಕೆ ಮೆಮೊ (ಜ್ಞಾಪನಾ ಪತ್ರ) ಸಲ್ಲಿಸಿ, 'ಒಟ್ಟು 143 ಎಪಿಪಿಗಳ ಪೈಕಿ ಇದೇ 15ರಂದು 132 ಜನರಿಗೆ ಅಭಿಯೋಜನಾ ಇಲಾಖೆ ವತಿಯಿಂದ ನೇಮಕಾತಿ ಆದೇಶ ರವಾನಿಸಲಾಗಿದೆ. 49 ಜನರನ್ನು ಹಿರಿಯ ಪಿಪಿ ಹುದ್ದೆಗೆ ಬಡ್ತಿ ನೀಡಲಾಗಿದೆ' ಎಂದು ವಿವರಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠವು, 'ಖಾಲಿ ಹುದ್ದೆ ತುಂಬಲು ಸರ್ಕಾರ ಕ್ರಮ ಕೈಗೊಂಡಿದೆ. ದಾಖಲೆ ಪರಿಶೀಲನೆ ಮತ್ತು ಅನ್ಯ ಕಾರಣಗಳಿಗಾಗಿ 143 ಅಭ್ಯರ್ಥಿಗಳ ಪೈಕಿ 11 ಮಂದಿಗೆ ನೇಮಕಾತಿ ಆದೇಶ ನೀಡಲಾಗಿಲ್ಲ ಎಂದು ತಿಳಿಸಿದೆ. ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು ಎಂಬ ಗೃಹ ಇಲಾಖೆಯ ಅಧೀನ ಕಾರ್ಯದರ್ಶಿ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಗಿದೆ. ಹೀಗಾಗಿ, ಅಂತಿಮ ವರದಿಯನ್ನು ಮೂರು ವಾರಗಳ ಬಳಿಕ ಸಲ್ಲಿಸಬೇಕು' ಎಂದು ಸರ್ಕಾರಕ್ಕೆ ನಿರ್ದೇಶಿಸಿ ವಿಚಾರಣೆ ಮುಂದೂಡಿತು.

ಸಿ.ಎಂ ವಾಟ್ಸ್‌ಆ್ಯಪ್ ಚಾನಲ್ ಆರಂಭ

ಬೆಂಗಳೂರು: ಸರ್ಕಾರದ ದೈನಂದಿನ ಆಗುಹೋಗುಗಳ ಮಾಹಿತಿ ಒದಗಿಸಲು 'ಚೀಫ್ ಮಿನಿಸ್ಟರ್ ಆಫ್ ಕರ್ನಾಟಕ' ಹೆಸರಿನಲ್ಲಿ ವಾಟ್ಸ್‌ಆ್ಯಪ್ ಚಾನಲ್ ಆರಂಭಿಸಲಾಗಿದೆ.

'ಸರ್ಕಾರವೊಂದರ ಮುಖ್ಯಸ್ಥರ ಪೈಕಿ ಮೊಟ್ಟಮೊದಲ ವಾಟ್ಸ್‌ಆ್ಯಪ್ ಚಾನೆಲ್ ಆರಂಭಿಸಿ, ಜನಸಂಪರ್ಕ ಸಾಧನೆಯ ನಿಟ್ಟಿನಲ್ಲಿ ಮುಂದಡಿಯಿಟ್ಟವರು ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು' ಎಂದು ಪ್ರಕಟಣೆ ತಿಳಿಸಿದೆ.

'ದೇಶದ ಇತರೆ ರಾಜ್ಯಗಳ ಮುಖ್ಯಮಂತ್ರಿ ಪೈಕಿ ವಾಟ್ಸ್‌ಆ್ಯಪ್ ಚಾನಲ್ ಆರಂಭಿಸಿದವರಲ್ಲಿ ಸಿದ್ದರಾಮಯ್ಯ ಮೊದಲಿಗರು. 50 ಸಾವಿರ ಮಂದಿ ಫಾಲೋವರ್ಸ್ ಇದ್ದಾರೆ' ಎಂದಿದೆ.

ಚಿಕ್ಕಮಗಳೂರಿನಲ್ಲಿ ನಡೆದ 12ನೇ ರಾಜ್ಯಮಟ್ಟದ ಕರಾಟೆ ಚಾಂಪಿಯನ್‌ಶಿಪ್‌ನಲ್ಲಿ ಬೆಂಗಳೂರಿನ ಕೆಎಲ್‌ಇ ಬಸವ ಶಾಲೆಯ ವಿದ್ಯಾರ್ಥಿಗಳು ಚಾಂಪಿಯನ್‌ಶಿಪ್ ಟೀಂ–ಟ್ರೋಫಿ ಪಡೆದುಕೊಂಡರು. ತರಬೇತುದಾರ ರಂಗಸ್ವಾಮಿ ಕೆ. ಅವರೊಂದಿಗೆ ಪದಕ ವಿಜೇತರು. ನಿಂತವರು– ಶರಣ್ಯ (ಸ್ವರ್ಣ), ಅಕ್ಷತಾ (ಕಂಚು), ನಯನ (ಸ್ವರ್ಣ), ನಿಶಾ (ಸ್ವರ್ಣ), ಲಕ್ಷ್ಮೀ (ಕಂಚು). ಕುಳಿತವರು– ಕವನಿ (ಬೆಳ್ಳಿ), ಅನುಷ್ಕಾ (ಬೆಳ್ಳಿ), ವೃಂದ (ಕಂಚು), ತೀರ್ಥ (ಕಂಚು).

ಭೂ ಒತ್ತುವರಿ ಆಡಿಟಿಂಗ್‌ಗೆ ಮುಖ್ಯಮಂತ್ರಿ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಹಾಗೂ ಬೆಂಗಳೂರಿನಿಂದ 100 ಕಿ.ಮೀ ವ್ಯಾಪ್ತಿಯ ಒಳಗಿನ ರೆಸಾರ್ಟ್ ಮತ್ತು ಹೋಂಸ್ಟೇಗಳ ಒತ್ತುವರಿ ಕುರಿತು ಭೂ ಆಡಿಟಿಂಗ್ ಮಾಡಲು ಕ್ರಮಕೈಗೊಳ್ಳುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಸೂಚಿಸಿದ್ದಾರೆ.

ಕೆಪಿಸಿಸಿ ವಕ್ತಾರ ರಮೇಶ್ ಬಾಬು ಅವರು ಈಚೆಗೆ ಮುಖ್ಯಮಂತ್ರಿಗೆ ಪತ್ರ ಬರೆದು, ಬೆಂಗಳೂರು ಮತ್ತು ಸುತ್ತಲ ಪ್ರದೇಶದಲ್ಲಿ ಭೂಮಿಯ ಬೆಲೆ ಸಾಕಷ್ಟು ಏರಿಕೆಯಾಗಿದೆ. ಕೆಲವರು ವಾಣಿಜ್ಯ ಉದ್ದೇಶ, ವೈಯಕ್ತಿಕ ಲಾಭಕ್ಕಾಗಿ ಸರ್ಕಾರಿ ಭೂಮಿ ಒತ್ತುವರಿ ಮಾಡುತ್ತಿದ್ದಾರೆ. ಅಕ್ರಮ ದಾಖಲೆಗಳ ಮೂಲಕ ಭೂಮಿ ಕಬಳಿಸಿದ್ದಾರೆ. ಎ.ಟಿ. ರಾಮಸ್ವಾಮಿ, ವಿ.ಬಾಲಸುಬ್ರಹ್ಮಣ್ಯನ್ ಸಮಿತಿಗಳು ನೀಡಿರುವ ವರದಿಯಲ್ಲೂ ಭೂ ಕಬಳಿಕೆ ಪ್ರಕರಣ ಉಲ್ಲೇಖವಾಗಿದೆ ಎಂದು ವಿವರಿಸಿದ್ದರು.

ಸುಮಾರು 75 ಸಾವಿರ ಎಕರೆ ಸರ್ಕಾರಿ ಭೂಮಿ ಒತ್ತುವರಿಯಾಗಿದೆ. ಬೆಂಗಳೂರು ಹಾಗೂ ಸುತ್ತಲ ವ್ಯಾಪ್ತಿಯಲ್ಲಿ 1 ಸಾವಿರಕ್ಕೂ ಹೆಚ್ಚು ರೆಸಾರ್ಟ್, ಹೋಂಸ್ಟೇಗಳು ತಲೆಯೆತ್ತಿವೆ. 6 ಸಾವಿರ ಎಕರೆಗೂ ಹೆಚ್ಚು ಭೂಮಿಯನ್ನು ಕಾನೂನು ಬಾಹಿರವಾಗಿ ಸ್ವಾಧೀನ ಮಾಡಿಕೊಂಡಿವೆ ಎಂದು ದೂರಿದ್ದರು.

ಭೂ ಆಡಿಟ್ ಮಾಡಿಸಬೇಕು. ಒತ್ತುವರಿ ತೆರವುಗೊಳಿಸಬೇಕು. ಮರಳಿ ವಶಕ್ಕೆ ಪಡೆದ ಭೂಮಿಯನ್ನು ಬಹಿರಂಗ ಹರಾಜು ಹಾಕಬೇಕು. ಹಾಗೆ ಮಾಡಿದರೆ ಸರ್ಕಾರದ ಬೊಕ್ಕಸಕ್ಕೆ ಸಾವಿರಾರು ಕೋಟಿ ರೂಪಾಯಿ ಆದಾಯ ದೊರೆಯುತ್ತದೆ. ಜನರ ಅನುಕೂಲ ಹಾಗೂ ಸಂಪನ್ಮೂಲ ಸಂಗ್ರಹದ ದೃಷ್ಟಿಯಿಂದ ಈ ನಿರ್ಧಾರ ಸೂಕ್ತವಾದುದು ಎಂದು ರಮೇಶ್ ಬಾಬು ಸಲಹೆ ನೀಡಿದ್ದರು.

21ಕ್ಕೆ ಬಿಜೆಪಿ–ಜೆಡಿಎಸ್ ಮೈತ್ರಿ ಅಂತಿಮ

ಪ್ರಜಾವಾಣಿ ವಾರ್ತೆ

ರಾಮನಗರ: 'ದೆಹಲಿಯಲ್ಲಿ ಸೆ.21ರಂದು ಬಿಜೆಪಿ ವರಿಷ್ಠರನ್ನು ಭೇಟಿ ಮಾಡಲಿದ್ದು ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿ ಮಾತುಕತೆ ನಡೆಯಲಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಬಿಡದಿಯ ಕೇತಗಾನಹಳ್ಳಿ ತೋಟದ ಮನೆಯಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, 'ಸದ್ಯ ದೆಹಲಿಯಲ್ಲಿರುವ ಎಚ್.ಡಿ. ದೇವೇಗೌಡರು ಮತ್ತು ನಾನು ಬಿಜೆಪಿ ವರಿಷ್ಠರೊಂದಿಗೆ ಮಾತುಕತೆ ನಡೆಸಲಿದ್ದು, ಮೈತ್ರಿ ಅಂತಿಮಗೊಳಿಸುತ್ತೇವೆ' ಎಂದು ತಿಳಿಸಿದರು.

'ಗುರುವಾರ ಬೆಳಿಗ್ಗೆ ದೆಹಲಿಗೆ ಹೊರಟಿದ್ದೇನೆ. ಸೀಟು ಹಂಚಿಕೆ ಕುರಿತು ಇದುವರೆಗೆ ಯಾವುದೇ ಮಾತುಕತೆ ನಡೆದಿಲ್ಲ. ರಾಜ್ಯದಲ್ಲಿರುವ ಕೆಟ್ಟ ಸರ್ಕಾರ ತೆಗೆಯಲು ಜೆಡಿಎಸ್–ಬಿಜೆಪಿ ಮೈತ್ರಿ ಅಗತ್ಯ. ಸದ್ಯ ನನ್ನ ಮುಂದಿರುವ ಗುರಿ ಮತ್ತು ಆದ್ಯತೆ ಅದೊಂದೇ' ಎಂದರು.

ಕನಕಪುರದ ಅಣ್ಣ–ತಮ್ಮನಿಗೆ ತಕ್ಕಪಾಠ: 'ರಾಮನಗರ ಜಿಲ್ಲೆಯಲ್ಲಿ ಕನಕಪುರದ ಅಣ್ಣ–ತಮ್ಮಂದಿರ ದಬ್ಬಾಳಿಕೆ ಹೆಚ್ಚಾಗಿದೆ. ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಜನರು ಮುಂದಿನ ಲೋಕಸಭಾ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಲಿದ್ದಾರೆ. ನಾನು ಸಂಸದನಾಗಿದ್ದಾಗ, ಸಾತನೂರು ಪ್ರವೇಶಿಸಲು ನನಗೆ ಈ ಅಣ್ಣ–ತಮ್ಮಂದಿರು ಬಿಟ್ಟಿದ್ರಾ?' ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

'ಲೋಕಸಭಾ ಸದಸ್ಯನ ಕೆಲಸ ಏನು? ದಿಶಾ ಸಭೆ ಮಾಡುವುದು ಈತನ ಕೆಲಸ. ಅದು ಬಿಟ್ಟು ಜನಸಂಪರ್ಕ ಸಭೆ ಹೆಸರಿನಲ್ಲಿ ಜಿಲ್ಲಾಧಿಕಾರಿ, ತಹಶೀಲ್ದಾರ್, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಕರೆದುಕೊಂಡು ಹೋಗಲು ಇವನಿಗೆ ಯಾವ ಅಧಿಕಾರವಿದೆ' ಎಂದು ಸಂಸದ ಡಿ.ಕೆ. ಸುರೇಶ್ ವಿರುದ್ಧ ಏಕವಚನದಲ್ಲೇ ವಾಗ್ದಾಳಿ ನಡೆಸಿದರು. 'ಈತನ ವಿರುದ್ಧ ಹಕ್ಕುಚ್ಯುತಿ ಸಹ ಮಂಡಿಸುತ್ತೇನೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಆದಿಚುಂಚನಗಿರಿ ಕ್ಷೇತ್ರದ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿಕೆ

'ಪ್ರತಿಭೆಗೆ ತಕ್ಕ ಸ್ಥಾನಮಾನ ದಕ್ಕಲಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿಭೆಗಳನ್ನು ಆಯಾ ಕಾಲದ ಸಮಾಜವು ಗುರುತಿಸಿ, ತಕ್ಕುದಾದ ಸ್ಥಾನಮಾನ ನೀಡದೇ ಹೋದರೆ ಅದರಿಂದ ಸಮಾಜಕ್ಕೇ ನಷ್ಟವಾಗುತ್ತದೆ. ವೆಂಕಟಗಿರಿ ಗೌಡರ ಪ್ರತಿಭೆಗೂ ಸರಿಯಾದ ಮನ್ನಣೆ ಸಿಕ್ಕಿರಲಿಲ್ಲ ಎಂದು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು.

ನಗರದಲ್ಲಿ ಭಾನುವಾರ ನಡೆದ ವಿಶ್ವ ಆರ್ಥಿಕತಜ್ಞ ಕೆ. ವೆಂಕಟಗಿರಿ ಗೌಡ ಅವರ ಜನ್ಮ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಸ್ವಾಮೀಜಿ ಮಾತನಾಡಿದರು.

'ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನಲ್ಲಿ ಅವರು ಕಲಿಯುವಾಗ ಅನುಭವಿಸಿದ ಕಷ್ಟಗಳು, ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಆಗುವ ಅರ್ಹತೆ ಇದ್ದಾಗಲೂ ಅಲ್ಲಿಂದ ತುಳಿದು ರೀಡರ್ ಹುದ್ದೆಗೆ ಕಳುಹಿಸಿದ್ದರು. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕುಲಪತಿ ಹುದ್ದೆಯನ್ನು ಕೊನೇ ಕ್ಷಣದಲ್ಲಿ ತಪ್ಪಿಸಿದ್ದರು. ಹೀಗೆ ಅವರಿಗೆ ಅನ್ಯಾಯಗಳು ನಡೆದವು. ಇತಿಹಾಸದ ಪುಟಗಳನ್ನು ತೆಗೆದು ನೋಡಿದರೆ ವಿಶ್ವದ ಅನೇಕ ಮಹಾನ್ ಪ್ರತಿಭೆಗಳನ್ನು ಆಯಾ ಕಾಲ ಕೆಟ್ಟದಾಗಿ ನಡೆಸಿಕೊಂಡಿದೆ' ಎಂದು ತಿಳಿಸಿದರು.

ಡಾ.ಕೆ.ವೆಂಕಟಗಿರಿ ಗೌಡ ರಾಷ್ಟ್ರೀಯ ಪ್ರಶಸ್ತಿಯನ್ನು ಕೃಷಿ ಮಾರುಕಟ್ಟೆ ನಿವೃತ್ತ ಜಂಟಿ ನಿರ್ದೇಶಕ ಎನ್. ಪುಟ್ಟಸ್ವಾಮಿ, ನಿವೃತ್ತ ಪ್ರಾಂಶುಪಾಲ ಕೆ.ಸಿ.ಬಸಪ್ಪ, ಕೆಪಿಎಸ್‌ಸಿ ಉಪಾಧ್ಯಕ್ಷ ಎಂ.ವಿ.ರಾಜೀವ್ ಗೌಡ, ನ್ಯಾಷನಲ್ ಲಾ ಸ್ಕೂಲ್ ಚೇರ್‌ಪರ್ಸನ್ ಅಬ್ದುಲ್ ಅಜೀಜ್, ನಿವೃತ್ತ ಅರ್ಥಶಾಸ್ತ್ರ ಪ್ರಾಧ್ಯಾಪಕ ಬಿ.ಎಸ್. ಶ್ರೀಕಂಠರಾಧ್ಯ ಅವರಿಗೆ ನೀಡಿ ಗೌರವಿಸಲಾಯಿತು. ಕೆ. ವೆಂಕಟಗಿರಿ ಗೌಡ ಜನ್ಮಶತಮಾನೋತ್ಸವ ಸಮಿತಿಯ ಗೌರವಾಧ್ಯಕ್ಷ ಕೆ.ಆರ್. ವೇಣುಗೋಪಾಲ್, ಅಧ್ಯಕ್ಷ ಕೆ. ರಂಗ, ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಸಚಿವ ಕೆ.ಎಚ್. ಮುನಿಯಪ್ಪ, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಇದ್ದರು —ಪ್ರಜಾವಾಣಿ ಚಿತ್ರ

ಅಧ್ಯಕ್ಷತೆ ವಹಿಸಿದ್ದ ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಮಾತನಾಡಿ, 'ಶಿಸ್ತು ಮತ್ತು ಸಿಟ್ಟಿನ ಮನುಷ್ಯರಾಗಿದ್ದ ವೆಂಕಟಗಿರಿ ಗೌಡ ಅವರು ಅರ್ಥಶಾಸ್ತ್ರದ ಪ್ರಬುದ್ಧ ವ್ಯಾಖ್ಯಾನಕಾರರಾಗಿದ್ದರು. ಅರ್ಥಶಾಸ್ತ್ರ ಕ್ಷೇತ್ರದಲ್ಲಿಯೇ ಅವರು ಮುಂದು ವರಿದಿದ್ದರೆ ಇನ್ನಷ್ಟು ಸಾಧನೆ ಮಾಡುತ್ತಿದ್ದರು. ರಾಜಕೀಯ ಹುಚ್ಚಿನಿಂದಾಗಿ ಅವರ ಗಮನ ಬೇರೆಡೆಗೆ ಹರಿಯಿತು' ಎಂದು ಹೇಳಿದರು.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಮಾತನಾಡಿ, 'ವೆಂಕಟಗಿರಿ ಗೌಡರ ಅರ್ಥಶಾಸ್ತ್ರದ ಕೃತಿಗಳನ್ನು ಮತ್ತು ಇತರ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರ ಮಾಡಬೇಕು' ಎಂದು ಸಲಹೆ ನೀಡಿದರು.

ಬೆಂಗಳೂರಿನಲ್ಲಿರುವ ಯಾವುದಾದರೂ ಒಂದು ವಿಶ್ವವಿದ್ಯಾಲಯಕ್ಕೆ ವೆಂಕಟಗಿರಿ ಗೌಡರ ಹೆಸರು ಇಡಬೇಕು ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ ಅವರ ಮೂಲಕ ಮುಖ್ಯಮಂತ್ರಿ ಅವರಿಗೆ ವೆಂಕಟಗಿರಿ ಗೌಡರ ಜನ್ಮಶತಮಾನೋತ್ಸವ ಸಮಿತಿಯ ಅಧ್ಯಕ್ಷ ಕೆ.ರಂಗ, ಕಾರ್ಯದರ್ಶಿ ರಾಮಲಿಂಗೇಗೌಡ ಮತ್ತು ಪದಾಧಿಕಾರಿಗಳು ಮನವಿ ಸಲ್ಲಿಸಿದರು.

ಸ್ಮರಣ ಸಂಚಿಕೆ ಬಿಡುಗಡೆ ಮಾಡಲಾಯಿತು. ವೆಂಕಟಗಿರಿ ಗೌಡ ಅವರ ಬಗೆಗಿನ ನಾಲ್ಕು ಕೃತಿಗಳನ್ನು ಬಿಡುಗಡೆ ಮಾಡಲಾಯಿತು.

‘42 ಲಕ್ಷ ಹೆಕ್ಟೇರ್ ಬೆಳೆ ಹಾನಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 195 ಬರಪೀಡಿತ ತಾಲ್ಲೂಕುಗಳಲ್ಲಿ ಮಳೆ ಕೊರತೆಯಿಂದ 42 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಬೆಳೆ ಹಾನಿಯಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಬರ ಪರಿಹಾರಕ್ಕೆ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಿಂದ (ಎನ್‌ಡಿಆರ್‌ಎಫ್) ನೆರವು ಕೋರಲು ಮನವಿಪತ್ರ ಸಿದ್ಧಪಡಿಸುವ ಸಂಬಂಧ ಕಂದಾಯ, ಕೃಷಿ ಮತ್ತು ತೋಟಗಾರಿಕೆ ಇಲಾಖೆ ಅಧಿಕಾರಿಗಳ ಜತೆ ಮಂಗಳವಾರ ಸಭೆ ನಡೆಸಿದ ಬಳಿಕ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

40 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಕೃಷಿ ಬೆಳೆಗಳಿಗೆ ಹಾನಿಯಾಗಿದೆ. 2 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ತೋಟಗಾರಿಕಾ ಬೆಳೆಗಳಿಗೆ ಹಾನಿಯಾಗಿದೆ. ಎನ್‌ಡಿಆರ್‌ಎಫ್ ಮಾರ್ಗಸೂಚಿ ಪ್ರಕಾರ, ಕೃಷಿ ಬೆಳೆಗಳ ಹಾನಿಗೆ ₹ 4,000 ಕೋಟಿ, ತೋಟಗಾರಿಕಾ ಬೆಳೆಗಳ ಹಾನಿಗೆ ₹ 200 ಕೋಟಿ ಪರಿಹಾರ ಕೋರಲು ಅವಕಾಶವಿದೆ. ಕುಡಿಯುವ ನೀರು, ಜಾನುವಾರುಗಳಿಗೆ ಮೇವು ಪೂರೈಕೆ ಸೇರಿದಂತೆ ಒಟ್ಟು ₹ 6,000 ಕೋಟಿವರೆಗೂ ನೆರವು ಕೋರಬಹುದು ಎಂದರು.

ಎಲ್ಲ ತಾಲ್ಲೂಕುಗಳಿಂದಲೂ ಮಾಹಿತಿ ಸಂಗ್ರಹಿಸಲಾಗುತ್ತಿದೆ. ಕೇಂದ್ರ ಸರ್ಕಾರಕ್ಕೆ ಸಲ್ಲಿಸುವ ಮನವಿ ಸಿದ್ಧಪಡಿಸುವ ಕೆಲಸ ಶೇಕಡ 70ರಷ್ಟು ಪೂರ್ಣಗೊಂಡಿದೆ. ವರದಿಯನ್ನು ಸಂಪುಟ ಸಭೆಯಲ್ಲಿ ಮಂಡಿಸಿ ಅಭಿಪ್ರಾಯ ಪಡೆಯಲಾಗುವುದು. ನಂತರ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದರು.

13 ಗ್ರಾಮಗಳಿಗೆ ಟ್ಯಾಂಕರ್ ಮೂಲಕ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿದೆ. 131 ಜನವಸತಿಗಳಲ್ಲಿ ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆಗೆ ಪಡೆದು ಕುಡಿಯುವ ನೀರು ಪೂರೈಕೆಗೆ ಬಳಸಲಾಗುತ್ತಿದೆ. ಕುಡಿಯುವ ನೀರು ಪೂರೈಕೆಗೆ ಹಣದ ಕೊರತೆ ಇಲ್ಲ. ಜಿಲ್ಲಾಧಿಕಾರಿಗಳ ವೈಯಕ್ತಿಕ ಖಾತೆಗಳಲ್ಲಿ ₹ 462 ಕೋಟಿ ಲಭ್ಯವಿದೆ ಎಂದು ವಿವರಿಸಿದರು.

161 ತಾಲ್ಲೂಕುಗಳಲ್ಲಿ ತೀವ್ರ ಬರ, 34 ತಾಲ್ಲೂಕುಗಳಲ್ಲಿ ಸಾಧಾರಣ ಬರ ಪರಿಸ್ಥಿತಿ ಇದೆ ಎಂದು ಘೋಷಿಸಲಾಗಿದೆ. ಉಳಿದ 41 ತಾಲ್ಲೂಕುಗಳ ಪರಿಸ್ಥಿತಿಯೂ ಅದೇ ರೀತಿ ಇದೆ. ತಿಂಗಳಾಂತ್ಯದಲ್ಲಿ ಮತ್ತೊಮ್ಮೆ ಪರಿಶೀಲಿಸಿ ನಿರ್ಧಾರಕೈಗೊಳ್ಳಲಾಗುವುದು ಎಂದು ಹೇಳಿದರು.

‘ಹಸಿರು ಬರ’ದ ಪ್ರಸ್ತಾಪ

ರಾಜ್ಯದ ಕೆಲವು ಕಡೆಗಳಲ್ಲಿ ‘ಹಸಿರು ಬರ’ ಪರಿಸ್ಥಿತಿ ಇರುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸುವ ಮನವಿಯಲ್ಲಿ ಪ್ರಸ್ತಾಪಿಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

‘ಅಲ್ಪ ಪ್ರಮಾಣದ ಮಳೆ ಬಿದ್ದು, ಮೊಳಕೆಯೊಡೆದ ಬೆಳೆ ಒಣಗಿದೆ. ಸುತ್ತಲಿನ ಪ್ರದೇಶದಲ್ಲಿ ಹಸಿರಿದ್ದರೂ ಬೆಳೆಗಳಿಗೆ ಹಾನಿಯಾಗಿದೆ. ಇದನ್ನು ‘ಹಸಿರು ಬರ’ ಎನ್ನಲಾಗುತ್ತದೆ. ಈ ಕುರಿತು ರಾಜ್ಯದ ನಾಲ್ಕು ಕೃಷಿ ವಿಜ್ಞಾನ ವಿವಿಗಳು ಮತ್ತು ಒಂದು ತೋಟಗಾರಿಕಾ ವಿವಿತಜ್ಞರಿಂದ ವರದಿ ಪಡೆಯಲಾಗಿದೆ’ ಎಂದರು.

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ಸರ್ಕಾರದ ಒಂದು ಸ್ವಾಯತ್ತ ಸಂಸ್ಥೆ)
ನಿರ್ದೇಶಕರು, ಹಾಗೂ ಡೀನ್ ರವರ ಕಛೇರಿ, ಕೋಟೆ, ಕೆ.ಆರ್. ರಸ್ತೆ, ಬೆಂಗಳೂರು–560002.
ದೂರವಾಣಿ : 080-26700810, ಫ್ಯಾಕ್ಸ್ : 080-26704342 ಇ–ಮೇಲ್: director_bmcri@yahoo.co.in

ಸಂಖ್ಯೆ: ಬೆಂವೈವಿಸಂಸಂ/ಸ್ಟೋರ/18/2023–24 ದಿನಾಂಕ: 19–09–2023

ಇ–ಟೆಂಡರ್ ಅಧಿಸೂಚನೆ

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಗೆ ಹಾಗೂ ಇದಕ್ಕೆ ಹೊಂದಿಕೊಂಡ ವಿಕ್ಟೋರಿಯಾ ಆಸ್ಪತ್ರೆ, ವಾಣಿ ವಿಲಾಸ ಆಸ್ಪತ್ರೆ ಮತ್ತು ಮಿಂಟೋ ಕಣ್ಣಾಸ್ಪತ್ರೆಗೆ ಅಗತ್ಯವಿರುವ ಭದ್ರತಾ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಪಡೆಯುವ ಸಲುವಾಗಿ ಇ–ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ಅರ್ಜಿ, ಇ.ಎಂ.ಡಿ. ವಿವರ ಮತ್ತು ಷರತ್ತು ಮುಂತಾದ ವಿವರಗಳನ್ನು https://www.kppp.karnataka.gov.in ಈ ವೆಬ್‌ಸೈಟ್‌ನಲ್ಲಿ ವೀಕ್ಷಿಸಿ, ಟೆಂಡರ್‌ಗಳನ್ನು ಸಲ್ಲಿಸಬಹುದು. 1) ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಪ್ರಾರಂಭ ದಿನಾಂಕ: 21–09–2023. 2) ಟೆಂಡರ್ ಪೂರ್ವಭಾವಿ ಸಭೆ ದಿನಾಂಕ: 29–09–2023 ರಂದು ಪೂರ್ವಾಹ್ನ 11.30 ಕ್ಕೆ. 3) ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಅಂತಿಮ ದಿನಾಂಕ: 19–10–2023 ಅಪರಾಹ್ನ 4.30 ರ ಒಳಗಾಗಿ. 3) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 21–10–2023 ಪೂರ್ವಾಹ್ನ 11.30 ಕ್ಕೆ. ಹೆಚ್ಚಿನ ವಿವರಗಳಿಗಾಗಿ ನಿರ್ದೇಶಕರು ಹಾಗೂ ಡೀನ್, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇವರನ್ನು ಸಂಪರ್ಕಿಸಬಹುದು.

ಸಹಿ/– ನಿರ್ದೇಶಕರು ಹಾಗೂ ಡೀನ್,
ಬೆಂವೈವಿಸಂಸಂ, ಬೆಂಗಳೂರು.

ವಾಸಾಸಂಇ/ವಾ.ಪ್ರ/1355/ಅಡ್ವಟೋರ್/2023–24

ಪ್ರಕಟಣೆ

ಅಧಿಸೂಚನೆ ಸಂಖ್ಯೆ:ಎ4/ಇಎಸ್‌ಟಿ/ನೇಮಕಾತಿ/ಸಿಆರ್–25/2023–24 ದಿನಾಂಕ:16–09–2023

ಕರ್ನಾಟಕ ಅರಣ್ಯ ಇಲಾಖೆಯ ಚಿಕ್ಕಮಗಳೂರು ವೃತ್ತ ವ್ಯಾಪ್ತಿಯಲ್ಲಿ ಖಾಲಿ ಇರುವ 25 ಅರಣ್ಯ ವೀಕ್ಷಕ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ದಿನಾಂಕ 27–9–2023 ರಿಂದ ದಿನಾಂಕ 26–10–2023ರ ಸಂಜೆ 5:30 ಗಂಟೆಯವರೆಗೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ ವಿದ್ಯಾರ್ಹತೆ :10ನೇ ತರಗತಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರತಕ್ಕದ್ದು. ಅಧಿಸೂಚನೆಯನ್ನು ಅರಣ್ಯ ಇಲಾಖೆ ವೆಬ್ ಸೈಟ್ https://aranya.gov.in/ ದ ಮುಖಪುಟದ ಕೆಳಭಾಗದಲ್ಲಿ ಇರುವ "ನೇಮಕಾತಿ" ಶೀರ್ಷಿಕೆಯಡಿ ಪ್ರಕಟಿಸಲಾಗುವುದು. ಅಭ್ಯರ್ಥಿಗಳು ಆನ್‌ಲೈನ್ ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು ಇನ್ಯಾವುದೇ ವಿಧದಲ್ಲಿ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.

16–09–2023
ಚಿಕ್ಕಮಗಳೂರು

ಸಹಿ/–
ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಆಯ್ಕೆ ಪ್ರಾಧಿಕಾರಿ, ಚಿಕ್ಕಮಗಳೂರು ವೃತ್ತ, ಚಿಕ್ಕಮಗಳೂರು.

ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ
ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಆಯ್ಕೆ ಪ್ರಾಧಿಕಾರಿ ರವರ ಕಛೇರಿ,
ಕಲಬುರಗಿ ವೃತ್ತ, ಅರಣ್ಯ ಭವನ, ಎಸ್.ಬಿ. ಟೆಂಪಲ್ ರಸ್ತೆ, ಕಲಬುರಗಿ–585102.

ಸಂಖ್ಯೆ: ಎ5/ಸಿಬ್ಬಂದಿ/ಅವೀ/ನೇನೆ/ಸಿಆರ್/21/2023–24 ದಿನಾಂಕ: 15.09.2023

–:: ಪ್ರಕಟಣೆ ::–

2023–24ನೇ ಸಾಲಿನಲ್ಲಿ 23 (ಇಪ್ಪತ್ತಮೂರು) ಅರಣ್ಯ ವೀಕ್ಷಕ ಗ್ರೂಪ್–ಡಿ ಹುದ್ದೆಗಳ ನೇರ ನೇಮಕಾತಿ ಕರ್ನಾಟಕ ನಾಗರಿಕ ಸೇವಾ (ನೇರ ನೇಮಕಾತಿ) (ಸಾಮಾನ್ಯ) ನಿಯಮಾವಳಿಗಳು 2021 ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಎಫ್‌ಇಇ/203/ಎಫ್‌ಇಜಿ/2015 ದಿನಾಂಕ: 06.08.2019ರ ಕರ್ನಾಟಕ ಅರಣ್ಯ ಇಲಾಖಾ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಾವಳಿಗಳು, 2019 ರನ್ವಯ ಕರ್ನಾಟಕ ಅರಣ್ಯ ಇಲಾಖೆಯ ಕಲಬುರಗಿ ವೃತ್ತದಲ್ಲಿ ಖಾಲಿ ಇರುವ 23 (ಇಪ್ಪತ್ತಮೂರು) ಅರಣ್ಯ ವೀಕ್ಷಕ ಗ್ರೂಪ್–ಡಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ದಿನಾಂಕ: **27.09.2023 ರಿಂದ** ಸಲ್ಲಿಸತಕ್ಕದ್ದು. ಆನ್‌ಲೈನ್ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: **26.10.2023 ರ ಅಪರಾಹ್ನ 5:30 ಗಂಟೆಗೆ** ನಿಗದಿಪಡಿಸಲಾಗಿದೆ ಹಾಗೂ ಅರ್ಜಿ ಶುಲ್ಕ ಪಾವತಿಸಲು ಕೊನೆಯ ದಿನಾಂಕ: **31.10.2023** ನಿಗದಿಪಡಿಸಲಾಗಿರುತ್ತದೆ.

ಈ ನೇಮಕಾತಿ ಸಂಬಂಧಿಸಿದಂತೆ ಅಧಿಸೂಚನೆ, ಪಠ್ಯಕ್ರಮ (Syllabus) ಆನ್‌ಲೈನ್ ಅರ್ಜಿಯನ್ನು ಕರ್ನಾಟಕ ಅರಣ್ಯ ಇಲಾಖಾ ವೆಬ್‌ಸೈಟ್: https://aranya.gov.in/ ದ ಮುಖ ಪುಟದ ಕೆಳಭಾಗದಲ್ಲಿ ಇರುವ ನೇಮಕಾತಿ ಶೀರ್ಷಿಕೆಯಡಿ ಪ್ರಕಟಿಸಲಾಗುವುದು. ಅರ್ಜಿ ಸಲ್ಲಿಸಲು ಇಚ್ಛಿಸುವ ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ಆನ್‌ಲೈನ್ ವ್ಯವಸ್ಥೆಯ ಮೂಲಕ ಮಾತ್ರ ಸಲ್ಲಿಸತಕ್ಕದ್ದು, ಸದರಿ ವ್ಯವಸ್ಥೆಯನ್ನು ಹೊರತುಪಡಿಸಿ ಇತರೆ ಯಾವುದೇ ವಿಧದಲ್ಲಿ ಅರ್ಜಿಯನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.

ಸಹಿ/– ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
ಹಾಗೂ ಆಯ್ಕೆ ಪ್ರಾಧಿಕಾರ ಕಲಬುರಗಿ ವೃತ್ತ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/298/ಕೆ.ಎಸ್.ಎಂ.ಸಿ.&ಎ/2023–24

ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ
ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಬಳ್ಳಾರಿ ವೃತ್ತ, ಬಳ್ಳಾರಿ
ಹಾಗೂ ಆಯ್ಕೆ ಪ್ರಾಧಿಕಾರರವರ ಕಛೇರಿ ಕಾಳಮ್ಮ ಬೀದಿ,
ಮೋತಿ ಸರ್ಕಲ್ ಹತ್ತಿರ, ಬಳ್ಳಾರಿ–583101

ಸಂಖ್ಯೆ:ಎ4/ಸಿಬ್ಬಂದಿ/ನೇನೇ/ಅ.ವೀ/ಸಿಆರ್–36/2023–24. ದಿನಾಂಕ:15–09–2023.

ಪ್ರಕಟಣೆ 2023–24ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕೇತರ ಪ್ರದೇಶಕ್ಕೆ ಮೀಸಲಿಟ್ಟ 20 ಅರಣ್ಯ ವೀಕ್ಷಕ ಹುದ್ದೆಗಳ ನೇರ ನೇಮಕಾತಿ.

ಕರ್ನಾಟಕ ನಾಗರಿಕ ಸೇವಾ (ನೇರನೇಮಕಾತಿ) (ಸಾಮಾನ್ಯ) ನಿಯಮಾವಳಿಗಳು 2021 ಹಾಗೂ ಸರ್ಕಾರದ ಅಧಿಸೂಚನೆ **ಸಂಖ್ಯೆ:FEE 203 FEG 2015ದಿನಾಂಕ: 06.08.2019ರ** ಕರ್ನಾಟಕ ಅರಣ್ಯ ಇಲಾಖಾ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳು, 2019ರನ್ವಯ ಕರ್ನಾಟಕ ಅರಣ್ಯ ಇಲಾಖೆಯ ಬಳ್ಳಾರಿ ವೃತ್ತದಲ್ಲಿ ಖಾಲಿ ಇರುವ 9 (ಒಂಬತ್ತು) ಕಲ್ಯಾಣ ಕರ್ನಾಟಕ ಪ್ರದೇಶದ ಸ್ಥಳೀಯ ವೃಂದ ಮತ್ತು 11 (ಹನ್ನೊಂದು) ಉಳಿಕೆ ಮೂಲ ವೃಂದದ ಒಟ್ಟು 20 (ಇಪ್ಪತ್ತು) ಅರಣ್ಯ ವೀಕ್ಷಕ ಗ್ರೂಪ್ ‘ಡಿ’ ಹುದ್ದೆಗಳಿಗೆ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್– ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ 2013 ರ ಕಂಡಿಕೆ 2(1)(ಎಫ್) ಅರ್ಥ ವಿವರಣೆಯ ಅಡಿಯಲ್ಲಿ ವರ್ಗೀಕರಿಸಲು ಅರ್ಹವಿರುವ ಅಭ್ಯರ್ಥಿಗಳಿಂದ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಆಯ್ಕೆ ಮಾಡಲು ಎಸ್.ಎಸ್.ಎಲ್.ಸಿ ಅಭ್ಯರ್ಥಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಅರ್ಜಿಗಳನ್ನು ಆನ್ಲೈನ್ **ಮುಖಾಂತರ ದಿನಾಂಕ:27–09–2023** ರಿಂದ ಸಲ್ಲಿಸತಕ್ಕದ್ದು. **ಆನ್ ಲೈನ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ:26–10–2023ರ** ಅಪರಾಹ್ನ **5.30** ಗಂಟೆ ನಿಗಧಿಪಡಿಸಲಾಗಿದೆ. ಹಾಗೂ ಅರ್ಜಿ ಶುಲ್ಕ ಪಾವತಿಸಲು ಕೊನೆಯ **ದಿನಾಂಕ:31–10–2023ರಂದು** ನಿಗಧಿಪಡಿಸಲಾಗಿರುತ್ತದೆ.

ಈ ನೇಮಕಾತಿಗೆ ಸಂಬಂದಿಸಿದಂತೆ ಅಧಿಸೂಚನೆ, ಪಠ್ಯಕ್ರಮ(syllabus) ಆನ್‌ಲೈನ್ ಅರ್ಜಿಯನ್ನು ಈಗಾಗಲೇ ಅರಣ್ಯ ಇಲಾಖೆಯ ವೆಬ್‌ಸೈಟ್:https://aranya.gov.in/ ದ ಮುಖ ಪುಟದ ಕೆಳಭಾಗದಲ್ಲಿ ಇರುವ ನೇಮಕಾತಿ ಶೀರ್ಷಿಕೆಯಡಿ ಪ್ರಕಟಿಸಲಾಗುವುದು. ಅರ್ಜಿ ಸಲ್ಲಿಸಲು ಇಚ್ಚಿಸುವ ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ಆನ್‌ಲೈನ್ ವ್ಯವಸ್ಥೆಯ ಮೂಲಕ ಮಾತ್ರ ಸಲ್ಲಿಸತಕ್ಕದ್ದು. ಸದರಿ ವ್ಯವಸ್ಥೆಯನ್ನು ಹೊರೆತು ಪಡಿಸಿ ಇತರೆ ಯಾವುದೇ ವಿಧದಲ್ಲಿ ಅರ್ಜಿಯನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.

ಸಹಿ/– ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
ಹಾಗೂ ಆಯ್ಕೆ ಪ್ರಾಧಿಕಾರ ಬಳ್ಳಾರಿ ವೃತ್ತ, ಬಳ್ಳಾರಿ

ಡಿಐಪಿಆರ್/ಬಳ್ಳಾರಿ/297/ಕೆಎಸ್ಎಂಸಿಎ/2023–24

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೀದರ

ಸಂ.: ಕಾನಿಅ/ಗ್ರಾಕುನೀನೈವಿ/ಬೀದರ/ತಾಶಾ–5/2023–24/1033 ದಿನಾಂಕ:16.09.2023

ಅಲ್ಪಾವಧಿ ಟೆಂಡರ್ ಪ್ರಕಟಣೆ ದ್ವಿಲಕೋಟೆ ಪದ್ಧತಿ (DBOT/BOT/PPP/Other)
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ರಾಜ್ಯದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೀದರ ರವರು KW-4 (Standard Bid Document) ನಿಬಂಧನೆಗಳೊಪಟ್ಟಂತೆ. 2022–23ನೇ ಸಾಲಿನ MVS (DBOT/BOT/PPP/Others Cover) ಯೋಜನೆಯಡಿಯಲ್ಲಿನ ರೂ. 66.771 ಕೋಟಿಗಳು 01 ಕಾಮಗಾರಿಗೆ ಅರ್ಹ ನೊಂದಾಯಿತ 1ನೇ ದರ್ಜೆ ಸಿವಿಲ್ ಗುತ್ತಿಗೆದಾರರು/ನೊಂದಾಯಿತ ಸಂಸ್ಥೆಗಳು ಭಾಗವಹಿಸಬಹುದಾದ ಕಾಮಗಾರಿಗಳಿಗೆ (DBOT/BOT/PPP/Others Cover) ಇ–ಟೆಂಡರ್ ಆಹ್ವಾನಿಸಲಾಗಿದೆ.

ಸದರಿ ಕಾಮಗಾರಿಗಳ ಹೆಚ್ಚಿನ ವಿವರ, ಷರತ್ತು ಹಾಗೂ ನಿಬಂಧನೆಗಳಿಗಾಗಿ ಈ ಕೆಳಗೆ ಸಹಿ ಮಾಡಿರುವ ಕಛೇರಿಯಲ್ಲಿ, ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಹಾಗೂ ವೆಬ್ಸೈಟ್ http://kppp.karnataka.gov.in ಸಂಪರ್ಕಿಸಬಹುದಾಗಿದೆ.

1. ಟೆಂಡರ ದಸ್ತಾವೇಜುಗಳನ್ನು ವೆಬ್ ಸೈಟಿನಿಂದ ಡೌನಲೋಡ ಮಾಡಿಕೊಳ್ಳಲ್ಲು ಪ್ರಾರಂಭವಾಗುವ ದಿನಾಂಕ : 16.09.2023 ರಿಂದ 30.09.2023 ವರೆಗೆ, 2) ಟೆಂಡರ್ ಪೂರ್ವಭಾವಿ ಸಭೆ ದಿನಾಂಕ ಮುಖ್ಯ ಇಂಜಿನಿಯರರು, ಗ್ರಾಕುನೀ&ನೈ ಇಲಾಖೆ, ಕಾವೇರಿ ಭವನ, ಬೆಂಗಳೂರು.–560 007 : 29.09.2023 ರಂದು 11.30 ಗಂಟೆಗೆ 3. ಭರ್ತಿ ಮಾಡಿದ ಟೆಂಡರ ಸಲ್ಲಿಸಲು ಕೊನೆಯ ದಿನಾಂಕ : 30.09.2023 ರಂದು 5.00 ಗಂಟೆಯವರೆಗೆ 4. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 02.10.2023 ರಂದು 11.00 ಗಂಟೆಯ ನಂತರ, 5. ಆರ್ಥಿಕ ಬಿಡ್ ತೆರೆಯುವ ದಿನಾಂಕ ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾ.ಕು.ನೀ & ನೈ ವಿಭಾಗ–ಬೀದರ

ವಾ.ಸಾ.ಸಂ.ಇ/ಬೀದರ/76/ಕೆಎಸ್ಎಂಸಿಎ/2023–24

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ರಾಯಚೂರು
ಜಿಲ್ಲಾ ಅಧಿಕಾರಿಗಳು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ರಾಯಚೂರು ಜಿಲ್ಲೆ, ರಾಯಚೂರು
ದೂರವಾಣಿ:08532–226555 Email ID: dominorityraichur@gmail.com
ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಷ್ಮೀಯ ಶಾಲೆ ಕಂಪೌಂಡ ಹಿಂದುಗಡೆ ಬಾಲಭವನ ಹತ್ತಿರ, ರಾಯಚೂರು.

ಸಂಖ್ಯೆ:ಅಸಂಕಇರಾ/ಹೊ.ಸಂ.ಟೆಂಡರ್/ಸಿಆರ್–02 /2023–24 ದಿ:11–09–2023

’ಇ – ಪ್ರೊಕ್ಯೂರ್‌ಮೆಂಟ್’ ಟೆಂಡರ್ ಪ್ರಕಟಣೆ

ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರಾಯಚೂರು ಜಿಲ್ಲೆಯ ಅಧೀನದಲ್ಲಿ ಬರುವ ಮೆಟ್ರಿಕ ಪೂರ್ವ / ಮೆಟ್ರಿಕ್ ನಂತರ ಬಾಲಕ/ ಬಾಲಕಿಯರ ವಸತಿ ನಿಲಯಗಳು/ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ/ಕಾಲೇಜುಗಳು ಹಾಗೂ ಡಾ:ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಸದರಿ ಶಾಲೆಗಳಿಗೆ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು/ಕಾಲೇಜು, ಮೆಟ್ರಿಕ್ ಪೂರ್ವ/ನಂತರದ ವಿದ್ಯಾರ್ಥಿನಿಲಯಗಳು ಹಾಗೂ ಜಿಲ್ಲಾ ಕಛೇರಿ/ತಾಲ್ಲೂಕು ಅಲ್ಪಸಂಖ್ಯಾತರ ಕಲ್ಯಾಣ ಇಲಾಖಾ ಮಾಹಿತಿ ಕೇಂದ್ರಗಳಲ್ಲಿ ಖಾಲಿ ಇರುವ ವಿವಿಧ ವೃಂದದ ಹುದ್ದೆಗಳಿಗೆ ಮಾನವಸೇವೆಯನ್ನು ನೀಡಲು ದ್ವಿ–ಲಕೋಟೆ ಪದ್ಧತಿ ಪ್ರಕಾರ ಅರ್ಹ ನೋಂದಾಯಿತ ಏಜೆನ್ಸಿ / ಸಂಸ್ಥೆಗಳಿಂದ ನಿಬಂಧನೆಗಳಿಗೆ ಒಳಪಟ್ಟು 'ಇ–ಪ್ರೊಕ್ಯೂರ್‌ಮೆಂಟ್' ಮೂಲಕ ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಲಾಗಿದೆ.

1) ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): ರೂ.318.00 (ಲಕ್ಷಗಳಲ್ಲಿ) 2) ಇ ಎಂ.ಡಿ ಮೊತ್ತ (ರೂ.ಗಳಲ್ಲಿ): ರೂ.4,77,000/– (ರೂ.ಗಳಲ್ಲಿ) 3) 'ಇ– ಪ್ರೊಕ್ಯೂರ್‌ಮೆಂಟ್' ಮೂಲಕ ಅರ್ಜಿ ಸ್ವೀಕರಿಸುವ ದಿನಾಂಕ: 11–09–2023 4) Pre-Bid Metting /ಪ್ರೀ ಬಿಡ್ ಮೀಟಿಂಗ್: 19–09–2023@11.30 AM ಗಂಟೆಗೆ ಜಿಲ್ಲಾ ಕಛೇರಿ, ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಷ್ಮೀಯ ಶಾಲೆ ಕಂಪೌಂಡ ಹಿಂದುಗಡೆ ಬಾಲಭವನ ಹತ್ತಿರ, ರಾಯಚೂರು. 5) ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸುವ ಕೊನೆಯ ದಿನಾಂಕ: 25–09–2023 @ ಸಾಯಂಕಾಲ 5.30 ಗಂಟೆಗೆ 6) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 27–09–2023 @ ಬೆಳಗ್ಗೆ 11.30 ಗಂಟೆಗೆ 7) ಆರ್ಥಿಕ ಬಿಡ್ ತೆರೆಯುವ ದಿನಾಂಕ:04–10–2023 @ ಬೆಳಗ್ಗೆ 11.30 ಗಂಟೆಗೆ ಟೆಂಡರ್‌ಗಾಗಿ ಅರ್ಜಿ ಸಲ್ಲಿಸಲು ಬಯಸುವ ಆಸಕ್ತರು ನಿಗಧಿತ ದಿನಾಂಕದೊಳಗಾಗಿ ಅರ್ಜಿ ಸಲ್ಲಿಸಬೇಕಾಗುತ್ತದೆ. ಹೆಚ್ಚಿನ ಮಾಹಿತಿಯನ್ನು www.KPPP.karnataka.gov.in ವೆಬ್ ಸೈಟ್‌ನಲ್ಲಿ ನೋಡಬಹುದು.

ಸಹಿ/– ಜಿಲ್ಲಾ ಅಧಿಕಾರಿಗಳು,
ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ರಾಯಚೂರು.

DIP/RCR/140/KSMC&A/Job No.137/2023-24

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ. ಎಂ. ಹೆಚ್ ಮರೀಗೌಡ ರಸ್ತೆ, ಬೆಂಗಳೂರು 560 029. ಫೋನ್ 25536625, 25536789

IFT NO. ಕಹಾಮ/ಅಭಿ/MECH -CONSULTANT/1757/2023–24 ದಿನಾಂಕ: 16–09–2023

ಇ–ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಹಕಾರ ಹಾಲು ಮಹಾಮಂಡಳವು ಇ–ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ತಾಂತ್ರಿಕ ಸಲಹೆಗಾರರ ಸೇವೆಯನ್ನು ಅರ್ಹ ಸಂಸ್ಥೆಯವರುಗಳಿಂದ ಈ ಕೆಳಗಿನ ಕೋಷ್ಟಕದಲ್ಲಿ ನೀಡಿರುವ ಕೆಲಸಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖೇನ ದ್ವಿಲಕೋಟಿ ಪದ್ಧತಿಯ ಟೆಂಡರನ್ನು (Technical and financial) ಆಹ್ವಾನಿಸಲಾಗಿದೆ. ಆಸಕ್ತ ಸಂಸ್ಥೆಯವರುಗಳು ವೆಬ್‌ಸೈಟ್ https://www.kppp.karnataka.gov.in ಮೂಲಕ ಟೆಂಡರನ್ನು ಸಲ್ಲಿಸಬಹುದಾಗಿದೆ. [Help desk E-mail: hphelpdesk.blr@intarvo.com] Ph No: 080-25501227/25501216.

ಕ್ರಮ ಸಂಖ್ಯೆ	ಕೆಲಸದ ಹೆಸರು	ಪರಿಮಾಣ	ಇ.ಎಂ.ಡಿ. ರೂ.	ಮುಕ್ತಾಯದ ಅವಧಿ
1	ಬೆಂಗಳೂರಿನ ರಾಜಾನುಕುಂಟೆಯ ಸರಹದ್ದಿನಲ್ಲಿ ನೂತನವಾಗಿ ಸ್ಥಾಪಿಸಲಾಗುತ್ತಿರುವ ಪ್ರತಿ ತಿಂಗಳಿಗೆ 1000 MT ನಿಂದ 1200 MT ರವರಗೆ ವಿಸ್ತರಿಸಬಹುದಾದ ಪೌಚ್ ಫಿಲಂ ಘಟಕ ಯೋಜನೆಯ ಮೆಕ್ಯಾನಿಕಲ್ ಕೆಲಸಗಳಿಗಾಗಿ ಅಗತ್ಯತೆಯಂತೆ ತಾಂತ್ರಿಕ ಸಲಹೆಗಾರರ ಸೇವೆಯನ್ನು ಒದಗಿಸುವುದು	1 ಜಾಬ್	3,75,000/–	18 ತಿಂಗಳು

1. ಟೆಂಡರ್ ಷೆಡ್ಯೂಲ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 20–09–2023 ರಿಂದ 30–09–2023 ರ ಸಾಯಂಕಾಲ 4:00 ಗಂಟೆಯವರೆಗೆ.
2. ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 30–09–2023 ಸಾಯಂಕಾಲ 4:00 ಗಂಟೆಯವರೆಗೆ.
3. ಟೆಂಡರುಗಳನ್ನು (Cover - 1) ತೆರೆಯುವ ದಿನಾಂಕ: 3–10–2023 ರಂದು ಸಾಯಂಕಾಲ 4.30ಗಂಟೆಗೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/–
ನಿರ್ದೇಶಕರು (ಅಭಿಯಂತರ–2)

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ
(ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ)
ಇ–ಮೇಲ್ : contracts@bmrc.co.in ವೆಬ್‌ಸೈಟ್ : www.bmrc.co.in
ಸಂಖ್ಯೆ: ಬಿಎಂಆರ್‌ಸಿಎಲ್/ಹಂತ–2/ಕಾಡುಗೋಡಿ/ರಸ್ತೆಕಾಮಗಾರಿ/2023/98 ದಿನಾಂಕ: 20.09.2023

ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಬಿಎಂಆರ್‌ಸಿಎಲ್, ಇವರ ಪರವಾಗಿ ಪ್ರಧಾನ ವ್ಯವಸ್ಥಾಪಕರು (ಗುತ್ತಿಗೆಗಳು) ಇವರು **“ಬೆಂಗಳೂರು ಮೆಟ್ರೋ ರೈಲು ಯೋಜನೆ, ಹಂತ–2 ರಲ್ಲಿ ಬಿಪಿಲ್ ಕಾರ್ನರ್‌ನಿಂದ ಕಾಡುಗೋಡಿ ಡಿಪ್ಪೋ ಕಾಂಪೌಂಡ್ ವರೆಗೆ (ಅಂದಾಜು ಉದ್ದ: 360 ಮೀ) ಬಿಬಿಎಂಪಿ ರಸ್ತೆಯ ಮರು ಅಭಿವೃದ್ಧಿ ಪ್ರಸ್ತಾವಿತ ಕಾಮಗಾರಿಗಾಗಿ”** ಟೆಂಡರುಗಳನ್ನು ಆಹ್ವಾನಿಸಿದ್ದಾರೆ. ಕಾಮಗಾರಿಯ ಅಂದಾಜು ಮೊತ್ತ: **ರೂ. 1.87 ಕೋಟಿಗಳು.** ಟೆಂಡರ್ ಭದ್ರತಾ ಮೊತ್ತ: **ರೂ. 2.80 ಲಕ್ಷಗಳು.** ಟೆಂಡರ್ ದಸ್ತಾವೇಜುಗಳ ಮಾರಾಟ (ಆನ್‌ಲೈನ್‌ನಲ್ಲಿ ಮಾತ್ರ): **21.09.2023** ರಿಂದ **30.10.2023 ರವರೆಗೆ.** ಟೆಂಡರ್ ಸಲ್ಲಿಸುವ ದಿನಾಂಕ ಮತ್ತು ಸಮಯ (ಖುದ್ದಾಗಿ ಮಾತ್ರ): **31.10.2023ರಂದು 10.00 ಗಂಟೆಯಿಂದ 15.00 ಗಂಟೆಗಳವರೆಗೆ (ಭಾರತೀಯ ಕಾಲಮಾನ).** ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: **31.10.2023ರಂದು 15.30 ಗಂಟೆ.** ಟೆಂಡರ್ ದಸ್ತಾವೇಜಿನ ಬೆಲೆ: **ರೂ. 11,800/-.** ಹೆಚ್ಚಿನ ವಿವರಗಳಿಗಾಗಿ, ನಮ್ಮ ವೆಬ್‌ಸೈಟ್ **www.bmrc.co.in** ರಲ್ಲಿ ದಿನಾಂಕ **21.09.2023** ರಿಂದ ಪರಿವೀಕ್ಷಿಸಬಹುದು.

ಸಹಿ/- ಪ್ರಧಾನ ವ್ಯವಸ್ಥಾಪಕರು (ಗುತ್ತಿಗೆಗಳು)

ಕರ್ನಾಟಕ ಸರ್ಕಾರ
ಸಾರಿಗೆ ಇಲಾಖೆ
ಸಾರಿಗೆ ಆಯುಕ್ತರ ಕಛೇರಿ, 1ನೇ ಮಹಡಿ, ಟಿ.ಟಿ.ಎಂ.ಸಿ, ಕಟ್ಟಡ,
ಬಿ.ಎಂ.ಟಿ.ಸಿ. ಸಂಕೀರ್ಣ, ಶಾಂತಿನಗರ, ಬೆಂಗಳೂರು.

ಸಂ: ಸಾಆ/ಪೀಕ–3/ಪಿಆರ್–35/2012–13 ದಿನಾಂಕ: 11.09.2023

ಇ–ಟೆಂಡರ್ ಪ್ರಕಟಣೆ

ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಗಣಕೀಕೃತ ಚಾಲನಾ ಪರೀಕ್ಷಾ ಪಥದ ನಿರ್ವಹಣೆ ಸಂಬಂಧ ಅರ್ಹ ಸಂಸ್ಥೆಗಳಿಂದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆಗಳು ವಿವರಗಳನ್ನು ಅಂತರ್‌ಜಾಲ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ನ್ನು ಸಂಪರ್ಕಿಸಿ ಪಡೆಯಬಹುದಾಗಿದೆ. ಸಂಸ್ಥೆಗಳು ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿಯನ್ನು ದೂರವಾಣಿ ಸಂಖ್ಯೆ: +91–8046010000/ +91–8068948777 ಮೂಲಕ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು.

ಇ–ಪೋಟ್‌ಲ್ ಮೂಲಕ ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ 09.10.2023 ರ ಸಂಜೆ 4.00 ಗಂಟೆಯವರೆಗೆ.

ಹೆಚ್ಚಿನ ಮಾಹಿತಿಗಾಗಿ ಈ ದೂರವಾಣಿ ಸಂಖ್ಯೆ: 080–22235176 ಯನ್ನು ಸಂಪರ್ಕಿಸಬಹುದು.

ಸಹಿ/–
ಸಾರಿಗೆ ಆಯುಕ್ತರ ಪರವಾಗಿ
ಬೆಂಗಳೂರು

ವಾ.ಸಾ.ಸಂ.ಇ/ವಾಪ್ರ/1357/ಆಕಾರ್/2023–24

ಕರ್ನಾಟಕ ಸರ್ಕಾರ
(ನಗರಾಭಿವೃದ್ಧಿ ಇಲಾಖೆ)
ಜಿಲ್ಲಾ ನಗರಾಭಿವೃದ್ಧಿ ಕೋಶ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮಂಡ್ಯ ಜಿಲ್ಲೆ, ಮಂಡ್ಯ
E-Mail: ka.mandya.dudc@gmail.com Ph.No:08232-231111
ಸಂ: ಎಂಯುಎನ್(6) LW/2021-22 ದಿನಾಂಕ:16–09–2023

ಟೆಂಡರ್ ಪ್ರಕಟಣೆ

(ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ)
ಸ್ವಚ್ಛ ಭಾರತ ಮಿಷನ್ 2.0 ಯೋಜನೆಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದ್ದೇಶ 1999–2000 ಪ್ರಕಾರ ಆಕ್ಟ್ 2000 ನಿಯಮದಂತೆ Karnataka Standard Tender Document –KW4 ರ ಪ್ರಕಾರ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಟೆಂಡರ್‌ದಾರರು **http://kppp.karnataka.gov.in** ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. **ಕ್ರ. ಸಂ : 01. ಕಾಮಗಾರಿ ವಿವರ : ಮದ್ದೂರು ಪುರಸಭೆಯ ಕಸ ವಿಲೇವಾರಿ ಘಟಕದಲ್ಲಿ ಸಂಗ್ರಹವಾಗಿರುವ ಪಾರಂಪರಿಕ ತ್ಯಾಜ್ಯವನ್ನು (ಲೆಗೆಸಿ ವೇಸ್ಟ್) Remediation and reclamation ಮಾಡುವ ಕಾಮಗಾರಿ (DMA/2023-24/ OW/WORK_INDENT554/Call-2). ಟೆಂಡರ್‌ಗೆ ಇಟ್ಟ ಮೊತ್ತ (ರೂ.ಲಕ್ಷಗಳಲ್ಲಿ) : 201.03. ಇ.ಎಂ.ಡಿ ಮೊತ್ತ : 3,02,000/–.**
(1) ಟೆಂಡರ್ ಪೂರ್ವಭಾವಿ ಸಭೆ **ದಿನಾಂಕ:12.09.2023 ರಂದು ಬೆಳಿಗ್ಗೆ 11.30 ಗಂಟೆಗೆ, ಸ್ಥಳ ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿ ಕಛೇರಿ, ಮಂಡ್ಯ.** (2) ಟೆಂಡರ್ ಬಿಡ್‌ಗಳನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸುವ ಕೊನೆಯ **ದಿನಾಂಕ:30.09.2023 ಸಂಜೆ 5.30 ಗಂಟೆವರೆಗೆ.** (3) ಇ–ಪ್ರಕ್ಯೂರ್ಮೆಂಟ್ ಮುಖಾಂತರ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:03.10.2023 ಬೆಳಿಗ್ಗೆ 11.30 ಗಂಟೆ.** ಹೆಚ್ಚಿನ ವಿವರಗಳನ್ನು ಜಿಲ್ಲಾನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿ ಕಛೇರಿ, ಮಂಡ್ಯ, ತಾಂತ್ರಿಕ ಶಾಖೆಯಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ ಹಾಗೂ **e-procurement website http://kppp.karnataka.gov.in** ನಲ್ಲಿಯೂ ಪಡೆಯಬಹುದಾಗಿರುತ್ತದೆ.
ಸೂಚನೆ: ಕಾರಣಾಂತರಗಳಿಂದ ಪ್ರಕಟಣೆಯಲ್ಲಿ ತಿಳಿಸಲಾಗಿರುವ ಟೆಂಡರ್ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು.

ಸಹಿ/–ಯೋಜನಾ ನಿರ್ದೇಶಕರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ, ಮಂಡ್ಯ.

ವಾಸಾಸಂಇ/ಸನಿ–ಮಂ/ಕೆಎಸ್ಎಂಸಿ&ಎ/203/2023–24

KARNATAKA NEERAVARI NIGAM LIMITED
(A GOVERNMENT OF KARNATAKA ENTERPRISE)
Office of the Executive Engineer KNNL, Kalasa Project Division,
Khanapur –591302, Office: 08336-222163 e-mail:eekpdkhanapur@gmail.com

No: 454 Date: 16.09.2023

INFORMATION QUOTATION NOTIFICATION (REINVITATION)

Information quotation are invited vide this office notification No 174 dated on 08.06.2023, due to change in some of the items the quotations are reinvited for work of “Consultancy services for detailed survey, investigation preparation of designs, drawings, estimates, package estimates, DTP and necessary Land Acquisition proposals for lift scheme for providing drinking water facility (bulk supply) for villages and filling of existing MI/ZP tanks in Uchagaon hobli, Belagavi taluk & district by lifting water from Markandeya River near Ambewadi village.” as per the Standard norms of KNNL by the undersigned on behalf of the Managing Director, Karnataka Neeravari Nigam Limited from the registered consultant agencies. Last date to receive Information quotation is 27.09.2023.

Note: The Quoted rates shall be Exclusive of GST

Scope of Work:

Sl No.	Description	Unit	Rate (Rs.)
	Part-A: Data Collection, Detailed Survey and Investigations		
1	Collection of all necessary data such as preliminary report, details of MI tanks proposed for filling in Belagavi taluka, relevant toposheets of the area, current schedule of rates, nearest GTS bench mark etc., complete as directed by Engineer-in-Charge	Job	
2	Preparation of C-planning of the scheme containing assessment of quantity of water required for filling of all Minor Irrigation tanks, establishment of water available under Markandeya River for filling the same, fixing duration of pumpig based on the inflow data, identification of techno economical location of lifting points, location of intake channel, pump house, Rising Main, Pressure Distribution System, delivery points and Gravity distribution System based on toposheet study & reconnaissance survey and submission of proposals with for approval etc complete as directed by Engineer-in-Charge.	Job	
3	Detailed Reconnaissance Survey of the existing barrage, assessment of storage required, preparation of designs, drawings and estimate for improvement of existing barrage across Markandeya River near Ambewadi village and submitting the same for approval as directed by Engineer -in- Charge.	Job	
4	Collection of all necessary data and existing condition of the MI tanks, and identify the various improvements to be made for the MI tanks, preparation of preliminary report, estimates and drawings etc complete as directed by Engineer-in-Charge.	Nos	
5	Establishment of Control Points at lifting points, Delivery Chamber near Malaprabha river by carrying levels from the nearest GTS BM or the BM established by the department, taking levels of the river/nala along the proposed alignment of the lift points at close intervals so as to bringout an accurate profile of the river/nala & also detailed survey of delivery chamber, sub stations etc complete as directed by Engineer-in-Charge.	Job	
6	Detailed planning based on toposheets and fixing alignment of Rising Main, Pressure Distribution System, Gravity Distribution System, fixing control points and TBMs along the alignment, taking centre line levels at every 20m interval and at crossings such as roads, nalas, vallies etc., and taking Levels at every 20m interval and at crossings, taking FRL and Top level of the MI tanks , preparation of L-sections for fixing outlet levels at MI tanks etc complete as directed by Engineer-in-Charge.	Km	
7	Borrow area material soil sample collection by using JCB/mechanical excavator and trial pit excavation at 500 m c/c maximum upto maximum 1.00 m depth, collection of borrow material samples and samples transportation and conducting relevant tests on evaluating suitability of borrow material 15 casing soil samples and 8 hearting soil samples etc., complete as directed by Engineer-in-Charge	Nos	
	Part-B: Preparation of Alignment Proposal, Designs, Drawings and Estimates		
8	Preparation of design, estimate and drawings for MS rising main, Pressure Distribution System, Gravity Distribution System, comprising excavation of trench, supply, jointing, laying and testing of MS pipe, construction of structures, thrust blocks, valves, service road etc., complete as directed by Engineer-in-Charge.	Km	
9	Preparation of designs, estimates and Drawings for pumping machinery, pump house electrical works comprising selection of suitable type of pumps, motors, arriving capacity of pumps based on pump head and discharge, starters, H T panels etc. complete as directed by Engineer-in-Charge.	Job	
10	Preparation of preliminary analysis and estimates for surge protection system of the scheme complete as directed by Engineer-in-Charge.	No	
	Part-C: Preparation of Design, Drawings and Estimates for Impounding Reservoir		
11	Preparation of capacity tables, preparation of conceptual design report and layout, hydraulic and structural design, estimate and drawings for Impounding Reservoir consisting of preliminary designs of earthen embankment and identification of reaches etc., as per latest BIS codes,drainage arrangements in the earthen bund, details of cut off trench, under seepage control measures as per latest BIS codes, bill of quantities and technical specifications, The above said job workshall include transportation of all men and material, boarding, lodging, etc., complete, including all taxes and duties, etc., complete as directed by Engineer-in-Charge.	Job	
12	Preparation of Land Acquisition proposal including collection of 7/12 and 8/A documents marking alignment on village maps, area calculation, preparation of proposal, printing, binding, etc. complete and submission more ever liasoning and coordination with revenue authorities with compliance if any until finalisation of award including Joint measurement of the alignment. (For new alignment) complete as directed by Engineer-in-Charge.	Ha	
	Part-D: Preparation of Reports		
13	Preparation of Package Estimate for implementation of the scheme comprising, Lift Head Works, Rising Main, Pressure Distribution System, Gravity Distribution System, Surge analysis, impounding reservoir, improvements to existing tanks and other appurtenant works for providing drinking water facility (bulk supply) for villages and filling of existing MI/ZP tanks in Uchagaon hobli, Belagavi taluk & district by lifting water from Markandeya River near Ambewadi village on lumpsum Turn-key basis including O & M of the scheme for 5 years from the date of commissioning including submitting 8 No's of copies and 2 soft copies etc., complete as directed by Engineer-in-Charge.	Job	
14	Preparation of Bid Document for implementation of the scheme comprising, Lift Head Works, Rising Main, Pressure Distribution System, Gravity Distribution System, Surge analysis, impounding reservoir, improvements to existing tanks and other appurtenant works for providing drinking water facility (bulk supply) for villages and filling of existing MI/ZP tanks in Uchagaon hobli, Belagavi taluk & district by lifting water from Markandeya River near Ambewadi village on lumpsum Turn-key basis including O & M of the scheme for 5 years from the date of commissioning including submitting 8 No's of copies and 2 soft copies etc., complete as directed by Engineer-in-Charge.	Job	

I) Copy submitted for kind information to:1)The Managing Director, Karnataka Neeravari Nigam Limited, 4th Floor. Coffee Board Building, Dr. B.R.AmbedkarVeedhi, Bengaluru-560001 for kind information and further need full. 2)The Chief Engineer, KNNL, Malaprabha Project Zone, Dharwad, for kind information and further needful. 3)The Inspector General of Police (Vigilance) Irrigation Department, Basava Bhavana, 4th Floor, Bengaluru for favour of kind information. 4)The Chief Accounts Officer, KNNL, Vijaya complex, Shrinagar Circle, Haliyal road, Dharwad. 5)The State Tender Bulletin Officer, Office of the Secretary, Water Resources Department, IIIrd floor, Vikas Soudha, Bengaluru with a request to publish the notification in the State Bulletin. 6)The Deputy Commissioner, District Tender Bulletin Officer, Belagavi District, for information and requested to publish in the District Bulletin. 7)The Superintending Engineer, KNNL, MLBCC Circle, Naviluteertha, for Kind information and further needful.

II) Copy forward to,
Assistant Executive Engineer, KNNL, MLBCC Sub-Div No.13,Belagavi, for information & further needful.

Sd/-Executive Engineer
KNNL, Kalasa Project Division,Khanapur.

DIPR/BGM/RO-NO-419/MCA/2023-24

ಸುಭಾಷಿತ

ಮನುಷ್ಯನ ಅಂತರಂಗದಲ್ಲಿ ಸಾತ್ವಿಕತೆಯ ಜ್ಯೋತಿಯನ್ನು ಜಾಗೃತಗೊಳಿಸುವುದೇ ಕರುಣೆ.

–ಕುವೆಂಪು

ಭಾರತ ಕ್ರಿಕೆಟ್ ತಂಡದ ಆತ್ಮಬಲ ವೃದ್ಧಿಸಿದ ಏಷ್ಯಾ ಕಪ್ ವಿಜಯ

ಭಾರತದಲ್ಲಿ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿ ಆರಂಭವಾಗಲು ಇನ್ನು ಹದಿನೈದು ದಿನಗಳು ಮಾತ್ರ ಬಾಕಿಯಿವೆ. ಇದೇ ಹೊತ್ತಿನಲ್ಲಿ, ರೋಹಿತ್ ಶರ್ಮಾ ನಾಯಕತ್ವದ ತಂಡವು ಏಷ್ಯಾ ಕಪ್ ಜಯಿಸಿರುವುದು ಹೊಸ ಭರವಸೆ ಮೂಡಿಸಿದೆ. ಐದು ವರ್ಷಗಳ ನಂತರ ಮಾಡಿರುವ ಈ ಸಾಧನೆಯು ಚೇತೋಹಾರಿಯಾಗಿದೆ. ಭಾರತಕ್ಕೆ ಒಲಿದ ಎಂಟನೇ ಏಷ್ಯಾ ಕಪ್ ಇದಾಗಿದೆ. 2013ರ ನಂತರ ಐಸಿಸಿ (ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್) ಯಾವುದೇ ಪ್ರಮುಖ ಟೂರ್ನಿಗಳಲ್ಲಿಯೂ ಭಾರತ ಪ್ರಶಸ್ತಿ ಗೆದ್ದಿಲ್ಲ. ಆದ್ದರಿಂದ ಏಷ್ಯಾ ಮಟ್ಟದ ಕಪ್ ಗೆದ್ದಿರುವುದು ಮುಂಬರುವ ವಿಶ್ವಕಪ್ ಟೂರ್ನಿಯಲ್ಲಿ ಕಣಕ್ಕಿಳಿಯಲಿರುವ ತಂಡದಲ್ಲಿ ಆತ್ಮವಿಶ್ವಾಸ ವೃದ್ಧಿಗೆ ಕಾರಣವಾಗಿದೆ. ಏಕೆಂದರೆ, ಕಳೆದೊಂದು ವರ್ಷದಿಂದ ರೋಹಿತ್ ಬಳಗ ಮಾಡುತ್ತಿದ್ದ ಕೆಲವು ಪ್ರಯೋಗಗಳ ಫಲ ಈ ಟೂರ್ನಿಯಲ್ಲಿ ಬಹುತೇಕ ಲಭಿಸಿದೆ. ಆರಂಭಿಕ ಆಟಗಾರ ಶುಭಮನ್ ಗಿಲ್, ವಿಕೆಟ್‌ಕೀಪರ್–ಬ್ಯಾಟರ್ ಇಶಾನ್ ಕಿಶನ್, ಸ್ಪಿನ್ನರ್ ಕುಲದೀಪ್ ಯಾದವ್, ಗಾಯದಿಂದಾಗಿ ದೀರ್ಘಕಾಲ ಕ್ರಿಕೆಟ್‌ನಿಂದ ದೂರವಿದ್ದ ವೇಗಿ ಜಸ್‌ಪ್ರೀತ್ ಬೂಮ್ರಾ ಹಾಗೂ ಕನ್ನಡಿಗ ಕೆ.ಎಲ್.ರಾಹುಲ್ ಕೂಡ ಇಲ್ಲಿ ಗೆಲುವಿನ ರೂವಾರಿಗಳಾದರು. ಫೈನಲ್ ಪಂದ್ಯದಲ್ಲಿ ವೇಗಿ ಮೊಹಮ್ಮದ್ ಸಿರಾಜ್ ಆರು ವಿಕೆಟ್ ಗಳಿಸಿ ದಾಖಲೆ ನಿರ್ಮಿಸಿದರು. ಅನುಭವಿ ವಿರಾಟ್ ಕೊಹ್ಲಿ ಕೂಡ ಅಮೋಘ ಲಯದಲ್ಲಿದ್ದಾರೆ. ರೋಹಿತ್ ಶರ್ಮಾ ಬ್ಯಾಟಿಂಗ್‌ನಲ್ಲಿ ಅಬ್ಬರಿಸದಿದ್ದರೂ ಒಂದೆರಡು ಪಂದ್ಯಗಳಲ್ಲಿ ತಂಡಕ್ಕೆ ಉತ್ತಮ ಆರಂಭ ನೀಡಿದ್ದಾರೆ. ಇದರಿಂದಾಗಿ ತಂಡದಲ್ಲಿ ಹುಮ್ಮಸ್ಸು ಮೂಡಿದೆ. ಇದಲ್ಲದೆ ಈ ಟೂರ್ನಿ ಕೆಲವು ವಿವಾದಗಳನ್ನೂ ಹುಟ್ಟುಹಾಕಿತು. ಏಷ್ಯಾ ಕಪ್ ಆತಿಥ್ಯವನ್ನು ಈ ಸಲ ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ವಹಿಸಿಕೊಂಡಿತ್ತು. ಆದರೆ ರಾಜತಾಂತ್ರಿಕ ಕಾರಣಗಳಿಂದ ಭಾರತವು ಪಾಕಿಸ್ತಾನದಲ್ಲಿ ಪಂದ್ಯಗಳನ್ನು ಆಡಲು ನಿರಾಕರಿಸಿತು. ಇದಕ್ಕೆ ಪ್ರತಿಯಾಗಿ ವಿಶ್ವಕಪ್ ಟೂರ್ನಿಗೆ ತಮ್ಮ ತಂಡವನ್ನು ಕಳುಹಿಸುವುದಿಲ್ಲ ಎಂಬ ಬೆದರಿಕೆಯನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಗೆ (ಬಿಸಿಸಿಐ) ಹಾಕಿತ್ತು. ಇದರಿಂದ ಅನಿವಾರ್ಯವಾಗಿ ಏಷ್ಯಾ ಕಪ್ ಟೂರ್ನಿಯನ್ನು ತಟಸ್ಥ ತಾಣವಾದ ಶ್ರೀಲಂಕಾದಲ್ಲಿ ಆಯೋಜಿಸಲು ಪಿಸಿಬಿ ಸಮ್ಮತಿಸಿತು. ಪಾಕಿಸ್ತಾನದ ಮೈದಾನಗಳಲ್ಲಿ ನಾಲ್ಕು ಪಂದ್ಯಗಳು ಮಾತ್ರ ನಡೆದವು. ಉಳಿದವೆಲ್ಲವೂ ಶ್ರೀಲಂಕಾದಲ್ಲಿ ನಡೆದವು. ಆದರೆ ಲಂಕಾದ ಕ್ರೀಡಾಂಗಣಗಳಲ್ಲಿ ನಡೆದ ಪ್ರತಿಯೊಂದು ಪಂದ್ಯದ ವೇಳೆಯೂ ಮಳೆ ಸುರಿಯಿತು. ಇದರಿಂದಾಗಿ ಆಟಕ್ಕೆ ಅಡಚಣೆಯಾಯಿತು.

ಏಷ್ಯಾ ಕಪ್ ಜಯಿಸಿರುವ ಭಾರತ ಕ್ರಿಕೆಟ್ ತಂಡದ ಚೇತೋಹಾರಿ ಸಾಧನೆಯು ಹೊಸ ಭರವಸೆ ಮೂಡಿಸಿದೆ

ಗುಂಪು ಹಂತದಲ್ಲಿ ಭಾರತ ಮತ್ತು ಪಾಕಿಸ್ತಾನದ ನಡುವಣ ಪಂದ್ಯವೇ ಅಪೂರ್ಣವಾಯಿತು. ಸೂಪರ್ ಫೋರ್ ಹಂತದಲ್ಲಿ ಭಾರತ ಮತ್ತು ಪಾಕಿಸ್ತಾನ ಮತ್ತೆ ಮುಖಾಮುಖಿಯಾದಾಗಲೂ ಮಳೆ ಸುರಿಯಿತು. ಅದರಿಂದ ಆ ಪಂದ್ಯವನ್ನು ಮೀಸಲು ದಿನವಾದ ಮರುದಿನ ಮುಂದುವರಿಸಲಾಯಿತು. ಇದೊಂದೇ ಪಂದ್ಯಕ್ಕೆ ಮೀಸಲು ದಿನ ನಿಗದಿಪಡಿಸಿದ್ದಕ್ಕೆ ಇನ್ನುಳಿದ ತಂಡಗಳು ಆಕ್ಷೇಪ ವ್ಯಕ್ತಪಡಿಸಿದವು. ಆದರೆ ಏಷ್ಯಾ ಕ್ರಿಕೆಟ್ ಕೌನ್ಸಿಲ್ (ಎಸಿಸಿ) ಮುಖ್ಯಸ್ಥರೂ ಆಗಿರುವ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಕಾರ್ಯದರ್ಶಿ ಜಯ್ ಶಾ ಮಾತ್ರ ತಮ್ಮ ನಿರ್ಣಯವನ್ನು ಸಮರ್ಥಿಸಿಕೊಂಡರು. ಕ್ರಿಕೆಟ್ ಕ್ಷೇತ್ರದಲ್ಲಿ ಆರ್ಥಿಕವಾಗಿ ಬಲಾಢ್ಯವಾಗಿರುವ ಭಾರತದ ಮಂಡಳಿ ಏನು ಬೇಕಾದರೂ ಮಾಡಲು ಸಾಧ್ಯವಿದೆ ಎಂಬುದನ್ನು ತೋರಿಸಿ ಕೊಟ್ಟಂತಿತ್ತು ಅವರ ಧೋರಣೆ. ಇದೆಲ್ಲದರ ನಡುವೆ ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ನೇತೃತ್ವದ ನಿಯೋಗವು ಪಾಕಿಸ್ತಾನದ ಲಾಹೋರ್‌ನಲ್ಲಿ ನಡೆದ ಪಂದ್ಯವೊಂದರ ವೇಳೆ ತೆರಳಿ ಆತಿಥ್ಯ ಸ್ವೀಕರಿಸಿತು. ಉಭಯ ದೇಶಗಳ ನಡುವಣ ರಾಜತಾಂತ್ರಿಕ ಸಂಬಂಧ ಹದಗೆಟ್ಟಿರುವ ಸಂದರ್ಭದಲ್ಲಿಯೂ ಭಾರತದ ವಿರಾಟ್ ಕೊಹ್ಲಿ ಮತ್ತು ಪಾಕ್ ತಂಡದ ಆಟಗಾರರು ಪರಸ್ಪರ ಸ್ನೇಹಪೂರ್ವಕ ವರ್ತನೆಯಿಂದ ಗಮನ ಸೆಳೆದರು. ಉಭಯ ದೇಶಗಳ ಕ್ರಿಕೆಟ್ ಸಂಬಂಧದ ಸುಧಾರಣೆಗೆ ಈ ನಡವಳಿಕೆಗಳು ಮುನ್ನುಡಿಯಾಗಬಹುದೇ ಎಂಬುದನ್ನು ಕಾದು ನೋಡಬೇಕು. ಇನ್ನೊಂದೆಡೆ, ಪ್ರತಿಯೊಂದು ಪಂದ್ಯದಲ್ಲಿಯೂ ಮಳೆ ಕಾಡಿದಾಗ ಕ್ರೀಡಾಂಗಣ ಸಿಬ್ಬಂದಿ ತೋರಿದ ಕಾರ್ಯದಕ್ಷತೆ ಮೆಚ್ಚುಗೆಗೆ ಪಾತ್ರವಾಯಿತು. ಎಸಿಸಿ ಮತ್ತು ಶ್ರೀಲಂಕಾ ಕ್ರಿಕೆಟ್ ಸಂಸ್ಥೆ ಅವರಿಗೆ ನಗದು ಪುರಸ್ಕಾರ ನೀಡಿ ಗೌರವಿಸಿದವು. ಭಾರತದ ಆಟಗಾರ ಸಿರಾಜ್ ತಮ್ಮ ಪಂದ್ಯಶ್ರೇಷ್ಠ ಸಾಧನೆಗೆ ಲಭಿಸಿದ ನಗದು ಬಹುಮಾನವನ್ನು ಕ್ರೀಡಾಂಗಣ ಸಿಬ್ಬಂದಿಗೆ ಸಮರ್ಪಿಸಿದರು. ಟೂರ್ನಿಯಲ್ಲಿ ಇದೇ ಮೊದಲ ಬಾರಿಗೆ ಅರ್ಹತೆ ಗಳಿಸಿದ್ದ ನೇಪಾಳ ತಂಡವೂ ಗಮನ ಸೆಳೆಯಿತು. ಭಾರತದ ವಿರುದ್ಧವೇ ಇನ್ನೂರಕ್ಕೂ ಹೆಚ್ಚು ಮೊತ್ತ ಗಳಿಸಿದ್ದು ಆ ತಂಡದ ಹೆಗ್ಗಳಿಕೆ. ನೇಪಾಳದ ಆಟವು ಏಷ್ಯಾದ ಇನ್ನುಳಿದ ಪುಟ್ಟ ದೇಶಗಳ ಉದಯೋನ್ಮುಖ ಕ್ರಿಕೆಟ್ ತಂಡಗಳಿಗೆ ಪ್ರೇರಣೆಯಾಗುವುದು ಖಚಿತ.

ದಿನದ ಟ್ವೀಟ್

ಅವಕಾಶವಾದಿ ರಾಜಕಾರಣ

ಎಲ್ಲ ರಾಜಕಾರಣಿಗಳೂ ಅವಕಾಶವಾದಿಗಳೇ ಎಂಬುದು ತಿಳಿದರಷ್ಟೇ ಈ ದೇಶದಲ್ಲಿ ನೆಮ್ಮದಿಯಿಂದ ಬದುಕಲು ಸಾಧ್ಯ! ತತ್ವ, ಸಿದ್ಧಾಂತಕ್ಕೆ ಜೋತುಬಿದ್ದು ಜನ ಅವರ ನೆಚ್ಚಿನ ಪಕ್ಷಕ್ಕೆ ವೋಟ್ ಒತ್ತಿದರೂ ಅದೆಲ್ಲವನ್ನೂ ಗಾಳಿಗೆ ತೂರಿ, ಅಧಿಕಾರದ ಆಸೆಗೆ, ವೈಯಕ್ತಿಕ ಲಾಭಕ್ಕೆ ಕಡು ಎದುರಾಳಿಗಳ ಒಟ್ಟಿಗೂ ಹೊಂದಾಣಿಕೆ ಮಾಡಿಕೊಳ್ಳುವ ನಾಯಕರೇ ಹೆಚ್ಚು ನಮ್ಮಲ್ಲಿ.

ರಾಮಚಂದ್ರ ಎಮ್., ಬರಹಗಾರ

ಕಿಡಿನುಡಿ



ತಮಿಳುನಾಡಿನ ಒತ್ತಡಕ್ಕೆ ಮಣಿದಿರುವ ಕಾವೇರಿ ನೀರು ನಿರ್ವಹಣಾ ಸಮಿತಿಯು ಆ ರಾಜ್ಯಕ್ಕೆ 5 ಸಾವಿರ ಕ್ಯೂಸೆಕ್ ನೀರು ಬಿಡಬೇಕು ಎಂದು ಆದೇಶ ನೀಡಿದೆ. ಅದಕ್ಕೂ ಮುಂಚೆ ತಮಿಳುನಾಡು ಮತ್ತು ಕರ್ನಾಟಕದ ವಾಸ್ತವ ಸ್ಥಿತಿಯನ್ನು ಸಮಿತಿ ಅರಿಯಬೇಕಿತ್ತು. ನೀರಾವರಿ ಪ್ರದೇಶದ ಅಧ್ಯಯನ ಮಾಡಬೇಕಿತ್ತು.

ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಭಾನುವಾರ, 20-9-1998

• ದಸರಾ ಉತ್ಸವ ಎಂದಿನಂತೆ ವಿಭಾಗಾಧಿಕಾರಿ ವಿಶ್ವಾಸ

ಮೈಸೂರು, ಸೆ.19– ಚಿನ್ನದ ಅಂಬಾರಿ ಮತ್ತು ಸಿಂಹಾಸನ ಕುರಿತ ಎಲ್ಲಾ ರೀತಿಯ ವಿವಾದಗಳು ಸೋಮವಾರದ ವೇಳೆಗೆ ಪರಿಹಾರವಾಗುವ ಮತ್ತು ದಸರಾ ಉತ್ಸವ ಎಂದಿನಂತೆ ನಡೆಯುವ ಭರವಸೆ ತಮಗಿದೆ ಎಂದು ಮೈಸೂರು ವಿಭಾಗಾಧಿಕಾರಿ ಹಾಗೂ ದಸರಾ ಉತ್ಸವ ಸಮಿತಿ ಕಾರ್ಯಾಧ್ಯಕ್ಷ ರಾಜು ಪ್ರೇಮ್‌ಕುಮಾರ್ ಅವರು ಇಂದು ಇಲ್ಲಿ ಹೇಳಿದರು.

ಚಿನ್ನದ ಅಂಬಾರಿ ಕೊಡಲು ರಾಜವಂಶಸ್ಥ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರು ಹಾಕಿರುವ ಷರತ್ತುಗಳನ್ನು ರಾಜ್ಯ ಸರ್ಕಾರಕ್ಕೆ ತಿಳಿಸಲಾಗಿದ್ದು, ಯಾವುದೇ ಕ್ಷಣದಲ್ಲಿ ಆ ಬಗ್ಗೆ ಆದೇಶ ನಿರೀಕ್ಷಿಸುತ್ತಿರುವುದಾಗಿ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಸಿಂಹಾಸನ ಕೊಡುವುದಾಗಿ ಒಪ್ಪಿಗೆ ಪತ್ರ ಹಾಗೂ ಚಿನ್ನದ ಅಂಬಾರಿ ಕೋರುವ ಪತ್ರವನ್ನು ಸರ್ಕಾರದಿಂದ ಒಡೆಯರ್ ಅಪೇಕ್ಷಿಸಿದ್ದಾರೆ. ಚಿನ್ನದ ಅಂಬಾರಿಗೆ ವಿಮೆ ಮಾಡಿಸುವುದು ಹಾಗೂ ದಸರಾ ಆಚರಣೆಯಲ್ಲಿ ನಡೆಸುವ ವಿಧಿವಿಧಾನಗಳು ಸುಸೂತ್ರವಾಗಿ ನಡೆಯಲು ಅವಕಾಶ ಮಾಡಿಕೊಡುವುದು ಪ್ರತಿವರ್ಷದಂತೆ ನಡೆಯಲಿವೆ ಎಂದು ನುಡಿದರು.

50 ವರ್ಷಗಳ ಹಿಂದೆ

ಗುರುವಾರ, 20-9-1973

• ಕ್ವಿಂಟಲ್ ಅಕ್ಕಿಗೆ 180 ರೂ. ನೀಡಲು ಸರ್ಕಾರ ಸಿದ್ಧ

ಬೆಂಗಳೂರು, ಸೆ. 19– ಹಳೆಯ ಭತ್ತಕ್ಕೆ ಕ್ವಿಂಟಲ್‌ಗೆ 100 ರೂ. ಕೊಡಲು ನಿರ್ಧರಿಸಿದ್ದ ಸರ್ಕಾರ, ರೈತರಲ್ಲಿರುವ ಧಾನ್ಯವನ್ನು ಕೊಳ್ಳಲು ಸ್ಥಳದಲ್ಲೇ ಒಂದು ಕ್ವಿಂಟಲ್ ಅಕ್ಕಿಗೆ 180 ರೂ. ಕೊಡಲು ನಿರ್ಧರಿಸಿದೆ.

ವಿಧಾನಸಭೆಯಲ್ಲಿ ಇಂದು ಮುಖ್ಯಮಂತ್ರಿ ಶ್ರೀ ಡಿ.ದೇವರಾಜ ಅರಸು ಅವರು ಈ ನಿರ್ಧಾರವನ್ನು ಪ್ರಕಟಿಸಿ, ಹಳ್ಳಿಗಳಲ್ಲಿ ದಾಸ್ತಾನಿರುವ ಕೆಲವು ರೈತರು ಕಷ್ಟದ ಸಮಯದಲ್ಲಿ ಸಹಾಯ ಮಾಡಲು ಮುಂದೆ ಬರಬೇಕೆಂದು ಮನವಿ ಮಾಡಿದರು.

ಹಿಡುವಳಿ ಆಧಾರದ ಮೇಲೆ ಹಂತ ಹಂತವಾದ ಎತ್ತುವಳಿ ಕ್ರಮ ಜಾರಿಗೆ ತರುವ ನಿರ್ಧಾರವನ್ನು ಸರ್ಕಾರ ತೆಗೆದುಕೊಂಡ ನಂತರ ಆಹಾರ ಸಚಿವೆ ಶ್ರೀಮತಿ ಈವಾವಾಜ್ ಅವರಿಗೆ ಬೆದರಿಕೆ ಪತ್ರ ಬಂದ ವಿಚಾರವನ್ನು ಅವರು ವಿಧಾನಸಭೆಯಲ್ಲಿ ತಿಳಿಸಿದರು.

ಸರ್ಕಾರದ ನೀತಿಯಿಂದ ತಮಗೆ ಮಾರುಕಟ್ಟೆಯಲ್ಲಿ ದೊರಕುತ್ತಿದ್ದ ಹೆಚ್ಚುವರಿ ಧಾನ್ಯ ಇನ್ನು ಸಿಕ್ಕುವುದು ಕಷ್ಟ ಎಂದು ಒಂದು ವರ್ಗದ ವರ್ತಕರಿಗೆ ಅಸಮಾಧಾನವಾಗಿದೆ ಎಂದು ವಿವರಿಸಿದರು.

ಲಾಭಕೋರರಿಗೆ ರಕ್ಷಣೆ ಇಲ್ಲ– ವರ್ತಕರಿಗೆ ಅರಸು ಎಚ್ಚರಿಕೆ: ಸಮಾಜಕ್ಕೆ ಕಷ್ಟ ಬಂದಾಗ ಹೆಚ್ಚು ಹೆಚ್ಚು ಲಾಭ ಪಡೆಯಲು ಹೊರಟಿರುವ ಲಾಭಕೋರರಿಗೆ ರಕ್ಷಣೆ ಕೊಡಲು ಸಾಧ್ಯವಿಲ್ಲ ಎಂದು ಮುಖ್ಯಮಂತ್ರಿ ಅರಸು ಅವರು ವರ್ತಕರ ವೃಂದಕ್ಕೆ ತೀವ್ರ ಎಚ್ಚರಿಕೆ ನೀಡಿದರು.

ಅಂತರ ಜಿಲ್ಲಾ ಅಕ್ಕಿ ಸಾಗಾಣಿಕೆ ನಿರ್ಬಂಧವನ್ನು ತೆಗೆಯಲು ಸಾಧ್ಯ ಇಲ್ಲ ಎಂದು ಮುಖ್ಯಮಂತ್ರಿಯವರು ಸ್ಪಷ್ಟಪಡಿಸಿದರು.

ಟಿ.ನರಸೀಪುರ, ಕೃಷ್ಣರಾಜನಗರ, ನಂಜನಗೂಡು ತಾಲ್ಲೂಕುಗಳು ಹೆಚ್ಚುವರಿ ಭತ್ತ ಬೆಳೆಯುವ ಪ್ರದೇಶಗಳಾಗಿದ್ದು, ಅಲ್ಲಿಂದ ಮೈಸೂರು ನಗರಕ್ಕೆ ಅಕ್ಕಿ ತರಲು ಯಾವ ನಿರ್ಬಂಧವೂ ಇಲ್ಲದಿದ್ದರೂ ಮೈಸೂರಿಗೇಕೆ ಅಕ್ಕಿ ಬರುತ್ತಿಲ್ಲ ಎಂದು ಪ್ರಶ್ನಿಸಿದರು.

ಸಾಹಿತ್ಯ, ಸಂಸ್ಕೃತಿಗೂ ಬೇಕು ಸಾಮಾಜಿಕ ಕಾಳಜಿಯ 'ಕರ್ನಾಟಕ ಮಾಡೆಲ್'

ಸಾಂಸ್ಕೃತಿಕ ಗ್ಯಾರಂಟಿ ಮರೀಚಿಕೆಯೆ?

ಪಡಸಾಲೆ

ರಘುನಾಥ ಚ.ಹ.

ಸಾಮಾಜಿಕ ಸ್ಪಂದನಗಳಿಲ್ಲದ ಸರ್ಕಾರ ಸಮಾಜದ ನೇರ ಆಕ್ರೋಶವನ್ನು ಎದುರಿಸಬೇಕಾಗುತ್ತದೆ. ಆ ಕಾರಣ ದಿಂದಲೇ, ಪ್ರಾಮಾಣಿಕವಲ್ಲದೆ ಹೋದರೂ ತೋರಿಕೆಗಾದರೂ ಜನಪರತೆಯ ಮುಖವಾಡವೊಂದನ್ನು ಧರಿಸಲು ಸರ್ಕಾರಗಳು ಪ್ರಯತ್ನಿಸುತ್ತಿರುತ್ತವೆ. ಸಮಾಜದ ಹಂಗಿನಿಂದ ದೂರವುಳಿಯುವುದು ಯಾವುದೇ ಸರ್ಕಾರಕ್ಕೆ ಅಸಾಧ್ಯ. ಸಂಸ್ಕೃತಿಗೆ ಸಂಬಂಧಿಸಿದಂತೆ ಸರ್ಕಾರವೊಂದಕ್ಕೆ ಈ ಹಂಗು ಅನಿವಾರ್ಯವಾಗಿರುವುದಿಲ್ಲ. ಆ ಕಾರಣದಿಂದಾಗಿಯೇ ಬಹುತೇಕ ಸರ್ಕಾರಗಳು ಸಾಂಸ್ಕೃತಿಕವಾಗಿ ಜಡವಾಗಿರುತ್ತವೆ. ಸ್ಪಷ್ಟವಾದ ಸಾಂಸ್ಕೃತಿಕ ನೀತಿಯನ್ನು ಹೊಂದಿರುವ ಸರ್ಕಾರವನ್ನು ಕರ್ನಾಟಕ ಈವರೆಗೆ ಕಂಡಿಲ್ಲ. ಈ ಸಾಂಸ್ಕೃತಿಕ ನಿರ್ಲಕ್ಷ್ಯಕ್ಕೆ ಈಗಿನ ಸರ್ಕಾರವೇನೂ ಹೊರತಾಗಿರುವಂತೆ ಕಾಣಿಸುತ್ತಿಲ್ಲ.

ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದು ನಾಲ್ಕು ತಿಂಗಳುಗಳಾದವು. ಈ ಅವಧಿಯಲ್ಲಿ 'ಕನ್ನಡ ಸಂಸ್ಕೃತಿ'ಗೆ ಸಂಬಂಧಿಸಿದಂತೆ ಸರ್ಕಾರ ಗಮನಾರ್ಹವಾದುದೇನನ್ನೂ ಮಾಡಿಲ್ಲ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವ್ಯಾಪ್ತಿಗೆ ಬರುವ ಅಕಾಡೆಮಿ ಮತ್ತು ಪ್ರಾಧಿಕಾರಗಳಿಗೆ ಹಿಂದಿನ ಸರ್ಕಾರದ ಅವಧಿಯಲ್ಲಿಯೇ ಅಧ್ಯಕ್ಷರ ನೇಮಕವಾಗಿರಲಿಲ್ಲ. 2022ರ ಅಕ್ಟೋಬರ್‌ನಲ್ಲಿ, ಮೂರು ವರ್ಷಗಳ ಅಧಿಕಾರಾವಧಿ ಪೂರ್ಣಗೊಂಡಿದ್ದರಿಂದ ಅಕಾಡೆಮಿ ಮತ್ತು ಪ್ರಾಧಿಕಾರಗಳ ಅಧ್ಯಕ್ಷರು ತಮ್ಮ ಸ್ಥಾನದಿಂದ ನಿರ್ಗಮಿಸಿದ್ದರು. ಚುನಾವಣೆ ಸನ್ನಿಹಿತವಿದ್ದುದರಿಂದ, ಅಕಾಡೆಮಿ, ಪ್ರಾಧಿಕಾರಗಳಿಗೆ ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಿಸುವ ಗೋಜಿಗೆ ಬಿಜೆಪಿ ನೇತೃತ್ವದ ಸರ್ಕಾರ ಹೋಗಿರಲಿಲ್ಲ. ನಂತರದ ಚುನಾವಣೆಯಲ್ಲಿ ಬಿಜೆಪಿ ಅಧಿಕಾರ ಕಳೆದುಕೊಂಡು, ಕಾಂಗ್ರೆಸ್ ಅಧಿಕಾರಕ್ಕೆ ಬಂದರೂ ಸಾಹಿತ್ಯ–ಸಾಂಸ್ಕೃತಿಕ ಸಂಸ್ಥೆಗಳಿಗೆ ಜೀವದುಂಬುವ ಕೆಲಸ ನಡೆದಿಲ್ಲ. ಸುಮಾರು ಒಂದು ವರ್ಷದಿಂದ ಇವು ನಿಷ್ಕ್ರಿಯ ಸ್ಥಿತಿಯಲ್ಲಿವೆ.

ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಹೊಸತರಲ್ಲಿ ಅಕಾಡೆಮಿ, ಪ್ರಾಧಿಕಾರಗಳ ಅಧ್ಯಕ್ಷತೆಗೆ ಪ್ರಯತ್ನಿಸುತ್ತಿರುವ ಸಾಹಿತಿಗಳ ಹೆಸರುಗಳು ದೊಡ್ಡ ಮಟ್ಟದಲ್ಲಿ ಚಲಾವಣೆಯಲ್ಲಿದ್ದವು. ಈ ಲಾಬಿಯ ತೀವ್ರತೆಯಿಂದಾಗಿಯೋ ಏನೋ, ಅಕಾಡೆಮಿ, ಪ್ರಾಧಿಕಾರಗಳ ಅಧ್ಯಕ್ಷರು ಮತ್ತು ಸದಸ್ಯರ ನೇಮಕಕ್ಕೆ ತಜ್ಞರ ಶೋಧನಾ ಸಮಿತಿಯೊಂದನ್ನು ನೇಮಿಸುವುದಾಗಿ ಮುಖ್ಯಮಂತ್ರಿ ಹೇಳಿದ್ದರು. ಆ ಸಮಿತಿಯ ನೇಮಕ ಯಾವ ಹಂತದಲ್ಲಿದೆ ಎನ್ನುವುದರ ಶೋಧಕ್ಕೂ ಒಂದು ಸಮಿತಿ ಅಗತ್ಯವಾಗಿರುವಂತಿದೆ. ಚುನಾವಣೆ ಸಂದರ್ಭದಲ್ಲಿ ನೀಡಿದ್ದ ಗ್ಯಾರಂಟಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿಯೇ ಸರ್ಕಾರ ತನ್ನೆಲ್ಲ ಶಕ್ತಿ, ಸಮಯ ಮೀಸಲಿರಿಸಿರುವಂತಿದೆ. 'ಶಕ್ತಿ', 'ಗೃಹಜ್ಯೋತಿ', 'ಗೃಹಲಕ್ಷ್ಮಿ', 'ಅನ್ನಭಾಗ್ಯ' ಯೋಜನೆಗಳು ರಾಜ್ಯದೊಳಗೆ ಮಾತ್ರವಲ್ಲ, ದೇಶದ ಗಮನವನ್ನೂ ಸೆಳೆದಿವೆ. 'ಕರ್ನಾಟಕ ಮಾಡೆಲ್' ಈಗ 'ಭಾರತ ಮಾಡೆಲ್' ಆಗುವ ಸೂಚನೆಗಳು ಕಾಣಿಸುತ್ತಿವೆ. ಇದೆಲ್ಲವೂ ಸರಿಯೇ. ಈ ಸಾಮಾಜಿಕ ಕಾಳಜಿ ಸಾಂಸ್ಕೃತಿಕವಾಗಿಯೂ ಪ್ರಕಟಗೊಳ್ಳುವುದು ಬೇಡವೆ?

ಸರ್ಕಾರದ ಸಾಂಸ್ಕೃತಿಕ ಮರೆವೆಯ ಹಿನ್ನೆಲೆಯಲ್ಲಿ ಎರಡು ತೀರ್ಮಾನಗಳಿಗೆ ಬರಲು ಸಾಧ್ಯವಿದೆ. ಒಂದು, ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಕಾರಣದಿಂದಾಗಿ ಸಂಸ್ಕೃತಿಯೂ ಸೇರಿದಂತೆ ಉಳಿದ ಕ್ಷೇತ್ರಗಳಿಗೆ ಸಂಪನ್ಮೂಲ ಹೊಂದಿಸುವುದು ಸರ್ಕಾರಕ್ಕೆ ಕಷ್ಟವಾಗಿರಬಹುದು. ಎರಡನೆಯ ಸಾಧ್ಯತೆ, ಸಾಂಸ್ಕೃತಿಕ ಕ್ಷೇತ್ರ ಆದ್ಯತೆಯ ಸಂಗತಿಯಾಗಿ ಸರ್ಕಾರಕ್ಕೆ ಕಾಣಿಸದಿರುವುದು. ಸಾಧ್ಯತೆಗಳೇನೇ ಇರಲಿ, 'ಕನ್ನಡ ಮತ್ತು ಸಂಸ್ಕೃತಿ' ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸರ್ಕಾರ ತನ್ನ ನಿರ್ಧಾರವನ್ನು ಸ್ಪಷ್ಟಪಡಿಸುವುದು ಅಗತ್ಯ. ಸರ್ಕಾರದ ಪಾಲಿಗೆ ಅಕಾಡೆಮಿ, ಪ್ರಾಧಿಕಾರಗಳು ಬಿಳಿಯಾನೆಗಳಂತೆ ಕಾಣಿಸಿದರೆ, ಅದನ್ನು ಸರ್ಕಾರ ಸ್ಪಷ್ಟವಾಗಿ ಹೇಳಬೇಕಾಗಿದೆ ಹಾಗೂ ಅವುಗಳನ್ನು ರದ್ದುಗೊಳಿಸುವ ದಿಟ್ಟ ನಿರ್ಧಾರ ಕೈಗೊಳ್ಳಬೇಕಾಗಿದೆ. ಸಂಪನ್ಮೂಲಗಳ ಕಾರಣದಿಂದಾಗಿ, ಸಾಂಸ್ಕೃತಿಕ ಕ್ಷೇತ್ರದ ಬಗ್ಗೆ ಸದ್ಯಕ್ಕೆ ಗಮನಹರಿಸುವುದು ಸಾಧ್ಯವಿಲ್ಲ ಎನ್ನುವುದಾದರೆ, ಆ ವಿಷಯವನ್ನಾದರೂ ಸರ್ಕಾರ ಹೇಳಬೇಕು. ಅಸ್ಪಷ್ಟತೆಯಲ್ಲಿ ದಿನದೂಡುವುದು ಜನಪರ ಸರ್ಕಾರಕ್ಕೆ ಶೋಭೆಯಲ್ಲ.

ಅಕಾಡೆಮಿ, ಪ್ರಾಧಿಕಾರಗಳ ನಿಷ್ಕ್ರಿಯತೆಯಂತೆಯೇ 'ಸಾಂಸ್ಕೃತಿಕ ನೀತಿ'ಗೆ ಸಂಬಂಧಿಸಿದ ಡೋಲಾಯಮಾನ ನಿಲುವೂ ಸರ್ಕಾರದ ಸಾಂಸ್ಕೃತಿಕ ಜಡತ್ವಕ್ಕೆ ನಿದರ್ಶನವಾಗಿದೆ. 2014ರ ಜೂನ್ ತಿಂಗಳಲ್ಲಿ ಬರಗೂರು ರಾಮಚಂದ್ರಪ್ಪನವರ ಅಧ್ಯಕ್ಷತೆಯ ಸಮಿತಿ 'ಸಾಂಸ್ಕೃತಿಕ ನೀತಿ ನಿರೂಪಣಾ ವರದಿ' ಸಲ್ಲಿಸಿದಾಗ ಸಿದ್ದರಾಮಯ್ಯನವರೇ ಮುಖ್ಯಮಂತ್ರಿಯಾಗಿದ್ದರು; ಸಮಿತಿಯ ಶಿಫಾರಸುಗಳಿಗೆ ಸರ್ಕಾರದಿಂದ ತಾತ್ವಿಕ ಒಪ್ಪಿಗೆಯೂ ದೊರೆತಿತ್ತು. ನಂತರ ಮುಖ್ಯಮಂತ್ರಿಗಳು ಹಾಗೂ ಆಡಳಿತ ಪಕ್ಷಗಳು ಬದಲಾಗುತ್ತಾ ಬಂದು, ಸಾಂಸ್ಕೃತಿಕ ನೀತಿ ನನೆಗುದಿಯಲ್ಲಿಯೇ ಉಳಿದಿದೆ. ಪ್ರಸ್ತುತ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಮರಳಿರುವಾಗ, ಸುಮಾರು ಹತ್ತು ವರ್ಷಗಳ ತರುವಾಯವಾದರೂ 'ಸಾಂಸ್ಕೃತಿಕ ನೀತಿ' ಅನುಷ್ಠಾನಕ್ಕೆ ಬರಬಹುದೇ? ಈ ಪ್ರಶ್ನೆಗೆ ಸರ್ಕಾರ ಕ್ರಿಯೆಯ ಮೂಲಕ ಉತ್ತರಿಸಬೇಕಾಗಿದೆ.

ಕಾಂಗ್ರೆಸ್ ಮಾತ್ರವಲ್ಲ, ಬಿಜೆಪಿ ನೇತೃತ್ವದ ನಿಕಟಪೂರ್ವ ಸರ್ಕಾರವೂ ಕನ್ನಡ ನಾಡುನುಡಿಗೆ ಸಂಬಂಧಿಸಿದಂತೆ ಬದ್ಧತೆ ವ್ಯಕ್ತಪಡಿಸಿದ್ದು ಅಷ್ಟರಲ್ಲೇ ಇದೆ. ಅಕಾಡೆಮಿ ಮತ್ತು ಪ್ರಾಧಿಕಾರಗಳಿಗೆ ನೀಡುವ ಅನುದಾನದಲ್ಲಿ ಕಡಿತಗೊಳಿಸಿದ್ದನ್ನು ಬಿಜೆಪಿಯ 'ಸಾಂಸ್ಕೃತಿಕ ಸಾಧನೆ'ಗಳ ಪಟ್ಟಿಗೆ ಸೇರಿಸಬೇಕು. ಅನುದಾನ ಕಡಿತಗೊಂಡಿದ್ದರಿಂದಾಗಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ನೀಡುವ ವಿದ್ಯಾರ್ಥಿವೇತನ ಹಾಗೂ ಪ್ರಶಸ್ತಿಗಳು ಸ್ಥಗಿತಗೊಂಡಿದ್ದವು. ಸಿನಿಮಾ ಕ್ಷೇತ್ರದಲ್ಲೂ ಉತ್ಸಾಹವಿಲ್ಲ. ಹೊಸ ಪ್ರಯತ್ನಗಳನ್ನು ಪ್ರೋತ್ಸಾಹಿಸುವ ರಾಜ್ಯ ಸರ್ಕಾರದ ಪ್ರಶಸ್ತಿ ಹಾಗೂ ಸಬ್ಸಿಡಿ ಸವಲತ್ತುಗಳು ನಾಲ್ಕೈದು ವರ್ಷಗಳಿಂದ ಸ್ಥಗಿತಗೊಂಡಿವೆ.

ಕೊರೊನಾ ಸಂಕಷ್ಟದ ಸಮಯದಲ್ಲಿ, 'ಮರಾಠಾ ಅಭಿವೃದ್ಧಿ ಪ್ರಾಧಿಕಾರ'ವನ್ನು ರಚಿಸಿ, ಒಮ್ಮೆಗೇ ₹ 50 ಕೋಟಿ ನೀಡಿದ್ದ 'ಸಾಂಸ್ಕೃತಿಕ ರಾಜಕಾರಣ' ಬಿಜೆಪಿಯದ್ದು. ಕನ್ನಡದ ಕೆಲಸಗಳ ಬಗ್ಗೆ ಪ್ರಾಮಾಣಿಕ ಮುತುವರ್ಜಿ ಇಲ್ಲದೆ ಹೋದರೂ, ಸಾಂಸ್ಕೃತಿಕ ನೀತಿಯನ್ನು ಪಕ್ಷದ ಆಶಯಗಳಿಗೆ ಸಂಬಂಧಿಸಿದಂತೆ ಬದಲಾಯಿಸಿಕೊಳ್ಳುವುದರಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಅತ್ಯುತ್ಸಾಹಿಯಾಗಿತ್ತು. ಪಠ್ಯಪುಸ್ತಕ ಪರಿಷ್ಕರಣೆಗೆ ಸಂಬಂಧಿಸಿದಂತೆ, ಪರಿಶೀಲನಾ ಸಮಿತಿಯನ್ನೇ ತಜ್ಞರ ಪರಿಷ್ಕರಣಾ ಸಮಿತಿಯನ್ನಾಗಿ ಮಾರ್ಪಡಿಸಿದ್ದ ಬಿಜೆಪಿ ನೇತೃತ್ವದ ಸರ್ಕಾರದ ಧೋರಣೆ ಪ್ರಜಾಸತ್ತಾತ್ಮಕವಾಗಿರಲಿಲ್ಲ, ಶೈಕ್ಷಣಿಕ ಮಾನದಂಡಗಳನ್ನೂ ಹೊಂದಿರಲಿಲ್ಲ. ಇಡೀ ಪ್ರಕರಣದಲ್ಲಿ ಪಕ್ಷ ಹಾಗೂ ಅದರ ಅಂಗಸಂಸ್ಥೆಗಳಿಗೆ ಉತ್ತರದಾಯಿಯಾಗಿ ಸರ್ಕಾರ ನಡೆದುಕೊಂಡಿತು. ದೇಶದ ಗಮನಸೆಳೆದ 'ಹಿಜಾಬ್ ವಿವಾದ'ಕ್ಕೆ ಸಂಬಂಧಿಸಿದಂತೆಯೂ ಸರ್ಕಾರದ ನಿಲುವು ವಿವೇಕ ಮತ್ತು ಅಂತಃಕರಣದಿಂದ ಕೂಡಿದುದಾಗಿರಲಿಲ್ಲ.

ಹಿಂದಿನ ಸರ್ಕಾರ ತನ್ನ ಪಕ್ಷದ ಸಿದ್ಧಾಂತಗಳಿಗೆ ಅನುಗುಣವಾಗಿ ಸಂಸ್ಕೃತಿ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಮಾಡಿದ ಬದಲಾವಣೆಗಳನ್ನು ಸರಿಪಡಿಸುವುದಾಗಿ ಚುನಾವಣೆಗೆ ಮೊದಲಿನಿಂದಲೂ ಕಾಂಗ್ರೆಸ್ ನಾಯಕರು ಹೇಳುತ್ತಾ ಬಂದಿದ್ದರು. ಅದಕ್ಕೆ ಪೂರಕವಾಗಿ, ಬಿಜೆಪಿ ಸಿದ್ಧಾಂತಗಳನ್ನು ಒಪ್ಪದ ಲೇಖಕರು ಹಾಗೂ ಕಲಾವಿದರು ಚುನಾವಣೆಯಲ್ಲಿ ಕಾಂಗ್ರೆಸ್ ಪರವಾಗಿ ಕೆಲಸ ಮಾಡಿದ್ದರು. ಆದರೆ, ಉದ್ದೇಶಿತ ಬದಲಾವಣೆಗೆ ಸಂಬಂಧಿಸಿದಂತೆ ಅಧಿಕಾರ ಇಲ್ಲದಿದ್ದಾಗ ಪುಟಿಯುತ್ತಿದ್ದ ಉತ್ಸಾಹ, ಅಧಿಕಾರ ಇರುವಾಗ ವ್ಯಕ್ತವಾಗುತ್ತಿಲ್ಲ. ಪಠ್ಯದಲ್ಲಿನ ವಿವಾದಾತ್ಮಕ ಅಂಶಗಳನ್ನು ಬದಿಗಿಟ್ಟು ಬೋಧಿಸುವಂತೆ ಹೇಳಲು ಸರ್ಕಾರ ಬಹಳಷ್ಟು ಸಮಯ ತೆಗೆದುಕೊಂಡಿತು. ಪಠ್ಯ ಪರಿಷ್ಕರಣೆಗೆ ಹೊಸ ಸಮಿತಿ ನೇಮಿಸುವುದಾಗಿ ಹೇಳಿ ಸಾಕಷ್ಟು ಸಮಯವಾಗಿದ್ದರೂ, ಆ ದಿಸೆಯಲ್ಲಿ ನಿರೀಕ್ಷಿತ ಕೆಲಸ ಆದಂತಿಲ್ಲ. ಪಠ್ಯ ಪರಿಷ್ಕರಣೆ ಎನ್ನುವುದು ತರಾತುರಿಯಲ್ಲಿ ಮಾಡಿ ಮುಗಿಸುವ ಕೆಲಸವಲ್ಲ ಎನ್ನುವುದು ಸರ್ಕಾರದಲ್ಲಿ ಇರುವವರಿಗೆ ತಿಳಿಯದ್ದೇನಲ್ಲ.

ಯಾವುದೇ ಸರ್ಕಾರ ತನ್ನನ್ನು ಜನಪರ ಎಂದು ಬಿಂಬಿಸಿಕೊಳ್ಳುವ ಭರದಲ್ಲಿ ಸಾಂಸ್ಕೃತಿಕ ಕಾಳಜಿಯನ್ನು ಮರೆಯಬಾರದು. ಸಮಾಜ ಅಥವಾ ನಾಡೊಂದರ ಆರೋಗ್ಯದ ಲಕ್ಷಣಗಳಲ್ಲಿ ಸಾಂಸ್ಕೃತಿಕ ಶ್ರೀಮಂತಿಕೆಯೂ ಸೇರಿದೆ ಎನ್ನುವುದರಲ್ಲಿ ಸರ್ಕಾರಕ್ಕೆ ನಂಬಿಕೆಯಿಲ್ಲದಿದ್ದರೆ ಅದು ತಪ್ಪೇನಲ್ಲ. ಆದರೆ, ಸರ್ಕಾರ ತನ್ನ ಆದ್ಯತೆಗಳನ್ನು ಸ್ಪಷ್ಟಪಡಿಸಬೇಕು. ಆಗ, ಆಡಳಿತಯಂತ್ರ ಕೈಬಿಟ್ಟ ಸಾಹಿತ್ಯ–ಸಂಸ್ಕೃತಿಯನ್ನು ಜನ ಗಣ ಮನವೇ ಕೈಗೆತ್ತಿಕೊಂಡೀತು. ಕೊನೆಗೂ ಸಂಸ್ಕೃತಿ ಉಳಿಯುವುದು ಜನರಿಂದಲೇ ವಿನಾ ಸರ್ಕಾರದಿಂದಲ್ಲ.

ಚುರುಮುರಿ

ಟಿಕೆಟ್ ಸೊಲ್ಲಾಪ

• ಲಿಂಗರಾಜು ಡಿ.ಎಸ್.

'ನಮಸ್ಕಾರ ಮೇಡಂ'.

'ನಮಸ್ಕಾರ, ಹೇಳಿ'.

'ನನಗೆ ಅರ್ಜೆಂಟಾಗಿ ಒಂದು ಟಿಕೆಟ್, ಸೀಟು ಬೇಕಾಗಿತ್ರ! ಯಾರು ಕೇಳಿದ್ರೂ ಆಗಕುಲ್ಲ ಅಂತರೆ'.

'ಕೊಡಸನೇಳಿ. ಮೆಡಿಕಲ್ ಸೀಟಾ, ಎಂಜಿನೀರಿಂಗ್ ಸೀಟಾ?'

'ಮೇಡಂ ಎಂಜಿನೀರಿಂಗು, ಮೆಡಿಕಲ್ ಸೀಟು ತಕ್ಕೋಕೆ ನಾನು ಮುದುಕ, ನನ್ನ ಮಗ ಚಿಕ್ಕುಡುಗ. ಅವುಕ್ಕೆಲ್ಲಾ ನಂತಾವ ಕ್ಯಾಸಿಲ್ಲ ಬುಡಿ'.

'ನಗದಿದ್ರೇ ಕೆಲಸಾಗದು ಕಂಡ್ರಿ'.

'ಅಯ್ಯೋ ಈ ಬೆಲೆ ಏರಿಕೆ ಕಾಲದೇಲಿ ನಗದೆಲ್ಲಿ ಬಂತು ಮೇಡಂ. ಹಬ್ಬಕ್ಕೇ ಕಾಸಿಲ್ದೆ ಅಳುವಂಗಾಗ್ಯದೆ. ಒಂದೇ ಒಂದು ಟಿಕೆಟ್ ಕೊಡ್ಸಿ, ನಿಮ್ಮ ದಮ್ಮಯ್ಯ'.

'ನೋಡ್ರಿ ಒಂದೇಳ್ತೀನಿ ಕೇಳಿ. ನಿಮಗೆ ಟಿಕೇಟು ಸಿಕ್ಕಿದ ಮ್ಯಾಲೆ ನಮ್ಮನ್ನ ಮೂಸಿ ಕೂಡ ನೋಡಕುಲ್ಲ. ಆಗ ನಾವು ಯಾರೋ ನೀವು ಯಾರೋ. ನಮ್ಮನ್ನ ನಂಬಿ ಕಾಸು ಕೊಡಿ'.

'ಕೊಡನೇಳಿ. ಟಿಕೆಟ್ ಯಾವಾಗ ಕೊಟ್ಟೀರಿ?'

'ನೋಡಿ, ದುಡ್ಡು ಸ್ಯಾನೆ ಜನಕ್ಕೆ ಹಂಚಬೇಕಾಯ್ತದೆ. ನೀವು ಕೊಟ್ಟ ಕಾಸು ಎಲ್ಲೆಲ್ಲಿಗೋ ಹರಿದು ಹೊಂಟೋಯ್ತದೆ'.

'ಕಾಸೇನು ಕಾವೇರಿ ನೀರಾ ಮೇಡಂ ಕೇಳಿದಂಗೆಲ್ಲ ಹರಿಸಕ್ಕೆ. ಸ್ವಲ್ಪ ಕಮ್ಮಿ ಮಾಡಿಕಳಿ'.

'ಇದರಗೆ ನಮಗೇನೂ ಗಿಟ್ಟಕುಲ್ಲ ಕಂಡ್ರಿ. ನಾವೂ ಏನಾದರೂ ಮಾಡಿಕ್ಯಬಕಲ್ಲವಾ! ಒಂದತ್ತು ಕೋಟಿ ವಗಾಯ್ಸಿ. ಎಲ್ಲಿಗೆ ಬೇಕಾದ್ರೂ ಟಿಕೆಟ್ ಕೊಡಿಸಮು'.

'ಏನು ಮೇಡಂ ಕೋಟಿ ಅಂತೀರ, ನಗ್ಸಾರ ಮಾಡ್ತಿದ್ದರಿಯಾ?'

'ತಮಾಸೆ ಸುರು ಮಾಡಿದ್ದು ನೀವು. ನಿಮಗೆ ಚಂದ್ರಲೋಕಕ್ಕಾ, ಮಂಗಳ ಲೋಕಕ್ಕಾ ಟಿಕೆಟ್ಟು ಬೇಕಾಗಿರದು. ಬೇಗನೇಳಿ, ಕೆಲಸ ಜಾಸ್ತಿಯಾಗಿ ಕುಸಿದು ಬೀಳಂಗಾಯ್ತಾದೆ'.

'ಅಯ್ಯೋ ನಿಮ್ಮ, ಇದು ಕೆಎಸ್‌ಆರ್‌ಟಿಸಿ ಟಿಕೆಟ್ ಬುಕಿಂಗ್ ಆಪೀಸಲ್ಲವುರಾ. ನಾನು ಗಣೇಸನ ಹಬ್ಬಕ್ಕೆ ಊರಿಗೆ ಹೋಗಬಕು ಮೇಡಂ. ಯಾವ ಬಸ್ಸಿಗೂ ಟಿಕೇಟೇ ಸಿಕ್ತಿಲ್ಲ. ನೀವೇನಾರ ದೊಡ್ಡ ಮನಸ್ಸು ಮಾಡಿ ನಮ್ಮೂರು ಬಸ್ಸಿಗೆ ಒಂದು ಟಿಕೆಟ್, ಒಂದು ಸೀಟು ಮಾಡಿಕೊಟ್ಟರೆ ಊರಿಗೋಗಿ ಕಡುಬು ತಿನ್ಕಂದು ಬತ್ತೀನಿ'.

ಚರ್ಚೆ

ಸಕಾರಾತ್ಮಕ ಅಂಶ ನಗಣ್ಯವಾಯಿತೇಕೆ?

ಹೆಸರು ಸನಾತನವೆಂದಾದರೂ ಅದು ಬದಲಾವಣೆಗೆ ತೆರೆದುಕೊಂಡಷ್ಟು ಪ್ರಮಾಣದಲ್ಲಿ ಬೇರೆ ಧರ್ಮಗಳು ತೆರೆದುಕೊಂಡಿವೆಯೇ ಎಂಬುದನ್ನು ನಾವು ಪರಿಗಣಿಸಬೇಕಾಗುತ್ತದೆ

• ಆರ್.ಲಕ್ಷ್ಮೀನಾರಾಯಣ

'ಧರ್ಮ ಎಂಬುದು ಮನುಷ್ಯರ ಅಫೀಮು' ಎಂದು ಸಾರಿದ ಮಾರ್ಕ್ಸ್‌ನ ವಾದವನ್ನು ಒಪ್ಪುವ ಜಿ.ರಾಮಕೃಷ್ಣ ಅವರನ್ನು ಕೇಳಿದರೆ, ಸನಾತನವೇ ಏಕೆ, ಸಕಲ ಧರ್ಮಗಳೂ ವರ್ಜ್ಯ ಎಂದೇ ಹೇಳಿಯಾರು. ಸದ್ಯಕ್ಕೆ ಸನಾತನ ಧರ್ಮದ ಬಗ್ಗೆ ಬರೀ ನಕಾರಾತ್ಮಕ ಅಂಶಗಳನ್ನೇ ಅವರು ತಮ್ಮ ಲೇಖನದಲ್ಲಿ (ಪ್ರ.ವಾ., ಸೆ. 16) ಎತ್ತಿ ಹೇಳಿದ್ದಾರೆ. ಅದರಲ್ಲಿರುವ ಸಕಾರಾತ್ಮಕ ಅಂಶಗಳ ಬಗ್ಗೆ ಕೂಡ ಅವರಿಗೆ ತಿಳಿದಿರುವ ಹಾಗೆ ಬೇರೆಯವರಿಗೆ ತಿಳಿದಿಲ್ಲವೆಂದು ನನ್ನ ಭಾವನೆ. ಆದರೆ ಅದನ್ನು ಅವರು ಹೇಳಲೊಲ್ಲರು.

ಈ ದೇಶದ ಬಹುಸಂಖ್ಯಾತ ಜನರು ಅನುಸರಿಸುತ್ತಿರುವ ಒಂದು ಧರ್ಮವಾದ ಹಿಂದೂ ಎಂಬುದು ಒಂದು ಧರ್ಮವೇ ಅಲ್ಲ ಅಥವಾ ಅಂಥ ಧರ್ಮವೇ ಇಲ್ಲ ಎಂದು ಅನೇಕರು ಹೇಳುತ್ತಿರುವ ಹಿನ್ನೆಲೆಯಲ್ಲಿ, ಜನ ಹೆಚ್ಚು ಕಡಿಮೆ ಮರೆತೇಬಿಟ್ಟಿದ್ದ 'ಸನಾತನ' ಎಂಬ ಪದವನ್ನು ತಮಿಳುನಾಡಿನ ರಾಜಕಾರಣಿಯೊಬ್ಬರು ಸಮಾಧಿಯಿಂದ ಹೊರತೆಗೆದು ಬಳಸಿದ ಮೇಲೆ ಇದಕ್ಕೆ ಮತ್ತೆ ಜೀವ ಬಂದಿತೆಂದು ಅನಿಸುತ್ತದೆ. ಈಗ ಅದನ್ನಿಟ್ಟುಕೊಂಡು ಅದರ ಅರ್ಥ, ವ್ಯುತ್ಪತ್ತಿ ಎಲ್ಲ ಹೇಳುತ್ತ ಹೋಗುವಾಗ, ಸಾವಿರಾರು ವರ್ಷಗಳಲ್ಲಿ ನಾವು ಎಷ್ಟು ದೂರ ಸಾಗಿ ಬಂದಿದ್ದೇವೆ ಎಂಬುದನ್ನು ಮರೆತೇಬಿಟ್ಟರೆ ಹೇಗೆ? ಎಷ್ಟೇ ಬೇಡವೆಂದರೂ ಧರ್ಮ ಇರುತ್ತದೆ. ಅದು ಇರುತ್ತದೆಂದ ಮೇಲೆ ಅದರಲ್ಲಿ ಕೊಳಚೆ, ಕಸ ಅದು ಯಾವ ಧರ್ಮವಾದರೂ ಕಾಲಾಂತರದಲ್ಲಿ ಸೇರಿಕೊಳ್ಳುತ್ತಲೇ ಹೋಗುತ್ತವೆ.

ಸನಾತನ ಎಂಬುದು ಹುಟ್ಟಿದ ಕಾಲದಲ್ಲಿ ಈಗಿರುವಂತೆ ಇರಲಿಲ್ಲ ಎಂಬುದು ಪ್ರಾಜ್ಞರಾದ ಜಿ.ರಾಮಕೃಷ್ಣ ಅವರಿಗಿಂತ ಚೆನ್ನಾಗಿ ಬೇರೆ ಯಾರು ತಾನೆ ಬಲ್ಲರು? ಅದಕ್ಕೆ ವ್ಯಾಸ, ವಾಲ್ಮೀಕಿ, ವಿಶ್ವಾಮಿತ್ರರಂತಹ ಋಷಿಗಳೇ ಸಾಕ್ಷಿ. ವಿಂಗಡಣೆಗಳು, ಅಸಮಾನತೆಗಳು, ಮೌಢ್ಯಗಳು ಎಲ್ಲ ಧರ್ಮಗಳಲ್ಲೂ ಇವೆ. ಕ್ರಿಶ್ಚಿಯನ್ನರಲ್ಲಿ, ಮುಸಲ್ಮಾನರಲ್ಲಿ, ಸಿಖ್ಖರಲ್ಲಿ ಇರುವ ಪಂಗಡಗಳು, ಒಳ ಪಂಗಡಗಳಲ್ಲಿ ಅಸಮಾನತೆಗಳು, ಘರ್ಷಣೆಗಳು ಇಲ್ಲವೇ? ಬಹುಶಃ ಕಾಲಾಂತರದಲ್ಲಿ ಇಂಥವನ್ನು ಮಾಡಿಕೊಳ್ಳುತ್ತಾ ಹೋಗುವುದೇ ಮನುಷ್ಯನ ಸ್ವಭಾವವಿರಬಹುದು. ಆದರೆ ಈ ಪ್ರಶ್ನೆ ಬಂದಿರುವುದು ಯಾವ ಸಂದರ್ಭದಲ್ಲಿ ಎಂಬುದನ್ನು ಪರಿಗಣನೆಗೆ ತೆಗೆದುಕೊಳ್ಳದೆ ಮತ್ತು ಅದು ಶುದ್ಧಾಂಗವಾಗಿ ರಾಜಕೀಯದ್ದು ಎಂಬುದನ್ನು ಪರಿಗಣಿಸದೆ, ಸನಾತನದಲ್ಲಿ ಇರುವ ಬಹಳಷ್ಟು ಉದಾತ್ತವೂ ಉದಾರವೂ ಆದ ಸಕಾರಾತ್ಮಕ ಅಂಶಗಳನ್ನೆಲ್ಲಾ ನಗಣ್ಯವೆನಿಸುವಂತೆ ಮಾಡುವ ಅಗತ್ಯವಿದೆಯೇ?

ಸನಾತನ ಎಂದರೆ ಬರೀ ಬ್ರಾಹ್ಮಣ ಅಥವಾ ಬ್ರಾಹ್ಮಣ್ಯ ಎಂಬುದಕ್ಕೆ ಸಂವಾದಿಯಾಗಿ ಮಾಡಿ ಎಲ್ಲ ಮಾತುಗಳನ್ನೂ ಅವರು ಆಡಿದಂತಿದೆ. ಆದರೆ ಹಾಗೆ ಹೇಳುವ ಸನಾತನಿಗಳಲ್ಲೂ ಈಗ ಎಷ್ಟೆಲ್ಲ ಬದಲಾವಣೆಗಳು ಆಗಿವೆ ಎಂಬುದನ್ನು ಮರೆಯುವುದು ನಿಜಕ್ಕೂ ಅರ್ಥವಾಗದ ಸಂಗತಿ. ಇನ್ನು ಗೀತೆಯ ಬಗೆಗಂತೂ ತುಂಬಾ ವ್ಯಾಖ್ಯಾನಗಳು ಬಂದಿರುವಾಗ, ಅದರಲ್ಲೂ ಬೇಕಾದಷ್ಟು ಮೌಲ್ಯಯುತವಾದವು ಇರುವಾಗ, ತಮಗೆ ಸರಿಯೆನಿಸದ್ದನ್ನು ಮಾತ್ರವೇ ಅಥವಾ ಅದರಲ್ಲಿ ಕಡೆಗಣಿಸಬಹುದಾದಂತಹವನ್ನು ಮಾತ್ರವೇ ಎತ್ತಿ ಹೇಳುತ್ತಾ ಜರಿಯುವುದು ಬೇಕಿತ್ತೆ? ಈಗಲೂ ಮನು ಅಥವಾ ಆಪಸ್ತಂಬ ಸೂತ್ರಗಳಲ್ಲಿ ಹೇಳಿರುವಂತೆಯೇ ನಡೆದುಕೊಳ್ಳಲಾಗುತ್ತಿದೆಯೇ? ಹೆಸರು ಸನಾತನವೆಂದಾದರೂ ಬದಲಾವಣೆ ನಿಧಾನವಾಗಿಯೇ ಆದರೂ 'ಸನಾತನ' ಬದಲಾವಣೆಗೆ ತೆರೆದುಕೊಂಡಷ್ಟು ಬೇರೆ ಧರ್ಮಗಳು ತೆರೆದುಕೊಂಡಿವೆಯೇ ಎಂಬುದನ್ನೂ ನಾವು ಪರಿಗಣಿಸಬೇಕಾಗುತ್ತದಲ್ಲವೇ? ಚಾರ್ವಾಕ ದರ್ಶನವೂ ಒಳಗೊಂಡಂತೆ ಎಲ್ಲವನ್ನೂ ಒಳಗೊಳ್ಳುತ್ತಾ ಹೋಗಿರುವುದೂ ಸನಾತನದ ವಿಶೇಷವಲ್ಲವೇ?

ಈ ದೇಶದ ಜನರ ಬಡತನ ಮತ್ತು ಸನಾತನ–ಹಿಂದೂ ಧರ್ಮದಲ್ಲಿನ ಕೆಲವೊಂದು ಲೋಪದೋಷಗಳ ದುರುಪಯೋಗ ಮಾಡಿಕೊಂಡು, ಬಹುಮಟ್ಟಿಗೆ ಹಿಂಸೆ, ದೌರ್ಜನ್ಯಗಳ ಮೂಲಕ (ಅತಿ ವಿರಳವಾಗಿ ಸ್ವಯಿಚ್ಛೆಯಿಂದ) ಮತಾಂತರಗಳನ್ನು ಮಾಡಿಕೊಂಡು ಬಂದಿರುವ ಧರ್ಮಗಳಿಗೆ ಹೋಲಿಸಿದಾಗ, ಅಂಥವೇನನ್ನೂ ಮಾಡದ ಸನಾತನ–ಹಿಂದೂ ಖಂಡಿತವಾಗಿಯೂ ಕೆಲವರು ಹೇಳುವಮಟ್ಟಿನ ಕೆಟ್ಟ ಧರ್ಮವಲ್ಲ, ಬದಲಿಗೆ, ಎಲ್ಲ ಬಗೆಯ ಟೀಕೆಗಳಿಗೆ ಅವಕಾಶವಿರುವ ಉದಾರ ಧರ್ಮ.

ಅವರೆಕಾಯಿ ತರಲಿಲ್ಲವೆಂದು ಮಂಕರಿಯಿಂದ ಹೊಡೆದ ಬ್ರಾಹ್ಮಣರಿದ್ದ ಹಾಗೆಯೇ ಅದೇ ಸಮುದಾಯದವರನ್ನು ಮನೆಯಲ್ಲಿ ತಂದಿಟ್ಟುಕೊಂಡು ಸಾಕಿ ಸಲಹಿದ ಗೋಪಾಲಸ್ವಾಮಿ ಅಯ್ಯರ್, ಕುದ್ಮುಲ್ ರಂಗರಾವ್ ಅವರಂತಹ ಬ್ರಾಹ್ಮಣರೂ ಇದ್ದರಲ್ಲವೇ? ಮನುಸ್ಮೃತಿಯನ್ನು ಸುಟ್ಟ ಡಾ. ಅಂಬೇಡ್ಕರರೂ ಹಾಗೆ ಸುಟ್ಟ ಮನುಸ್ಮೃತಿಯಲ್ಲೂ ಕೆಲವು ಒಳ್ಳೆಯ ಅಂಶಗಳಿವೆ, ಆದರೆ ಅದನ್ನು ಸುಟ್ಟಿದ್ದು ಒಂದು ಸಾಂಕೇತಿಕ ಪ್ರತಿಭಟನೆ ಎಂದು ಹೇಳುವಷ್ಟು ವಿವೇಕವನ್ನು ತೋರಿದ್ದಾರೆ.

ಸನಾತನದಲ್ಲಿ ಎಲ್ಲವೂ ಸರಿಯಿಲ್ಲ ಎಂಬುದನ್ನು, ದಲಿತರನ್ನು ಅದು ಸಹಸ್ರಾರು ವರ್ಷಗಳಿಂದ ನಡೆಸಿಕೊಂಡದ್ದು ಮನುಷ್ಯತ್ವಕ್ಕೇ ಕಳಂಕ ತರುವಂಥದ್ದು ಎಂಬುದನ್ನು ಒಪ್ಪುತ್ತಲೇ ಅದರಷ್ಟು ಬದಲಾವಣೆಗೆ ತೆರೆದುಕೊಂಡ ಮತ್ತು ಈಗಲೂ ತೆರೆದುಕೊಳ್ಳುತ್ತಿರುವ ಹಾಗೂ ಅದರ ಹಾಗೆ ಎಲ್ಲವನ್ನೂ ಒಳಗೊಳ್ಳುವ ಉದಾತ್ತ ಮನೋಭಾವ ಹೊಂದಿರುವ ಧರ್ಮಗಳು ಬಹಳಷ್ಟಿಲ್ಲ ಎಂಬ ಕಾರಣಕ್ಕೇ ಅದು ಸನಾತನ ಅಷ್ಟೇ ಅಲ್ಲ ನವತ್ವವನ್ನು ನಿಧಾನವಾಗಿಯಾದರೂ ತಳೆಯುತ್ತಾ ಹೋಗುತ್ತಿರುವ ಧರ್ಮವೂ ಹೌದು ಎಂದು ಹೇಳಿದರೆ ಉತ್ಪ್ರೇಕ್ಷೆಯಾಗುವುದಿಲ್ಲ ಎಂದು ಭಾವಿಸುತ್ತೇನೆ.

ವಾಚಕರ ವಾಣಿ

ಸಿರಾಜ್ ಕಾಣಿಕೆ: ಪಕ್ವ ಮನಃಸ್ಥಿತಿಯ ಪ್ರತೀಕ

ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಶ್ರೇಷ್ಠ ಬೌಲಿಂಗ್ ಮಾಡಿದ ಭಾರತದ ಮೊಹಮ್ಮದ್ ಸಿರಾಜ್, ತಮಗೆ ನೀಡಲಾದ 'ಪಂದ್ಯಶ್ರೇಷ್ಠ' ನಗದು ಬಹುಮಾನದ ಮೊತ್ತವನ್ನು ಶ್ರೀಲಂಕಾದ ಕ್ರೀಡಾಂಗಣ ಸಿಬ್ಬಂದಿಗೆ ಕಾಣಿಕೆಯಾಗಿ ನೀಡಿದ ಸುದ್ದಿಯನ್ನು ಓದಿ, ಅವರ ಪಕ್ವವಾದ ಮನಃಸ್ಥಿತಿಗೆ ಬೆರಗಾದೆ. ಸಿರಾಜ್ ಅವರು ಬದುಕಿನಲ್ಲಿನ ಒಳಚಲನೆಗಳನ್ನು ಚೆನ್ನಾಗಿ ಅರಿತಿರುವುದರ ನಿದರ್ಶನ ಇದು. ತೆರೆಮರೆಯಲ್ಲಿದ್ದು ಯಾರ ಗಮನಕ್ಕೂ ಬಾರದವರನ್ನು ಗುರುತಿಸಿದ ನಿಸ್ವಾರ್ಥವಾದ ಅವರ ಈ ಕಾರ್ಯ ಪವಿತ್ರವಾದುದು. ಇಂತಹ ಭಾವನೆಗಳು ಈ ರೀತಿ ವ್ಯಕ್ತಗೊಂಡಾಗ ಮಾನವೀಯತೆಗೆ ಪುಷ್ಟಿ ಉಣಿಸುವ ಸಂಗತಿಗಳಾಗಿ ಕಾಣಿಸುತ್ತಾ ನಮಗೆ ಸಂತೋಷವನ್ನು ಉಂಟುಮಾಡುತ್ತವೆ. ನಮ್ಮ ದೇಶದ ಕ್ರಿಕೆಟ್ ತಂಡದಲ್ಲಿ ಇಂತಹ ಪುಣ್ಯಲಕ್ಷಣಗಳನ್ನು ಉಳ್ಳವರಿದ್ದಾರೆ ಎಂಬುದು ಹೆಮ್ಮೆಯ ಸಂಗತಿ.

ಸಿ.ಎಚ್.ಹನುಮಂತರಾಯ, ಬೆಂಗಳೂರು

ಗ್ರಂಥಾಲಯ: ಅನನುಕೂಲ ಸರಿಪಡಿಸಿ

ಸಾರ್ವಜನಿಕ ಗ್ರಂಥಾಲಯಗಳಲ್ಲಿ ಇತ್ತೀಚೆಗೆ ಸ್ಪರ್ಧಾತ್ಮಕ ಪರೀಕ್ಷೆ, ಕಾಲೇಜು ಪರೀಕ್ಷೆಗೆ ತಯಾರಾಗುತ್ತಿರುವ ಉದ್ಯೋಗಾಕಾಂಕ್ಷಿಗಳು ಹಾಗೂ ವಿದ್ಯಾರ್ಥಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಾರೆ. ಹಾಗಾಗಿ, ಅಲ್ಲಿನ ಕುರ್ಚಿಗಳೆಲ್ಲಾ ಬಹುತೇಕ ಅವರಿಂದಲೇ ತುಂಬಿರುತ್ತವೆ. ಇದರಿಂದ ದಿನಪತ್ರಿಕೆ, ವಾರಪತ್ರಿಕೆ ಹಾಗೂ ಸಾಹಿತ್ಯದಂತಹ ಕೃತಿಗಳನ್ನು ಓದಲು ಬರುವವರಿಗೆ ಕೂರಲು ಜಾಗವೇ ಇರುವುದಿಲ್ಲ. ಈ ಸಮಸ್ಯೆ ಪರಿಹರಿಸಲು ಗ್ರಂಥಾಲಯಗಳಲ್ಲಿ ಆಸನಗಳ ಸಂಖ್ಯೆಯನ್ನು ಹೆಚ್ಚಿಸಬೇಕು ಅಥವಾ ಎರಡು ಪ್ರತ್ಯೇಕ ವಿಭಾಗಗಳನ್ನು ಮಾಡಬೇಕು. ಈ ಮೂಲಕ, ಸಾರ್ವಜನಿಕರಿಗೆ ಆಗುತ್ತಿರುವ ಅನನುಕೂಲವನ್ನು ಸರಿಪಡಿಸಬೇಕು.

ಟಿ.ಆರ್.ರಘುನಾಥ್, ಬೆಂಗಳೂರು

ಮಾರಣಾಂತಿಕವಾದ ವ್ಹೀಲಿಂಗ್: ಕಠಿಣ ಶಿಕ್ಷೆಯಾಗಲಿ

ನಂಜನಗೂಡಿನ ಸಂಚಾರ ಪೊಲೀಸ್ ಠಾಣೆಯ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದವರ ಪುತ್ರನ ಬೈಕ್ ವ್ಹೀಲಿಂಗ್‌ನಿಂದ, ರಸ್ತೆಬದಿ ಕುಳಿತಿದ್ದ ವ್ಯಕ್ತಿಯೊಬ್ಬರು ಸಾವಿಗೀಡಾಗಿರುವುದು ದುರದೃಷ್ಟಕರ. ವಾಹನ ಚಾಲನಾ ನಿಯಮ ಉಲ್ಲಂಘನೆಗೆ ಸಂಬಂಧಿಸಿದಂತೆ ಈ ಯುವಕನ ವಿರುದ್ಧ ಅನೇಕ ಪ್ರಕರಣಗಳು ದಾಖಲಾಗಿದ್ದರೂ ಆತ ಮತ್ತೆ ಬೈಕ್ ವ್ಹೀಲಿಂಗ್ ಮಾಡಿ ಜೀವ ತೆಗೆದಿರುವುದು ಕ್ಷಮಿಸಲಾರದ ಸಂಗತಿ. ಈತನಿಗೆ ಯಾವುದೇ ದಯೆದಾಕ್ಷಿಣ್ಯ ತೋರದೆ ಕಾನೂನಿನ ಛಡಿ ಏಟನ್ನು ನೀಡಿ, ವ್ಹೀಲಿಂಗ್ ಮಾಡುವ ಇತರರಿಗೆ ಎಚ್ಚರಿಕೆಯ ಪಾಠ ಹೇಳಬೇಕಾಗಿದೆ.

ಮೋಹನ್ ಜಯರಾಂ, ಸಿದ್ಧಯ್ಯನಪುರ, ಚಾಮರಾಜನಗರ

ಸನಾತನ ಧರ್ಮ ಎಂದರೆ...

ಸನಾತನ ಧರ್ಮ ಕುರಿತ ಚರ್ಚೆ ಜೋರಾಗಿ ನಡೆಯುತ್ತಿರುವ ಈ ಸಂದರ್ಭದಲ್ಲಿ, ಸೊಗಸಾದ ಕತೆಯೊಂದು ನೆನಪಿಗೆ ಬರುತ್ತದೆ. ಒಂದು ಗ್ರಾಮದಲ್ಲಿನ ತಾಯಿ, ಮಗಳು ಊರಿನ ಎಲ್ಲರೊಂದಿಗೆ ವಿನಾಕಾರಣ ಜಗಳ ಮಾಡುತ್ತಿದ್ದರು. ಇದರಿಂದ ಬೇಸತ್ತ ಜನ ಇವರೊಂದಿಗೆ ಮಾತನಾಡುವುದನ್ನು ಸಾಮೂಹಿಕವಾಗಿ ನಿಲ್ಲಿಸಿದ್ದರು. ಜಗಳವಾಡಲು ಯಾರೂ ಸಿಗದೆ ತಾಯಿ, ಮಗಳು ಕಂಗಾಲಾದರು. ಒಂದು ದಿನ ಸಂಜೆ ಇವರ ಮನೆಯ ಮುಂದೆ ಬೇರೆ ಊರಿನ ವ್ಯಕ್ತಿಯೊಬ್ಬ ಹೋಗುತ್ತಿದ್ದ. ಇದನ್ನು ಕಂಡ ತಾಯಿ 'ಮಗಳೇ ಸೂರ್ಯ ಉದಯಿಸುವ ಸಮಯವಾಯಿತು. ಬೇಗನೆ ಮಾಳಿಗೆಯ ಮೇಲೆ ಮಜ್ಜಿಗೆ ಒಣಗಲು ಹಾಕು' ಎಂದಳು. ಈ ಅಸಂಬದ್ಧ ಮಾತು ಕೇಳಿ 'ಈಗ ಸಂಜೆಯಾಗಿದೆ, ಸೂರ್ಯ ಹೇಗೆ ಬರುತ್ತಾನೆ? ಮಜ್ಜಿಗೆ ಹೇಗೆ ಒಣಗಿಸುತ್ತೀರಿ?' ಎಂದು ಆತ ಪ್ರಶ್ನೆ ಮಾಡಿದ. 'ನೀನು ಈ ಊರಿನವನಲ್ಲ. ನಮ್ಮ ಊರಿನಲ್ಲಿ ಸೂರ್ಯ ಯಾವಾಗ ಉದಯಿಸುತ್ತಾನೆ, ಯಾವಾಗ ಹೋಗುತ್ತಾನೆ ಎಂಬುದು ನಮಗೆ ಗೊತ್ತು. ಮಜ್ಜಿಗೆ ಒಣಗಿಸುವುದು ನಮ್ಮ ಮನೆಯ ಕೆಲಸ. ಇನ್ನೊಬ್ಬರ ಮನೆಯ ಕಾರುಬಾರು ನಿನಗೆ ಯಾಕೆ?' ಎಂದು ತಾಯಿ ಜಗಳಕ್ಕೆ ನಿಂತಳು. 'ನಮ್ಮ ಮಜ್ಜಿಗೆ ನಾವು ಒಣಗಿಸುವವರು, ಇದೆಲ್ಲ ನಿನಗೆ ಯಾಕೆ?' ಎಂದು ಮಗಳು ಜೋರು ಮಾಡಿದಳು. ವೀರಾವೇಶದಿಂದ ಜಗಳಕ್ಕೆ ನಿಂತ ಇವರನ್ನು ನೋಡಿ ಕಂಗಾಲಾದ ಆ ವ್ಯಕ್ತಿ ಅಲ್ಲಿಂದ ಓಡಿಹೋದ. ನಂತರ ಗ್ರಾಮಸ್ಥರಿಂದ ಜಗಳಗಂಟಿ ತಾಯಿ, ಮಗಳ ಮಾಹಿತಿ ತಿಳಿದು, ಬದುಕಿದೆಯಾ ಬಡಜೀವವೇ ಎಂದುಕೊಂಡ.

ಸನಾತನ ಧರ್ಮ ಎಂದರೆ ತುಂಬಾ ಹಳೆಯದು, ಪ್ರಾಕೃತಿಕವಾಗಿ ರಚನೆಗೊಂಡದ್ದು ಎಂದು ಸಂಕ್ಷಿಪ್ತವಾಗಿ ಹೇಳಬಹುದು. ಸನಾತನ ಧರ್ಮದ ಕುರಿತು ದೇಶದ ತುಂಬಾ ಚರ್ಚೆ ನಡೆಯುತ್ತಿರುವುದು ಹಾಗೂ ಈ ಸಂಬಂಧದ ವಿವಾದ ಕೋರ್ಟ್ ಮೆಟ್ಟಿಲು ಏರಿದ ಸಂಗತಿಯು ಮಜ್ಜಿಗೆಯ ಕಥೆಯನ್ನೇ ಹೋಲುತ್ತದೆ. ಭೌತಿಕ ಸಂಪತ್ತಿನ ಸೃಷ್ಟಿಯೇ ನಾಗರಿಕತೆಯ ಮತ್ತು ಸಮಾಜದ ಚಾಲನಾಶಕ್ತಿ ಆಗಿರುತ್ತದೆ. ಬದುಕನ್ನು ಕಟ್ಟಿಕೊಳ್ಳಲು ದುಡಿಮೆ ಮುಖ್ಯ. ದುಡಿಮೆಯಿಂದ ಸಂಪತ್ತು ಸೃಷ್ಟಿಯಾಗುತ್ತದೆ. ದುಡಿಮೆಯ ಸಂಪತ್ತನ್ನು ಉಪಯೋಗಿಸಿಕೊಂಡು ಸುರಕ್ಷಿತವಾಗಿ ಬದುಕುವುದಕ್ಕೆ ಕೆಲವು ಸರಳ ಕಟ್ಟಳೆಗಳನ್ನು ರೂಪಿಸಲಾಯಿತು. ಅದೇ ಧರ್ಮವಾಯಿತು. ಅದನ್ನು ಪುರಾತನ ಧರ್ಮ ಅಥವಾ ಸನಾತನ ಧರ್ಮ ಎಂದು ಕರೆಯಬಹುದು. ಇದಕ್ಕಿಂತ ಹೆಚ್ಚಿನದು ಅಲ್ಲಿ ಏನೂ ಇಲ್ಲ.

ಮಲ್ಲಿಕಾರ್ಜುನ ಹೆಗ್ಗಳಗಿ, ರವೀಂದ್ರ ಡಿ. ಹಳಿಂಗಳಿ, ವಿ.ಎಸ್.ಮಾಳಿ, ಮುಧೋಳ

ಅವಿಸ್ಮರಣೀಯ...

ಪ್ರಜಾಪ್ರಭುತ್ವದ ದೇಗುಲವಾದ
ಹಳೆ ಸಂಸತ್ ಭವನ ಸೇರಿತು
ಐತಿಹಾಸಿಕ ಪುಟಗಳಲ್ಲಿ
ಅವಿಸ್ಮರಣೀಯ ನೆನಪುಗಳೊಂದಿಗೆ,
ಹೊಸ ಸಂಸತ್ ಭವನಕ್ಕೆ
ನಾಯಕರ ಪದಾರ್ಪಣೆಯಾಯಿತು
ಮಹಿಳಾ ಮೀಸಲಾತಿ
ಸಾಂವಿಧಾನಿಕ ತಿದ್ದುಪಡಿ
ಮಸೂದೆ ಮಂಡನೆಯ
ಅವಿಸ್ಮರಣೀಯ ಕ್ಷಣದೊಂದಿಗೆ!

ಎಚ್.ಕೆ.ಕೊಟ್ರಪ್ಪ, ಹರಿಹರ

ಶಿಲ್ಪಕಲಾ ವೈಭವಕ್ಕೆ ಸೂಕ್ತ ಮನ್ನಣೆ

ನಮ್ಮ ಗತವೈಭವದ ಪ್ರತೀಕಗಳಾದ ಬೇಲೂರು, ಹಳೆಬೀಡು ಮತ್ತು ಸೋಮನಾಥಪುರ ದೇವಾಲಯಗಳು ಯುನೆಸ್ಕೊ 'ವಿಶ್ವ ಪಾರಂಪರಿಕ ತಾಣ'ಗಳ ಪಟ್ಟಿಗೆ ಸೇರ್ಪಡೆಯಾಗಿರುವುದು ಕನ್ನಡಿಗರಿಗೆಲ್ಲ ಅಪಾರ ಹರ್ಷ ಮತ್ತು ಅಭಿಮಾನದ ಸಂಗತಿಯಾಗಿದೆ. ಬೇಲೂರು, ಹಳೆಬೀಡು ನಮ್ಮ ಭವ್ಯ, ದಿವ್ಯ ಪರಂಪರೆ ಹಾಗೂ ಶಿಲ್ಪಕಲಾ ವೈಭವದ ಅದ್ಭುತ ಸೃಷ್ಟಿ ಎನಿಸಿವೆ. ಕುವೆಂಪು ಅವರು ಸೋಮನಾಥಪುರ ದೇವಾಲಯದ ಸೌಂದರ್ಯವನ್ನು ಅನನ್ಯವಾಗಿ ಬಣ್ಣಿಸುವ ಮೂಲಕ ಅಲ್ಲಿನ ಶಿಲ್ಪಕಲೆಯ ವೈಭವವನ್ನು ಜಗತ್ತಿಗೆ ಸಾರಿದ್ದಾರೆ.

ಮುರುಗೇಶ್ ಹನಗೋಡಿಮಠ, ಹುಬ್ಬಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮಹಿಳಾ ಮೀಸಲಾತಿ: ಜಾರಿಯಲ್ಲಿ ಹತ್ತಾರು ತೊಡಕು

• ಜಯಸಿಂಹ ಆರ್.

ಭಾರತದ ಪ್ರಜಾಪ್ರಭುತ್ವ ಮತ್ತು ಮಹಿಳೆ ಎಂದು ಹುಡುಕುತ್ತಾ ಹೋದರೆ, ಈವರೆಗೆ ರಾಜಕಾರಣದಲ್ಲಿ ಹೆಸರು ಮಾಡಿದ ಮಹಿಳೆಯರ ಸಂಖ್ಯೆ ಬೆರಳೆಣಿಕೆಯಷ್ಟು ಮಾತ್ರ. ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರ ಪ್ರಾತಿನಿಧ್ಯ ಎಷ್ಟು ಸೀಮಿತ ಎಂದರೆ, 542 (ಒಂದು ಸ್ಥಾನ ತೆರವಾಗಿದೆ) ಸದಸ್ಯರ ಬಲ ಇರುವ ಈಗಿನ ಲೋಕಸಭೆಯಲ್ಲಿ ಮಹಿಳಾ ಸಂಸದರ ಸಂಖ್ಯೆ 78 ಮಾತ್ರ. ಈ ಹಿಂದೆ ಈ ಸಂಖ್ಯೆ ಇದಕ್ಕಿಂತಲೂ ಕಡಿಮೆಯೇ ಇತ್ತು. ದೇಶದ ರಾಜಕೀಯ ಕ್ಷೇತ್ರದಲ್ಲಿ ಮಹಿಳಾ ಪ್ರಾತಿನಿಧ್ಯವನ್ನು ಹೆಚ್ಚಿಸಲು ಸಾಧ್ಯವಾಗಿದ್ದು ಮೀಸಲಾತಿ ಮೂಲಕ ಮಾತ್ರ. ಲೋಕಸಭೆ, ರಾಜ್ಯ ವಿಧಾನಸಭೆ, ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ 33.33ರಷ್ಟು ಮೀಸಲಾತಿ ನೀಡಬೇಕು ಎಂಬುದು ಹಲವು ದಶಕಗಳ ಬೇಡಿಕೆ. ಆದರೆ, ಈವರೆಗೆ ಪಂಚಾಯತಿಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಷ್ಟೇ ಮಹಿಳೆಯರಿಗೆ ಮೀಸಲಾತಿ ದೊರೆತಿದೆ.

ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ನೀಡುವ ಮಸೂದೆಯನ್ನು 1989ರಲ್ಲಿ ರಾಜೀವ್ ಗಾಂಧಿ ಅವರ ಸರ್ಕಾರವು ರಾಜ್ಯಸಭೆಯಲ್ಲಿ ಮಂಡಿಸಿತ್ತು. ಆದರೆ, ಅದಕ್ಕೆ ಅನುಮೋದನೆ ಸಿಕ್ಕಿರಲಿಲ್ಲ. 1992–93ರಲ್ಲಿ ಪಿ.ವಿ. ನರಸಿಂಹರಾವ್ ಅವರ ಸರ್ಕಾರವು ಸಂವಿಧಾನಕ್ಕೆ ತರಲಾದ 73 ಮತ್ತು 74ನೇ ತಿದ್ದುಪಡಿಗಳ ಮೂಲಕ ಪಂಚಾಯತಿಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮೀಸಲಾತಿಯನ್ನು ಒದಗಿಸಿತು. ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರಿಗೆ ದೊಡ್ಡಮಟ್ಟದ ಪ್ರಾತಿನಿಧ್ಯ ದೊರೆತದ್ದು ಆಗಲೇ. ಅದರ ಪರಿಣಾಮವಾಗಿ ಈಗ ದೇಶದ ಉದ್ದಗಲಕ್ಕೂ ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ 15 ಲಕ್ಷಕ್ಕೂ ಹೆಚ್ಚು ಮಹಿಳಾ ಜನಪ್ರತಿನಿಧಿಗಳಿದ್ದಾರೆ.

ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲೂ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ನೀಡಬೇಕು ಎಂಬುದು ಇಂದಿನ ಬೇಡಿಕೆ ಅಲ್ಲ, ಇದೇ ಮೊದಲ ಪ್ರಯತ್ನವೂ ಅಲ್ಲ. ಮಹಾರಾಷ್ಟ್ರದ ಸಂಸದೆಯಾಗಿದ್ದ ಪ್ರಮೀಳಾ ದಂಡವತೆ ಅವರು 1996ರಲ್ಲಿ ಮಹಿಳಾ ಮೀಸಲಾತಿ ಖಾಸಗಿ ಮಸೂದೆಯನ್ನು ಮೊದಲ ಬಾರಿ ಮಂಡಿಸಿದ್ದರು. 1996ರಲ್ಲಿ, ಅಂದಿನ ಎಚ್.ಡಿ.ದೇವೇಗೌಡ ಅವರ ನೇತೃತ್ವದ ಸಂಯುಕ್ತರಂಗ ಸರ್ಕಾರವು ಅಂತಹ ಮಸೂದೆಯನ್ನು ಮೊದಲ ಬಾರಿ ಲೋಕಸಭೆಯಲ್ಲಿ ಮಂಡಿಸಿತ್ತು. ಮಸೂದೆಯನ್ನು ಜಂಟಿ ಸದನ ಸಮಿತಿಗೆ ಒಪ್ಪಿಸಿ, ಸಮಿತಿ ವರದಿ ನೀಡಿತ್ತು. ಆದರೆ, ಆ ಲೋಕಸಭೆಯೇ ವಿಸರ್ಜನೆಯಾದ ಕಾರಣ ಮಸೂದೆಯೂ ಬಿದ್ದುಹೋಯಿತು. ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಸರ್ಕಾರ ಅಂಥದ್ದೇ ಮಸೂದೆಯನ್ನು 1998ರಲ್ಲಿ, 1999, 2002 ಮತ್ತು 2003ರಲ್ಲಿ ಮಂಡಿಸಿತ್ತು. 2004ರಲ್ಲಿ ಯುಪಿಎ–1 ಸರ್ಕಾರ ಮತ್ತೆ ಮಸೂದೆಯನ್ನು ಮಂಡಿಸಿತ್ತು. ಐದು ಬಾರಿಯೂ ಮಸೂದೆಗೆ ಅನುಮೋದನೆ ಸಿಕ್ಕಿರಲಿಲ್ಲ.

2008ರ ಮೇನಲ್ಲಿ ಮನಮೋಹನ್ ಸಿಂಗ್ ನೇತೃತ್ವದ ಯುಪಿಎ–1 ಸರ್ಕಾರ ಮತ್ತೆ ಮಸೂದೆಯನ್ನು ಮಂಡಿಸಿತ್ತು. ಮಸೂದೆಯನ್ನು ಸಂಸದೀಯ ಸ್ಥಾಯಿ ಸಮಿತಿಗೆ ಒಪ್ಪಿಸಲಾಗಿತ್ತು. 2009ರ ಡಿಸೆಂಬರ್‌ನಲ್ಲಿ ಹಲವು ಬದಲಾವಣೆಗಳೊಂದಿಗೆ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿತ್ತು. 2010ರ ಮಾರ್ಚ್ 10ರಂದು ಮಸೂದೆಗೆ ರಾಜ್ಯಸಭೆಯು ಅನುಮೋದನೆ ನೀಡಿತ್ತು. ಆದರೆ, ಮಸೂದೆಯಲ್ಲಿನ ಹಲವು ಅಂಶಗಳಿಗೆ ಯುಪಿಎ ಮಿತ್ರಪಕ್ಷಗಳು ಮತ್ತು ವಿರೋಧ ಪಕ್ಷಗಳೂ ಆಕ್ಷೇಪ ವ್ಯಕ್ತಪಡಿಸಿದ್ದವು ಮತ್ತು ಹಲವು ಬದಲಾವಣೆಗಳನ್ನು ಆಗ್ರಹಿಸಿದ್ದವು. ಈ ಕಾರಣದಿಂದ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಲೇ ಇಲ್ಲ. 2014ರಲ್ಲಿ ಲೋಕಸಭೆ ವಿಸರ್ಜನೆಯಾದ ಕಾರಣ ಆ ಮಸೂದೆಯೂ ಬಿದ್ದುಹೋಯಿತು.

2014ರಲ್ಲಿ ಅಧಿಕಾರಕ್ಕೆ ಬಂದ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಎನ್‌ಡಿಎ ಸರ್ಕಾರವು ಮಹಿಳಾ ಮೀಸಲಾತಿ ಮಸೂದೆಯನ್ನು ಮಂಡಿಸಿ, ಮೀಸಲಾತಿಯನ್ನು ಜಾರಿಗೆ ತರುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ, ಮೋದಿ ಸರ್ಕಾರವು ಮಸೂದೆಯನ್ನು ಮಂಡಿಸಲೇ ಇಲ್ಲ. ಕಾಂಗ್ರೆಸ್ ಸೇರಿದಂತೆ ಹಲವು ವಿರೋಧ ಪಕ್ಷಗಳು, ಬಿಜೆಪಿಯ ಹಲವು ಮಿತ್ರಪಕ್ಷಗಳೂ ಮಹಿಳಾ ಮೀಸಲಾತಿ ಮಸೂದೆಯನ್ನು ಮಂಡಿಸಿ ಎಂದು ಆಗ್ರಹಿಸಿದ್ದವು. ಆದರೆ ಮೋದಿ ಸರ್ಕಾರವು ಮಹಿಳಾ ಮೀಸಲಾತಿ ಮಸೂದೆಯನ್ನು ಮಂಡಿಸಿದ್ದು 2023ರಲ್ಲಿ. ಆದರೆ ಜನಗಣತಿ ಮತ್ತು ಕ್ಷೇತ್ರ ಮರುವಿಂಗಡಣೆ ಎಂಬ ತಾಂತ್ರಿಕ ಪ್ರಕ್ರಿಯೆಗಳ ಕಾರಣದಿಂದ ಮಹಿಳಾ ಮೀಸಲಾತಿ ಜಾರಿಗೆ ಬರುವುದು 2029ರ ವೇಳೆಗೆ ಎಂದು ನಿರೀಕ್ಷಿಸಲಾಗಿದೆ, ಅದೂ ಉಭಯ ಸದನಗಳಲ್ಲಿ ಮಸೂದೆಗೆ ಅನುಮೋದನೆ ದೊರೆತರಷ್ಟೆ.

ಬೇಡಿಕೆ, ಮಸೂದೆಯ ನಡುವೆ ಅಜಗಜಾಂತರ

543 ಸದಸ್ಯ ಬಲವಿರುವ ಲೋಕಸಭೆಯಲ್ಲಿ ಮಹಿಳೆಯರಿಗೆ ಶೇ 33ರಷ್ಟು ಸ್ಥಾನಗಳನ್ನು ಮೀಸಲಿರಿಸಬೇಕು ಮತ್ತು ಆ 33ರಷ್ಟು ಸ್ಥಾನಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಮಹಿಳೆಯರಿಗೆ ಒಳಮೀಸಲಾತಿ ನೀಡಬೇಕು ಎಂಬುದು ಆರ್‌ಜೆಡಿ, ಸಮಾಜವಾದಿ ಪಕ್ಷ, ಜೆಡಿಯು ಮತ್ತು ಬಹುಜನ ಸಮಾಜ ಪಕ್ಷಗಳ ಆಗ್ರಹವಾಗಿತ್ತು. ಬಿಜೆಪಿಯ ಉಮಾಭಾರತಿ ಸಹ ಇಂಥದ್ದೇ ಬೇಡಿಕೆ ಮುಂದಿಟ್ಟಿದ್ದರು. ತಮ್ಮ ಬೇಡಿಕೆಯನ್ನು ಪರಿಗಣಿಸದ ಕಾರಣಕ್ಕೇ ಆರ್‌ಜೆಡಿ, ಸಮಾಜವಾದಿ ಪಕ್ಷ, ಜೆಡಿಯು ಮತ್ತು ಬಿಎಸ್‌ಪಿ ಈ ಮಸೂದೆಯನ್ನು ವಿರೋಧಿಸಿದ್ದವು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಈಗಾಗಲೇ ನೀಡಲಾಗುತ್ತಿರುವ ಮೀಸಲಾತಿಯಲ್ಲಿ, ಮಹಿಳಾ ಮೀಸಲಾತಿಯ ಕಾರಣದಿಂದ ಯಾವುದೇ ಬದಲಾವಣೆಯಾಗಬಾರದು ಎಂಬುದು ಈ ಪಕ್ಷಗಳ ಮತ್ತೊಂದು ಪ್ರಮುಖ ಆಗ್ರಹವಾಗಿತ್ತು. ಮಸೂದೆಯ ಈಗಿನ ಸ್ವರೂಪದಲ್ಲಿ ಮೀಸಲಾತಿ ಜಾರಿಗೆ ತಂದರೆ, ಮಹಿಳಾ ಮೀಸಲಾತಿ ಪಡೆಯುವವರಲ್ಲಿ ಮುಂದುವರಿದ ಜಾತಿಗಳ ಮಹಿಳೆಯರೇ ತುಂಬಿಕೊಳ್ಳುತ್ತಾರೆ, ಇತರ ಸಮುದಾಯಗಳ ಮಹಿಳೆಯರಿಗೆ ಪ್ರಾತಿನಿಧ್ಯ ತಪ್ಪಿಹೋಗುತ್ತದೆ ಎಂಬುದು ಈ ಪಕ್ಷಗಳ ಕಳವಳವಾಗಿತ್ತು. ಈವರೆಗೆ ಮಂಡಿಸಲಾಗಿದ್ದ ಮಹಿಳಾ ಮೀಸಲಾತಿ ಮಸೂದೆಯಲ್ಲಿ ಈ ಸ್ವರೂಪದ ಅವಕಾಶಗಳು ಇಲ್ಲದೇ ಇದ್ದ ಕಾರಣದಿಂದಲೇ ಆ ಮಸೂದೆಗಳು ಅನುಮೋದನೆ ಪಡೆಯುವಲ್ಲಿ ವಿಫಲವಾಗಿದ್ದವು.

2008ರಲ್ಲಿ ಯುಪಿಎ ಸರ್ಕಾರ ಮಂಡಿಸಿದ್ದ ಮಸೂದೆಯಲ್ಲಿ ಇಂತಹ ಬೇಡಿಕೆಗಳನ್ನು ಪರಿಗಣಿಸಿರಲಿಲ್ಲ. ಬದಲಿಗೆ ಈಗಾಗಲೇ ಜಾರಿಯಲ್ಲಿರುವ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಿರಿಸಿದ ಒಟ್ಟು ಸ್ಥಾನಗಳಲ್ಲಿ ಅದೇ ಸಮುದಾಯದ ಮಹಿಳೆಯರಿಗೆ ಒಳಮೀಸಲಾತಿ ಕಲ್ಪಿಸಲಾಗಿತ್ತು ಮತ್ತು ಸಾಮಾನ್ಯ ಕ್ಷೇತ್ರಗಳಿಗೆ ಉಳಿದ ಒಟ್ಟು ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಸ್ಥಾನಗಳನ್ನು ಮೀಸಲಿರಿಸಲಾಗಿತ್ತು. ಆ ಮಸೂದೆಯ ಒಳಗೆ ಇತರೆ ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ಕಲ್ಪಿಸಿರಲಿಲ್ಲ. ಈಗಿನ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರವೂ ಯಥಾವತ್ ಸ್ವರೂಪದಲ್ಲಿ ಮಹಿಳಾ ಮೀಸಲಾತಿಯನ್ನು ಈ ಮಸೂದೆಯಲ್ಲಿ ಸೇರಿಸಿದೆ.

ಬೇಡಿಕೆ: ಮಹಿಳಾ ಮೀಸಲಾತಿಯಲ್ಲಿ ಎಸ್‌ಸಿ, ಎಸ್‌ಟಿಗೆ ಒಳಮೀಸಲಾತಿ ನೀಡಿ



• ಆರ್‌ಜೆಡಿ, ಎಸ್‌ಪಿ, ಜೆಡಿಯು, ಬಿಎಸ್‌ಪಿ ಒತ್ತಾಯಿಸಿದ್ದಂತೆ ಮೀಸಲಾತಿ ತಂದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರೆ ಹಿಂದುಳಿದ ವರ್ಗಗಳು ಮತ್ತು ಎಲ್ಲಾ ವರ್ಗದ ಮಹಿಳೆಯರಿಗೆ ಹೆಚ್ಚುವರಿಯಾಗಿ 40 ಸ್ಥಾನಗಳು ದೊರೆಯುತ್ತವೆ

ಮಸೂದೆ: ಎಸ್‌ಸಿ–ಎಸ್‌ಟಿ ಮೀಸಲಾತಿಯಲ್ಲಿ ಮಹಿಳೆಯರಿಗೆ ಒಳಮೀಸಲಾತಿ



• ಮಸೂದೆಯ ಪ್ರಕಾರ ಮೀಸಲಾತಿಯನ್ನು ಜಾರಿಗೆ ತಂದರೆ ಮಹಿಳೆಯರಿಗೆ 181 ಸ್ಥಾನಗಳು ದೊರೆಯುತ್ತವೆ. ಆದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಳಿಗೆ ದೊರೆಯಬಹುದಾಗಿದ್ದ 40ರಷ್ಟು ಹೆಚ್ಚು ಸ್ಥಾನಗಳು ಮುಂದುವರಿದ ಜಾತಿ ಸಮುದಾಯಗಳ ಪಾಲಾಗುತ್ತವೆ

ಆಧಾರ: ಸಂವಿಧಾನ (81ನೇ, 85ನೇ, 108ನೇ ಮತ್ತು 128ನೇ ತಿದ್ದುಪಡಿ) ಮಸೂದೆಗಳು, ಡಿಜಿಟಲ್ ಸಂಸತ್ತಿನ ಆರ್ಕೈವ್‌ಗಳು, ಪಿಟಿಐ

ಪ್ರಜಾವಾಣಿ ಗ್ರಾಫಿಕ್ಸ್: ಶಿಲ್ಪಾ ಕಬ್ಬಿಣಕಂತಿ

ಸಿನಿ ಬಿಟ್ಸ್

ಕತ್ತಲ ಲೋಕಕ್ಕೆ ಕರೆದೊಯ್ದ ಉಪೇಂದ್ರ

ಸ್ಟಾರ್ ಸಿನಿಮಾಗಳಿಗೆ ಬೆಳಕಿನ ಅಭಾವ ಇತ್ತೀಚಿನ ಹೊಸ ಟ್ರೆಂಡ್. ರಿಯಲ್‌ಸ್ಟಾರ್ ಉಪೇಂದ್ರ ಕೂಡ 'ಯುಐ' ಚಿತ್ರದ ಟೀಸರ್ ಮೂಲಕ ಪ್ರೇಕ್ಷಕರನ್ನು ಕತ್ತಲ ಲೋಕಕ್ಕೆ ಕರೆದೊಯ್ದಿದ್ದಾರೆ. ಉಪೇಂದ್ರ ನಟಿಸಿ, ನಿರ್ದೇಶಿಸಿರುವ 'ಯುಐ' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಇಡೀ ಟೀಸರ್‌ನಲ್ಲಿ ಶಬ್ದ, ಕೆಲ ಡೈಲಾಗ್‌ಗಳನ್ನು ಬಿಟ್ಟರೆ ಮಿಕ್ಕೆಲ್ಲವೂ ಕತ್ತಲ ಜಗತ್ತು. ಉದ್ದೇಶಪೂರ್ವಕವಾಗಿಯೇ ಟೀಸರ್‌ನಲ್ಲಿ ಚಿತ್ರತಂಡ ಯಾವ ವಿಷಯವನ್ನೂ ಬಿಟ್ಟುಕೊಟ್ಟಿಲ್ಲ.

'ಇದು ಎಐ ಅಲ್ಲ ಯುಐ ಜಗತ್ತು. ಈ ಟೀಸರ್ ನಿಮ್ಮ ಕಲ್ಪನೆಗಾಗಿ' ಎನ್ನುವ ಉಪೇಂದ್ರ ಮತ್ತೆ ಟೀಸರ್ ಮೂಲಕ ಪ್ರೇಕ್ಷಕರ ತಲೆಗೆ ಹುಳ ಬಿಡುವ ಯತ್ನ ಮಾಡಿದ್ದಾರೆ. ಕೆಲ ದಿನಗಳ ಹಿಂದೆ ಚಿತ್ರದ ಫಸ್ಟ್ ಲುಕ್ ಬಿಡುವುದಾಗಿ ಚಿತ್ರತಂಡ ಘೋಷಿಸಿತ್ತು. ಅದಾದ ಬಳಿಕ ಉಪೇಂದ್ರ ಮತ್ತು ನಿರ್ಮಾಪಕರು ಸಂಭಾಷಣೆ ಮಾಡುವ ವಿಡಿಯೋವನ್ನು ಬಿಟ್ಟು 'ನಾವು ಪ್ರಚಾರ ಮಾಡುವುದಿಲ್ಲ. ಜನರೇ ಒಳ್ಳೆ ಸಿನಿಮಾವನ್ನು ತಾವಾಗಿಯೇ ಪ್ರಚಾರ ಮಾಡುತ್ತಾರೆ' ಎಂಬ ಸಂದೇಶ ನೀಡಿ ಯಾವ ವಿಷಯವನ್ನೂ ಬಿಟ್ಟುಕೊಡದೆ ಹಳೆಯ ಪೋಸ್ಟರ್ ಅನ್ನೇ ಮತ್ತೆ ತೋರಿಸಿದ್ದರು.

ಟೀಸರ್ ಬಿಡುಗಡೆ ಮಾಡಿದ ನಟ ಶಿವರಾಜ್‌ಕುಮಾರ್, ಉಪೇಂದ್ರ ಅವರ ವಿಭಿನ್ನ ಸಾಹಸಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. 'ಉಪೇಂದ್ರ ಯಾವಾಗಲೂ ಭಿನ್ನವಾಗಿದ್ದನ್ನು ಮಾಡುತ್ತಾರೆ. 'ಓಂ' ಸಿನಿಮಾದಲ್ಲಿಯೇ ಅವರ ಕ್ರಿಯಾಶೀಲತೆ ಪರಿಚಯವಾಗಿತ್ತು' ಎಂದರು ಶಿವಣ್ಣ.

ಉಪೇಂದ್ರ ಅವರು ಹಲವು ವರ್ಷಗಳ ಬಳಿಕ ನಿರ್ದೇಶನಕ್ಕೆ ಮರಳಿರುವ ಚಿತ್ರವಿದು. ಕೆ.ಪಿ. ಶ್ರೀಕಾಂತ್ ಮತ್ತು ಜಿ. ಮನೋಹರನ್ ಇದಕ್ಕೆ ಬಂಡವಾಳ ಹೂಡಿದ್ದಾರೆ.



ಶಿವರಾಜ್‌ಕುಮಾರ್, ಉಪೇಂದ್ರ

'ಗರಡಿ'ಮನೆ ಪ್ರವೇಶಿಸಿದ ದರ್ಶನ್

ಯೋಗರಾಜ್ ಭಟ್ ಅವರ 'ಗರಡಿ' ಸಿನಿಮಾದಲ್ಲಿ ನಟ ದರ್ಶನ್ ವಿಶೇಷ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಇದಕ್ಕಾಗಿ ಇತ್ತೀಚೆಗಷ್ಟೇ ವಿಶೇಷ ಪೋಸ್ಟರ್ ಅನ್ನು ಬಿಡುಗಡೆ ಮಾಡಿರುವ ಚಿತ್ರತಂಡ, ನವೆಂಬರ್ 10ಕ್ಕೆ ಚಿತ್ರ ತೆರೆಗೆ ಬರುತ್ತಿರುವುದಾಗಿ ಘೋಷಿಸಿದೆ.

'ವಿಶೇಷ ಪಾತ್ರದಲ್ಲಿ ನಟಿಸಿದ್ದರೂ ತೆರೆಯ ಮೇಲೆ ದರ್ಶನ್ ಕೆಲಕಾಲ ಕಾಣಿಸಿಕೊಳ್ಳುತ್ತಾರೆ. ನಾಯಕನ ಸ್ನೇಹಿತನಾಗಿ ಬರುತ್ತಾರೆ' ಎಂದು ಚಿತ್ರತಂಡದ ಮೂಲಗಳು ತಿಳಿಸಿವೆ.



ಪಾರಂಪರಿಕ ಕ್ರೀಡೆಗಳಲ್ಲಿ ಒಂದಾದ ಕುಸ್ತಿಯನ್ನು ಆಧರಿಸಿದ ಚಿತ್ರವಿದು. ಬಿ.ಸಿ.ಪಾಟೀಲ್ ತಮ್ಮ ಕೌರವ ಪ್ರೊಡಕ್ಷನ್ ಮೂಲಕ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಈ ಹಿಂದೆ 'ಶಿಶಿರ', 'ಚಿಂಗಾರಿ' ಚಿತ್ರಗಳಲ್ಲಿ ನಟಿಸಿದ್ದ ಯಶಸ್ ಸೂರ್ಯ ಕುಸ್ತಿಪಟುವಿನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಖಳನಾಯಕ ರವಿಶಂಕರ್, ಬಿ.ಸಿ.ಪಾಟೀಲ್ ಕೂಡ ಚಿತ್ರದಲ್ಲಿದ್ದಾರೆ. ಯೋಗರಾಜ್ ಭಟ್ ಸಾಹಿತ್ಯವಿರುವ ಈ ಚಿತ್ರದ 'ಹೊಡಿರಲೆ ಹಲಗಿ' ಎಂಬ ಹಾಡು ಈಗಾಗಲೇ ಬಿಡುಗಡೆಗೊಂಡು ಜನಪ್ರಿಯವಾಗಿದೆ. ವಿ.ಹರಿಕೃಷ್ಣ ಸಂಗೀತ, ಎ ಆರ್ ನಿರಂಜನ್ ಬಾಬು ಛಾಯಾಗ್ರಹಣ ಚಿತ್ರಕ್ಕಿದೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ರಾಹುಲ್ ಗಾಂಧಿ ಅವರು ಸುದ್ದಿ ವಾಹಿನಿ ಒಂದಕ್ಕೆ ಸಂದರ್ಶನ ನೀಡುತ್ತಿರುವ ವಿಡಿಯೊ ಒಂದು ಸಾಮಾಜಿಕ ಜಾತಾಣಗಳಲ್ಲಿ ಹರಿದಾಡುತ್ತಿದೆ. 38 ಸೆಕೆಂಡ್‌ಗಳ ಆ ವಿಡಿಯೊದಲ್ಲಿ ರಾಹುಲ್ ಅವರು, 'ನಾವು ಗೆಲ್ಲಬೇಕು ಅಂದರೆ, ಜಾಕೆಟ್ ಮತ್ತು ಷೂಗಳನ್ನು ಬದಲಿಸಬೇಕು' ಎಂದು ಹೇಳುತ್ತಾರೆ. ಆಗ ಪತ್ರಕರ್ತ, 'ಅದು ಹೇಗೆ ಎಂದು ವಿವರಿಸುತ್ತೀರಾ' ಎಂದು ಪ್ರಶ್ನಿಸುತ್ತಾರೆ. ಆಗ ರಾಹುಲ್ ಅವರು ಮೇಲೆ–ಕೆಳಗೆ ನೋಡುತ್ತಾರೆ. ಆದರೆ, ಇದು ತಿರುಚಲಾದ ವಿಡಿಯೊ ಆಗಿದೆ.

'ಇದು 2014ರಲ್ಲಿ ಆಜತಕ್ ನಡೆಸಿದ್ದ ಸಂದರ್ಶನದ ವಿಡಿಯೊ. 26 ನಿಮಿಷದ ಆ ವಿಡಿಯೊದಲ್ಲಿ ರಾಹುಲ್ ಅವರು ಒಮ್ಮೆ, 'ನಾವು ಗೆಲ್ಲಬೇಕು ಅಂದರೆ ರಾಜಕೀಯ ಪಕ್ಷಗಳನ್ನು ಬದಲಿಸಬೇಕು' ಎಂದಿದ್ದಾರೆ. ಮತ್ತೊಂದೆಡೆ, 'ಜಾಕೆಟ್ ಮತ್ತು ಷೂಗಳನ್ನು ಧರಿಸಿಯೇ ಇದ್ದೇನೆ' ಎಂದಿದ್ದಾರೆ. ಈ ಎರಡೂ ವಿಡಿಯೊ ತುಣುಕುಗಳನ್ನು ತೆಗೆದುಕೊಂಡು, 'ನಾವು ಗೆಲ್ಲಬೇಕು ಅಂದರೆ, ಜಾಕೆಟ್ ಮತ್ತು ಷೂಗಳನ್ನು ಬದಲಿಸಬೇಕು' ಎಂದು ವಿಡಿಯೊವನ್ನು ಸೃಷ್ಟಿಸಲಾಗಿದೆ. ಇದು ರಾಹುಲ್ ಗಾಂಧಿ ಅವರನ್ನು ದಡ್ಡ ಎಂದು ಬಿಂಬಿಸಲು ಸೃಷ್ಟಿಸಲಾದ ವಿಡಿಯೊ. ಇದಕ್ಕೂ, ಸಂದರ್ಶನದ ಮೂಲ ವಿಡಿಯೊಗೂ ಬಹಳ ವ್ಯತ್ಯಾಸವಿದೆ' ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ನುಡಿ ಬೆಳಗು

ಕೊಂಕು ಮಾತುಗಳ ನಡುವೆ...

ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ಪ್ರತಿ ವಿಷಯದಲ್ಲೂ ಏನಾದರೊಂದು ಹುಳುಕು ಹುಡುಕಿ ಕೊಂಕಾಡುವ ಸ್ವಭಾವ ಕೆಲವರಿಗೆ ಜನ್ಮಜಾತವಾಗಿ ಬಂದಿರುತ್ತದೆ. ಇವರ ಮಾತು, ವರ್ತನೆಗಳಲ್ಲಿ ಹುಟ್ಟುವ ಕಟುವ್ಯಂಗ್ಯ ಇರಿಯುತ್ತದೆ. ತಮ್ಮ ಮಾತಿನಿಂದ ಇತರರ ಮನಸ್ಸಿಗೆ ಗಾಸಿಯಾಗುತ್ತದೆ ಎಂಬ ಸಣ್ಣ ವಿವೇಚನೆಯೂ ಇವರಿಗೆ ಇರುವುದಿಲ್ಲ. ತಮ್ಮ ವಕ್ರೋಕ್ತಿ ಚುಚ್ಚಲಿ ಎಂಬ ಒಳ ಉದ್ದೇಶ ಇಟ್ಟುಕೊಂಡೇ ಇವರು ಮಾತಾಡುತ್ತಾರೆ. ಈ ಜನರ ಮನವನ್ನು ಸಿಹಿಗೊಳಿಸುವುದು ಸರಿಮಾಡುವುದು ಬಲು ತೊಡಕಿನ ಕೆಲಸ.

ಅನ್ಯರ ತಪ್ಪುಗಳ ಗುರುತಿಸಿ ಹಲ್ಲುಕಿರಿವವನಿಗೆ ಎಂದೂ ತನ್ನೊಳಗಿನ ದೋಷಗಳು ಕಾಣಿಸುವುದಿಲ್ಲ. ಹಾಗೆ ಕಾಣಬಾರದೆಂದೇ ಅವನು ಕುಹಕ ನುಡಿದು ವಿಷಯವನ್ನು ಮರೆಸುತ್ತಾನೆ. ಹೀಗೆ ಕಟಕಿಯಾಡುವುದು ತನ್ನ ಹಿರಿಮೆ, ದೊಡ್ಡಸ್ತಿಕೆ ಮತ್ತು ಜಾಣತನ ಎಂದು ಆತ ಭಾವಿಸುತ್ತಾನೆ. ತಮ್ಮ ಡೊಂಕು ಮಾತುಗಳಿಂದ ಸಂತಸದ ಗಳಿಗೆ ಸೃಷ್ಟಿಸುವ ಹಾಸ್ಯಪ್ರಿಯರೂ ನಮ್ಮ ನಡುವೆ ಇದ್ದಾರೆ. ಇವರ ಮನಸ್ಸಿನಲ್ಲಿ ವಿಷಮತೆ ಇರುವುದಿಲ್ಲ. ಇವರ ಸದುದ್ದೇಶವೇ ಎಲ್ಲೆಡೆ ಖುಷಿ ತುಂಬುವುದಾಗಿರುತ್ತದೆ. ಕೇವಲ ನಗುವಿನ ಉದ್ದೇಶಕ್ಕಾಗಿ ಹಿತವರ ನಡುವೆ ಹುಟ್ಟುವ ಕಟಕಿ ಒಂದು ತರಹದ ಕಚಗುಳಿ ಇದ್ದಂತೆ. ಇವರು ಕಾಲೆಳೆಯುವ ಪರಿಸರದಲ್ಲಿ ಖಾಸಾಗೆಳೆಯರು, ಕುಟುಂಬದವರು, ಪರಿಚಿತರೂ ಇದ್ದರೆ ಅದು ಸಮಸ್ಯೆಯಲ್ಲ.

ತನ್ನನ್ನು ತಾನೇ ಹಂಗಿಸಿಕೊಂಡು ಜಗತ್ತನ್ನು ನಗಿಸಿದ ಚಾರ್ಲಿ ಚಾಪ್ಲಿನ್ ಮಾಡಿದ ವ್ಯಂಗ್ಯ ಇವತ್ತಿಗೂ ಜೀವಂತವಿದೆ. ಪ್ರತಿಯೊಂದು ಘಟನೆಯಲ್ಲೂ ತಿರುಚು ನೋಟವನ್ನು ಹುಗಿದಿಟ್ಟ ಆತ ನಗಿಸುತ್ತಲೇ ಅಳುವ ಕಹಿ ಸತ್ಯಗಳನ್ನು ಜಗತ್ತಿಗೆ ತಿಳಿಸಿದ ಮಹಾ ಕಲಾವಿದ. ಆದರೆ, ಈ ವಕ್ರವಚನ ಪರಿಪಾಲಕರು ಹಾಗಲ್ಲ. ತಮ್ಮ ಮಾತಿನ ಚಾಟಿಗೆ ಉರುಳಿ ಬಿದ್ದವರ ಕಂಡು ಇವರು ಸಂತಸ ಪಡಬಲ್ಲರು. ಕೆಲವೊಮ್ಮೆ ಬೆಲ್ಲದಂತೆ ಮಾತನಾಡುತ್ತಲೇ ಹಿಂದಿನಿಂದ ಇರಿಯಬಲ್ಲರು. ಪುರಂದರದಾಸರು ಇಂಥವರನ್ನು 'ಉಪಕಾರ ತೊಟಕಾದರೂ ಇಲ್ಲದ, ಬಿನ್ನಾಣದ ಮಾತಿಗೆ ಕೊನೆಯಿಲ್ಲದ' ಜನ ಎಂದು ಕರೆಯುತ್ತಾರೆ.

ಈ ವ್ಯಂಗ್ಯೋಕ್ತಿ ಮಂದಿ ಮನದ ಬೇಡಿಕೆಯೇ ವಿಚಿತ್ರ. ಅತ್ತರೆ ನಗಬೇಕಿತ್ತು, ನಕ್ಕರೆ ಅಳಬೇಕಿತ್ತು ಎಂದು ಅಪೇಕ್ಷಿಸುವುದು. ಇಂಥವರ ಬಾಯತುರಿಕೆ ಮಾತಿಗೆ ಮನಸ್ಸು ಮಂಕಾಗುವುದು ಸಹಜ. ಇವರ ಅವಮಾನದ, ಅನುಮಾನದ ನುಡಿಗಳನ್ನೇ ಯಾಕೆ ನಾವು ನಮ್ಮ ಯಶಸ್ಸಿನ ಮೆಟ್ಟಿಲುಗಳಾಗಿ ಮಾಡಿಕೊಳ್ಳಬಾರದು. ಬೇಸರಪಡುವ ಬದಲು ಉಪೇಕ್ಷಿಸಿ ಮುನ್ನಡೆವ ಧೈರ್ಯ ಯಾಕೆ ತೋರಬಾರದು? ಈ ವಕ್ರರ ಕೆಲ ವಾಕ್ಯಗಳು ಕ್ಷಣಕಾಲ ನಮ್ಮ ಮನಸ್ಸನ್ನು ನೋಯಿಸುವಲ್ಲಿ ಯಶಸ್ವಿಯಾದರೂ ಅವೆಂದೂ ನಮ್ಮ ಸಾಧನೆಯನ್ನು ಕಿತ್ತುಕೊಳ್ಳಲಾರವು. ಒಂದು ಚುಚ್ಚು ಮಾತು ನಮ್ಮ ಬಾಯನ್ನು ಮುಚ್ಚಿಸಬಹುದು ಅಷ್ಟೇ ಹೊರತು ನಮ್ಮ ಬದುಕನ್ನು ಕೆಡಿಸುವ ತಾಕತ್ತು ಅವಕ್ಕೆ ಇರುವುದಿಲ್ಲ. ಇತರರ ಕೊಂಕು ನುಡಿಯ ಹರಿತವನ್ನು ಮೊಂಡು ಮಾಡುವ ಶಕ್ತಿ ಇರುವುದೇ ನಮ್ಮ ದಿವ್ಯ ನಿರ್ಲಕ್ಷ್ಯಕ್ಕೆ.

ಹರಿವ ನೀರಿಗೆ ಕಸಕಡ್ಡಿ, ಕಲ್ಲು ಮುಳ್ಳು ಮತ್ತು ಕೊಳಚೆಗಳನ್ನು ಹೊತ್ತು ಸಾಗಿಸುವ ಕರ್ಮ ಯಾವತ್ತೂ ತಪ್ಪಿದ್ದಲ್ಲ. ಇಷ್ಟಕ್ಕೆ ಎಂದೂ ಬೇಸರವಾಗದ ತೊರೆ ಕೊನೆಗೂ ತೆವಳಿ ತನ್ನ ಗುರಿ ತಲುಪುತ್ತದೆ. ನಾವು ಅಷ್ಟೇ. ಜೀವನದಲ್ಲಿ ಕುಹಕಿಗಳಿಂದ ಎದುರಾಗುವ ಅವಮಾನ, ತಿರಸ್ಕಾರ, ಕೊಂಕು ನುಡಿಗಳನ್ನು ಎದುರಿಸುತ್ತಾ ಸಾಧನೆಯ ಶಿಖರ ಹತ್ತಬೇಕು. ಜನ ಜರಿಯುವ ಕೆಲಸ ಮಾಡುತ್ತಿದ್ದರೆ ನಾವು ಸರಿಹೋಗಲು ಅವರು ಹೀಗೆ ಮಾಡುತ್ತಿದ್ದಾರೆಂದು ಪ್ರತಿಯಾಗಿ ಭಾವಿಸುವುದೇ ಒಳಿತಲ್ಲವೇ?

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಸೆಪ್ಟೆಂಬರ್ 20, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಶುಕ್ಲ ಪಂಚಮಿ ಗಂ. 14-17 ನಕ್ಷತ್ರ: ವಿಶಾಖಾ ಗಂ. 14-59 ಯೋಗ: ವಿಷ್ಕಂಭ ಗಂ. 27-05 ಕರಣ: ಬಾಲವ ಗಂ. 14-17, ಕನ್ಯಾ ಮಾಸದ 03 ನೇ ದಿನ, ಮಳೆನಕ್ಷತ್ರ: ಉತ್ತರ ಫಲ್ಗುಣಿ 2. ರಾಹುಕಾಲ : ಮಧ್ಯಾಹ್ನ 12-00 – 01-30, ಸೂರ್ಯೋದಯ : 06-23 ಸೂರ್ಯಾಸ್ತ : 06-25, ಮುಸ್ಲಿಂ ದಿನಾಂಕ : 04 ರಬಿಉಲ್ಲಾವಲ್
ದಿನ ವಿಶೇಷ : ಋಷಿ ಪಂಚಮಿ, ಮೇಳಾ ಪಟ್ - 3 ದಿನಗಳು (ಜಮ್ಮು ಮತ್ತು ಕಾಶ್ಮೀರ)
ಅದೃಷ್ಟ ಸಂಖ್ಯೆ : 5, 11

ಮೇಷ: ವೈವಾಹಿಕ ಜೀವನವು ಸುಖಮಯವಾಗಿ ಸಾಗಲಿದೆ. ಷೇರು ಮಾರಾಟದಿಂದ ಅಧಿಕ ಲಾಭ. ವಿದ್ಯಾರ್ಥಿಗಳಿಗೆ ಗುರಿ ಮುಟ್ಟುವ ವಿಚಾರದಲ್ಲಿ ಅತಿಯಾದ ಪ್ರಯತ್ನ ಅಗತ್ಯ. ಮನರಂಜನೆಗಾಗಿ ಖರ್ಚು ಸಂಭವಿಸುವುದು.

ವೃಷಭ: ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ದೊರೆತು ಮುಂದಿನ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಅವಕಾಶಗಳು ದೊರೆಯುತ್ತವೆ. ಎಲ್ಲಾ ವ್ಯವಹಾರಗಳೂ ಸಾಮಾನ್ಯ ಗತಿಯಲ್ಲಿ ಮುಂದುವರಿಯಲಿದೆ.

ಮಿಥುನ: ಒರಟು ವ್ಯಕ್ತಿತ್ವದಿಂದ ಅಥವಾ ನಿಮ್ಮ ಕಹಿಯ ಮಾತುಗಳಿಂದ ಸಹಭಾಗಿಗೆ ಅಥವಾ ಮಕ್ಕಳಿಗೆ ನೋವಾಗಬಹುದು. ಜಮೀನು ಖರೀದಿ ಅಥವಾ ರಿಯಲ್ ಎಸ್ಟೇಟ್ ವ್ಯವಹಾರಗಳಿಂದ ವರಮಾನ ಹೆಚ್ಚಿಸಿಕೊಳ್ಳಬಹುದು.

ಕರ್ಕಾಟಕ: ಆಡಿದ ಮಾತುಗಳನ್ನು ಉಳಿಸಿಕೊಳ್ಳುವ ವಿಚಾರದಲ್ಲಿ ಪ್ರಯತ್ನವಿರಲಿ. ಸ್ವಂತ ಉದ್ಯೋಗ ನಡೆಸುವವರು ಜವಾಬ್ದಾರಿಗಳನ್ನು ಕಡಿಮೆ ಮಾಡಿಕೊಳ್ಳುವ ಬಗ್ಗೆ ಹೆಚ್ಚಿನ ಗಮನಹರಿಸಿ. ಮಕ್ಕಳ ಬಗ್ಗೆ ಹೆಚ್ಚಿನ ನಿಗಾ ಇರಲಿ.

ಸಿಂಹ: ತರಬೇತಿ ಹೊಂದಿದ ಮರದ ಕೆತ್ತನೆಯ ಕುಶಲಕರ್ಮಿಗಳಿಗೆ ಆದಾಯ ಮತ್ತು ಬೇಡಿಕೆ ಹೆಚ್ಚಲಿದೆ. ಕಾನೂನಿಗೆ ಗೌರವ ಕೊಡುವುದನ್ನು ಮರೆಯದಿರಿ. ಸ್ವಂತ ಉದ್ಯೋಗ ನಡೆಸುವವರ ಹಣಕಾಸಿನ ಸ್ಥಿತಿ ಉತ್ತಮಗೊಳ್ಳಲಿದೆ.

ಕನ್ಯಾ: ಕಾರ್ಖಾನೆಯ ನಿರಂತರತೆಯನ್ನು ಗಮನವಿಟ್ಟುಕೊಳ್ಳುವುದಕ್ಕಾಗಿ ಈಗಿರುವ ವ್ಯವಸ್ಥೆಗೆ ಹೊರತಾಗಿ ಪರ್ಯಾಯ ವ್ಯವಸ್ಥೆಗೆ ತಯಾರಾಗಿರಿ. ಲೇಖನ-ಮಾಲೆಯನ್ನು ಸಿದ್ಧಪಡಿಸುವ ಹಲವು ದಿನದ ಕನಸು ಈಡೇರಲಿದೆ.

ತುಲಾ: ಕುಟುಂಬದ ಹಿರಿಯರ ಆರೋಗ್ಯ ನಷ್ಟದಿಂದಾಗಿ ಆಸ್ಪತ್ರೆಯ ತಿರುಗಾಟದ ಕ್ಲೇಶ ಉಂಟಾಗುವುದು. ಉದ್ಯೋಗದ ಕಾರಣ ಪರಸ್ಥಳದಲ್ಲಿ ವಾಸ ಮಾಡುವ ಅನಿವಾರ್ಯತೆ ಬರಬಹುದು.

ವೃಶ್ಚಿಕ: ಕಚೇರಿಯಲ್ಲಿ ಇಂದಿನ ನಿಮ್ಮ ನಿಸ್ವಾರ್ಥ ಕೆಲಸಗಳಿಂದಾಗಿ ಮುಂದಿನ ದಿನಗಳಲ್ಲಿ ಹೆಚ್ಚಿನ ಲಾಭ ಪಡೆಯುವಿರಿ. ಕಾಗದ ಕಾರ್ಖಾನೆ ಮಾಲೀಕರಿಗೆ ವರಮಾನದಲ್ಲಿ ಗಣನೀಯ ಏರಿಕೆ. ಗೃಹದಲ್ಲಿ ಶಾಂತಿ ಕಾಪಾಡಿ.

ಧನು: ಇತ್ತೀಚಿನ ದಿನದಲ್ಲಿ ಸಂಪಾದನೆಯ ವಿಚಾರದಲ್ಲಿ ವೈರಾಗ್ಯ ಹೊಂದಿರುವ ನೀವು ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಂಡು ಪರಿಶ್ರಮದಿಂದ ದುಡಿದರೆ ಪ್ರಗತಿಯ ಹಾದಿಯನ್ನು ಕಾಣುವಿರಿ. ಮನಸ್ತಾಪ ಬೇಡ.

ಮಕರ: ದೈಹಿಕ ಕೆಲಸವನ್ನು ಮಾಡಿ ದುಡಿಮೆ ಮಾಡುತ್ತಿರುವವರು ದೇಹಕ್ಕೆ ಸ್ವಲ್ಪಮಟ್ಟಿನ ವಿಶ್ರಾಂತಿ ನೀಡಬೇಕಾಗುತ್ತದೆ. ಸ್ನೇಹಪರ ಸ್ವಭಾವದಿಂದಾಗಿ ವೈಯಕ್ತಿಕ ಸ್ಥಾನಮಾನಗಳು ಲಭಿಸುವುದು. ತಪ್ಪುಗಳನ್ನು ಸರಿಪಡಿಸಿಕೊಳ್ಳಿ.

ಕುಂಭ: ಚರ್ಮಸಂಬಂಧ ಅನಾರೋಗ್ಯವು ಕಾಣಿಸಿದಲ್ಲಿ ಆಯುರ್ವೇದದ ಮೊರೆ ಹೋಗುವುದರಿಂದ ಸಮಸ್ಯೆಗೆ ಶಾಶ್ವತವಾಗಿ ಉತ್ತರ ದೊರಕಲಿದೆ. ಕೈ ಬಿಟ್ಟು ಹೋಗಿದ್ದ ಯೋಜನೆ ಪುನಃ ನಿಮ್ಮನ್ನು ಅರಸಿ ಬರುವುದು.

ಮೀನ: ಸರ್ಕಾರಿ ಉದ್ಯೋಗಕ್ಕಾಗಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಪರಿಪೂರ್ಣ ಪ್ರಯತ್ನ ಹಾಕುವುದು ಅಗತ್ಯ. ಹೃದಯಕ್ಕೆ ಸಂಬಂಧಪಟ್ಟ ಸಮಸ್ಯೆಗಳು ಬಾಧಿಸಬಹುದು ಆದ್ದರಿಂದ ಜಾಗ್ರತೆ ವಹಿಸಿರಿ.

ಪದಬಂಧ 5446 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಕೂಡುವ ಲೆಕ್ಕವಿದು (4)
2. ಗತಿಯಲ್ಲಿ ಕೊನೆಗೊಂಡಿರುವ ಮುನ್ನಡೆ (3)
4. ಕಲೆಸಿದ ಗೋಧಿ ಹಿಟ್ಟು (3)
6. ದರ ಹೇಳುತ್ತಲೇ ತೋರಿಸಿದ ಹೊಟ್ಟೆ! (3)
7. ಹೆಸರಿಡುವ ಶಾಸ್ತ್ರ (5)
10. ಕಣದಲ್ಲಿ ಅಗಿರುವ ಲಗ್ನ (3)
11. ಶರ ಬಿದ್ದಿರುವ ಸಮುದ್ರ (3)
13. ವಿಷ್ಣುವಿನ ವಾಹನ (3)
14. ಪರಾಕು ಹೇಳಿದವ ಕೆನ್ನೆಗೆ ನೀಡಿದ ಏಟು (4)

ಮೇಲಿಂದ ಕೆಳಕ್ಕೆ
1. ಕಬ್ಬಿಣದ ಭಾರೀ ಪೆಟ್ಟಿಗೆ (3)
2. ಕೊನೆಗೆ ಚಾರನಿದ್ದಾಗಲೇ ಹರಡುವಿಕೆ (3)
3. ಮನಸ್ಸಿಗೆ ಬಂದಂತೆ ನಡೆಯುವುದು (3)
5. ನಾವೆ ನಡೆಸುವವ ತಿರುಗಿದ್ದಾನಲ್ಲಾ? (3)
6. ಕೆಲಸ ಮಾಡಲು ಬೇಕಾದ ಸಾಧನ (5)
8. ಶರ ಹಿಡಿದಿರುವ ಶೈವ ಭಕ್ತ ತಿರುಗಿದ್ದಾನೆ (3)
9. ಊರೊಳಗೆ ಕಾಣಿಸಿದ ಹಾವು (3)
10. ಕನ್ನಡಿಗರ ಹೆಮ್ಮೆಯ ಭಾಷೆ (3)
12. ಸೊಕ್ಕು ಹೀಗೆ ಬಂದಿದೆ (3)



5445ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1. ಗೊರವಂಕ 3. ಬಾಲರವಿ
5. ವಿಫಲ 6. ಕೆಸರು
8. ಗೈರತ್ತು 9. ಅರ್ಚಕ
10. ರಿವಾಜು 12. ಕಲಹ
14. ಕಡಿವಾಣ 15. ಸೆರೆಮನೆ

ಮೇಲಿಂದ ಕೆಳಕ್ಕೆ:
1. ಗೊರಕೆ 2. ಕವಿ
3. ಬಾಲ 4. ವಿಪತ್ತು
7. ರುದ್ರನಾಟಕ
8. ಗೈರುಹಾಜರಿ
9. ಅಷ್ಟಕ 11. ಜುಲ್ಮಾನೆ
12. ಕಣ 13. ಹಸೆ

ಸುಡೊಕು 5832

6		4	9		7			8
					6		2	
	7	8	2			4		6
7					8		6	
	8		4			7	3	5
		5		7				
4	9		3	8		6		1
						5		
8		7			4			3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5831 ಸುಡೊಕು

9	1	7	3	5	8	6	2	4
8	4	6	9	2	7	5	1	3
2	5	3	4	1	6	9	7	8
5	3	8	1	6	2	7	4	9
4	2	9	7	3	5	1	8	6
6	7	1	8	4	9	2	3	5
3	8	5	6	7	1	4	9	2
7	9	2	5	8	4	3	6	1
1	6	4	2	9	3	8	5	7

ಬುದ್ಧಿ ಹೇಳಿದ್ದೆ: ರಾಜಶೇಖರಾನಂದ ಸ್ವಾಮೀಜಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಉದ್ಯಮಿ ಗೋವಿಂದ ಪೂಜಾರಿಗೆ ಬೈಂದೂರು ಕ್ಷೇತ್ರದಿಂದ ಬಿಜೆಪಿ ಟಿಕೆಟ್ ಕೊಡಿಸುವ ನೆಪದಲ್ಲಿ ನಡೆದಿದೆ ಎನ್ನಲಾದ ವಂಚನೆ ಪ್ರಕರಣಕ್ಕೆ ಸಂಬಂಧಿಸಿದ ಮಾಹಿತಿ ಸಿಕ್ಕಾಗಲೇ ಈ ಪ್ರಕರಣದ ಆರೋಪಿ ಚೈತ್ರಾ ಕುಂದಾಪುರ ಅವರಿಗೆ ಬುದ್ಧಿವಾದ ಹೇಳಿದ್ದೆ ಎಂದು ಇಲ್ಲಿನ ಗುರುಪುರ ವಜ್ರದೇಹಿಮಠದ ರಾಜಶೇಖರಾನಂದ ಸ್ವಾಮೀಜಿ ಹೇಳಿದರು.

ಈ ಪ್ರಕರಣ ಸಂಬಂಧ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿರುವ ಅವರು, 'ಇದರ ಹಿಂದೆ ದೊಡ್ಡ ಷಡ್ಯಂತ್ರ ಇದೆ' ಎಂದು ಆರೋಪಿಸಿದರು.

ಸ್ವಾಮೀಜಿ

'ಹಿಂದೂ ಜಾಗರಣ ವೇದಿಕೆಯ ನಾಯಕರಾಗಿದ್ದ ಸತ್ಯಜಿತ್ ಸುರತ್ಕಲ್ ನನಗೆ ಜುಲೈ 29ರಂದು ಕರೆಮಾಡಿ, 'ಗೋವಿಂದ ಬಾಬು ಪೂಜಾರಿ ಪ್ರಕರಣದಲ್ಲಿ ₹ 1.5 ಕೋಟಿ ಪಡೆದುಕೊಂಡಿದ್ದೀರಿ. ಅದನ್ನು ಕೂಡಲೇ ವಾಪಸ್ ಕೊಡಬೇಕು. ಇಲ್ಲದಿದ್ದರೆ ಅವರು ಸಿಸಿಬಿಗೆ ದೂರು ನೀಡುತ್ತಾರೆ. ನೀವು ಜೈಲಿಗೆ ಹೋಗ-ಬೇಕಾಗುತ್ತದೆ. ತಕ್ಷಣ ಪ್ರಕರಣ ಮುಗಿಸಿಕೊಳ್ಳಿ ಎಂದು ಹೇಳಿದ್ದರು' ಎಂದರು.

'ನಾನು ಇದರಲ್ಲಿ ಭಾಗಿಯಾಗದೇ ಇದ್ದರೂ ನನ್ನ ಹೆಸರು ಹೇಗೆ ಹೇಳಿದಿರಿ ಎಂದು ಸತ್ಯಜಿತ್ ಅವರಿಗೆ ಸಿಟ್ಟಿನಿಂದ ಬೈದಿದ್ದೆ. ಬಳಿಕ ಈ ವಿಚಾರವನ್ನು ಬಜರಂಗ ದಳದ ಶರಣ್ ಪಂಪ್‌ವೆಲ್, ಭುಜಂಗ ಕುಲಾಲ್, ಪುನೀತ್ ಕೊಟ್ಟಾರಿ ಅವರ ಗಮನಕ್ಕೂ ತಂದಿದ್ದೆ' ಎಂದು ಸ್ವಾಮೀಜಿ ತಿಳಿಸಿದರು.

'ಇದಾಗಿ ಸ್ವಲ್ಪ ಹೊತ್ತಿನಲ್ಲಿ ಸತ್ಯಜಿತ್ ಸುರತ್ಕಲ್ ಅವರು ಮತ್ತೆ ಕರೆಮಾಡಿ ಅದು ನೀವಲ್ಲ– ಅಭಿನವ ಹಾಲ ಸ್ವಾಮೀಜಿ ಎಂದು ಸ್ಪಷ್ಟಪಡಿಸಿದ್ದರು. ಆ ಸ್ವಾಮೀಜಿ, ಚಕ್ರವರ್ತಿ ಸೂಲಿಬೆಲೆ ಅವರ ಜೊತೆ ಗುರುತಿಸಿಕೊಂಡವರು. ಹಾಗಾಗಿ ಈ ಕುರಿತು ಚಕ್ರವರ್ತಿ ಸೂಲಿಬೆಲೆ ಅವರಿಗೆ ಕರೆಮಾಡಿ ಮಾತನಾಡಿದ್ದೆ. 'ಸ್ವಾಮೀಜಿ ನನ್ನ ಹೆಸರೇನಾದರೂ ಬಂತಾ' ಎಂದು ಅವರು ಜೋಕ್ ಮಾಡಿದ್ದರು. 'ಈ ವಿಚಾರವನ್ನು ಸಿ.ಟಿ. ರವಿ ಅವರ ಗಮನಕ್ಕೆ ತಂದಿದ್ದೇನೆ. ಈ ಬಗ್ಗೆ ವಿಚಾರ ಮಾಡುವುದಾಗಿ ತಿಳಿಸಿದ್ದಾರೆ ಎಂದು ಹೇಳಿದ್ದರು' ಎಂದು ಸ್ವಾಮೀಜಿ ವಿವರಿಸಿದರು.

'ಚೈತ್ರಾ ಕುಂದಾಪುರ ಪರಿಚಯ ಇದೆಯಾ ಎಂದೂ ಚಕ್ರವರ್ತಿ ಸೂಲಿಬೆಲೆ ವಿಚಾರಿಸಿದ್ದರು. ಚೈತ್ರಾ ಅವರು ಲವ್ ಜಿಹಾದ್ ಕುರಿತಾಗಿ ರಚಿಸಿದ್ದ 'ಪ್ರೇಮ ಪಾಶ' ಪುಸ್ತಕಕ್ಕೆ ಬೆನ್ನುಡಿ ನಾನೇ ಬರೆದಿದ್ದೆ. ಹಾಗಾಗಿ ಅವರ ಸಂಪರ್ಕ ಇದೆ. ಅವರ ಜೊತೆ ನಾನು ಮಾತನಾಡುತ್ತೇನೆ' ಎಂದು ತಿಳಿಸಿದ್ದೆ.

'ಚೈತ್ರಾ ಅವರಿಗೆ ಕರೆಮಾಡಿ, 'ಗೋವಿಂದ ಹೆಸರಿನಲ್ಲಿ ₹ 3.5 ಕೋಟಿ ಗೋಲ್‌ಮಾಲ್ ನಡೆದಿದೆ ಎಂದು ಹೇಳುತ್ತಿದ್ದಾರೆ' ಎಂದಿದ್ದೆ. ಆಗ ಚೈತ್ರಾ, 'ಓಹ್ ಈಗ ಮೂರೂವರೆ ಕೋಟಿಗೆ ಬಂತಾ. ಹಿಂದೆ ಎರಡೂವರೆ ಕೋಟಿ ಇತ್ತು. ಇನ್ನು ಐದು ಆಗುತ್ತದೆ. ಏಳು ಆಗುತ್ತದೆ. ಹೀಗೆ ಹೋಗುತ್ತಿರು ತ್ತದೆ' ಎಂದು ಪ್ರತಿಕ್ರಿಯಿಸಿದ್ದರು. 'ಹೆಚ್ಚು ಕಡಿಮೆ ಆದರೆ ಸಂಘಟನೆಗೆ ಕೆಟ್ಟ ಹೆಸರು ಬರುತ್ತದೆ. ಯಾರ್‍ಯಾರದೋ ಹೆಸರು ಇದರಲ್ಲಿ ಥಳಕು ಹಾಕಿಕೊಂಡಿದೆ' ಎಂದು ಆಕೆಗೆ ಹೇಳಿದ್ದೆ. ಆಗ ಚೈತ್ರಾ, 'ಇದರಲ್ಲಿ ನನ್ನ ಪಾತ್ರ ಇಲ್ಲ. ಗೋವಿಂದ ಬಾಬು ಪೂಜಾರಿ ಬಡವರಿಗೆ ಮನೆ ಕಟ್ಟಿ-ಕೊಡುತ್ತಾರೆ. ಅದಕ್ಕೊಬ್ಬರು ಸ್ವಾಮೀಜಿ ಬೇಕು ಎಂದು ಹೇಳಿದ್ದರು. ಆಗ ನಾನು ಅಭಿನವ ಹಾಲ ಸ್ವಾಮೀಜಿ ಅವರನ್ನು ಪರಿಚಯ ಮಾಡಿಕೊಟ್ಟಿದ್ದೇನೆ' ಎಂದು ಪ್ರತಿಕ್ರಿಯಿಸಿದ್ದರು' ಎಂದರು.

'ಅಭಿನವ ಹಾಲ ಸ್ವಾಮೀಜಿಗೆ ಕರೆ ಮಾಡಿದರೆ ನಾನೂ ಆರೋಪಿ ಸ್ಥಾನದಲ್ಲಿ ಇರಬೇಕಾಗುತ್ತದೆ ಎಂಬ ಕಾರಣಕ್ಕೆ ಅವರಿಗೆ ಕರೆ ಮಾಡಿಲ್ಲ' ಎಂದರು.

'ಈ ವಿಷಯದಲ್ಲಿ ಐ.ಟಿ ಸೆಲ್‌ಗೆ ಚೈತ್ರಾ ಪತ್ರ ಬರೆದಿದ್ದಾರೆ. ಇದರಲ್ಲಿ ನನ್ನ ಪಾತ್ರ ಎಳ್ಳಿನಿತೂ ಇಲ್ಲ. ನನ್ನ ಹೆಸರು ಬಂದಿದ್ದಕ್ಕೆ ಸ್ಪಷ್ಟನೆ ಕೊಡುತ್ತಿದ್ದೇನೆ' ಎಂದರು.

'ವಂಚನೆ ನಡೆದು ಈಗಾಗಲೇ ಏಳೆಂಟು ತಿಂಗಳು ಕಳೆದಿವೆ. ತನಿಖೆಯಲ್ಲಿ ಮೇಲ್ನೋಟಕ್ಕೆ ತಿಳಿದುಬಂದ ವಿಚಾರಗಳನ್ನು ಸಿಸಿಬಿ ಅಧಿಕಾರಿಗಳು ಬಹಿರಂಗಪಡಿಸ-ಬೇಕು. ಊಹಾಪೋಹಗಳಿಗೆ ಎಡೆ-ಮಾಡಿಕೊಟ್ಟರೆ ಸಮಾಜಕ್ಕೆ ತಪ್ಪು ಸಂದೇಶ ಹೋಗುತ್ತದೆ. ನಾವು ನಡೆದಾಡುವುದೂ ಕಷ್ಟ ಆಗುತ್ತದೆ. ಅಂತಹ ಸಂದರ್ಭ ಸೃಷ್ಟಿಯಾಗಲು ಅವಕಾಶ ಕೊಡಬಾರದು' ಎಂದು ಅವರು ಆಗ್ರಹಿಸಿದರು.

ಕಡೂರಿನ ಮನೆಗೆ ಗಗನ್ ಕರೆತಂದಿದ್ದ ಸಿಸಿಬಿ ಪೊಲೀಸರು

ಸಿಸಿಬಿ ಪೊಲೀಸರಿಂದ ಸ್ಥಳ ಮಹಜರು

ಚಿಕ್ಕಮಗಳೂರು: ಉದ್ಯಮಿ ಗೋವಿಂದ ಬಾಬು ಪೂಜಾರಿಗೆ ವಂಚನೆ ಪ್ರಕರಣದ ಆರೋಪಿ ಗಗನ್ ಜತೆ ಮಂಗಳವಾರ ಚಿಕ್ಕಮಗಳೂರು ಮತ್ತು ಕಡೂರಿಗೆ ಬಂದಿದ್ದ ಸಿಸಿಬಿ ಪೊಲೀಸರು ಸ್ಥಳ ಮಹಜರು ನಡೆಸಿದರು.

ನಗರದ ಪ್ರವಾಸಿ ಮಂದಿರ, ಎಪಿಎಂಸಿ ಆವರಣ, ಕಡೂರಿನಲ್ಲಿನ ಗಗನ್ ನಿವಾಸದಲ್ಲಿ ಮಹಜರು ನಡೆಸಿದರು. ಚಿಕ್ಕಮಗಳೂರು ಪ್ರವಾಸಿ ಮಂದಿರದಲ್ಲಿ ಗೋವಿಂದ ಬಾಬು ಪೂಜಾರಿ ಜತೆ ಗಗನ್ ಮಾತುಕತೆ ಮತ್ತು ಹಣದ ವ್ಯವಹಾರ ನಡೆಸಿದ್ದರು ಎಂಬ ಆರೋಪವಿದ್ದು, ಯಾವ ಕೊಠಡಿಯಲ್ಲಿ ಈ ವ್ಯಹವಾರ ನಡೆಯಿತು ಎಂಬ ಮಾಹಿತಿಯನ್ನು ಗಗನ್ ಮತ್ತು ಗೋವಿಂದ ಬಾಬು ಪೂಜಾರಿ ಅವರಿಂದ ಅಧಿಕಾರಿಗಳು ಪ್ರತ್ಯೇಕವಾಗಿ ಪಡೆದುಕೊಂಡರು.

ನಂತರ ಕಡೂರಿಗೆ ಗಗನ್‌ನನ್ನು ಕರೆದೊಯ್ದ ಸಿಸಿಬಿ ಪೊಲೀಸರು, ಸುಭಾಷ್ ನಗರದ ಅರಣ್ಯ ಇಲಾಖೆ ಕಚೇರಿ ಬಳಿಯಿರುವ ಅವರ ಮನೆಯಲ್ಲಿ ದಾಖಲೆಗಳನ್ನು ಪರಿಶೀಲಿಸಿದರು. ದೇವರಾಜ ಅರಸು ರಸ್ತೆಯಲ್ಲಿರುವ ಎಚ್‌ಡಿಎಫ್‌ಸಿ ಬ್ಯಾಂಕಿಗೆ ತೆರಳಿ ಗಗನ್ ಖಾತೆಯಲ್ಲಿ ನಡೆದಿರುವ ವ್ಯವಹಾರದ ಮಾಹಿತಿ ಪಡೆದುಕೊಂಡರು. ಆರೋಪಿಯನ್ನು ಮತ್ತೆ ಬೆಂಗಳೂರಿಗೆ ಕರೆದೊಯ್ದರು.

'ಚೈತ್ರಾ ಬಿಜೆಪಿ, ಆರ್‌ಎಸ್‌ಎಸ್ ಬೇನಾಮಿ'

ಎಂ. ಲಕ್ಷ್ಮಣ

ಮೈಸೂರು: 'ಉದ್ಯಮಿಯೊಬ್ಬರಿಗೆ ಬಿಜೆಪಿ ಟಿಕೆಟ್ ಕೊಡಿಸುವುದಾಗಿ ಹೇಳಿ ₹ 5 ಕೋಟಿ ವಂಚಿಸಿರುವ ಪ್ರಕರಣದ ಪ್ರಮುಖ ಆರೋಪಿ ಚೈತ್ರಾ ಕುಂದಾಪುರ, ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ ಬೇನಾಮಿ' ಎಂದು ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ ಆರೋಪಿಸಿದರು.

'ಅವರು ಯಾರ್‍ಯಾರ ಬಳಿ ಹಣ ಪಡೆದಿದ್ದಾರೆ, ಯಾರಿಗೆಲ್ಲ ಹೋಗಿದೆ ಎನ್ನುವುದನ್ನು ಸಿಸಿಬಿ ಪೊಲೀಸರು ಇನ್ನೆರಡು ದಿನಗಳಲ್ಲಿ ಬಹಿರಂಗಪಡಿ ಸಲಿದ್ದಾರೆ' ಎಂದು ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದರು.

'ಒಟ್ಟು 17 ಜನರು ಮೋಸ ಹೋಗಿದ್ದಾರೆ. 23 ಜನಕ್ಕೆ ಟಿಕೆಟ್ ಕೊಡಿಸಿ ಅವರಿಂದ ಹಣ ಪಡೆದಿದ್ದಾರೆ. ₹ 185 ಕೋಟಿಯ ವ್ಯವಹಾರ ನಡೆದಿದೆ. ಚೈತ್ರಾ ಕುಂದಾಪುರ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಹಿಂದೆ ಗೃಹ ಸಚಿವರಾಗಿದ್ದ ಆರಗ ಜ್ಞಾನೇಂದ್ರ ಜೊತೆ ನೇರ ಸಂಪರ್ಕ ಹೊಂದಿದ್ದಾರೆ' ಎಂದು ದೂರಿದರು.

'ಮೈಸೂರು ಭಾಗದಲ್ಲೂ ಇಬ್ಬರು ಹಣ ನೀಡಿ ಕಳೆದು-ಕೊಂಡಿದ್ದಾರೆ. 9 ಜನರ ತಂಡದಿಂದ ವಂಚನೆಯ ಕೃತ್ಯ ನಡೆದಿದೆ. ಇವರೆಲ್ಲಾ ಬಿಜೆಪಿ ಹಾಗೂ ಆರ್‌ಎಸ್‌ಎಸ್ ಕಾರ್ಯಕರ್ತರು. ಸತ್ಯ ಹರಿಶ್ಚಂದ್ರನ ಮೊಮ್ಮಕ್ಕಳು ಎಂದು ಹೇಳುವ ಬಿಜೆಪಿಯವರ ಬಣ್ಣ ಈ ಪ್ರಕರಣದಲ್ಲಿ ಬಯಲಾಗಿದೆ' ಎಂದು ಆರೋಪಿಸಿದರು.

'ಪಿಎಸ್‌ಐ ನೇಮಕಾತಿಗೆ ಸಂಬಂಧಿಸಿದ ಹಗರಣಕ್ಕೂ ಚೈತ್ರಾಗೂ ಸಂಬಂಧವಿದೆಯೇ ಎನ್ನುವುದು ತನಿಖೆಯಾಗಬೇಕು. ಬಿಜೆಪಿಯ ಮುಖಂಡ ಸಿ.ಟಿ. ರವಿ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಭಾಷಣಕರ ಚಕ್ರವರ್ತಿ ಸೂಲಿಬೆಲೆ ಜೊತೆ ಚೈತ್ರಾ ಸಂಬಂಧವೇನು ಎನ್ನುವುದನ್ನೂ ಸ್ಪಷ್ಟಪಡಿಸಬೇಕು' ಎಂದು ಅವರು ಹೇಳಿದರು.

'ಚೈತ್ರಾ ಪಿಎಸ್‌ಐ ಹಾಗೂ ನಾಲ್ಕಕ್ಕೂ ಹೆಚ್ಚು ಹಗರಣದಲ್ಲಿ ಭಾಗಿಯಾಗಿರುವ ಬಗ್ಗೆ ಮಾಹಿತಿ ಇದೆ. ಆಕೆಗೆ ಜೈಲಿನಲ್ಲಿರುವ ಕೆಲವರೊಂದಿಗೆ ಸಂಪರ್ಕವಿದೆ. ಈ ಬಗ್ಗೆ ನಮ್ಮ ಸರ್ಕಾರ ಪ್ರಾಮಾಣಿಕ ತನಿಖೆ ನಡೆಸುತ್ತದೆ' ಎಂದರು

ಚೈತ್ರಾ ವಿರುದ್ಧ ಮತ್ತೊಂದು ವಂಚನೆ ಪ್ರಕರಣ ದಾಖಲು

ಚೈತ್ರಾ ಕುಂದಾಪುರ

ಬ್ರಹ್ಮಾವರ (ಉಡುಪಿ): ಬಟ್ಟೆ ಅಂಗಡಿ ಹಾಕಿಕೊಡುವುದಾಗಿ ನಂಬಿಸಿ ₹5 ಲಕ್ಷ ಪಡೆದು ವಂಚಿಸಿದ ಆರೋಪದ ಮೇಲೆ ಚೈತ್ರಾ ಕುಂದಾಪುರ ವಿರುದ್ಧ ತಾಲ್ಲೂಕಿನ ಕೋಟ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೋಡಿ ಗ್ರಾಮದ ಸುದಿನ ಬಚ್ಚ ಪೂಜಾರಿ (33) ಎಂಬುವರು ದೂರು ನೀಡಿದ್ದು, ಚೈತ್ರಾ ಕುಂದಾಪುರ ವಿರುದ್ಧ ಪ್ರಕರಣ ದಾಖಲಾಗಿದೆ. 506 (ಕ್ರಿಮಿನಲ್ ಬೆದರಿಕೆ), 420 (ವಂಚನೆ), 417 (ಮೋಸ) ಸೆಕ್ಷನ್ ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಕರಣದ ವಿವರ:

'2015ರಲ್ಲಿ ಪರಿಚಯವಾದ ಚೈತ್ರಾ ಬಿಜೆಪಿಯಲ್ಲಿ ಉನ್ನತ ಸ್ಥಾನದಲ್ಲಿರುವ ಸಚಿವರು, ಶಾಸಕರು ತಮ್ಮೊಂದಿಗೆ ನಿಕಟ ಸಂಪರ್ಕದಲ್ಲಿದ್ದಾರೆ. ಹಿಂದುತ್ವ ಪರವಾದ ಕಾರ್ಯಕ್ರಮಗಳಿಗೆ ಬಳಕೆಯಾಗುವ ಕೇಸರಿ ಶಾಲು, ವಸ್ತ್ರ, ಬಾವುಟ, ಬ್ಯಾನರ್, ಬಂಟಿಂಗ್ಸ್ ಮಳಿಗೆ ತೆರೆಯಲು ಸಹಾಯ ಮಾಡುತ್ತೇನೆ ಎಂದು ನಂಬಿಸಿದ್ದರು.

ಉಡುಪಿ ಹಾಗೂ ಕೋಟದಲ್ಲಿ ಬಟ್ಟೆ ಅಂಗಡಿಗಳನ್ನು ತೆರೆಯಲು ನೆರವು ನೀಡುವುದಾಗಿ ತಿಳಿಸಿ 2018ರಿಂದ 2022ರವರೆಗೆ ಹಂತ ಹಂತವಾಗಿ ₹ 5 ಲಕ್ಷ ಪಡೆದಿದ್ದಾರೆ. ಚೈತ್ರಾ ನಡೆಯ ಬಗ್ಗೆ ಅನುಮಾನಗೊಂಡು ಬಟ್ಟೆ ಅಂಗಡಿ ಹಾಕಿಕೊಡುವಂತೆ ಪಟ್ಟು ಹಿಡಿದಾಗ ಅತ್ಯಾಚಾರ ಪ್ರಕರಣ ದಾಖಲಿಸುವುದಾಗಿ, ಗೂಂಡಾಗಳಿಂದ ಕೊಲೆ ಮಾಡಿಸುವುದಾಗಿ ಬೆದರಿಕೆ ಹಾಕಿದ್ದಾರೆ' ಎಂದು ಸುದಿನ ದೂರಿನಲ್ಲಿ ವಿವರಿಸಿದ್ದಾರೆ.

'ರಾಜಕಾರಣಿಗಳ ಸಂಗ–ಅಭಿಮಾನ ಭಂಗ'

ಹೂವಿನಹಡಗಲಿ (ವಿಜಯನಗರ ಜಿಲ್ಲೆ): 'ತಾಲ್ಲೂಕಿನ ಹಿರೇಹಡಗಲಿಯ ಅಭಿನವ ಹಾಲವೀರಪ್ಪ ಸ್ವಾಮೀಜಿ ಅವರು ರಾಜಕಾರಣಿಗಳ ಸಂಗ ಮಾಡಿದ್ದರಿಂದ 10 ರಿಂದ 12 ವರ್ಷಗಳಲ್ಲಿ ಜೀವನಶೈಲಿ ಬದಲಾಗಿತ್ತು. ಅವರ ಬಂಧನದಿಂದ ಮಠದ ಒಟ್ಟಾರೆ ಅಭಿಮಾನಕ್ಕೆ ಭಂಗವಾಗಿದೆ' ಎಂದು ಭಕ್ತರು ಬೇಸರ ವ್ಯಕ್ತಪಡಿಸಿದ್ದಾರೆ.

'ಹಿರೇಹಡಗಲಿ ಹಾಲಸ್ವಾಮಿ ಮಠ ವಿಶಿಷ್ಟ ಧಾರ್ಮಿಕ ಪರಂಪರೆಯನ್ನು ಹೊಂದಿದೆ. ಮಠದ ಜಾತ್ಯತೀತ, ಧರ್ಮಾತೀತ ತತ್ವಕ್ಕೆ ವಿರುದ್ಧವಾಗಿ ಸ್ವಾಮೀಜಿ ಬೇರೆ ಬೇರೆ ಸಂಘಟನೆ ಗಳಲ್ಲಿ ಗುರುತಿಸಿಕೊಂಡಿದ್ದರು. ಕಾವಿ ಬಟ್ಟೆ ದುರ್ಬಳಕೆ ಮಾಡಿಕೊಂಡು ರಾಜಕೀಯ ನಾಯಕರ ನಂಟು ಬೆಳೆಸಿದ್ದೇ ಈಗಿನ ಸ್ಥಿತಿಗೆ ಕಾರಣ' ಎಂದು ಸ್ಥಳೀಯರು ತಿಳಿಸಿದರು.

'ವಿಧಾನಸಭೆ ಚುನಾವಣೆಗೆ ಮುನ್ನ ದಿನಗಳಲ್ಲಿ ಉದ್ಯಮಿ ಗೋವಿಂದಬಾಬು ಪೂಜಾರಿ, ಪ್ರಮುಖ ಆರೋಪಿ ಚೈತ್ರಾ ಕುಂದಾಪುರ ಹಿರೇಹಡಗಲಿ ಹಾಲಸ್ವಾಮಿ ಮಠಕ್ಕೆ ಭೇಟಿ ನೀಡಿ ಹಾಲವೀರಪ್ಪ ಸ್ವಾಮೀಜಿ ಜತೆ ಮಾತುಕತೆ ನಡೆಸಿದ್ದಾರೆ. ಇಲ್ಲಿನ ಮಠದಲ್ಲೇ ಹಣದ ವ್ಯವಹಾರ ನಡೆದಿರಬಹುದು' ಎಂದು ಸ್ಥಳೀಯರು ಶಂಕಿಸುತ್ತಾರೆ.

ವಂಚನೆ ಪ್ರಕರಣ ದಾಖಲಾದ ಬಳಿಕ ಸಿಸಿಬಿ ಪೊಲೀಸರು ಹಿರೇಹಡಗಲಿಗೆ ಭೇಟಿ ನೀಡಿ, ಆಸ್ತಿ ಮತ್ತು ಇನ್ನಿತರ ವಿವರ ಸಂಗ್ರಹಿಸಿದ್ದಾರೆ. ವಿಚಾರಣೆಗಾಗಿ ಅವರನ್ನು ಹಿರೇಹಡಗಲಿಗೆ ಕರೆತರುವ ಸಾಧ್ಯತೆ ಇದೆ.

ಹಿರೇಹಡಗಲಿ ಮಠಕ್ಕೆ ಬಂದ ಉದ್ಯಮಿ ಗೋವಿಂದಬಾಬು ಪೂಜಾರಿ ಅವರನ್ನು ಹಾಲವೀರಪ್ಪ ಸ್ವಾಮೀಜಿ ಆಶೀರ್ವದಿಸಿದ ಕ್ಷಣ

ಕಾವೇರಿ: ನೀರು ಬಿಡುಗಡೆಗೆ ಆಕ್ರೋಶ

ಪ್ರಜಾವಾಣಿ ವಾರ್ತೆ

ಮಂಡ್ಯ: ತಮಿಳುನಾಡಿಗೆ ನಿತ್ಯ 5ಸಾವಿರ ಕ್ಯೂಸೆಕ್ ನೀರು ಹರಿಸಬೇಕು ಎಂದು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ (ಸಿಡಬ್ಲ್ಯುಎಂಎ) ಆದೇಶವನ್ನು ಸೋಮವಾರ ರಾತ್ರಿಯಿಂದಲೇ ಪಾಲಿಸಲಾಗುತ್ತಿದೆ. ಇದು ರೈತರ ಆಕ್ರೋಶಕ್ಕೆ ಕಾರಣವಾಗಿದೆ.

ಸಿಡಬ್ಲ್ಯುಎಂಎ ಆದೇಶ ಪಾಲನೆ ಮಾಡಿರುವ ರಾಜ್ಯ ಸರ್ಕಾರ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯಗಳಿಂದ ನೀರು ಹರಿಸಿದೆ. ಮಂಗಳವಾರ ಬೆಳಿಗ್ಗೆ 8ಕ್ಕೆ ಬಿಡುಗಡೆ ಮಾಡಿರುವ ಮಾಹಿತಿ ಅನ್ವಯ ಕೆಆರ್‌ಎಸ್ ಜಲಾಶಯದಿಂದ 2,171 ಕ್ಯೂಸೆಕ್, ಕಬಿನಿ ಜಲಾಶಯದಿಂದ 1,663 ಕ್ಯೂಸೆಕ್ ನೀರನ್ನು ನದಿಗೆ ಹರಿಸುತ್ತಿದ್ದು, ಅದು ತಮಿಳುನಾಡು ಸೇರುತ್ತಿದೆ.

ಜೊತೆಗೆ ಕಳೆದೆರಡು ದಿನಗಳಿಂದ ಬೆಂಗಳೂರು, ಕನಕಪುರ ಭಾಗದಲ್ಲಿ ಉತ್ತಮ ಮಳೆಯಾಗಿದ್ದು ಅಲ್ಲಿಯ ನೀರು ಕೂಡ ತಮಿಳುನಾಡಿಗೆ ಹರಿಯುತ್ತಿದ್ದು ಒಟ್ಟಾರೆ ಬಿಳಿಗುಂಡ್ಲು ಜಲಾಶಯಕ್ಕೆ 5ಸಾವಿರ ಕ್ಯೂಸೆಕ್ ನೀರು ಹರಿದು ಹೋಗುತ್ತಿದೆ ಎಂದು ನಿಗಮದ ಮೂಲಗಳು ತಿಳಿಸಿವೆ. ಸದ್ಯ ಕೆಆರ್‌ಎಸ್ ಜಲಾಶಯಕ್ಕೆ 7,007 ಕ್ಯೂಸೆಕ್ ಒಳಹರಿವು, 7,735 ಕ್ಯೂಸೆಕ್ ಹೊರಹರಿವು ಇದೆ.

ಬೀದಿಗಿಳಿದು ಹೋರಾಟ: ತಮಿಳುನಾಡಿಗೆ ಕಾವೇರಿ ನೀರು ಹರಿಸಲಾಗುತ್ತಿದೆ ಎಂಬ ವಿಷಯ ತಿಳಿಯುತ್ತಿದ್ದಂತೆ ವಿವಿಧ ಸಂಘಟನೆಗಳ ಮುಖಂಡರು ಮಂಗಳವಾರ ಬೀದಿಗಿಳಿದು ಹೋರಾಟ ನಡೆಸಿದರು.

ನೀರು ಖಾಲಿಯಾಗುತ್ತದೆ: 'ಸಿಡಬ್ಲ್ಯುಎಂಎ ಆದೇಶ ಪಾಲನೆ ಮಾಡಿದರೆ ಜಲಾಶಯಗಳಲ್ಲಿ ನೀರು ಖಾಲಿಯಾಗುತ್ತದೆ. ಬೆಂಗಳೂರು ಜನರೂ ನೀರಿನ ಕೊರತೆ ಎದುರಿಸಬೇಕಾಗುತ್ತಿದೆ. ಹೀಗಾಗಿ ನೀರು ಹರಿಸದಿರಲು ಸರ್ಕಾರ ದೃಢ ನಿರ್ಧಾರ ಕೈಗೊಳ್ಳಬೇಕು' ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ಒತ್ತಾಯಿಸಿದರು.

'ಸುಪ್ರೀಂ ಕೋರ್ಟ್ ಕೂಡ ಸಿಡಬ್ಲ್ಯುಎಂಎ ಆದೇಶ ಎತ್ತಿ ಹಿಡಿಯುವ ಆತಂಕವಿದ್ದು ಕೋರ್ಟ್‌ಗೂ ವಾಸ್ತವ ಸ್ಥಿತಿ ಮನವರಿಕೆ ಮಾಡಬೇಕು' ಎಂದರು.

ಮಂಡ್ಯದ ಜೆಸಿ ವೃತ್ತದಲ್ಲಿ ರೈತ ಸಂಘದ ಸದಸ್ಯರು ಕತ್ತೆಗಳ ಮೆರವಣಿಗೆ ನಡೆಸಿದರು

'ನೀರು ಬಿಟ್ಟಿಲ್ಲ'

ನೀರು ಬಿಡುಗಡೆ ಕುರಿತು ಪ್ರತಿಕ್ರಿಯೆ ನೀಡಿದ ಕೃಷಿ ಸಚಿವ ಚಲುವ ರಾಯಸ್ವಾಮಿ, 'ತಮಿಳುನಾಡಿಗೆ ಮಳೆ ನೀರು ಹರಿದು ಹೋಗುತ್ತಿರಬಹುದು, ಜಲಾಶಯಗಳಿಂದ ನೀರು ಹರಿಸಿಲ್ಲ' ಎಂದರು.

'ಪ್ರಾಧಿಕಾರದ ಆದೇಶದಿಂದ ನಮಗೆ ಹಿನ್ನಡೆಯಾಗಿದೆ. ಬುಧವಾರ ಉಪ ಮುಖ್ಯಮಂತ್ರಿ ಜೊತೆ ದೆಹಲಿಗೆ ತೆರಳುತ್ತಿದ್ದು, ಅವಕಾಶ ಸಿಕ್ಕರೆ ಪ್ರಧಾನಿ ಹಾಗೂ ಕೇಂದ್ರ ಜಲಸಂಪನ್ಮೂಲ ಸಚಿವರನ್ನು ಭೇಟಿಯಾಗುತ್ತೇವೆ' ಎಂದರು.

ಮುಖ್ಯಮಂತ್ರಿ ಜತೆ ಡಿಸಿಎಂ ಚರ್ಚೆ

ಬೆಂಗಳೂರು: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮಂಗಳವಾರ ಮಧ್ಯಾಹ್ನ ಭೇಟಿಮಾಡಿ ಕಾವೇರಿ ನದಿ ನೀರು ಬಿಡುಗಡೆಗೆ ಸಂಬಂಧಿಸಿದ ಸಮಸ್ಯೆ ಪರಿಹಾರಕ್ಕೆ ಕೈಗೊಳ್ಳಬೇಕಿರುವ ಕ್ರಮಗಳ ಕುರಿತು ಚರ್ಚಿಸಿದರು.

ಕಾವೇರಿ ನದಿಯಿಂದ ನೀರು ಹರಿಸುವಂತೆ ತಮಿಳುನಾಡು ಸರ್ಕಾರ ಇಟ್ಟಿರುವ ಬೇಡಿಕೆ ಕುರಿತು ದೆಹಲಿಯಲ್ಲಿ ಬುಧವಾರ ಸಭೆ ನಡೆಯಲಿದೆ. ಸಂಸದರು, ಹಿರಿಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಲಿದ್ದಾರೆ. ದೆಹಲಿಯ ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳ ಕುರಿತು ಕಾರ್ಯಸೂಚಿಯನ್ನು ಅಂತಿಮಗೊಳಿಸುವುದಕ್ಕಾಗಿ ಶಿವಕುಮಾರ್ ಅವರು ಸಿದ್ದರಾಮಯ್ಯ ಅವರನ್ನು ಭೇಟಿಮಾಡಿದ್ದರು ಎಂದು ಮೂಲಗಳು ತಿಳಿಸಿವೆ.

'ನೀರು ಬಿಟ್ಟ ಮೇಲೆ ವಾದ ಮಾಡಲು ಏನಿದೆ?'

ಬೆಂಗಳೂರು: ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶದಂತೆ ತಮಿಳುನಾಡಿಗೆ ನೀರು ಹರಿಸಿದ ಮೇಲೆ ಸುಪ್ರೀಂಕೋರ್ಟ್‌ನಲ್ಲಿ ವಾದ ಮಾಡಲು ಏನಿದೆ ಎಂದು ಶಾಸಕ ಬಸವರಾಜ ಬೊಮ್ಮಾಯಿ ಪ್ರಶ್ನಿಸಿದ್ದಾರೆ.

ಕಾವೇರಿ ವಿಚಾರದಲ್ಲಿ ರಾಜ್ಯ ಸರ್ಕಾರ ಮೇಲಿಂದ ಮೇಲೆ ತಪ್ಪು ಮಾಡುತ್ತಿದೆ. ಸೆ.12ರ ನಂತರ ನೀರು ಹರಿಸಲು ಆಗುವುದಿಲ್ಲ ಎಂದು ಸುಪ್ರೀಂಕೋರ್ಟ್‌ಗೆ ಅಫಿಡವಿಟ್ ಹಾಕಿದೆ. ಕೋರ್ಟ್ ಮುಂದೆಯೂ ಸುಳ್ಳು ಹೇಳುತ್ತಿದೆ ಎಂದು ಟೀಕಿಸಿದ್ದಾರೆ.

'ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ನಾನು ಇಕ್ಕಟ್ಟಿಗೆ ಸಿಲುಕಿಸಿದ್ದೇನೆ ಎಂದು ಹೇಳಿದ್ದಾರೆ. ಅದರ ಅಗತ್ಯ ನನಗಿಲ್ಲ. ರಾಜ್ಯದ ಜನರ ಹಿತದೃಷ್ಟಿಯಿಂದ ಸಲಹೆ ನೀಡಿದ್ದೆ. ಸಲಹೆ ಸ್ವೀಕರಿಸಲು ಅವರು ಸಿದ್ಧರಿಲ್ಲ. ಸರ್ಕಾರದ ನಡೆಯೇ ರಾಜ್ಯದ ರೈತರು, ಕಾವೇರಿ ಮಕ್ಕಳನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ಅವರು ವಕೀಲರ ಮಾತಿನಂತೆ ನಡೆಯುತ್ತಿದ್ದಾರೆ. ಸರ್ಕಾರ ನಡೆಸುವವರಿಗೆ ಜವಾಬ್ದಾರಿ, ಅರಿವು ಇರಬೇಕು' ಎಂದಿದ್ದಾರೆ.

'ಈಗ ಪ್ರಧಾನಿ ಬಳಿ ಹೋಗುವುದರಲ್ಲಿ ಅರ್ಥವಿಲ್ಲ. 1990ಕ್ಕೂ ಮೊದಲೇ ಈ ವಿಚಾರ ಪ್ರಧಾನಿ ಬಳಿ ಚರ್ಚೆಯಾಗಿದೆ. ರಾಜ್ಯದ ಜನರ ದಾರಿ ತಪ್ಪಿಸಲು ಪ್ರಧಾನಿ ಬಳಿ ನಿಯೋಗ ತೆಗೆದುಕೊಂಡು ಹೋಗುವುದಾಗಿ ಹೇಳುತ್ತಿದ್ದಾರೆ. ನಮ್ಮ ವಕೀಲರು ತಮಿಳುನಾಡಿನ ಅಣೆಕ-ಟ್ಟುಗಳಲ್ಲಿನ ನೀರಿನ ಸ್ಥಿತಿ, ಬಳಕೆ ಮಾಡಿರುವ ಪ್ರಮಾಣವನ್ನು ಕೋರ್ಟ್‌ಗೆ ಮನವರಿಕೆ ಮಾಡುವ ಕೆಲಸ ಮಾಡದಿದ್ದರೆ ಸಮಸ್ಯೆಗೆ ಪರಿಹಾರ ಸಿಗುವುದಿಲ್ಲ' ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ದಿಕ್ಕು ತಪ್ಪಿಸುತ್ತಿರುವ ಬೊಮ್ಮಾಯಿ: ಡಿಕೆಶಿ

ಬೆಂಗಳೂರು: 'ಕಾವೇರಿ ನದಿ ನೀರಿನ ವಿಚಾರದಲ್ಲಿ ರಾಜ್ಯ ಸರ್ಕಾರವನ್ನು ಸುಪ್ರೀಂ ಕೋರ್ಟ್‌ನಲ್ಲಿ ಇಕ್ಕಟ್ಟಿಗೆ ಸಿಲುಕಿಸುವಂತಹ ಸಲಹೆಯನ್ನು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ನೀಡುತ್ತಿದ್ದಾರೆ' ಎಂದು ಜಲ ಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಸಮಾಧಾನ ವ್ಯಕ್ತಪಡಿಸಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, 'ನೀರು ಹರಿಸದೇ ಸುಪ್ರೀಂ ಕೋರ್ಟ್‌ನಲ್ಲಿ ಕಾನೂನು ಹೋರಾಟ ನಡೆಸಬೇಕು ಎಂದು ಬೊಮ್ಮಾಯಿ ಸಲಹೆ ನೀಡಿದ್ದಾರೆ. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಆದೇಶವನ್ನು ಕರ್ನಾಟಕ ಸರ್ಕಾರ ಪಾಲಿಸಿಲ್ಲ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದರೆ ಬೊಮ್ಮಾಯಿ ಹಾಗೂ ನನ್ನ ಬಳಿ ಯಾವ ಉತ್ತರ ಇದೆ' ಎಂದು ಕೇಳಿದರು.

ರಾಜ್ಯದಲ್ಲಿ ನೀರಿನ ಕೊರತೆ ಇರುವಾಗ ತಮಿಳುನಾಡಿಗೆ ಹರಿಸಲಾಗದು ಎಂಬುದು ಸರ್ಕಾರದ ನಿಲುವು. ಅದನ್ನು ಸುಪ್ರೀಂ ಕೋರ್ಟ್‌ಗೆ ತಿಳಿಸಲಾಗುವುದು. ಬೊಮ್ಮಾಯಿ ಮುಖ್ಯಮಂತ್ರಿ, ಜಲ ಸಂಪನ್ಮೂಲ ಸಚಿವರಾಗಿದ್ದ ಅವಧಿಯಲ್ಲಿ ತಮಿಳುನಾಡಿಗೆ ಎಷ್ಟು ನೀರು ಹರಿಸಲಾಗಿತ್ತು ಎಂಬ ದಾಖಲೆ ತಮ್ಮ ಬಳಿ ಇವೆ. ಅವರು ರಾಜಕಾರಣ ಬದಿಗಿಟ್ಟು, ಸಮಸ್ಯೆ ಇತ್ಯರ್ಥಕ್ಕೆ ಪ್ರಧಾನಿ ಮಧ್ಯಸ್ಥಿಕೆಗೆ ಒತ್ತಡ ಹೇರಲಿ ಎಂದರು.

'ಡಿಸಿಎಂ: ಹೈಕಮಾಂಡ್ ಜತೆ ನಾನೇ ಚರ್ಚಿಸುವೆ'

ಪ್ರಜಾವಾಣಿ ವಾರ್ತೆ

ಜಿ.ಪರಮೇಶ್ವರ

ಬೆಂಗಳೂರು: 'ಇನ್ನೂ ಮೂವರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಿದರೆ ಆ ಸಮುದಾಯಗಳ ಜನರು ಪಕ್ಷದ ಪರ ನಿಲ್ಲುತ್ತಾರೆ ಎಂಬ ಸಚಿವ ಕೆ.ಎನ್. ರಾಜಣ್ಣ ವಾದ ಸರಿ ಇದೆ. ಈ ವಿಚಾರದಲ್ಲಿ ನಾನೇ ಪಕ್ಷದ ಹೈಕಮಾಂಡ್ ಭೇಟಿ ಮಾಡಿ ಚರ್ಚಿಸುತ್ತೇನೆ ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, 'ಅವಕಾಶ ನೀಡಿದರೆ ಯಾರೂ ಬೇಡ ಎನ್ನುವುದಿಲ್ಲ. ಇದರಲ್ಲಿ ವೈಯಕ್ತಿಕ ಪ್ರಶ್ನೆ ಇಲ್ಲ' ಎಂದರು.

'ಹೈಕಮಾಂಡ್ ಒಪ್ಪಿದರೆ ಇನ್ನಷ್ಟು ಮಂದಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಲು ಸಿದ್ಧ ಎಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೇಳಿಕೆಯೂ ಸರಿ ಇದೆ. ನಾವೆಲ್ಲರೂ ಪಕ್ಷದ ಹೈಕಮಾಂಡ್ ಅಧೀನದಲ್ಲಿ ಕೆಲಸ ಮಾಡುವವರು. ಹೈಕಮಾಂಡ್ ಸೂಚನೆಯಂತೆ ಕೆಲಸ ಮಾಡಬೇಕಾಗುತ್ತದೆ' ಎಂದರು.

'ಲೋಕಸಭಾ ಚುನಾವಣೆ ಸಮೀಪಿಸುತ್ತಿರುವುದರಿಂದ ಸಮುದಾಯವಾರು ಹೆಚ್ಚು ಪ್ರಾತಿನಿಧ್ಯ ನೀಡಬೇಕು ಎಂದು ರಾಜಣ್ಣ ಒತ್ತಾಯಿಸಿದ್ದಾರೆ. ಇದನ್ನು ಪಕ್ಷದ ಹೈಕಮಾಂಡ್ ಅರ್ಥ ಮಾಡಿಕೊಳ್ಳಬೇಕಲ್ಲವೆ? ಪ್ರಾತಿನಿಧ್ಯ ಕೊಟ್ಟಿರುವುದರಿಂದ ಪಕ್ಷಕ್ಕಾಗಿ ಕೆಲಸ ಮಾಡಿ ಎಂದು ಜವಾಬ್ದಾರಿ ವಹಿಸಬಹುದು' ಎಂದರು.

ಬಹಿರಂಗ ಚರ್ಚೆ ಅಗತ್ಯವಿಲ್ಲ: ಇದೇ ವಿಷಯ ಕುರಿತು ಪ್ರತಿಕ್ರಿಯಿಸಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, 'ನಮ್ಮ ಜತೆ ನಿಂತಿರುವ ಸಮುದಾಯಗಳಿಗೆ ಹೆಚ್ಚು ಪ್ರಾತಿನಿಧ್ಯ ನೀಡಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ, ಡಿಸಿಎಂ ಹುದ್ದೆಗಳ ಸೃಷ್ಟಿ ಕುರಿತು ಬಹಿರಂಗ ಚರ್ಚೆ ಅಗತ್ಯವಿಲ್ಲ' ಎಂದು ಹೇಳಿದರು.

'ಕಠಿಣ ನಿರ್ಧಾರ ಅನಿವಾರ್ಯ'

ರಾಮನಗರ: ಕಾವೇರಿ ನದಿ ನೀರು ಹಂಚಿಕೆಯಲ್ಲಿ ಕರ್ನಾಟಕಕ್ಕೆ ಹಿಂದಿನಿಂದಲೂ ಅನ್ಯಾಯವಾಗುತ್ತಿದೆ. ರಾಜ್ಯ ಸರ್ಕಾರ ಈ ಬಗ್ಗೆ ಕಠಿಣ ನಿರ್ಧಾರ ಕೈಗೊಳ್ಳಬೇಕಿದೆ. ಇದಕ್ಕೆ ಎಲ್ಲಾ ಪಕ್ಷಗಳೂ ಕೈ ಜೋಡಿಸಬೇಕಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಸಲಹೆ ಮಾಡಿದ್ದಾರೆ.

'ಕಾವೇರಿ ನೀರು ನಿರ್ವಹಣಾ ಸಮಿತಿಯವರೇನು ಪ್ರಶ್ನಾತೀತರಲ್ಲ. ನಮ್ಮ ಸಮಸ್ಯೆ ಆಲಿಸದಿದ್ದರೆ, ಅವರ ಆದೇಶ ಮೀರುವುದಕ್ಕೂ ನಾವು ಹಿಂಜರಿಯಬಾರದು. ಈ ವಿಷಯದಲ್ಲಿ ಜೈಲಿಗೆ ಹೋದರೂ ಪರವಾಗಿಲ್ಲ. ಸರ್ಕಾರವೇನು ವಜಾ ಆಗುವುದಿಲ್ಲ. ಈ ವಿವಾದಕ್ಕೊಂದು ತಾರ್ಕಿಕ ಅಂತ್ಯ ಸಿಗಬೇಕು' ಎಂದರು.

'ಸಮಸ್ಯೆಗೆ ಶಾಶ್ವತ ಪರಿಹಾರ ಬೇಕು. ಇಲ್ಲದಿದ್ದರೆ, ನಾವು ಒಕ್ಕೂಟ ವ್ಯವಸ್ಥೆಯಿಂದ ಹೊರ ಹೋಗುತ್ತೇವೆ ಎಂದು ಬೆದರಿಕೆ ಹಾಕಬೇಕು. ಬಿಜೆಪಿಯವರು ಸಹ ಧೈರ್ಯವಾಗಿ ಪ್ರಧಾನಿ ಮೇಲೆ ಒತ್ತಡ ಹೇರಬೇಕು' ಎಂದು ಹೇಳಿದರು.

ಚಟಕ್ಕೆ ಪ್ರಶ್ನೆ ಕೇಳಬೇಡಿ: ಸಿಡಿಮಿಡಿ

ಬೆಂಗಳೂರು: 'ನೀವು ಯಾರ ಹತ್ತಿರ ಮಾತನಾಡುತ್ತಿದ್ದೀರಾ? ನಾನು ಕೆಪಿಸಿಸಿ ಅಧ್ಯಕ್ಷ, ಈ ರಾಜ್ಯದ ಉಪ ಮುಖ್ಯಮಂತ್ರಿ. ನಿಮ್ಮ ಚಟಕ್ಕೆ ಪ್ರಶ್ನೆ ಕೇಳ್ತೀರಾ? ನೀವಿನ್ನೂ ಎಳಸು..'

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪತ್ರಕರ್ತರ ವಿರುದ್ಧ ಮಂಗಳವಾರ ಹರಿಹಾಯ್ದ ಪರಿ ಇದು.

'ಬಿ.ಕೆ.ಹರಿಪ್ರಸಾದ್ ಬಣದಲ್ಲಿರುವ ನೀವೂ ಸೇರಿದಂತೆ ಎಲ್ಲ ಪ್ರಮುಖರೂ ಮೌನವಾಗುತ್ತಿ-ದ್ದಂತೆ ಸಿದ್ದರಾಮಯ್ಯ ಬಣ ಡಿಸಿಎಂ ಕಾರ್ಡ್ ಪ್ಲೇ ಮಾಡುತ್ತಿದೆಯೇ' ಎಂದು ಪತ್ರಕರ್ತರು ಕೇಳಿದ ಪ್ರಶ್ನೆಗೆ ಸಿಡಿಮಿಡಿಗೊಂಡ ಅವರು, 'ಕೆಪಿಸಿಸಿ ಅಧ್ಯಕ್ಷರ ಬಳಿ ಮಾತನಾಡುವಾಗ ಹೇಗೆ ಪ್ರಶ್ನೆ ಕೇಳಬೇಕು ಎಂಬ ಗಾಂಭೀರ್ಯ ಬೇಡವೇ? ನಿಮಗೆ ತಲೆಕೆಟ್ಟಿದೆಯಾ' ಎಂದು ಅಸಮಾಧಾನ ಹೊರಹಾಕಿದರು.

'ಮೊದಲು ಸಂವಿಧಾನ ಓದಿ. ನಾನೇ ಒಂದು ಪ್ರತಿ ಕಳುಹಿಸುತ್ತೇನೆ. ಯಾರ ಹೊಣೆಗಾರಿಕೆ ಏನು ಎನ್ನುವುದು ಅರ್ಥವಾಗುತ್ತದೆ. ಕೇಳುವ ಪ್ರಶ್ನೆಗೆ ಗಾಂಭೀರ್ಯ ಇರ ಬೇಕು. ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗವನ್ನು ಪ್ರಶ್ನೆ ಮಾಡುವಂತಹ ಪ್ರಶ್ನೆ ಕೇಳಬೇಕು. ಅದು ಪತ್ರಿಕಾರಂಗದ ಧರ್ಮ' ಎಂದು ಬೋಧನೆ ಮಾಡಿದರು.

'ಕಾಂಗ್ರೆಸ್‌ನಲ್ಲಿ ಯಾವುದೇ ಬಣರಾಜಕೀಯ ಇಲ್ಲ. ಕಾಂಗ್ರೆಸ್ ಪಕ್ಷವೇ ಒಂದು ಬಣ. ಹಾಗೆ ಬಣ ರಾಜಕೀಯ ಮಾಡುವುದಾಗಿದ್ದರೆ ಬಂಗಾರಪ್ಪ ಅವರ ಅವಧಿಯಲ್ಲೇ ಅವಕಾಶವಿತ್ತು. ಆದರೆ, ನಾನು ಎಂದೂ ಬಣ ರಾಜಕೀಯ ಮಾಡಿಲ್ಲ. ಅದಕ್ಕೆ ಅವಕಾಶ ಮಾಡಿಕೊಡಲಿಲ್ಲ. ಈಗಲೂ ಬಣ ರಾಜಕೀಯಕ್ಕೆ ನನ್ನ ಬೆಂಬಲವಿಲ್ಲ' ಎಂದು ಹೇಳಿದರು.

'ಹರಿಪ್ರಸಾದ್ ಹೇಳಿಕೆಗೆ ಹೈಕಮಾಂಡ್ ಉತ್ತರ ಕೇಳಿದೆ. ಮೂರು ಉಪ ಮುಖ್ಯಮಂತ್ರಿ ಹುದ್ದೆ ಸೃಷ್ಟಿ ಪ್ರಸ್ತಾವ ಮಾಡಿದ ಸಚಿವ ಕೆ.ಎನ್.ರಾಜಣ್ಣ ಅವರಿಂದ ಮುಖ್ಯಮಂತ್ರಿ ಉತ್ತರ ಕೇಳಬೇಕು. ನಾನು ಯಾರಿಗೆ ಕೇಳಬೇಕೋ ಅವರಿಗೆ ಕೇಳುತ್ತೇನೆ' ಎಂದರು.

ಬಾಲಕಿಯ ಮೇಲೆ ಬಾಲಕ ಅತ್ಯಾಚಾರ

ಪ್ರಜಾವಾಣಿ ವಾರ್ತೆ

ಗಜೇಂದ್ರಗಡ (ಗದಗ ಜಿಲ್ಲೆ): ಐದು ವರ್ಷದ ಬಾಲಕಿ ಮೇಲೆ 14 ವರ್ಷದ ಬಾಲಕನೊಬ್ಬ ಅತ್ಯಾಚಾರ ನಡೆಸಿದ ಘಟನೆ ಜರುಗಿದೆ.

'ಭಾನುವಾರ ರಾತ್ರಿ ಮೂತ್ರ ವಿಸರ್ಜನೆ ವೇಳೆ ಬಾಲಕಿ ತೊಂದರೆ ಅನುಭವಿಸಿದ್ದು ಗೊತ್ತಾಗಿ ತಾಯಿ ಸೋಮವಾರ ಠಾಣೆಗೆ ದೂರು ನೀಡಿದ್ದಾರೆ. ಬಾಲಕಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಬಾಲಕನನ್ನು ವಶಕ್ಕೆ ಪಡೆದು, ಬಾಲ ನ್ಯಾಯ ಮಂಡಳಿಗೆ ಕಳಿಸಲಾಗಿದೆ. ಬಾಲಕ ಮತ್ತು ಬಾಲಕಿಯ ಪಾಲಕರು ಅಕ್ಕಪಕ್ಕದ ವ್ಯಾಪಾರಗಳಾಗಿದ್ದು, ಯಾರೂ ಇಲ್ಲದ ವೇಳೆಬಾಲಕ ಕೃತ್ಯವೆಸಗಿದ್ದಾನೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಹುಕ್ಕಾ ಬಾರ್‌ಗೆ ನಿಷೇಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹುಕ್ಕಾ ಬಾರ್‌ಗಳ ನಿಷೇಧವೂ ಸೇರಿದಂತೆ ರಾಜ್ಯದಲ್ಲಿ ತಂಬಾಕು ಉತ್ಪನ್ನಗಳ ಬಳಕೆಯನ್ನು ನಿಷೇಧಿಸಲು ತಂಬಾಕು ಉತ್ಪನ್ನಗಳ ಸಾರ್ವಜನಿಕ ಬಳಕೆ ನಿಯಂತ್ರಣ (ಕೋಟ್ಪಾ) ಕಾಯ್ದೆಗೆ ತಿದ್ದುಪಡಿ ತರಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ತಂಬಾಕು ಉತ್ಪನ್ನಗಳ ಬಳಕೆ ನಿಯಂತ್ರಣ ಮತ್ತು ನಿಷೇಧಕ್ಕೆ ಕೈಗೊ-ಳ್ಳಬೇಕಿರುವ ಕ್ರಮಗಳ ಕುರಿತು ಕ್ರೀಡಾ ಮತ್ತು ಯುವ ಸಬಲೀಕರಣ ಸಚಿವ ಬಿ. ನಾಗೇಂದ್ರ ಅವರ ಜತೆಗೂಡಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಕ್ರೀಡಾ ಮತ್ತು ಯುವ ಸಬಲೀಕರಣ ಇಲಾಖೆಗಳ ಹಿರಿಯ ಅಧಿಕಾರಿಗಳ ಜತೆ ಮಂಗಳವಾರ ಸಭೆ ನಡೆಸಿದ ಬಳಿಕ ಅವರು ಪತ್ರಕರ್ತರೊಂದಿಗೆ ಮಾತನಾಡಿದರು.

ಶಾಲಾ, ಕಾಲೇಜುಗಳ ಆವರಣ ಹಾಗೂ ಸುತ್ತಮುತ್ತ ತಂಬಾಕು ಉತ್ಪನ್ನಗಳ ಮಾರಾಟ ನಿಷೇಧ ಜಾರಿಯಲ್ಲಿದೆ. ಅದನ್ನು ದೇವಸ್ಥಾನ, ಮಸೀದಿ, ಚರ್ಚ್ ಮತ್ತು ಆಸ್ಪತ್ರೆಗಳ ಪ್ರದೇಶಗಳಿಗೂ ವಿಸ್ತರಿಸಲಾಗುವುದು. ತಂಬಾಕು ಉತ್ಪನ್ನಗಳ ಜತೆಗೆ ಇತರ ಮಾದಕ ವಸ್ತುಗಳ ಪೂರೈಕೆ ಆಗುತ್ತಿದೆ. ಇದನ್ನು ನಿಯಂತ್ರಿಸಲು ಕಾಯ್ದೆಗೆ ತಿದ್ದುಪಡಿ ತರಲು ತೀರ್ಮಾನಿಸಲಾಗಿದೆ ಎಂದರು.

ಹುಕ್ಕಾ ಬಾರ್‌ಗಳಿಗೆ ಯುವಜನರು ಹೆಚ್ಚು ಆಕರ್ಷಿತರಾಗುತ್ತಿದ್ದಾರೆ. ಈಗ ಇರುವ ಕಾಯ್ದೆಯಡಿ ಹುಕ್ಕಾ ಬಾರ್‌ಗಳ ಮೇಲೆ ನಿಷೇಧ ಹೇರಲು ಸಾಧ್ಯವಾ-ಗುವುದಿಲ್ಲ. ಆ ರೀತಿ ಮಾಡಿದರೆ ನ್ಯಾ-ಯಾಲಯಗಳಲ್ಲಿ ಸರ್ಕಾರಕ್ಕೆ ಹಿನ್ನಡೆ ಆಗುತ್ತದೆ. ಆದ್ದರಿಂದ ಹುಕ್ಕಾ ಬಾರ್ ನಿಷೇಧಕ್ಕೆ ಪೂರಕವಾಗಿ ಕೋಟ್ಪಾ ಕಾಯ್ದೆಗೆ ತಿದ್ದುಪಡಿ ತರಲಾಗುವುದು ಎಂದು ತಿಳಿಸಿದರು.

ಕನಿಷ್ಠ ವಯೋಮಿತಿ ಹೆಚ್ಚಳ: ಕೋಟ್ಪಾ ಕಾಯ್ದೆಯ ಪ್ರಕಾರ, ತಂಬಾಕು ಉತ್ಪನ್ನಗಳ ಖರೀದಿಗೆ ಕನಿಷ್ಠ 18 ವರ್ಷ ವಯಸ್ಸಾಗಿರಬೇಕು. ಕನಿಷ್ಠ ವಯೋಮಿತಿಯನ್ನು 21 ವರ್ಷಗಳಿಗೆ ಏರಿಕೆ ಮಾಡಲಾಗುವುದು ಎಂದರು.

ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿಕೆ

ವರುಣ: ಕುಕ್ಕರ್, ಇಸ್ತ್ರಿಪೆಟ್ಟಿಗೆ ವಿತರಣೆ

ಪ್ರಜಾವಾಣಿ ವಾರ್ತೆ

ಡಾ. ಯತೀಂದ್ರ ಸಿದ್ದರಾಮಯ್ಯ

ಮೈಸೂರು: 'ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ವರುಣ ಕ್ಷೇತ್ರದಲ್ಲಿ ಮಡಿವಾಳ ಸಮುದಾಯದವರನ್ನು ಸಂಘಟನೆ ಮಾಡಬೇಕೆಂದು, ಸಾವಿರಾರು ಜನರನ್ನು ಸೇರಿಸಿ ಅವರೆಲ್ಲರಿಗೂ ಕುಕ್ಕರ್ ಮತ್ತು ಇಸ್ತ್ರಿಪೆಟ್ಟಿಗೆಗಳನ್ನು ನೀಡಲಾಗಿತ್ತು. ಆ ಸಮಾಜದ ರಾಜ್ಯ ಘಟಕದ ಅಧ್ಯಕ್ಷ ನಂಜಪ್ಪ ನನ್ನ ತಂದೆ ಸಿದ್ದರಾಮಯ್ಯ ಅವರ ಕೈಯಿಂದಲೇ ಅವುಗಳನ್ನು ಕೊಡಿಸಿದ್ದರು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ, ವರುಣ ವಿಧಾನಸಭಾ ಕ್ಷೇತ್ರದ ಆಶ್ರಯ ಸಮಿತಿ ಅಧ್ಯಕ್ಷ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿದ್ದಾರೆ.

ನಂಜನಗೂಡಿನಲ್ಲಿ ಶುಕ್ರವಾರ ನಡೆದ ತಾಲ್ಲೂಕು ಮಡಿವಾಳರ ಸಮುದಾಯ ಭವನದ ಕಚೇರಿ ಉದ್ಘಾಟನೆ ಕಾರ್ಯಕ್ರಮದಲ್ಲಿ ಅವರು ನೀಡಿರುವ ಹೇಳಿಕೆಯು ಮಂಗಳವಾರ ಸಾಮಾಜಿಕ ಜಾಲತಾಣದಲ್ಲಿ ಹರಡಿದೆ.

'ನಮಗೆ ಅನುಕೂಲವಾಗಲೆಂದು ನಂಜಪ್ಪ ಈ ಈ ಕಾರ್ಯಕ್ರಮ ಮಾಡಿದ್ದರು. ತಂದೆಯವರು ಪ್ರಚಾರದ ಬ್ಯುಸಿಯಲ್ಲಿದ್ದರೂ, 2–3 ಬಾರಿ ಬಂದು ಭೇಟಿಯಾಗಿ, ಹಲವು ಬಾರಿ ದಿನಾಂಕ ನಿಗದಿಯಾಗಿ ರದ್ದಾದರೂ ಪಟ್ಟು ಬಿಡದೇ ನನ್ನ ತಂದೆಯವರಿಂದಲೇ ಕೊಡಿಸಿ ಕಾರ್ಯಕ್ರಮ ಯಶಸ್ವಿಯಾಗಿ-ಸಿದರು. ಸಮಾಜದ ಮತಗಳು ನಮಗೆ ಹೆಚ್ಚಿನ ಪ್ರಮಾಣದಲ್ಲಿ ಸಿಗುವಂತೆ ಮಾಡಿದರು. ನಾನು ಆ ಕಾರ್ಯಕ್ರಮಕ್ಕೆ ಬರಲಾಗಿರಲಿಲ್ಲ' ಎಂದು ಹೇಳಿದ್ದಾರೆ.

'ನಾವು ಗೆಲ್ಲಲು ಮಡಿವಾಳ ಸಮಾಜದ ದೊಡ್ಡ ಕೊಡುಗೆ ನೀಡಿದೆ. ಈ ಸಮುದಾಯದ ಬೇಡಿಕೆಗಳನ್ನು ಈಡೇರಿಸಲು ನಮ್ಮ ಸರ್ಕಾರ ಕ್ರಮ ಕೈಗೊಳ್ಳಲಿದೆ' ಎಂದು ಭರವಸೆ ನೀಡಿದ್ದಾರೆ.

ಯತೀಂದ್ರ ಅವರ ಹೇಳಿಕೆ ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ.

ಗಂಭೀರವಾಗಿ ಪರಿಗಣಿಸಿ: ಬೊಮ್ಮಾಯಿ

ಬೆಂಗಳೂರು: ಕುಕ್ಕರ್, ಇಸ್ತ್ರಿಪೆಟ್ಟಿಗೆ ಹಂಚಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸಿದ್ದರಾಮಯ್ಯ ಗೆಲುವು ಸಾಧಿಸಿದ್ದಾರೆ ಎಂಬ ಅವರ ಪುತ್ರ ಡಾ.ಯತೀಂದ್ರ ಅವರ ಹೇಳಿಕೆಯನ್ನು ಚುನಾವಣಾ ಆಯೋಗ ಗಂಭೀರವಾಗಿ ಪರಿಗಣಿಸಬೇಕು ಎಂದು ಶಾಸಕ ಬಸವರಾಜ ಬೊಮ್ಮಾಯಿ ಆಗ್ರಹಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ವರುಣಾ ಕ್ಷೇತ್ರದ ಅಭ್ಯರ್ಥಿಯಾಗಿದ್ದ ಸಿದ್ದರಾಮಯ್ಯ ಅವರು ಮತದಾರರಿಗೆ ಕುಕ್ಕರ್, ಇಸ್ತ್ರಿಪೆಟ್ಟಿಗೆ ಹಂಚಿದ್ದರಿಂದಲೇ ತಮ್ಮ ತಂದೆ ಸಿದ್ದರಾಮಯ್ಯ ಚುನಾವಣೆಯಲ್ಲಿ ಗೆಲ್ಲಲು ಸಾಧ್ಯವಾಯಿತು ಎಂಬ ಹೇಳಿಕೆಯನ್ನು ಯತೀಂದ್ರ ನೀಡಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಅದು ನಿಜವೇ ಆಗಿದ್ದರೆ ಚುನಾವಣಾ ಆಯೋಗ ಕಾರ್ಯಪ್ರವೃತ್ತ-ವಾಗಬೇಕು ಎಂದರು.

ಈಗಾಗಲೇ ಸಿದ್ದರಾಮಯ್ಯ ವಿರುದ್ಧ ಚುನಾವಣಾ ತಕರಾರು ಅರ್ಜಿ ಇದೆ. ಯತೀಂದ್ರ ಹೇಳಿದ್ದಕ್ಕೆ ಸಾಕ್ಷ್ಯಾಧಾರವಿದ್ದರೆ ಆಯೋಗ ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ವಾಂತಿ ಭೇದಿ: ಸಾವು

ಪ್ರಜಾವಾಣಿ ವಾರ್ತೆ

ಸಂಡೂರು (ಬಳ್ಳಾರಿ ಜಿಲ್ಲೆ): ತಾಲ್ಲೂಕಿನ ಚೋರನೂರು ಹೋಬಳಿಯ ಎಚ್‌.ಕೆ. ಹಳ್ಳಿಯಲ್ಲಿನ ವಾಂತಿಭೇದಿ ಪ್ರಕರಣದಲ್ಲಿ ಅಸ್ವಸ್ಥಗೊಂಡವರ ಸಂಖ್ಯೆ 40ಕ್ಕೆ ಏರಿಕೆ ಆಗಿದ್ದು, ಒಬ್ಬರು ಮೃತಪಟ್ಟಿದ್ದಾರೆ.

'ಓಬಪ್ಪ ಎಂಬುವರು ಮೃತಪಟ್ಟಿದ್ದು, ಉಸಿರಾಟದ ಸಮಸ್ಯೆಯೇ ಕಾರಣ. ಅವರಿಗೆ ಈ ಹಿಂದೆ ಕ್ಷಯ ರೋಗವೂ ಇತ್ತು' ಎಂದು ಆರೋಗ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

'ಓಬಪ್ಪ ಅವರ ಸಾವಿಗೆ ವಾಂತಿ ಭೇದಿಯೇ ಕಾರಣ. ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ್ದೆವು' ಎಂದು ಓಬಪ್ಪ ಪುತ್ರ ಓಬಳೇಶ ತಿಳಿಸಿದರು.

ಯೋಗ್ಯವಲ್ಲ: 'ಗ್ರಾಮದಲ್ಲಿ ಜನರು ಶೌಚಕ್ಕೆ ಬಯಲನ್ನೇ ಅವಲಂಬಿಸಿದ್ದಾರೆ. ಶುದ್ಧ ಕುಡಿಯುವ ನೀರಿನ ಘಟಕವಿದ್ದರೂ ಬಹುತೇಕ ಮಂದಿ ನಲ್ಲಿಯ ನೀರನ್ನೇ ಅವಲಂಬಿಸಿದ್ದಾರೆ. ಗ್ರಾಮದ ಎರಡನೇ ವಾರ್ಡ್‌ಗೆ ಪೂರೈಸಲಾದ ನೀರು ಕುಡಿಯಲು ಯೋಗ್ಯವಲ್ಲ ಎಂದು ಪ್ರಯೋಗಾಲಯದ ವರದಿ ತಿಳಿಸಿದೆ.



ನೂತನ ಕಟ್ಟಡದಲ್ಲಿ ಕಲಾಪ ಆರಂಭಿಸುವ ಮುನ್ನ ಹಳೆಯ ಸಂಸತ್ತಿನ ಸೆಂಟ್ರಲ್ ಹಾಲ್‌ನಲ್ಲಿ ನಡೆದ ಸಮಾರಂಭದ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು, ರಾಜ್ಯಸಭೆಯ ವಿರೋಧಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಸಂಸದರಾದ ಸೋನಿಯಾ ಗಾಂಧಿ ಮತ್ತು ಅಧೀರ್ ರಂಜನ್ ಚೌಧರಿ ಅವರೊಂದಿಗೆ ಚರ್ಚೆಯಲ್ಲಿ ತೊಡಗಿದ್ದರು —ಪಿಟಿಐ ಚಿತ್ರ

ತ್ರಿಕೋನಾಕಾರದ ನೂತನ ಸಂಸತ್ ಭವನದಲ್ಲಿ ಗಣೇಶ ಚತುರ್ಥಿಯಂದೇ ಕಲಾಪ ಆರಂಭ

ಸಂಸದೀಯ ಚರಿತ್ರೆಯಲ್ಲಿ ಹೊಸ ಶಕೆ

ನವದೆಹಲಿ (ಪಿಟಿಐ): ನೂತನ ಸಂಸತ್ ಭವನದಲ್ಲಿ ಮಂಗಳವಾರ ಲೋಕಸಭೆಯ ಕಲಾಪ ನಡೆಯಿತು. ಇದರೊಂದಿಗೆ ಭಾರತದ ಸಂಸದೀಯ ಇತಿಹಾಸದಲ್ಲಿ ಹೊಸ ಅಧ್ಯಾಯ ಆರಂಭವಾಯಿತು.

ಪ್ರಧಾನಿ ನರೇಂದ್ರ ಮೋದಿ ಅವರು ಕೇಂದ್ರ ಸಚಿವರಾದ ಅಮಿತ್ ಶಾ, ರಾಜನಾಥ್ ಸಿಂಗ್, ನಿತಿನ್ ಗಡ್ಕರಿ ಮತ್ತಿತರ ನಾಯಕರೊಂದಿಗೆ ಹಳೆಯ ಸಂಸತ್ ಭವನದಿಂದ ನಿರ್ಗಮಿಸಿ ಹೊಸ ಸಂಸತ್ತಿಗೆ ಪದಾರ್ಪಣೆ ಮಾಡಿದರು.

ಸ್ಪೀಕರ್ ಓಂ ಬಿರ್ಲಾ ಅವರು, 'ಹೊಸ ಸಂಸತ್ ಭವನ ಪ್ರವೇಶವನ್ನು ಐತಿಹಾಸಿಕ ಕಾರ್ಯಕ್ರಮ' ಎಂದು ಬಣ್ಣಿಸಿದರು.

ಸಂಸದರಿಗೆ ಗಣೇಶ ಚತುರ್ಥಿಯ ಶುಭಾಶಯ ಕೋರಿದ ಅವರು, 'ಜನರಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಧ್ವನಿ ಎತ್ತುವ ಮೂಲಕ ಸಂಸದೀಯ ಚರ್ಚೆಗಳಿಗೆ ಹೊಸ ಭಾಷ್ಯ ಬರೆಯೋಣ' ಎಂದು ಕರೆ ನೀಡಿದರು. ರಾಷ್ಟ್ರವನ್ನು ಕಟ್ಟಿದ ಮತ್ತು ದೇಶಕ್ಕೆ ತನ್ನದೇ ಸಂವಿಧಾನ ರಚಿಸಿಕೊಟ್ಟ ಮಹಾತ್ಮರಿಗೆ ಗೌರವ ನಮನ ಸಲ್ಲಿಸಿದರು.

ಹೊಸ ಸಂಸತ್ತು ಹೇಗಿದೆ?: ನೂತನ ಸಂಸತ್ ಭವನವು ವೇದಕಾಲದಿಂದ ಈವರೆಗಿನ ಭಾರತದ ಪ್ರಜಾಸತ್ತಾತ್ಮಕ ಪರಂಪರೆಯ ಕಥೆಗಳನ್ನು ಸಾರಿದೆ. ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಬೆಳೆದುಬಂದ ಹಾದಿಯನ್ನು ಬಿಂಬಿಸುವ ಹಲವು ವಸ್ತುಗಳನ್ನು ಇಲ್ಲಿನ ಕಾನ್‌ಸ್ಟಿಟ್ಯೂಷನ್ ಹಾಲ್‌ನಲ್ಲಿ ಪ್ರದರ್ಶಿಸಲಾಗಿದೆ. ಹಿಂದೂಗಳು ಪೂಜಿಸುವ, ಶಕ್ತಿಯ ಮೂಲ ಎಂದು ಆರಾಧಿಸುವ 'ಶ್ರೀ ಯಂತ್ರ'ವನ್ನು ಕಾನ್‌ಸ್ಟಿಟ್ಯೂಷನ್ ಹಾಲ್ ಹೋಲುತ್ತದೆ.

ಕಟ್ಟಡದಲ್ಲಿ ಮಹಾತ್ಮ ಗಾಂಧಿ, ಚಾಣಕ್ಯ, ಗಾರ್ಗಿ, ಸರ್ದಾರ್ ವಲ್ಲಭಭಾಯಿ ಪಟೇಲ್, ಬಿ.ಆರ್. ಅಂಬೇಡ್ಕರ್ ಮತ್ತು ಕೊನಾರ್ಕ್‌ನ ಸೂರ್ಯ ದೇಗುಲದ ರಥದ ಚಕ್ರದ ಕಂಚಿನ ಪ್ರತಿಮೆಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ.

ನವಿಲು, ಕಮಲದ ವಿನ್ಯಾಸ: ಲೋಕಸಭೆಯ ಸಭಾಂಗಣವನ್ನು ರಾಷ್ಟ್ರೀಯ ಪಕ್ಷಿ ನವಿಲಿನ ಥೀಮ್‌ನಲ್ಲಿ ಮತ್ತು ರಾಜ್ಯಸಭೆಯ ಸಭಾಂಗಣವನ್ನು ರಾಷ್ಟ್ರೀಯ ಪುಷ್ಪ ಕಮಲದ ಥೀಮ್‌ನಲ್ಲಿ ವಿನ್ಯಾಸಗೊಳಿಸಲಾಗಿದೆ.

ನಾಲ್ಕು ಅಂತಸ್ತಿನ ಸಂಸತ್ ಭವನವು 64,500 ಚದರ ಮೀಟರ್ ಪ್ರದೇಶದಲ್ಲಿ ನಿರ್ಮಾಣವಾಗಿದೆ. ಲೋಕಸಭೆಯ ಸಭಾಂಗಣದಲ್ಲಿ 888 ಆಸನಗಳ ವ್ಯವಸ್ಥೆ ಇದೆ. ಇದನ್ನು 1,272ಕ್ಕೆ ಹೆಚ್ಚಿಸಲು ಅವಕಾಶವಿದೆ. ರಾಜ್ಯಸಭಾ ಸಭಾಂಗಣವು 384 ಆಸನಗಳ ಸಾಮರ್ಥ್ಯ ಹೊಂದಿದೆ.

ನೂತನ ಸಂಸತ್ತಿಗೆ ಆರು ಆಗಮನ-ನಿರ್ಗಮನ ದ್ವಾರಗಳಿವೆ. ಈ ಪೈಕಿ ಬನವಾಸಿ ಮಧುಕೇಶ್ವರ ದೇವಾಲಯದ ಎದುರು ಕ್ರಿ.ಪೂ. 9ನೇ ಶತಮಾನದಲ್ಲಿ ನಿರ್ಮಿಸಿದ್ದ ಕಲ್ಲಿನ ಆನೆಗಳೆರಡು ಗಜದ್ವಾರಕ್ಕೆ ಪ್ರೇರಣೆ ಎನ್ನಲಾಗಿದೆ. ಉಳಿದಂತೆ ಅಶ್ವದ್ವಾರ, ಶಾರ್ದೂಲ ದ್ವಾರ, ಹಂಸ ದ್ವಾರ, ಮಕರ ದ್ವಾರ ಮತ್ತು ಗರುಡ ದ್ವಾರಗಳಿವೆ.

ನೂತನ ಸಂಸತ್ ಭವನದಲ್ಲಿ ಲೋಕಸಭೆಯ ಕಲಾಪ ಮಂಗಳವಾರ ನಡೆಯಿತು

'ಪಾರ್ಲಿಮೆಂಟ್ ಹೌಸ್ ಆಫ್ ಇಂಡಿಯಾ'

ನವದೆಹಲಿ (ಪಿಟಿಐ): ಸಂಸತ್ ಭವನದ ಹೊಸ ಕಟ್ಟಡಕ್ಕೆ 'ಪಾರ್ಲಿಮೆಂಟ್ ಹೌಸ್ ಆಫ್ ಇಂಡಿಯಾ' ಎಂದು ನಾಮಕರಣ ಮಾಡಿ ಲೋಕಸಭಾ ಸಚಿವಾಲಯವು ಅಧಿಸೂಚನೆ ಹೊರಡಿಸಿದೆ. ಸಂಸತ್ ಭವನದ ಪ್ಲಾಟ್ ನಂ.118ರ ಆವರಣದಲ್ಲಿ ಹೊಸ ಕಟ್ಟಡವಿದೆ. ನವದೆಹಲಿಯ ರೈಸಿನಾ ರಸ್ತೆಯಿಂದ ದಕ್ಷಿಣ ಹಾಗೂ ರೆಡ್‌ಕ್ರಾಸ್ ರಸ್ತೆಯಿಂದ ಉತ್ತರ ಭಾಗದವರೆಗೆ ವ್ಯಾಪಿಸಿರುವ ಈ ಕಟ್ಟಡಕ್ಕೆ 'ಪಾರ್ಲಿಮೆಂಟ್ ಹೌಸ್ ಆಫ್ ಇಂಡಿಯಾ' ಎಂದು ನಾಮಕರಣ ಮಾಡಲಾಗಿದೆ ಎಂದು ಸ್ಪೀಕರ್ ತಿಳಿಸಿದ್ದಾರೆ.

ಕಾಲ್ನಡಿಗೆಯಲ್ಲೇ ಬಂದರು...

ನವದೆಹಲಿ (ಪಿಟಿಐ): ವಿಶೇಷ ಅಧಿವೇಶನದ ಎರಡನೇ ದಿನವಾದ ಮಂಗಳವಾರ ಸಂಸತ್‌ನ ಹಳೆಯ ಕಟ್ಟಡದಲ್ಲಿರುವ ಸೆಂಟ್ರಲ್ ಹಾಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂಸದರನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ಅವರು, ಸಂಸದೀಯ ಪರಂಪರೆಯನ್ನು ಮೆಲುಕು ಹಾಕಿದರು.

ಬಳಿಕ ಮೋದಿ ಸೇರಿದಂತೆ ಸಂಸದರು ಹೊಸ ಸಂಸತ್ ಭವನದತ್ತ ಹೆಜ್ಜೆ ಹಾಕಿದರು. ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್, ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಸೇರಿದಂತೆ ಎನ್‌ಡಿಎ ಕೂಟದ ಸಂಸದರು ಪ್ರಧಾನಿಯ ಜೊತೆಗೂಡಿದರು. ಈ ವೇಳೆ 'ಭಾರತ್ ಮಾತಾಕೀ ಜೈ...', 'ವಂದೇ ಮಾತರಂ' ಘೋಷಣೆ ಕೂಗಿದರು.

ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಪ್ರತ್ಯೇಕವಾಗಿ ನಡೆದುಕೊಂಡೇ ಹೊಸ ಭವನಕ್ಕೆ ತೆರಳಿದರು. ಬಳಿಕ ಪ್ರತಿಪಕ್ಷಗಳ ಸಂಸದರು ಕೂಡ ಕಾಲ್ನಡಿಗೆಯಲ್ಲಿ-ಯೇ ಸಾಗಿದರು.

ನೆಹರೂ ಕೊಡುಗೆ ಸ್ಮರಿಸಿದ ಪ್ರಧಾನಿ ನರೇಂದ್ರ ಮೋದಿ

ಹಳೆಯ ಭವನಕ್ಕೆ ಭಾವುಕ ವಿದಾಯ

ನವದೆಹಲಿ (ಪಿಟಿಐ): ಹಳೆಯ ಸಂಸತ್ ಭವನದಲ್ಲಿ ಸೋಮವಾರದಿಂದ ಆರಂಭವಾದ ವಿಶೇಷ ಅಧಿವೇಶನದ ಚರ್ಚೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು, '75 ವರ್ಷಗಳ ಸಂಸದೀಯ ಪಯಣ'ದ ನೆನಪುಗಳನ್ನು ಮೆಲುಕು ಹಾಕಿದರು.

52 ನಿಮಿಷಗಳ ಸುದೀರ್ಘ ಭಾಷಣದಲ್ಲಿ ದೇಶದ ಪ್ರಥಮ ಪ್ರಧಾನಿ ಜವಾಹರ ಲಾಲ್ ನೆಹರೂ ಅವರ ಕೊಡುಗೆಯನ್ನು ಪ್ರಶಂಸಿಸಿದರು. ಮಾಜಿ ಪ್ರಧಾನಿಗಳಾದ ಲಾಲ್ ಬಹದ್ದೂರ್ ಶಾಸ್ತ್ರಿ, ಇಂದಿರಾ ಗಾಂಧಿ, ಪಿ.ವಿ. ನರಸಿಂಹರಾವ್, ಅಟಲ್ ಬಿಹಾರಿ ವಾಜಪೇಯಿ ಅವರ ಕೊಡುಗೆಯನ್ನೂ ಸ್ಮರಿಸಿದರು.

ನೆಹರೂ ಅವರು ಮಧ್ಯರಾತ್ರಿ ಸಂಸತ್‌ನಲ್ಲಿ ಮಾಡಿದ ಭಾಷಣ ಎಲ್ಲರಿಗೂ ಸ್ಫೂರ್ತಿಯಾಗಿದೆ. ಇಂದಿಗೂ ಮಾರ್ದನಿಸುತ್ತಿದೆ ಎಂದ ಅವರು, 'ಸರ್ಕಾರಗಳು ಅಧಿಕಾರಕ್ಕೆ ಬರಬಹುದು ಮತ್ತು ಅವಧಿ ಪೂರ್ಣಗೊಳಿಸಬಹುದು. ಪಕ್ಷಗಳು ಉದಯವಾಗಬಹುದು ಮತ್ತು ವಿಸರ್ಜನೆಯಾಗಬಹುದು. ಆದರೆ, ಈ ದೇಶ ಬದುಕಬೇಕು' ಎಂದು ವಾಜಪೇಯಿ ಹೇಳಿದ್ದರು. ಅವರ ಮಾತುಗಳು ಇಂದಿಗೂ ಪ್ರತಿಧ್ವನಿಸುತ್ತಿವೆ ಎಂದು ಹೇಳಿದರು.

ಡಾ.ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದ ಅವಧಿಯಲ್ಲಿ ಸಂಸತ್‌ನ ಕೆಳಮನೆಯಲ್ಲಿ ನಡೆದ 'ಓಟಿಗಾಗಿ ನೋಟು' ಹಗರಣ ಪ್ರಸ್ತಾಪಿಸಿದ ಮೋದಿ ಅವರು, ಹೆಸರು ಉಲ್ಲೇಖಿಸದೆ ಕಾಂಗ್ರೆಸ್ ವಿರುದ್ಧ ಚಾಟಿ ಬೀಸಿದರು.

'ವಾಜಪೇಯಿ ಅವರ ಕಾಲದಲ್ಲಿ ಉತ್ತರಾಖಂಡ, ಜಾರ್ಖಂಡ್, ಛತ್ತೀಸ್‌ಗಢ ರಾಜ್ಯಗಳು ಉದಯವಾದವು. ಆಂಧ್ರಪ್ರದೇಶ ದಿಂದ ತೆಲಂಗಾಣ ಪ್ರತ್ಯೇಕ ರಾಜ್ಯ ಸ್ಥಾಪಿಸಲಾಯಿತು. ಈ ವೇಳೆ ಎರಡೂ ರಾಜ್ಯಗಳಲ್ಲಿ ಕಹಿ ಘಟನೆಗಳು ದಾಖಲಾಗಿದ್ದು ವಿಷಾದನೀಯ' ಎಂದರು.

'ಹಳೆಯ ಸಂಸತ್ ಭವನಕ್ಕೆ ವಿದಾಯ ಹೇಳುತ್ತಿರುವುದು ಭಾವನಾತ್ಮಕ ಕ್ಷಣವಾಗಿದೆ. ಆದರೆ, ನಮ್ಮ ಮನಸ್ಸಿನಲ್ಲಿ ಕಟ್ಟಡದ ಹಲವು ನೆನಪುಗಳನ್ನು ತುಂಬಿಕೊಂಡು ವಿದಾಯ ಹೇಳುತ್ತಿದ್ದೇವೆ' ಎಂದರು.

ಬ್ರಿಟಿಷರ ಆಳ್ವಿಕೆ ವಿರುದ್ಧ ಕ್ರಾಂತಿಕಾರಿಗಳಾದ ಭಗತ್ ಸಿಂಗ್ ಹಾಗೂ ಬಟುಕೇಶ್ವರ ದತ್ ಅವರು ದೆಹಲಿ ಕೇಂದ್ರ ಶಾಸನ ಸಭೆಯ (ಇಂದಿನ ಸಂಸತ್ ಭವನ) ಮೇಲೆ ಬಾಂಬ್‌ಗಳನ್ನು ಎಸೆದಿದ್ದನ್ನು ಪ್ರಸ್ತಾಪಿಸಿದ ಮೋದಿ, 'ರಾಷ್ಟ್ರಕ್ಕಾಗಿ ಶುಭ ಹಾರೈಸುವವರಿಗೆ ಆ ಬಾಂಬ್‌ನ ಮಾರ್ದನಿ ಕೇಳಿಸುತ್ತಿದ್ದು, ಅವರು ನಿದ್ದೆಯಿಲ್ಲದ ರಾತ್ರಿಗಳನ್ನು ಕಳೆಯುವಂತಾಗಿದೆ' ಎಂದು ಅವರು ಹೇಳಿದರು.

'ನಾವು ಈಗ ಹೊಸ ಸಂಸತ್ ಭವನಕ್ಕೆ ಹೋಗುತ್ತಿದ್ದೇವೆ. ಆದರೆ, ಈ ಹಳೆಯ ಭವನವು ಹೊಸಪೀಳಿಗೆಗೆ ಸ್ಫೂರ್ತಿ ನೀಡುತ್ತದೆ. ದೇಶದ ಅಭ್ಯುದಯಕ್ಕೆ ಶ್ರಮಿಸಿದ ಎಲ್ಲರನ್ನು ಸ್ಮರಿಸುವುದು ನಮ್ಮ ಕರ್ತವ್ಯ. ನೆಹರೂ ಅವರಿಂದ ವಾಜಪೇಯಿವರೆಗೆ ಆಡಳಿತ ನಡೆಸಿದ ಎಲ್ಲರ ನಾಯಕತ್ವವು ಭಾರತಕ್ಕೆ ಹೊಸದಿಕ್ಕು ನೀಡಿದೆ ಎಂದು ಶ್ಲಾಘಿಸಿದರು.

ಸಂಸತ್ ಮೇಲೆ ಉಗ್ರರು ನಡೆಸಿದ ದಾಳಿಯನ್ನು ಪ್ರಸ್ತಾಪಿಸಿದ ಅವರು, 'ಇದು ಕೇವಲ ಕಟ್ಟಡದ ಮೇಲೆ ನಡೆದ ದಾಳಿಯಲ್ಲ. ಪ್ರಜಾಪ್ರಭುತ್ವದ ತಾಯಿ ಹಾಗೂ ಭಾರತದ ಆತ್ಮದ ಮೇಲೆ ನಡೆದ ದಾಳಿಯಾಗಿದೆ ಎಂದರು.

'ಔದ್ಯೋಗೀಕರಣದ ಬಗ್ಗೆ ಡಾ.ಬಿ.ಆರ್. ಅಂಬೇಡ್ಕರ್ ವಿಭಿನ್ನ ದೃಷ್ಟಿಕೋನ ಹೊಂದಿದ್ದರು. ಸ್ವತಂತ್ರ ಭಾರತದ ಮೊದಲ ಸರ್ಕಾರದ ಅವಧಿಯಲ್ಲಿಯೇ ದೇಶದಲ್ಲಿ ಸಾಮಾಜಿಕ ನ್ಯಾಯ ಜಾರಿಗೊಳಿಸಬೇಕೆಂಬುದು ಅವರ ಗುರಿಯಾಗಿತ್ತು. ದೇಶಕ್ಕೆ ಅವರ ಕೊಡುಗೆ ಸ್ಮರಣೀಯವಾದುದು' ಎಂದರು.

'ಈ ಸದನವು ಇಂದಿರಾ ಗಾಂಧಿ ಅವರ ನಾಯಕತ್ವದಲ್ಲಿ ಬಾಂಗ್ಲಾದೇಶದ ವಿಮೋಚನೆಗೆ ಬೆಂಬಲ ನೀಡಿತು. ಅಲ್ಲದೇ, ತುರ್ತು ಪರಿಸ್ಥಿತಿ ಹೇರುವ ಮೂಲಕ ಜನತಂತ್ರ ವ್ಯವಸ್ಥೆಯ ಮೇಲಿನ ದಾಳಿಗೂ ಸಾಕ್ಷಿಯಾಯಿತು. ಬಳಿಕ ಜನಶಕ್ತಿಯ ಮೂಲಕ ಮತ್ತೆ ದೇಶ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮರಳಿತು' ಎಂದು ಹೇಳಿದರು.

> **ಸಂಪತ್ತು ಸೃಷ್ಟಿ ವಿಚಾರದಲ್ಲಿ ತೀವ್ರ ಅಸಮಾನತೆ ಇದ್ದು, ದೇಶವು ಅಭಿವೃದ್ಧಿ ಹೊಂದಿರುವ ರಾಷ್ಟ್ರ ಎಂಬ ಸ್ಥಾನಮಾನ ಗಳಿಸುವಲ್ಲಿ ಇದು ತೊಡಕಾಗಲಿದೆ**
> **ಅಧೀರ್ ರಂಜನ್ ಚೌಧರಿ**
> ಕಾಂಗ್ರೆಸ್ ನಾಯಕ

> **ಆಳವಾಗಿ ಬೇರೂರಿದ್ದ ಅಸಮತೋಲನವನ್ನು ಹೋಗಲಾಡಿಸಿ ಭಾರತದ ಭವಿಷ್ಯದಲ್ಲಿ ಮಹಿಳೆಯರಿಗೂ ಸಮಾನ ಅವಕಾಶ ಕೊಡುತ್ತಿರುವ ಈ ಕ್ಷಣಕ್ಕೆ ಸಾಕ್ಷಿ ಆಗಿರುವುದು ಹೆಮ್ಮೆ ಮೂಡಿಸಿದೆ**
> **ಮನೇಕಾ ಗಾಂಧಿ,** ಬಿಜೆಪಿ ಸಂಸದೆ

ಫೋಟೊ ಕ್ಲಿಕ್ಕಿಸಿಕೊಂಡ ಸಂಸದರು

ನವದೆಹಲಿ (ಪಿಟಿಐ): ಹೊಸ ಸಂಸತ್ ಭವನದಲ್ಲಿ ಎರಡನೇ ದಿನದ ಕಲಾಪ ಶುರುವಾಗುವುದಕ್ಕೆ ಕೆಲವೇ ಗಂಟೆಗಳಿಗೂ ಮೊದಲು ಹಳೆಯ ಸಂಸತ್ ಭವನವು ರಂಗುರಂಗಿನ ಉಡುಪು ತೊಟ್ಟಿದ್ದ ಉಭಯ ಸದನಗಳ ಸದಸ್ಯರಿಂದ ತುಂಬಿ ತುಳುಕುತ್ತಿತ್ತು.

ವಾಗ್ವಾದ, ಆರೋಪ-ಪ್ರತ್ಯಾರೋಪ ಸೇರಿದಂತೆ ಹಲವು ಘಟನೆಗಳಿಗೆ ಸಾಕ್ಷಿಯಾಗಿದ್ದ ಹಳೆಯ ಭವನಕ್ಕೆ ವಿದಾಯ ಹೇಳುವ ಭಾಗವಾಗಿ ಸಂಸದರು ಗುಂಪು ಫೋಟೊ ಕ್ಲಿಕ್ಕಿಸಿಕೊಂಡರು.

ರಾಜ್ಯಸಭೆ ಸಭಾಪತಿ ಜಗದೀಪ್ ಧನಕರ್, ಪ್ರಧಾನಿ ನರೇಂದ್ರ ಮೋದಿ ಹಾಗೂ ಸ್ಪೀಕರ್ ಓಂ ಬಿರ್ಲಾ ಅವರು ಮೊದಲ ಸಾಲಿನ ಮಧ್ಯದಲ್ಲಿ ಆಸೀನರಾದರು.

ಅವರೊಟ್ಟಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣ ಸಚಿವ ರಾಜನಾಥ ಸಿಂಗ್, ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ, ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ಸಮಾಜವಾದಿ ಪಕ್ಷದ ಸಂಸದ ಶಫೀಕ್ ಉರ್ ರಹಮಾನ್ ಬಾರ್ಕ್ (93 ವರ್ಷ), ಎನ್‌ಸಿಪಿ ನಾಯಕ ಶರದ್ ಪವಾರ್ ಮೊದಲ ಸಾಲಿನಲ್ಲಿಯೇ ಕುಳಿತುಕೊಂಡರು.

ಒಬಿಸಿ ಸ್ತ್ರೀಯರಿಗೂ ಮೀಸಲಾತಿ ಇರಲಿ: ಖರ್ಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹಿಳಾ ಮೀಸಲು ಮಸೂದೆಯನ್ನು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸ್ವಾಗತಿಸಿದರು ಆದರೆ ಇತರ ಹಿಂದುಳಿದ ವರ್ಗಗಳ (ಒಬಿಸಿ) ಮಹಿಳೆಯರಿಗೂ ಇದರಲ್ಲಿ ಮೀಸಲಾತಿ ಇರಬೇಕು. ಅವರಿಗೆ ಪ್ರಾತಿನಿಧ್ಯ ನೀಡದಿದ್ದರೆ ಅನ್ಯಾಯ ಆಗುತ್ತದೆ ಎಂದು ಪ್ರತಿಪಾದಿಸಿದರು.

ಚುನಾವಣೆ ಎದುರಿಸಲು ಎಲ್ಲಾ ಪಕ್ಷಗಳು ದುರ್ಬಲ ಮಹಿಳೆಯರನ್ನು ಆಯ್ಕೆ ಮಾಡಿಕೊಳ್ಳುತ್ತವೆ. ಅವರಿಗೆ ಮಾತನಾಡಲು ಕೂಡ ಅವಕಾಶ ನೀಡುವುದಿಲ್ಲ ಎಂದು ರಾಜ್ಯಸಭೆಯಲ್ಲಿ ಅವರು ಹೇಳಿದರು. ಇದನ್ನು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೇರಿದಂತೆ ಬಿಜೆಪಿ ಮಹಿಳಾ ಸದಸ್ಯರು ವಿರೋಧಿಸಿ ಇಂತಹ ಹೇಳಿಕೆ ಒಪ್ಪಲಾಗದು. ತಾವೆಲ್ಲರೂ ಸಬಲೀಕರಣಗೊಂಡ ಮಹಿಳೆಯರು ಎಂದು ಹೇಳಿದರು.

'ಚುನಾವಣೆ ಎದುರಿಸಲು ಶಕ್ತ ರಾಗಿರುವ ಮಹಿಳೆಯರು ಮಾತ್ರ ಟಿಕೆಟ್ ಗಳಿಸುತ್ತಾರೆ. ಎಸ್‌ಸಿ, ಎಸ್‌ಟಿ ಮತ್ತು ಹಿಂದುಳಿದ ವರ್ಗಗಳ ಅಭ್ಯರ್ಥಿಗಳನ್ನು ಎಲ್ಲಾ ಪಕ್ಷಗಳು ಹೇಗೆ ಆಯ್ಕೆ ಮಾಡುತ್ತವೆ ಎಂಬುದು ನಮಗೆಲ್ಲ ಗೊತ್ತು' ಎಂದು ಖರ್ಗೆ ಹೇಳಿದರು.

ನಿರ್ಮಲಾ ಸೀತಾರಾಮನ್ ಅವರು, ಮಹಿಳಾ ಅಧ್ಯಕ್ಷೆಯನ್ನು ಹೊಂದಿರುವ ಕಾಂಗ್ರೆಸ್ ಇಂತಹ ಹೇಳಿಕೆ ನೀಡಬಾರದು ಎಂದಾಗ ಖರ್ಗೆ ಅವರು, 'ನೀವು ಪಡೆಯುತ್ತಿರುವ ಅವಕಾಶ ಗಳನ್ನು ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ಮಹಿಳೆಯರು ಪಡೆಯುತ್ತಿಲ್ಲ' ಎಂದು ತಿರುಗೇಟುನೀಡಿದರು.

ಈ ಮೀಸಲಾತಿಯನ್ನು ಹಿಂದುಳಿದ ವರ್ಗದ ಮಹಿಳೆಯರಿಗೆ ವಿಸ್ತರಿಸಲು ಸಾಂವಿಧಾನಿಕ ಸೌಕರ್ಯ ಇಲ್ಲದಿದ್ದರೆ, ಅವರು ಅದನ್ನು ಪಡೆಯಲು ಸಾಧ್ಯವಾಗುವುದಿಲ್ಲ. ನೀವು ಇದನ್ನು ಮಾಡದಿದ್ದರೆ, ಹಿಂದುಳಿದ ವರ್ಗದವರಿಗೆ ಅನ್ಯಾಯ ಮಾಡಿದಂತೆ ಆಗುತ್ತದೆ' ಎಂದು ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕರೂ ಆಗಿರುವ ಖರ್ಗೆ ಹೇಳಿದರು.

ಹಳೆ ಭವನ 'ಸಂವಿಧಾನ ಸದನ'

ನವದೆಹಲಿ (ಪಿಟಿಐ): ಹಳೆ ಸಂಸತ್ ಭವನವನ್ನು ಇನ್ನು ಮುಂದೆ 'ಸಂವಿಧಾನ ಸದನ' ಎಂದು ಕರೆ-ಯಲಾಗುತ್ತದೆ ಎಂದು ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಮಂಗಳವಾರ ಹೇಳಿದರು. ಸಂಸತ್ತಿನ ಕಾರ್ಯಭಾರವ-ನ್ನು ಹಳೆ ಸಂಸತ್ ಭವನದಿಂದ ನೂತನ ಸಂಸತ್ ಭವನಕ್ಕೆ ವರ್ಗಾಯಿಸಿದ ಬಳಿಕ ಲೋಕಸಭೆ ಕಲಾಪಕ್ಕೆ ಚಾಲನೆ ನೀಡಿದ ವೇಳೆ ಅವರು ಹೀಗೆ ಹೇಳಿದರು.

ಲೋಕಸಭೆ ಕಲಾಪಗಳಲ್ಲಿ ಬಳಕೆ-ಯಾಗುತ್ತಿದ್ದ 'ಸದನ', 'ಪಡಸಾಲೆ' ಮತ್ತು 'ಗ್ಯಾಲರಿ' ಎಂಬ ಪದಗಳನ್ನು ಇನ್ನು ಮುಂದೆ ಹೊಸ ಸಂಸತ್ ಭವನಕ್ಕೆ ಅನ್ವಯಿಸಿ ಕರೆಯಲಾಗುತ್ತದೆ ಎಂದು ಅವರು ಹೇಳಿದರು.

ನೂತನ ಸಂಸತ್ ಭವನಕ್ಕೆ ಸಂಸದರು ಪ್ರವೇಶಿಸುವ ಮುನ್ನ ಮುನ್ನ ಐತಿಹಾಸಿಕ ಹಳೆ ಸಂಸತ್ ಭವನದದಲ್ಲಿ 'ದೇಶದ ಸಂಸತ್ತಿನ ಶ್ರೀಮಂತ ಪರಂಪರೆ'ಯನ್ನು ನೆನೆಯುವ ಸಲುವಾಗಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಓಂ ಬಿರ್ಲಾ, ಪ್ರಧಾನಿ ನರೇಂದ್ರ ಮೋದಿ, ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಮುಂತಾದ ನಾಯಕರು ಈ ವೇಳೆ ಹಳೆ ಸಂಸತ್ ಭವನ ಕಟ್ಟಡದ ಮಹತ್ವದ ಕುರಿತು ಅಭಿಪ್ರಾಯ ಹಂಚಿಕೊಂಡರು.

'ಗಣೇಶ ಚತುರ್ಥಿಯ ಶುಭದಿನದಂದು ನಾವು ಕಾರ್ಯ-ಕಲಾಪವನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸುತ್ತಿದ್ದೇವೆ. ಹಳೆ ಕಟ್ಟಡದ ಘನತೆಗೆ ಕುಂದುಂಟಾಗಬಾರದು ಹೀಗಾಗಿ ಇದನ್ನು ಕೇವಲ 'ಹಳೆ ಸಂಸತ್ ಭವನ' ಎಂದು ಕರೆಯುವ ಬದಲಾಗಿ 'ಸಂವಿಧಾನ ಸದನ' ಮರುನಾಮಕರಣ ಮಾಡಬೇಕು' ಎಂದು ಮೋದಿ ಅವರು ಸಲಹೆ ನೀಡಿದರು.

ಹಳೆ ಸಂಸತ್ ಭವನಕ್ಕೆ ವಿದಾಯ ಹೇಳುವ ಮೊದಲು ಎಲ್ಲಾ ಪಕ್ಷಗಳ ಸಂಸದರು ಕಟ್ಟಡದ ಎದುರು ಒಟ್ಟಾಗಿ ನಿಂತು ಚಿತ್ರ ತೆಗೆಸಿಕೊಂಡರು.

ಹೊಸ ಭವಿಷ್ಯದೆಡೆಗಿನ ಹೊಸ ಆರಂಭ: ಮೋದಿ

ಚಿಕ್ಕ ಕ್ಯಾನ್ವಾಸ್‌ನಲ್ಲಿ ದೊಡ್ಡ ಚಿತ್ರ ಬಿಡಿಸಲು ಸಾಧ್ಯವಿಲ್ಲ. ಅದೇರೀತಿ, ಸೀಮಿತವಾದ ಚಿಂತನೆಯಿಂದ 'ಭವ್ಯ ಭಾರತ'ದ ರೂಪುರೇಷೆ ಚಿತ್ರಿಸಲು ಸಾಧ್ಯವಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹಳೆ ಸಂಸತ್ ಭವನ ಕಟ್ಟಡದಲ್ಲಿ ನಡೆದ ಸಮಾರಂಭದಲ್ಲಿ ಹೇಳಿದರು.

'ನಾವು ಶ್ರೀಮಂತ ಪರಂಪರೆ ಹೊಂದಿದ್ದೇವೆ. ನಮ್ಮ ಕನಸುಗಳು ಮತ್ತು ಸಂಕಲ್ಪದ ಜೊತೆ ನಮ್ಮ ಪರಂಪರೆಯನ್ನು ಮಿಳಿತಗೊಳಿಸಬೇಕು' ಎಂದರು.

ಈ ಹೊಸ ಸಂಸತ್ ಭವನಕ್ಕೆ ಪ್ರವೇಶಿಸುತ್ತಿರುವುದನ್ನು 'ಹೊಸ ಭವಿಷ್ಯದೆಡೆಗಿನ ಹೊಸ ಆರಂಭ' ಎಂದು ಬಣ್ಣಿಸಿದ ಅವರು, 2047ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿರುವ ರಾಷ್ಟ್ರವನ್ನಾಗಿ ಪರಿವರ್ತಿಸುವ ಸಂಕಲ್ಪದ ಕಡೆಗೆ ದೃಢವಾಗಿ ಹೆಜ್ಜೆ ಇರಿಸುವಂತೆ ಸಂಸತ್ ಸದಸ್ಯರಿಗೆ ಈ ವೇಳೆ ಹೇಳಿದರು.

1952ರಿಂದ ಇಲ್ಲಿಯವರೆಗೆ ವಿವಿಧ ದೇಶಗಳ 41 ನಾಯಕರು ನಮ್ಮ ಸಂಸದರನ್ನು ಉದ್ದೇಶಿಸಿ ಸಂಸತ್ ಭವನದ ಸೆಂಟ್ರಲ್ ಹಾಲ್‌ನಲ್ಲಿ ಮಾತನಾಡಿದ್ದಾರೆ. ಕಳೆದ ಏಳು ದಶಕಗಳಲ್ಲಿ 4,000ಕ್ಕೂ ಹೆಚ್ಚು ಕಾಯ್ದೆಗಳು ಸಂಸತ್ತಿನಲ್ಲಿ ಜಾರಿಯಾಗಿವೆ ಎಂದರು.

ಹಳೆ ಸಂಸತ್ ಭವನದಲ್ಲಿ ಜಾರಿಯಾದ ಕಾಯ್ದೆಗಳನ್ನು ನೆನಪಿಸಿಕೊಂಡ ಅವರು, ತ್ರಿವಳಿ ತಲಾಖ್‌ನಂಥ ಕಾನೂನಿನಿಂದ ಮುಸ್ಲಿಂ ಹೆಣ್ಣುಮಕ್ಕಳನ್ನು ಮುಕ್ತಗೊಳಿಸಿದ್ದು ಇದೇ ಸಂಸತ್ ಭವನದಲ್ಲಿ. ಲಿಂಗತ್ವ ಅಲ್ಪಸಂಖ್ಯಾತ ಸಮುದಾಯ, ಅಂಗವಿಕಲರ ಭವಿಷ್ಯದ ದೃಷ್ಟಿಯಿಂದ ಕಾನೂನುಗಳನ್ನು ಜಾರಿ ಮಾಡಿದ್ದು, ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡಿದ್ದ ಸಂವಿಧಾನದ ವಿಧಿ 370ನ್ನು ರದ್ದುಗೊಳಿಸಿದ್ದೂ ಇದೇ ಕಟ್ಟಡದಲ್ಲಿಯೇ ಎಂದರು.

'ಸಂಸದೀಯ ಪರಂಪರೆ ಕಾಪಾಡಲು ಬದ್ಧರಾಗಿ': 'ದೇಶ ಮುಂದಡಿ ಇಟ್ಟಂತೆ ಸಂವಿಧಾನದ ಮೌಲ್ಯಗಳು, ಆದರ್ಶಗಳು ಮತ್ತು ಸಂಸದೀಯ ಪರಂಪರೆಯನ್ನು ಕಾಪಾಡುವ ನಿಟ್ಟಿನಲ್ಲಿ ಸಂಸತ್ ಸದಸ್ಯರು ಬದ್ಧತೆ ಹೊಂದಿರಬೇಕು' ಎಂದು ರಾಜ್ಯಸಭೆಯಲ್ಲಿ ವಿರೋಧ ಪಕ್ಷಗಳ ನಾಯಕ, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಳೆ ಸಂಸತ್ ಭವನದಲ್ಲಿ ನಡೆದ ಸಮಾರಂಭದಲ್ಲಿ ಹೇಳಿದರು.

'ದೇಶ ಕಟ್ಟುವ, ದೇಶ ಮತ್ತು ಅದರ ಸಂವಿಧಾನ, ಪ್ರ-ಜಾಪ್ರಭುತ್ವವನ್ನು ರಕ್ಷಿಸುವ ದಿಸೆಯಲ್ಲಿ ನಾವು ಪ್ರತಿನಿಧಿಸುವ ರಾಜಕೀಯ ಪಕ್ಷಗಳನ್ನೂ ಮರೆತು ಒಗ್ಗೂಡಬೇಕು' ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಮಾಡಿದ ಭಾಷಣದಲ್ಲಿ ನೆಹರು ಅವರ ಐತಿಹಾಸಿಕ 'ಟ್ರಿಸ್ಟ್ ವಿದ್ ಡೆಸ್ಟಿನಿ' ಭಾಷಣವನ್ನು ಉಲ್ಲೇಖಿಸಿದ್ದರು. ಇದಕ್ಕಾಗಿ ಖರ್ಗೆ ಅವರು ಪ್ರಧಾನಿಗೆ ಧನ್ಯವಾದ ತಿಳಿಸಿದರು.

ಮಹಿಳಾ ಮೀಸಲಿಗೆ ಮುಂದಡಿ

ಒಂದನೇ ಪುಟದಿಂದ...

ಮನಮೋಹನ ಸಿಂಗ್ ನೇತೃತ್ವದ ಯುಪಿಎ ಸರ್ಕಾರದಲ್ಲಿ ಮಂಡನೆಯಾದ ಮಹಿಳಾ ಮೀಸಲಾತಿ ಮಸೂದೆಯ ಸ್ವರೂಪಕ್ಕೆ ಸಮಾಜವಾದಿ ಪಕ್ಷ ಹಾಗೂ ಆರ್‌ಜೆಡಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದವು. ಈ ಪಕ್ಷಗಳ ವಿರೋಧದಿಂದಾಗಿ, ಮಸೂದೆಗೆ ಅಂಗೀಕಾರ ಸಿಕ್ಕಿರಲಿಲ್ಲ. ಆರ್‌ಜೆಡಿ ಹಾಗೂ ಸಮಾಜವಾದಿ ಪಕ್ಷ ಈಗ 'ಇಂಡಿಯಾ' ಮೈತ್ರಿಕೂಟದ ಭಾಗವಾಗಿವೆ. ಪಂಚರಾಜ್ಯಗಳ ಹಾಗೂ ಲೋಕಸಭಾ ಚುನಾವಣೆಗೆ ಮುನ್ನ ಈ ಮೈತ್ರಿಕೂಟದ ಪಕ್ಷಗಳು ಮಹಿಳಾ ಮೀಸಲಾತಿ ಕುರಿತು ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕು. ಇಲ್ಲದಿದ್ದರೆ ಈ ಪಕ್ಷಗಳು ನಾರಿ ಶಕ್ತಿಯ ಬಿಸಿಗೆ ತುತ್ತಾಗಬೇಕು ಎಂಬುದು ಬಿಜೆಪಿಯ ತಂತ್ರ.

ಈಗಿನ ಮಸೂದೆಯನ್ನು ಬಹುತೇಕ ಪಕ್ಷಗಳು ಸ್ವಾಗತಿಸಿವೆ. ಆದರೆ, ಮಹಿಳಾ ಮೀಸಲಾತಿಯಲ್ಲಿ ಹಿಂದುಳಿದವರಿಗೆ ಸಹ ಕೋಟಾ ನಿಗದಿಪಡಿ-ಸಬೇಕು ಎಂದು ಕಾಂಗ್ರೆಸ್, ಸಮಾಜವಾದಿ ಪಕ್ಷ ಹಾಗೂ ಬಹುಜನ ಸಮಾಜವಾದಿ ಪಕ್ಷ ಒತ್ತಾಯಿಸಿವೆ. ಮಹಿಳಾ ಮೀಸಲಾತಿ ಮಸೂದೆ ತನ್ನದೇ ಕೂಸು ಎಂದು ಪದೇ ಪದೇ ಹೇಳುತ್ತಾ ಬಂದ 'ಕೈ' ಪಾಳಯವು, ಮಹಿಳಾ ಮೀಸಲಾತಿಯಲ್ಲಿ ಒಬಿಸಿಗಳಿಗೆ ಕೋಟಾ ನಿಗದಿಪಡಿಸಬೇಕು ಎಂದು ಪಟ್ಟು ಹಿಡಿಯುವ ಮೂಲಕ ತನ್ನ ರಣತಂತ್ರದಲ್ಲಿ ಬದಲಾವಣೆ ಮಾಡಿದೆ.

ಇನ್ನೊಂದೆಡೆ, ಆಮ್ ಆದ್ಮಿ ಪಕ್ಷವು ಕೇಂದ್ರ ಸರ್ಕಾರದ ವಿರುದ್ಧ ಟೀಕಾಪ್ರಹಾರ ನಡೆಸಿದೆ. ಈ ಮಸೂದೆಯು 2024ರ ಲೋಕಸಭೆ ಚುನಾವಣೆಗೆ ಮುನ್ನ ಮಹಿಳೆಯರನ್ನು ಮೂರ್ಖ-ರನ್ನಾಗಿಸುವ ಮಸೂದೆ ಎಂದು ಟೀಕಿಸಿದೆ.

ಸುದ್ದಿಗಾರರ ಜತೆಗೆ ಮಾತನಾಡಿದ ಎಎಪಿ ಸಚಿವೆ ಅತಿಶಿ, 'ಮಸೂದೆಯಲ್ಲಿ ಜನಗಣತಿ ಹಾಗೂ ಕ್ಷೇತ್ರ ಪುನರ್‌ವಿಂಗಡಣೆಯ ಷರತ್ತು-ಗಳನ್ನು ಸೇರಿಸಿದ್ದು ಏಕೆ? ಅಂದರೆ, 2024ರ ಲೋಕಸಭಾ ಚುನಾವಣೆಗೆ ಮುನ್ನ ಮಹಿಳಾ ಮೀಸಲಾತಿಯನ್ನು ಜಾರಿಗೆ ತರುವುದಿಲ್ಲ ಎಂದು ಅರ್ಥ' ಎಂದರು. 2024ರ ಚುನಾವಣೆಯಲ್ಲೇ ಈ ಮಸೂದೆಯನ್ನು ಜಾರಿಗೆ ತರಬೇಕು ಎಂದೂ ಆಗ್ರಹಿಸಿದರು.

ಮಸೂದೆ ವಿಷಯದಲ್ಲಿ ಆಡಳಿತಾರೂಢ ಬಿಜೆಪಿ ಹಾಗೂ ಕಾಂಗ್ರೆಸ್ ನಾಯಕರ ನಡುವೆ ವಾಕ್ಸಮರ ಆರಂಭವಾಗಿದೆ. 'ಶಾಸನಸಭೆಗಳಲ್ಲಿ ಮಹಿಳಾ ಮೀಸಲಾತಿ ಬಗ್ಗೆ ಕಾಂಗ್ರೆಸ್ ಯಾವತ್ತೂ ಗಂಭೀರವಾಗಿರಲಿಲ್ಲ. ಕಾಂಗ್ರೆಸ್ ನಾಯಕರದ್ದು ತೋರಿಕೆಗಷ್ಟೇ ಕಾಳಜಿ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಟೀಕಿಸಿದರು.

ಬಿಜೆಪಿ ತಂದಿರುವ ಮಹಿಳಾ ಮೀಸಲಾತಿ ಮಸೂದೆಯು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಬಹಳ ಹಿಂದೆಯೇ ಜಾರಿಗೆ ತಂದಿರುವ ಮಹಿಳಾ ಮೀಸಲಾತಿಯಿಂದ ಸ್ಫೂರ್ತಿ ಪಡೆದಿದೆ ಎಂದು ಜೆಡಿಯು ಹೇಳಿಕೊಂಡಿದೆ.

ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಾಜೀವ್ ರಂಜನ್, 'ಬಿಹಾರವು ದಾರಿ ತೋರಿಸುತ್ತದೆ ಎಂಬುದನ್ನು ಮಸೂದೆ ಸಾಬೀತುಪಡಿಸಿದೆ' ಎಂದು ವ್ಯಾಖ್ಯಾ-ನಿಸಿದರು.

'ಬಿಹಾರದಲ್ಲಿ ಪಂಚಾಯತ್ ಹಾಗೂ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ 50ರಷ್ಟು ಮೀಸಲಾತಿ ನೀಡುವ ಮಸೂದೆಗೆ 2006ರಲ್ಲಿ ಅಂಗೀಕಾರ ಪಡೆಯಲಾಯಿತು. ಮಹಿಳೆಯರಿಗೆ ಶೇ 50ರಷ್ಟು ಮೀಸಲಾತಿ ನೀಡಿದ ಮೊದಲ ರಾಜ್ಯ ಬಿಹಾರ. ನಿತೀಶ್ ಕುಮಾರ್ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಕೆಲವೇ ತಿಂಗಳಲ್ಲಿ ದಿಟ್ಟ ಹೆಜ್ಜೆ ಇಟ್ಟರು' ಎಂದರು.

ಸಂಸತ್‌ನ ಕೆಳಮನೆಯಲ್ಲಿ ಮಹಿಳಾ ಮೀಸಲಾತಿ ಮಸೂದೆ ಮಂಡನೆಯಾಗಿರುವುದಕ್ಕೆ ಬಿಹಾರದ ಪಟ್ನಾದಲ್ಲಿ ಬಿಜೆಪಿ ಕಾರ್ಯಕರ್ತೆಯರು ಸಂಭ್ರಮಿಸಿದರು —ಪಿಟಿಐ ಚಿತ್ರ

ಎಸ್‌ಪಿ, ಬಿಎಸ್‌ಪಿ ಷರತ್ತುಬದ್ಧ ಬೆಂಬಲ

ಒಂದನೇ ಪುಟದಿಂದ

ಸುದ್ದಿಗಾರರ ಜತೆಗೆ ಮಾತನಾಡಿದ ಮಾಯಾವತಿ, ಎಸ್‌ಸಿ, ಎಸ್‌ಟಿ ಹಾಗೂ ಒಬಿಸಿ ವರ್ಗಗಳಿಗೆ ಶೇ 50 ಮೀಸಲಾತಿ ನೀಡಬೇಕು ಎಂದು ಆಗ್ರಹಿಸಿದರು. 'ನಮ್ಮ ಪಕ್ಷವು ಮಸೂದೆಯನ್ನು ಬೆಂಬಲಿಸುತ್ತದೆ. ಆದರೆ, ನಾವು ಎಸ್‌ಸಿ/ ಎಸ್‌ಟಿ ಮತ್ತು ಒಬಿಸಿ ವರ್ಗಗಳಿಗೆ ಮೀಸಲಾತಿ ಬಯಸುತ್ತೇವೆ. ಈ ಸಮುದಾಯಗಳಿಗೆ ಅವರ ಜನಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ ಶೇಕಡಾ 50ರಷ್ಟು ಮೀಸಲಾತಿ ನೀಡಿದರೆ ಉತ್ತಮ' ಎಂದರು.

'ಮಹಿಳಾ ಕೋಟಾದಲ್ಲಿ ಪ್ರತ್ಯೇಕ ಮೀಸಲಾತಿ ನೀಡದಿದ್ದರೆ ಈ ಸಮುದಾಯಗಳಿಗೆ ದೊಡ್ಡ ಅನ್ಯಾಯವಾಗಲಿದೆ' ಎಂದೂ ಪ್ರತಿ-ಪಾದಿಸಿದರು.

ಆದಾಗ್ಯೂ, ಮಹಿಳಾ ಮೀಸಲಾತಿ ಮಸೂದೆಯಲ್ಲಿ ಎಸ್‌ಸಿ/ಎಸ್‌ಟಿ ಮತ್ತು ಒಬಿಸಿ ಸಮುದಾಯಗಳಿಗೆ ಪ್ರತ್ಯೇಕ ಮೀಸಲಾತಿ ಇಲ್ಲದಿದ್ದರೂ ಪಕ್ಷ ಬೆಂಬಲಿಸುತ್ತದೆ ಎಂದು ಮಾಯಾವತಿ ಸ್ಪಷ್ಟಪಡಿಸಿದರು.

'ಮಹಿಳಾ ಮೀಸಲಾತಿಯು ಲಿಂಗ ನ್ಯಾಯ ಮತ್ತು ಸಾಮಾಜಿಕ ನ್ಯಾಯದ ನಡುವೆ ಸಮತೋಲನ ಹೊಂದಿರಬೇಕು. ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು ಮತ್ತು ಬುಡಕಟ್ಟು ಜನಾಂಗದವರಿಗೆ ಮೀಸಲಾತಿಯ ಲಾಭ ಸಿಗಬೇಕು' ಎಂದು ಅಖಿಲೇಶ್ ಹೇಳಿದರು.

- ಸಂವಿಧಾನ (128ನೇ ತಿದ್ದುಪಡಿ) ಮಸೂದೆ, 2023
- 2023ರ ಸೆಪ್ಟೆಂಬರ್ 19ರಂದು ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರು ಲೋಕಸಭೆಯಲ್ಲಿ ಪರಿಚಯಿಸಿದರು.

ಮಸೂದೆಯ ಉದ್ದೇಶಗಳು

- ಪಂಚಾಯತ್‌ರಾಜ್ ಸಂಸ್ಥೆಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಗಣನೀಯವಾಗಿದೆ. ಆದರೆ, ರಾಜ್ಯ ಶಾಸನಸಭೆಗಳಲ್ಲಿ ಹಾಗೂ ಸಂಸತ್ತಿನಲ್ಲಿ ಅವರ ಪ್ರಾತಿನಿಧ್ಯ ಬಹಳ ಕಡಿಮೆ ಇದೆ. ಇದನ್ನು ಹೆಚ್ಚಿಸುವುದು ಮುಖ್ಯ ಉದ್ದೇಶ.
- ನೀತಿ ನಿರೂಪಣೆ ಹಾಗೂ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆ-ಯಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡರೆ ಅವರ ನಿಜವಾದ ಸಬಲೀಕರಣ ಆಗಲಿದೆ. ಅವರು ಶಾಸಕಾಂಗದ ಚರ್ಚೆಗಳು ಹಾಗೂ ನಿರ್ಧಾರ ತೆಗೆದುಕೊಳ್ಳುವ ಗುಣಮಟ್ಟವನ್ನು ಉತ್ಕೃಷ್ಟಗೊಳಿಸುತ್ತಾರೆ.

ಸಂವಿಧಾನ ತಿದ್ದುಪಡಿ

- ಸಂವಿಧಾನವನ್ನು ತಿದ್ದುಪಡಿ ಮಾಡುವ ಮಸೂದೆಯನ್ನು ಸದನದಲ್ಲಿ ಅಂಗೀಕರಿಸಲಾಗಿದೆ ಎಂದು ಪರಿಗಣಿಸಬೇಕಾದರೆ, ಕನಿಷ್ಠ ಅರ್ಧದಷ್ಟು (ಶೇ 50ರಷ್ಟು) ಸಂಸದರು ಸದನದಲ್ಲಿ ಹಾಜರಿದ್ದು ಮತ ಚಲಾಯಿಸಬೇಕಾಗುತ್ತದೆ. ಇದರಲ್ಲಿ ಮೂರನೇ ಎರಡರಷ್ಟು ಸಂಸದರು ಮಸೂದೆಯ ಪರವಾಗಿ ಮತ ಹಾಕಬೇಕು.
- ಲೋಕಸಭೆ ಮತ್ತು ರಾಜ್ಯಸಭೆ ಎರಡೂ ಕಡೆ ಮಸೂದೆಯನ್ನು ಅಂಗೀಕರಿಸಿದ ನಂತರ, ಕನಿಷ್ಠ ಶೇ 50ರಷ್ಟು ರಾಜ್ಯ ವಿಧಾನಸಭೆಗಳು ಮಸೂದೆಗೆ ಅಂಗೀಕಾರ ನೀಡಬೇಕು.
- ಇದಾದ ನಂತರ ರಾಷ್ಟ್ರಪತಿಗಳು ಅದಕ್ಕೆ ಒಪ್ಪಿಗೆ ಸೂಚಿಸಿ ಅಧಿಸೂಚನೆ ಹೊರಡಿಸಬೇಕು.

ಮಸೂದೆಯಲ್ಲಿ ಏನಿಲ್ಲ?

- ರಾಜ್ಯಸಭೆ ಅಥವಾ ವಿಧಾನ ಪರಿಷತ್ತಿನಲ್ಲಿ ಮಹಿಳೆಯರಿಗೆ ಮೀಸಲಾತಿಯ ಪ್ರಸ್ತಾಪವಿಲ್ಲ.
- ಒಬಿಸಿಗಳಿಗೆ ಕೋಟಾದೊಳಗೆ ಯಾವುದೇ ಮೀಸಲಾತಿ ಇಲ್ಲ.

ಈಗ ಎಷ್ಟಿದ್ದಾರೆ ಸದಸ್ಯರು?

ಪ್ರಸ್ತುತ ಲೋಕಸಭೆಯು 78 ಮಹಿಳಾ ಸದಸ್ಯರನ್ನು ಹೊಂದಿದೆ. ಇದು 543 ರ ಒಟ್ಟು ಬಲದ 15 ಪ್ರತಿಶತಕ್ಕಿಂತ ಕಡಿಮೆಯಾಗಿದೆ. ರಾಜ್ಯಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯವು ಶೇ 14ರಷ್ಟು ಇದೆ. ರಾಜ್ಯದ ವಿಧಾನಸಭೆಗಳಲ್ಲಿ ಮಹಿಳೆಯರ ಪ್ರಾತಿನಿಧ್ಯವು ಶೇ 5ರಿಂದ 12ರಷ್ಟು ಇದೆ.

ಮಸೂದೆಯಲ್ಲಿ ಏನಿದೆ?

- ದೆಹಲಿ ಸೇರಿದಂತೆ ರಾಜ್ಯ ವಿಧಾನಸಭೆಗಳಲ್ಲಿ ಮೂರನೇ ಒಂದು ಭಾಗದಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಬೇಕು.
- ಲೋಕಸಭೆಯಲ್ಲಿ ಮಹಿಳೆಯರಿಗೆ ಶೇ 33ರಷ್ಟು ಸ್ಥಾನಗಳನ್ನು ಮೀಸಲಿಡಬೇಕು.
- ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಮೀಸಲಿಟ್ಟ ಮೂರನೇ ಒಂದು ಭಾಗದಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಬೇಕು.
- ಹೊಸ ಕೋಟಾ ನಿಗದಿಗೆ ಸಂಬಂಧಿಸಿದ ಕಾನೂನು ಜಾರಿಗೆ ಬಂದ ನಂತರ ನಡೆಸಲಾಗುವ ಮೊದಲ ಜನಗಣತಿಯ ಅಂಕಿಅಂಶಗಳನ್ನು ಪರಿಗಣಿಸಿ ನಡೆಸುವ ಕ್ಷೇತ್ರ ಪುನರ್ ವಿಂಗಡಣೆಯ ಬಳಿಕವಷ್ಟೇ ಹೊಸ ಕೋಟಾ ಅಸ್ತಿತ್ವಕ್ಕೆ ಬರುತ್ತದೆ.
- ಮಹಿಳೆಯರಿಗೆ ಕಾಯ್ದಿರಿಸಿದ ಸ್ಥಾನಗಳು ಸಂಸತ್ತು ಕಾನೂನಿನ ಮೂಲಕ ನಿರ್ಧರಿಸುವ ದಿನಾಂಕದವರೆಗೆ ಮುಂದುವರಿಯುತ್ತದೆ.
- ಸಂಸತ್ತು ಕಾನೂನಿನ ಮೂಲಕ ನಿರ್ಧರಿಸಿದಂತೆ ಪ್ರತಿ ಕ್ಷೇತ್ರ ಮರುವಿಂಗಡಣೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಮಹಿಳೆಯರಿಗೆ ಮೀಸಲಿಟ್ಟ ಸ್ಥಾನಗಳ ರೊಟೇಷನ್ ಜಾರಿಗೆ ಬರುತ್ತದೆ.

ಯಾವಾಗ ಜಾರಿಗೆ ಬರಲಿದೆ?

- ತಕ್ಷಣವೇ ಅಲ್ಲ, 2029ರ ವೇಳೆಗೆ ಅನುಷ್ಠಾನವಾಗಬಹುದು.
- 2021ರಲ್ಲಿ ಜನಗಣತಿ ನಡೆಯಬೇಕಿತ್ತು. ಕೋವಿಡ್ ಕಾರಣಕ್ಕೆ ಜನಗಣತಿಯನ್ನು ಮುಂದೂಡಲಾಗಿದೆ. ಜನಗಣತಿ ಪೂರ್ಣಗೊಳಿಸಲು ಸರ್ಕಾರ ಎಷ್ಟು ಸಮಯ ತೆಗೆದುಕೊಳ್ಳುತ್ತದೆ ಎಂಬುದು ಕುತೂಹಲಕರ ಸಂಗತಿ.
- ಜನಗಣತಿ ಪೂರ್ಣಗೊಂಡ ಬಳಿಕ ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆ ಪ್ರಕ್ರಿಯೆ ನಡೆಸಲಾಗುತ್ತದೆ.

ಕೇರಳ: ಮುಜರಾಯಿ ಸಚಿವರಿಗೇ ಜಾತಿ ತಾರತಮ್ಯ!

ತಿರುವನಂತಪುರ (ಪಿಟಿಐ): ದೇವಾಲಯದಲ್ಲಿ ಜಾತಿ ತಾರತಮ್ಯ ಎದುರಿಸಿದ್ದೇನೆ ಎಂದು ಕೇರಳ ದೇವಸ್ವಂ (ಮುಜರಾಯಿ) ಸಚಿವ ಕೆ.ರಾಧಾಕೃಷ್ಣನ್ ಅವರು ಆರೋಪಿಸಿರುವ ವಿಚಾರಕ್ಕೆ ಸಂಬಂಧಿಸಿ ಮಂಗಳವಾರ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಪಿಣರಾಯಿ ವಿಜಯನ್, 'ಸಚಿವರೊಂದಿಗೆ ಚರ್ಚಿಸಿದ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಚಿವರು ಜಾತಿ ತಾರತಮ್ಯ ಎದುರಿಸಿರುವ ವಿಚಾರ ಅರಿತು ಆಘಾತಗೊಂಡಿದ್ದೇನೆ' ಎಂದು ಹೇಳಿದ್ದಾರೆ.

'ದೇವಾಲಯವೊಂದರಲ್ಲಿ ನಡೆದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ದೀಪವನ್ನು ಬೆಳಗಿಸುವ ಹಲಗಾರತಿಯನ್ನು ನನ್ನ ಕೈಗೆ ನೀಡಲು ಇಬ್ಬರು ಅರ್ಚಕರು ನಿರಾಕರಿಸಿದ್ದರು. ಬದಲಿಗೆ ಅವರೇ ದೀಪವನ್ನು ಬೆಳಗಿಸಿ ಬಳಿಕ ಹಲಗಾರತಿಯನ್ನು ನೆಲದಲ್ಲಿರಿಸಿದ್ದರು' ಎಂದು ಪರಿಶಿಷ್ಟ ಜಾತಿಗೆ ಸೇರಿದ ಸಚಿವ ರಾಧಾಕೃಷ್ಣನ್ ಸೋಮವಾರ ಆರೋಪಿಸಿದ್ದರು. ಆದರೆ ಸಚಿವರು ದೇವಾಲಯದ ಹೆಸರನ್ನು ಬಹಿರಂಗಪಡಿಸಿರಲಿಲ್ಲ.

ಕಣ್ಣೂರು ಜಿಲ್ಲೆಯ ಪಯ್ಯನ್ನೂರಿನ ದೇವಾಲಯದಲ್ಲಿ ಈಚೆಗೆ ನಡೆದ ಉದ್ಘಾಟನಾ ಸಮಾರಂಭದಲ್ಲಿ ಸಚಿವರು ಪಾಲ್ಗೊಂಡಿರುವ ದೃಶ್ಯವಿರುವ ವಿಡಿಯೊವನ್ನು ಸುದ್ದಿವಾಹಿನಿಗಳು ಪ್ರಸಾರ ಮಾಡಿವೆ. ಈ ದೃಶ್ಯದಲ್ಲಿ ಅರ್ಚಕರು ಸಚಿವರ ಕೈಗೆ ಹಲಗಾರತಿ ನೀಡದೆ ಕೆಳಗಿರಿಸಿರುವ ದೃಶ್ಯವಿದೆ.

ಭಾರತದ ಅಧಿಕಾರಿ ಉಚ್ಚಾಟನೆ ಬೆನ್ನಲ್ಲೇ ಕ್ರಮ • ಖಾಲಿಸ್ತಾನ ಉಗ್ರನ ಹತ್ಯೆಯಲ್ಲಿ ಕೈವಾಡ ಆರೋಪ ನಿರಾಕರಣೆ

ಕೆನಡಾ ರಾಜತಾಂತ್ರಿಕ ಅಧಿಕಾರಿ ಉಚ್ಚಾಟನೆ

ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಅವರು ಕೆನಡಾ ಸಂಸತ್ತಿನ ಕೆಳಮನೆಯಲ್ಲಿ ಮಾತನಾಡಿದರು

ನವದೆಹಲಿ (ಪಿಟಿಐ): ಖಾಲಿಸ್ತಾನ ಪ್ರತ್ಯೇಕತಾವಾದಿ ನಾಯಕನ ಹತ್ಯೆಯಲ್ಲಿ ಭಾರತದ ಕೈವಾಡವಿದೆ ಎಂದು ಕೆನಡಾದ ಪ್ರಧಾನಿ ಜಸ್ಟಿನ್ ಟ್ರುಡೊ ಅವರು ಮಾಡಿರುವ ಆರೋಪವನ್ನು ಭಾರತ ತಿರಸ್ಕರಿಸಿದ್ದು, 'ಇದು ಅಸಂಬದ್ಧ ಮತ್ತು ಅರ್ಥಹೀನ' ಎಂದು ಹೇಳಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಭಾರತದ ಅಧಿಕಾರಿಯನ್ನು ಕೆನಡಾ ಸೋಮವಾರ ಉಚ್ಚಾಟಿಸಿದ ಬೆನ್ನಲ್ಲೇ, ಇಲ್ಲಿರುವ ಆ ದೇಶದ ಹಿರಿಯ ರಾಜತಾಂತ್ರಿಕ ಅಧಿಕಾರಿಯನ್ನು ಉಚ್ಚಾಟಿಸಿರುವುದಾಗಿ ವಿದೇಶಾಂಗ ಸಚಿವಾಲಯ ಹೇಳಿಕೆ ನೀಡಿದೆ.

ಭಾರತದಲ್ಲಿನ ಕೆನಡಾ ಹೈಕಮಿಷನರ್ ಕ್ಯಾಮರಾನ್ ಮ್ಯಾಕೆ ಅವರಿಗೆ ಮಂಗಳವಾರ ಬೆಳಿಗ್ಗೆ ಸಮನ್ಸ್ ನೀಡಿದ್ದ ಭಾರತ, ಅಲ್ಲಿನ ಹಿರಿಯ ಅಧಿಕಾರಿಯನ್ನು ಉಚ್ಚಾಟಿಸುವ ಕುರಿತು ಮಾಹಿತಿ ನೀಡಿತ್ತು. 'ನಮ್ಮ ಆಂತರಿಕ ವಿಷಯದಲ್ಲಿ ಆ ದೇಶದ ರಾಜತಾಂತ್ರಿಕ ಅಧಿಕಾರಿಗಳ ಹಸ್ತಕ್ಷೇಪ ಮತ್ತು ಭಾರತ ವಿರೋಧಿ ಚಟುವಟಿಕೆಗಳಲ್ಲಿ ಅವರ ಪಾಲ್ಗೊಳ್ಳುವಿಕೆ ಹೆಚ್ಚುತ್ತಿರುವ ಬಗ್ಗೆ ನವದೆಹಲಿಯ ಕಳವಳವನ್ನು ಇದು ಬಿಂಬಿಸುತ್ತದೆ' ಎಂದು ವಿದೇಶಾಂಗ ಸಚಿವಾಲಯ ಹೇಳಿತ್ತು.

ಟ್ರುಡೊ ಅವರು ಸಂಸತ್ತಿನಲ್ಲಿ ನೀಡಿದ ಹೇಳಿಕೆಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಿರುವ ಭಾರತವು, 'ಇಂತಹ ಆಧಾರರಹಿತ ಆರೋಪಗಳು, ಆ ದೇಶದಲ್ಲಿ ಆಶ್ರಯ ಪಡೆದಿರುವ ಖಾಲಿಸ್ತಾನ ಉಗ್ರರು ಮತ್ತು ಪ್ರತ್ಯೇಕತಾವಾದಿಗಳಿಂದ ಗಮನವನ್ನು ಬೇರೆಡೆಗೆ ಹರಿಸುವಂತೆ ಮಾಡುತ್ತವೆ. ಅಲ್ಲದೆ, ಭಾರತದ ಸಾರ್ವಭೌಮತೆ ಮತ್ತು ಭೂಪ್ರದೇಶದ ಸಮಗ್ರತೆಗೆ ಧಕ್ಕೆ ತರುತ್ತವೆ ಎಂದು ತಿಳಿಸಿದೆ.

ಐದು ದಿನಗಳಲ್ಲಿ ಭಾರತದಿಂದ ಹೊರ ಹೋಗುವಂತೆ ಕೆನಡಾ ರಾಜತಾಂತ್ರಿಕ ಅಧಿಕಾರಿಗೆ ಸೂಚಿಸಲಾಗಿದೆ ಎಂದು ಪ್ರಕಟಿಸಿದ ಸಚಿವಾಲಯವು ಅಧಿಕಾರಿಯ ಹೆಸರನ್ನು ಬಹಿರಂಗ ಪಡಿಸಿರಲಿಲ್ಲ. ಆದರೆ, ನಂತರದಲ್ಲಿ ಸಚಿವಾಲಯವು ಈ ಅಧಿಕಾರಿ ನವದೆಹಲಿಯಲ್ಲಿರುವ ಆ ದೇಶದ ಬೇಹುಗಾರಿಕಾ ಸಂಸ್ಥೆಯ ಮುಖ್ಯಸ್ಥ ಅಲಿವೀಯಾ ಸಿಲ್‌ವೆಸ್ಟ್ ಎಂದು ಹೇಳಿದೆ.

'ಖಾಲಿಸ್ತಾನ ನಾಯಕ ಹರ್ದೀಪ್ ಸಿಂಗ್ ನಿಜ್ಜರ್‌ನ ಹತ್ಯೆಯಲ್ಲಿ ಭಾರತದ ಕೈವಾಡವಿದೆಯೆಂಬ ಆರೋಪವಿದೆ. ಈ ಕಾರಣ ಭಾರತದ ಸಂಶೋಧನಾ ಮತ್ತು ವಿಶ್ಲೇಷಣಾ ವಿಭಾಗದ (ರಾ) ಮುಖ್ಯಸ್ಥ ಪವನ್ ಕುಮಾರ್ ರೈ ಅವರನ್ನು ಅಲ್ಲಿಂದ ಉಚ್ಚಾಟಿಸಲಾಗಿದೆ' ಎಂದು ಅಲ್ಲಿನ ವಿದೇಶಾಂಗ ಸಚಿವೆ ಮೆಲನಿ ಜೋಲಿ ಪ್ರಕಟಿಸಿದ ಕೆಲ ತಾಸಿನ ಬಳಿಕ ಭಾರತವು ಅಲ್ಲಿನ ರಾಜತಾಂತ್ರಿಕ ಅಧಿಕಾರಿಯನ್ನು ಉಚ್ಚಾಟಿಸುವ ಕ್ರಮ ಕೈಗೊಂಡಿದೆ.

ಹರ್ದೀಪ್‌ಸಿಂಗ್‌ನನ್ನು ಜೂನ್‌ನಲ್ಲಿ ಇಬ್ಬರು ಬಂದೂಕುಧಾರಿಗಳು ಕೆನಡಾದ ಸರ್‍ರೆಯಲ್ಲಿ ಗುಂಡಿಟ್ಟು ಕೊಂದಿದ್ದರು.

ತನಿಖೆ: ಸೋಮವಾರ ಸಂಸತ್ತಿನಲ್ಲಿ ಹೇಳಿಕೆ ನೀಡಿದ್ದ ಟ್ರುಡೊ ಅವರು, 'ಇಲ್ಲಿನ ಪ್ರಜೆ ಹರ್ದೀಪ್‌ಸಿಂಗ್ ನಿಜ್ಜರ್ ಹತ್ಯೆಯಲ್ಲಿ ಭಾರತ ಸರ್ಕಾರದ ಏಜೆಂಟರುಗಳ ಕೈವಾಡವಿರುವ ಆರೋಪಗಳ ಕುರಿತು ತನಿಖೆ ನಡೆಸಲಾಗುತ್ತಿದೆ' ಎಂದಿದ್ದರು.

'ನಮ್ಮ ದೇಶದ ಪ್ರಜೆಯ ಹತ್ಯೆಯಲ್ಲಿ ಹೊರದೇಶ ಸರ್ಕಾರದ ಯಾವುದೇ ಪಾಲ್ಗೊಳ್ಳುವಿಕೆಯನ್ನು ಸಹಿಸುವುದಿಲ್ಲ. ತನಿಖೆ ಬಗ್ಗೆ ಬ್ರಿಟನ್ ಪ್ರಧಾನಿ ರಿಷಿ ಸುನಕ್, ಫ್ರಾನ್ಸ್ ಪ್ರಧಾನಿ ಇಮ್ಯಾನುಯೆಲ್ ಮ್ಯಾಕ್ರನ್ ಮತ್ತು ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರಿಗೂ ವಿವರ ನೀಡಲಾಗಿದೆ' ಎಂದು ಕೂಡ ಹೇಳಿದ್ದರು.

ಬಾಂಧವ್ಯದಲ್ಲಿ ಬಿಕ್ಕಟ್ಟು

ಕೆನಡಾದಲ್ಲಿ ಭಾರತದ ವಿರುದ್ಧ ಖಾಲಿಸ್ತಾನ ಪರ ಸಂಘಟನೆಗಳು ಕೆಲವು ವರ್ಷಗಳಿಂದ ಪ್ರಚಾರ ನಡೆಸುತ್ತಾ ಬಂದಿರುವುದರಿಂದ ನವದೆಹಲಿ ಮತ್ತು ಒಟ್ಟಾವ ನಡುವಣ ಸಂಬಂಧ ಹದಗೆಟ್ಟಿದೆ. ಅಲ್ಲಿ ನೆಲೆ ಕಂಡುಕೊಂಡಿರುವ ಪ್ರತ್ಯೇಕತಾವಾದಿಗಳು ಮತ್ತು ಉಗ್ರರ ವಿರುದ್ಧ ಕ್ರಮ ತೆಗೆದುಕೊಳ್ಳದೇ ಇರುವ ಬಗ್ಗೆ ಭಾರತ ಸರ್ಕಾರ ತನ್ನ ಕಳವಳವನ್ನು ಪದೇ ಪದೇ ವ್ಯಕ್ತಪಡಿಸುತ್ತಲೇ ಬಂದಿದೆ.

ನವದೆಹಲಿಯಲ್ಲಿ ಇತ್ತೀಚೆಗೆ ನಡೆದ ಜಿ–20 ಶೃಂಗಸಭೆ ವೇಳೆ ನರೇಂದ್ರ ಮೋದಿ ಮತ್ತು ಟ್ರುಡೊ ದ್ವಿಪಕ್ಷೀಯ ಮಾತುಕತೆ ನಡೆಸಿದ್ದರು. ಪ್ರತ್ಯೇಕತಾವಾದಿಗಳ ಚಟುವಟಿಕೆಗಳ ಬಗ್ಗೆ ಭಾರತದ ತೀವ್ರ ಆತಂಕವನ್ನು ಮೋದಿ ಅವರು ಟ್ರುಡೊ ಅವರಿಗೆ ಮನವರಿಕೆ ಮಾಡಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ಬಿಡುಗಡೆ ಮಾಡಿದ್ದ ಹೇಳಿಕೆ ತಿಳಿಸಿತ್ತು.

'ಕೊಲೆ, ಮಾನವ ಸಾಗಣೆ ಮತ್ತು ಸಂಘಟಿತ ಅಪರಾಧ ಸೇರಿದಂತೆ ವಿವಿಧ ಅಕ್ರಮ ಚಟುವಟಿಕೆಗಳು ಅಲ್ಲಿ ನಡೆಯುತ್ತಿರುವುದು ಹೊಸ ವಿಷಯವೇನಲ್ಲ. ಆ ನೆಲದಿಂದ ಭಾರತ ವಿರೋಧಿ ಚಟುವಟಿಕೆಗಳು ನಡೆಯದಂತೆ ಕ್ರಮ ಕೈಗೊಳ್ಳಬೇಕು ಮತ್ತು ಅಂತಹ ಶಕ್ತಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸುವುದಾಗಿ ಸಚಿವಾಲಯ ಹೇಳಿದೆ.

ಭಾರತದೊಂದಿಗೆ ವ್ಯಾಪಾರ ಒಪ್ಪಂದಗಳು ಹಿಂದಿನಂತೆಯೇ ಮುಂದುವರಿಯಲಿವೆ ಎಂದು ಬ್ರಿಟನ್ ಪ್ರಧಾನಿ ಸುನಕ್ ಅವರ ವಕ್ತಾರ ತಿಳಿಸಿದ್ದರೆ, ಇಂತಹ ಆರೋಪಗಳಿಂದ ತೀವ್ರ ಆತಂಕಕ್ಕೆ ಒಳಗಾಗಿರುವುದಾಗಿ ಮತ್ತು ತಮ್ಮ ಕಾಳಜಿಯನ್ನು ಭಾರತದ ಉನ್ನತ ಮಟ್ಟದ ಅಧಿಕಾರಿಗಳಿಗೆ ತಿಳಿಸಿರುವುದಾಗಿ ಆಸ್ಟ್ರೇಲಿಯಾದ ವಿದೇಶಾಂಗ ಸಚಿವರು ಹೇಳಿದ್ದಾರೆ.

ಹೂಡಿಕೆ ಮೇಲೆ ಪರಿಣಾಮ

- ಉಭಯ ದೇಶಗಳ ಬಾಂಧವ್ಯ ಬಿಕ್ಕಟ್ಟು ವ್ಯಾಪಾರ ಮತ್ತು ಬಂಡವಾಳ ಹೂಡಿಕೆ ಮೇಲೆ ಪರಿಣಾಮ ಬೀರಲಿದೆ ಎಂದು ಮೂಲಗಳು ಹೇಳಿವೆ.
- ಮುಕ್ತ ವ್ಯಾಪಾರ ಒಪ್ಪಂದ ಕುರಿತ ಒಡಂಬಡಿಕೆಗಳು ಸ್ಥಗಿತಗೊಂಡಿದ್ದು ರಾಜತಾಂತ್ರಿಕ ವಿವಾದ ಬಗೆಹರಿಯುವವರೆಗೆ ಪರಿಸ್ಥಿತಿಯಲ್ಲಿ ಬದಲಾವಣೆ ಇಲ್ಲ ಎಂದು ತಿಳಿಸಿವೆ.
- ಕೆನಡಾದ ವಾಣಿಜ್ಯ ಸಚಿವರ ನೇತೃತ್ವದಲ್ಲಿ ಅಕ್ಟೋಬರ್‌ನಲ್ಲಿ ತಂಡವೊಂದು ಭಾರತಕ್ಕೆ ಭೇಟಿ ನೀಡಬೇಕಿತ್ತು. ಇದೀಗ ಅನಿರ್ದಿಷ್ಟ ಅವಧಿಗೆ ಮುಂದಕ್ಕೆ ಹೋಗಿದೆ.

ಖಾಲಿಸ್ತಾನ ಉಗ್ರರ ವಿರುದ್ಧ ದೀರ್ಘಕಾಲದಿಂದಲೂ ಅಲ್ಲಿನ ಸರ್ಕಾರ ಕ್ರಮ ಕೈಗೊಂಡಿಲ್ಲ. ಇದು ಆತಂಕಕಾರಿ
ಅರಿಂದಮ್ ಬಾಗ್ಚಿ, ವಿದೇಶಾಂಗ ಸಚಿವಾಲಯದ ವಕ್ತಾರ

ಭಾರತ ವಿರೋಧಿ ಶಕ್ತಿಗಳ ವಿರುದ್ಧ ಕೆನಡಾ ಸರ್ಕಾರ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕು
ತರುಣ್ ಚುಗ್
ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

ಭಾರತದ ಸಾರ್ವಭೌಮತೆ, ಸಮಗ್ರತೆಗೆ ಬೆದರಿಕೆ ಒಡ್ಡುವ ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ರಾಜಿ ಇರಬಾರದು ಎಂಬುದು ಕಾಂಗ್ರೆಸ್ ನಂಬಿಕೆ,
ಜೈರಾಮ್ ರಮೇಶ್
ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಹರ್ದೀಪ್ ಸಿಂಗ್ ಭಾರತದಿಂದ ತಲೆಮರೆಸಿಕೊಂಡಿದ್ದು 1990ರ ದಶಕದ ಉತ್ತರಾರ್ಧದಿಂದ ಕೆನಡಾದಲ್ಲಿ ನೆಲೆಸಿದ್ದ. ಪಂಜಾಬ್‌ನ ಲುಧಿಯಾನಾದಲ್ಲಿ 2007ರಲ್ಲಿನ ಸ್ಫೋಟ ಸೇರಿದಂತೆ ಭಾರತದಲ್ಲಿನ ಹಲವು ಪ್ರಕರಣಗಳಲ್ಲಿ ಆರೋಪಿಯಾಗಿದ್ದ. ಈ ಸ್ಫೋಟದಲ್ಲಿ ಆರು ಮಂದಿ ಮೃತಪಟ್ಟು 40 ಮಂದಿ ಗಾಯಗೊಂಡಿದ್ದರು. ಪಟಿಯಾಲದಲ್ಲಿ 2009ರಲ್ಲಿ ರಾಷ್ಟ್ರೀಯ ಸಿಖ್ ಸಂಘಟ್ ಅಧ್ಯಕ್ಷ ರುಲ್ದ ಸಿಂಗ್ ಅವರನ್ನು ಹತ್ಯೆಗೈದ ಪ್ರಕರಣದಲ್ಲಿಯೂ ಈತ ಆರೋಪಿಯಾಗಿದ್ದ.

ಭಾರತ ಸರ್ಕಾರದ ಎನ್‌ಐಎ 2022ರ ಜುಲೈನಲ್ಲಿ ಹರ್ದೀಪ್ ಸಿಂಗ್ ತಲೆಗೆ ₹ 10 ಲಕ್ಷ ಬಹುಮಾನ ಘೋಷಿಸಿತ್ತು. ಈತ ನಿಷೇಧಿತ ಖಾಲಿಸ್ತಾನ ಟೈಗರ್ ಪಡೆಯ ಕಮಾಂಡರ್ ಅಲ್ಲದೆ ಸಿಖ್ಸ್ ಫಾರ್ ಜಸ್ಟೀಸ್ (ಎಸ್‌ಎಫ್‌ಜೆ) ಸಂಘಟನೆಯಲ್ಲೂ ತೊಡಗಿಸಿಕೊಂಡಿದ್ದ. ಜೂನ್ 18ರಂದು ಹತ್ಯೆಯಾಗುವವರೆಗೂ ಸರ‍್ರೆಯ ಗುರುನಾನಕ್ ಸಿಖ್ ಗುರುದ್ವಾರದ ಮುಖ್ಯಸ್ಥನಾಗಿಯೂ ಕಾರ್ಯ ನಿರ್ವಹಿಸಿದ್ದ.

ಈತನ ಹತ್ಯೆಗೆ ಭಾರತೀಯ ರಾಯಭಾರಿ ಸಂಜಯ್ ಕುಮಾರ್ ವರ್ಮ ಮತ್ತು ಇತರ ರಾಜತಾಂತ್ರಿಕ ಅಧಿಕಾರಿಗಳೇ ಕಾರಣ ಎಂದು ಬಿಂಬಿಸುವಂಥ ಪೋಸ್ಟರ್ ಅನ್ನು ಎಸ್‌ಎಫ್‌ಜೆ ಪ್ರದರ್ಶಿಸಿತ್ತು. ಅಮೆರಿಕ, ಆಸ್ಟ್ರೇಲಿಯಾ ಮತ್ತು ಬ್ರಿಟನ್‌ನಲ್ಲಿ ಕೂಡ ಈ ಬಗ್ಗೆ ಪ್ರಚಾರ ಮಾಡಿತ್ತು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಥ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಸುಧಾ ಓದಿರಿ

ಟಿ–ಶರ್ಟ್, ಚಡ್ಡಿ ಧರಿಸಿದ್ದ ಹಾಲಶ್ರೀ

ಒಂದನೇ ಪುಟದಿಂದ

ಮೈಸೂರಿನ ಮಠದಲ್ಲಿ ವಾಸ: 'ವಂಚನೆ ಪ್ರಕರಣ ದಾಖಲಾಗುವ ಮುನ್ಸೂಚನೆ ಅರಿತಿದ್ದ ಸ್ವಾಮೀಜಿ, ಹಿರೇಹಡಗಲಿಯ ಮಠ ತೊರೆದು ಬೆಂಗಳೂರಿನ ವಿಜಯನಗರದಲ್ಲಿರುವ ತಮ್ಮ ಮನೆಗೆ ಬಂದಿದ್ದರು. ಚೈತ್ರಾ ಬಂಧನವಾಗುತ್ತಿದ್ದಂತೆ ಬೆಂಗಳೂರು ತೊರೆದು ಮೈಸೂರಿಗೆ ಹೋಗಿದ್ದ ಅವರು, ಅಲ್ಲಿಯ ಮಠವೊಂದರಲ್ಲಿ ಆಶ್ರಯ ಪಡೆದಿದ್ದರು. ಅಲ್ಲಿಯೇ ಎರಡು ದಿನ ಕಳೆದಿದ್ದರು' ಎಂದು ಸಿಸಿಬಿ ಪೊಲೀಸ್ ಮೂಲಗಳು ಹೇಳಿವೆ.

'ತಮ್ಮ ಕಾರಿನ ಚಾಲಕ ಲಿಂಗರಾಜು ಕಡೆಯಿಂದ ನಾಲ್ಕು ಮೊಬೈಲ್ ಹಾಗೂ ನಾಲ್ಕು ಸಿಮ್‌ಕಾರ್ಡ್ ತರಿಸಿಕೊಂಡಿದ್ದ ಅವರು, ಮೈಸೂರು ತೊರೆದು ಬೆಂಗಳೂರಿಗೆ ಬಂದಿದ್ದರು. ಖರ್ಚಿಗೆ ಬೇಕಾದಷ್ಟು ಹಣವನ್ನು ಜೊತೆಯಲ್ಲಿಟ್ಟುಕೊಂಡಿದ್ದರು. ಪರಿಚಯಸ್ಥರ ಮನೆಯಲ್ಲಿ ಒಂದು ದಿನ ವಾಸವಿದ್ದರು. ಮರುದಿನವೇ ಹೈದರಾಬಾದ್‌ಗೆ ಹೋಗಿದ್ದರು' ಎಂದು ತಿಳಿಸಿವೆ.

'ಹೈದರಾಬಾದ್‌ನಿಂದ ಶ್ರೀಶೈಲಕ್ಕೆ ಹೋಗಿ, ಅಲ್ಲಿಂದ ಒಡಿಶಾಗೆ ತೆರಳಿ ಪರಿಚಯಸ್ಥರ ಮನೆಯಲ್ಲಿ ಉಳಿದುಕೊಂಡಿದ್ದರು. ತಮ್ಮ ವಿರುದ್ಧ ಪಿತೂರಿ ನಡೆಯುತ್ತಿರುವುದಾಗಿ ಪರಿಚಯಸ್ಥರಿಗೆ ಹೇಳುತ್ತಿದ್ದರು' ಎಂದು ಹೇಳಿವೆ.

ಬಂಧನ ಸುಳಿವು ಅರಿತು ಸ್ಥಳ ಬದಲು: 'ಸ್ವಾಮೀಜಿ ವಾಸವಿರುವ ಸ್ಥಳಗಳ ಬಗ್ಗೆ ನಿರಂತರವಾಗಿ ಮಾಹಿತಿ ಸಂಗ್ರಹಿಸಲಾಗುತ್ತಿತ್ತು. ಪೊಲೀಸರು ಬರುತ್ತಿದ್ದಾರೆಂಬ ಸುಳಿವು ಸಿಗುತ್ತಿದ್ದಂತೆ ಸ್ವಾಮೀಜಿ, ಸ್ಥಳ ಬದಲಾವಣೆ ಮಾಡುತ್ತಿದ್ದರು. ಇದರಿಂದಾಗಿ ಅವರನ್ನು ಪತ್ತೆ ಹಚ್ಚುವುದು ಕಷ್ಟವಾಗಿತ್ತು' ಎಂದು ಮೂಲಗಳು ತಿಳಿಸಿವೆ.

ಚಾಲಕ ನೀಡಿದ್ದ ಮಾಹಿತಿ: 'ಸ್ವಾಮೀಜಿ ಚಾಲಕನನ್ನು ಇತ್ತೀಚೆಗೆ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿತ್ತು. ಅವರಿಗಾಗಿ ಹೊಸದಾಗಿ ಮೊಬೈಲ್ ಹಾಗೂ ಸಿಮ್‌ಕಾರ್ಡ್ ಖರೀದಿಸಿದ್ದ ಬಗ್ಗೆ ಮಾಹಿತಿ ಸಿಕ್ಕಿತ್ತು. ಅದೇ ಸಿಮ್‌ಕಾರ್ಡ್ ನಂಬರ್‌ಗಳ ಲೊಕೇಷನ್ ಪತ್ತೆಗೆ ತನಿಖೆ ಮುಂದುವರಿಸಲಾಗಿತ್ತು' ಎಂದು ಸಿಸಿಬಿ ಮೂಲಗಳು ಹೇಳಿವೆ.

'ಮೊಬೈಲ್ ಹಾಗೂ ಸಿಮ್‌ಕಾರ್ಡ್ ಒಮ್ಮೆ ಬಳಸುತ್ತಿದ್ದ ಸ್ವಾಮೀಜಿ, ನಂತರ ಸ್ವಿಚ್ ಆಫ್ ಮಾಡುತ್ತಿದ್ದರು. ಹೀಗಾಗಿ, ಸ್ಥಳ ಪತ್ತೆ ಕಷ್ಟವಾಗಿತ್ತು. ಒಡಿಶಾದ ಭುವನೇಶ್ವರದಲ್ಲಿದ್ದ ಅವರು, ಕರ್ನಾಟಕದಲ್ಲಿರುವ ಆಪ್ತರೊಬ್ಬರಿಗೆ ಕರೆ ಮಾಡಿದ್ದರು. ಇದೇ ಮಾಹಿತಿ ಆಧರಿಸಿ ಪೊಲೀಸರ ತಂಡ, ಭುವನೇಶ್ವರಕ್ಕೆ ಹೋಗಿತ್ತು' ಎಂದು ಮೂಲಗಳು ತಿಳಿಸಿವೆ.

ರೈಲು ಟಿಕೆಟ್ ನೀಡಿದ್ದ ಸುಳಿವು: 'ಭುವನೇಶ್ವರಕ್ಕೆ ಪೊಲೀಸರ ತಂಡ ಬಂದಿರಬಹುದೆಂದು ತಿಳಿದಿದ್ದ ಸ್ವಾಮೀಜಿ, ಅಲ್ಲಿಂದ ಭೋದ್‌ಗಯಾಗೆ ಹೋಗಲು ರೈಲು ಟಿಕೆಟ್ ಕಾಯ್ದಿರಿಸಿದ್ದರು. ಟಿ–ಶರ್ಟ್ ಹಾಗೂ ಚಡ್ಡಿಯಲ್ಲೇ ಪ್ರಯಾಣ ಆರಂಭಿಸಿದ್ದರು' ಎಂದು ಸಿಸಿಬಿ ಮೂಲಗಳು ಹೇಳಿವೆ.

'ಟಿಕೆಟ್ ಕಾಯ್ದಿರಿಸಿದ್ದ ಮಾಹಿತಿ ಕಲೆಹಾಕಿದ್ದ ಪೊಲೀಸರ ತಂಡ, ಒಡಿಶಾ ಪೊಲೀಸರ ನೆರವು ಕೋರಿತ್ತು. ಜಂಟಿ ಕಾರ್ಯಾಚರಣೆ ನಡೆಸಿದ್ದ ಪೊಲೀಸರು, ಒಡಿಶಾದ ಕಟಕ್ ರೈಲು ನಿಲ್ದಾಣದಲ್ಲಿ ಸ್ವಾಮೀಜಿಯನ್ನು ಸೆರೆ ಹಿಡಿದರು. ನಂತರ, ಅವರನ್ನು ವಿಮಾನದಲ್ಲಿ ಬೆಂಗಳೂರಿಗೆ ಕರೆತರಲಾಯಿತು' ಎಂದು ತಿಳಿಸಿವೆ.

'ಅಧಿಕ ರಕ್ತದೊತ್ತಡ: ಎಚ್ಚರಿಕೆ ಅಗತ್ಯ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಭಾರತದಲ್ಲಿ 30–79 ವರ್ಷದವರಲ್ಲಿ ಅಧಿಕ ರಕ್ತದೊತ್ತಡದ ಸಮಸ್ಯೆ ಇದ್ದು, ಇದರ ನಿಯಂತ್ರಣದ ಶೇ 50ರಷ್ಟು ಗುರಿ ಸಾಧಿಸಲು ಸುಮಾರು 6.7 ಕೋಟಿ ಜನರಿಗೆ ಚಿಕಿತ್ಸೆ ಕಲ್ಪಿಸಬೇಕು ಎಂದು ವಿಶ್ವ ಆರೋಗ್ಯ ಸಂಘಟನೆಯ (ಡಬ್ಲ್ಯುಎಚ್‌ಒ) ವರದಿ ಉಲ್ಲೇಖಿಸಿದೆ.

ಅಧಿಕ ರಕ್ತದೊತ್ತಡ ನಿಯಂತ್ರಿಸಲು ಚಿಕಿತ್ಸೆ ನೀಡುವಲ್ಲಿ ಕೇಂದ್ರ ಸರ್ಕಾರ ಮುತುವರ್ಜಿ ವಹಿಸಿದರೆ, ಇದರಿಂದಾಗಿ 2040ರ ವೇಳೆಗೆ ಸುಮಾರು 46 ಲಕ್ಷ ಜನರ ಸಂಭವನೀಯ ಸಾವು ತಪ್ಪಿಸಬಹುದು ಎಂದು ಡಬ್ಲ್ಯುಎಚ್‌ಒ ತನ್ನ ಮೊದಲ ಜಾಗತಿಕ ವರದಿಯಲ್ಲಿ ಅಭಿಪ್ರಾಯಪಟ್ಟಿದೆ.

ಸಕಾಲದಲ್ಲಿ ಸಮಸ್ಯೆ ಗುರುತಿಸದಿರುವುದು, ನಿಯಂತ್ರಿಸದಿರುವುದು ನಕಾರಾತ್ಮಕ ಪರಿಣಾಮವಾಗಲಿದೆ. ಹೃದಯಾಘಾತ, ಮೆದುಳಿಗೆ ಪಾರ್ಶ್ವವಾಯು, ಹೃದಯ ಮತ್ತು ಮೂತ್ರಪಿಂಡ ವೈಫಲ್ಯ ಆಗಬಹುದು. ಇದರಿಂದ ಸಾವು ಅಥವಾ ಅಂಗವಿಕಲತೆ ಎದುರಾಗಲಿದೆ.

'ಡಬ್ಲ್ಯುಎಚ್‌ಒ ಅಧ್ಯಯನದ ಅನುಸಾರ, ಜನರಲ್ಲಿ ಅರಿವಿನ ಕೊರತೆ, ಸಕಾಲದಲ್ಲಿ ಪತ್ತೆಯಾಗದಿರುವುದು, ಚಿಕಿತ್ಸೆ ಕೊರತೆ ಸಮಸ್ಯೆಗೆ ಕಾರಣವಾಗಿದೆ' ಎಂದು ಹೃದ್ರೋಗ ತಜ್ಞ, ಭಾರತೀಯ ಸಾರ್ವಜನಿಕ ಆರೋಗ್ಯ ಪ್ರತಿಷ್ಠಾನದ ಮಾಜಿ ಅಧ್ಯಕ್ಷ ಕೆ.ಶ್ರೀನಾಥ ರೆಡ್ಡಿ ಹೇಳಿದರು. ಜಾಗತಿಕವಾಗಿ ಪ್ರತಿ ಐವರಲ್ಲಿ ಒಬ್ಬರಿಗೆ ಈ ಸಮಸ್ಯೆ ಇದೆ. ಸಮರ್ಪಕ ಚಿಕಿತ್ಸೆ ದೊರೆಯುತ್ತಿಲ್ಲ. ವಿವಿಧ ದೇಶಗಳು ಜಾಗೃತಗೊಂಡು ಚಿಕಿತ್ಸೆಗೆ ಒತ್ತು ನೀಡಿದರೆ 2023 ರಿಂದ 2050ರ ಅವಧಿಯಲ್ಲಿ 7.6 ಕೋಟಿ ಜನರ ಸಂಭವನೀಯ ಸಾವು ತಡೆಯಬಹುದು ಎಂದು ವರದಿ ಹೇಳಿದೆ.

ಭಾರತದಲ್ಲಿ ಅಧಿಕ ರಕ್ತದೊತ್ತಡ ಸಮಸ್ಯೆಯನ್ನು ನಿಯಂತ್ರಿಸಲು ಹಾಗೂ ಸಮಸ್ಯೆಯಿಂದ ಬಳಲುತ್ತಿರುವವರನ್ನು ಗುರುತಿಸಲು ಚುರುಕು ನೀಡಬೇಕು. ನಿಯಂತ್ರಣ ಕಾರ್ಯಕ್ರಮವನ್ನು ಗ್ರಾಮಮಟ್ಟದಲ್ಲಿ ಜಾರಿಗೊಳಿಸಲು ಆದ್ಯತೆ ನೀಡಬೇಕು ಎಂದು ಸಲಹೆ ಮಾಡಿದೆ.

ಅಧಿಕ ರಕ್ತದೊತ್ತಡಕ್ಕೆ ಉನ್ನತ ಗುಣಮಟ್ಟದ ಚಿಕಿತ್ಸೆ ನೀಡುವ ಕೇಂದ್ರ ಸರ್ಕಾರದ ಕಾರ್ಯಕ್ರಮವನ್ನು ಸದ್ಯ 27 ರಾಜ್ಯಗಳ 155 ಜಿಲ್ಲೆಗಳಿಗೆ ವಿಸ್ತರಿಸಲಾಗಿದೆ. ಔಷಧಗಳ ಅಲಭ್ಯತೆಯಿಂದಾಗಿ ಆರಂಭದಲ್ಲಿ ಕಾರ್ಯಕ್ರಮ ನಿರೀಕ್ಷಿತ ಯಶಸ್ಸು ಕಾಣಲಿಲ್ಲ. 2018ರಲ್ಲಿ ಪಂಜಾಬ್, ಮಧ್ಯಪ್ರದೇಶ, ಕೇರಳ, ಮಹಾರಾಷ್ಟ್ರ ಮತ್ತು ತೆಲಂಗಾಣದಲ್ಲಿ ಜಾರಿಗೊಂಡಿತ್ತು. ಔಷಧಗಳ ಲಭ್ಯತೆಯೇ ಆರಂಭದಲ್ಲಿ ದೊಡ್ಡ ಸವಾಲಾಗಿತ್ತು.

ಕಾಶ್ಮೀರದ ಅನಂತನಾಗ್ ಜಿಲ್ಲೆಯ ಕೊಕೆರ್‌ನಾಗ್ ಪ್ರದೇಶದಲ್ಲಿ ಮಂಗಳವಾರ ಶೋಧ ಕಾರ್ಯಾಚರಣೆಯಲ್ಲಿ ತೊಡಗಿದ್ದ ಭದ್ರತಾ ಸಿಬ್ಬಂದಿ

ಎಲ್‌ಇಟಿ ಉಗ್ರ ಉಜೇರ್ ಹತ್ಯೆ

ಶ್ರೀನಗರ: ಜಮ್ಮು–ಕಾಶ್ಮೀರದಲ್ಲಿ ಉಗ್ರರ ಸದೆಬಡಿಯಲು ನಡೆದ ಕಾರ್ಯಾಚರಣೆಯಲ್ಲಿ ಲಷ್ಕರ್–ಎ–ತಯಬಾ ಕಮಾಂಡರ್ ಉಜೇರ್ ಖಾನ್ ಮತ್ತು ಆತನ ಸಹಚರರನ್ನು ಮಂಗಳವಾರ ಹೊಡೆದುರುಳಿಸಲಾಗಿದೆ.

ಈ ಬಗ್ಗೆ ಮಾತನಾಡಿದ ಕಾಶ್ಮೀರದ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ವಿಜಯ್ ಕುಮಾರ್, 'ಎನ್‌ಕೌಂಟರ್ ನಡೆದ ಸ್ಥಳದಲ್ಲಿ ಉಗ್ರ ಉಜೇರ್ ಖಾನ್ ಸೇರಿ ಇಬ್ಬರ ಮೃತದೇಹ ಪತ್ತೆಯಾಗಿವೆ. ಅನಂತ್‌ನಾಗ್ ಜಿಲ್ಲೆಯ ದಕ್ಷಿಣ ಭಾಗದಲ್ಲಿರುವ ಗಡೋಲ್ ಅರಣ್ಯದಲ್ಲಿ ಇಬ್ಬರಿಂದ ಮೂವರು ಉಗ್ರರು ಜೀವಂತವಾಗಿದ್ದಾರೆ ಎಂಬ ಮಾಹಿತಿ ಲಭ್ಯವಾಗಿತ್ತು. ಇಬ್ಬರನ್ನು ಹೊಡೆದುರುಳಿಸಿದ್ದು, ಮತ್ತೊಬ್ಬ ಉಗ್ರನಿಗಾಗಿ ಕಾರ್ಯಾಚರಣೆ ಮುಂದುವರಿದಿದೆ' ಎಂದು ತಿಳಿಸಿದರು.

ಉಗ್ರರ ಕಾರ್ಯಾಚರಣೆ ಮುಂದುವರಿದಿದ್ದು, ಯಾವುದೇ ಕಾರಣಕ್ಕೂ ಸ್ಥಳೀಯರು ಎನ್‌ಕೌಂಟರ್ ನಡೆದ ಪ್ರದೇಶದತ್ತ ಹೋಗಬಾರದು ಎಂದರು.

ಅನಂತ್‌ನಾಗ್ ಜಿಲ್ಲೆಯ ದಕ್ಷಿಣ ಭಾಗದಲ್ಲಿರುವ ಗಡೋಲ್ ಅರಣ್ಯದಲ್ಲಿ ಉಗ್ರರು ಅಡಗಿ ಎಸಗಿದ ದಾಳಿಯಲ್ಲಿ ಕಳೆದ ವಾರ ಮೂವರು ಅಧಿಕಾರಿಗಳು ಮತ್ತು ಒಬ್ಬ ಯೋಧ ಬಲಿಯಾಗಿದ್ದರು.

ಪ್ರಕರಣದ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಅಭಿಪ್ರಾಯ

ವಿಚ್ಛೇದನ: ಸಂಗಾತಿಯ ಕ್ರೌರ್ಯ ಪರಿಗಣಿಸಬೇಕು

ನವದೆಹಲಿ: ವಿಚ್ಛೇದನ ತೀರ್ಮಾನಕ್ಕೆ ಬರುವ ಮೊದಲು ಸಂಗಾತಿ ಕ್ರೌರ್ಯವನ್ನು ಗುರುತಿಸಿ, ದಾಖಲಿಸಬೇಕು. 'ವಿಚ್ಛೇದನ ಅನಿವಾರ್ಯ' ತತ್ವವನ್ನು ಸಹಜವಾಗಿ ಅನ್ವಯಿಸಬಾರದು' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ದಂಪತಿಗೆ ವಿಚ್ಛೇದನ ನೀಡಿ ಮದ್ರಾಸ್ ಹೈಕೋರ್ಟ್ ನೀಡಿದ್ದ ಆದೇಶವನ್ನು ನ್ಯಾಯಮೂರ್ತಿಗಳಾದ ಅನಿರುದ್ಧ ಬೋಸ್ ಮತ್ತು ಬೇಲಾ ಎಂ.ತ್ರಿವೇದಿ ಅವರಿದ್ದ ಸುಪ್ರೀಂ ಕೋರ್ಟ್ ಪೀಠ ರದ್ದುಪಡಿಸಿತು.

ಉಲ್ಲೇಖಿತ ಪ್ರಕರಣದಲ್ಲಿ ದಂಪತಿ 12 ವರ್ಷಗಳಿಂದ ಪ್ರತ್ಯೇಕವಾಗಿ ವಾಸವಿದ್ದರೆ, ಅವರ ಸಂಬಂಧವನ್ನು ಮುಂದುವರಿಸುವುದರ ಅರ್ಥ ಅವರ ಯಾತನೆಯನ್ನು ಮುಂದುವರಿಸುವುದೇ ಆಗಿದೆ ಎಂದು ಅಭಿಪ್ರಾಯಪಟ್ಟಿದ್ದ ಮದ್ರಾಸ್ ಹೈಕೋರ್ಟ್ 'ವಿಚ್ಛೇದನ ಅನಿವಾರ್ಯ' ತತ್ವ ಆಧರಿಸಿ ತೀರ್ಪು ನೀಡಿತ್ತು.

'ವಿಚ್ಛೇದನ ಅನಿವಾರ್ಯ ತತ್ವ ಅನುಸರಿಸುವ ಮೂಲಕ ಮದ್ರಾಸ್ ಹೈಕೋರ್ಟ್ ಪ್ರಮಾದ ಎಸಗಿದೆ ಎಂಬುದು ನಮ್ಮ ಅಭಿಮತ. ಪತ್ನಿಯಿಂದ ಕ್ರೌರ್ಯವಿದೆ ಎಂಬ ಆರೋಪಕ್ಕೆ ಯಾವುದೇ ಸಾಕ್ಷ್ಯ ಗುರುತಿಸಲು ಕೋರ್ಟ್ ಒತ್ತು ನೀಡಿಲ್ಲ. ಆದರೆ, ಈ ಕುರಿತು ಕೌಟುಂಬಿಕ ನ್ಯಾಯಾಲಯ ನಿರ್ದಿಷ್ಟ ನಿಲುವು ತಾಳಿತ್ತು' ಎಂದಿತು.

ಮನವಿ ಕುರಿತು ನ್ಯಾಯೋಚಿತ ತೀರ್ಮಾನ ಕೈಗೊಳ್ಳಲು ಕ್ರೌರ್ಯ ಕುರಿತಂತೆ ಆಯಾಮ ಪರಿಶೀಲಿಸುವುದು ಅಗತ್ಯ ಎಂದು ಸುಪ್ರೀಂ ಪೀಠ ಅಭಿಪ್ರಾಯಪಟ್ಟಿತು. 'ಮತ್ತೆ ವಿಚಾರಣೆ ನಡೆಸಬೇಕು' ಎಂದು ಸೂಚಿಸಿ ಪೀಠವು ಈ ಪ್ರಕರಣವನ್ನು ಮದ್ರಾಸ್ ಹೈಕೋರ್ಟ್‌ಗೆ ವಾಪಸು ಕಳುಹಿಸಿತು.

ಪ್ರಕರಣದ ವಿಚಾರಣೆ ನಡೆಸಿದ್ದ ಈರೋಡ್‌ನ ಕೌಟುಂಬಿಕ ನ್ಯಾಯಾಲಯವು ವಿಚ್ಛೇದನ ಆದೇಶಕ್ಕೆ ಬದಲಾಗಿ ಕಾನೂನುಬದ್ಧವಾಗಿ ಪ್ರತ್ಯೇಕವಾಗಿರಲು ಆದೇಶಿಸಿತ್ತು. 'ಪತ್ನಿಯ ಕೆಲವು ವರ್ತನೆಗಳು ಕ್ರೌರ್ಯದ ಪರಿಮಿತಿಗೆ ಬರುತ್ತವೆ' ಎಂದು ಕೌಟುಂಬಿಕ ನ್ಯಾಯಾಲಯ ಆದೇಶದಲ್ಲಿ ಉಲ್ಲೇಖಿಸಿತ್ತು.

'ಸಂಗಾತಿ ಜತೆ ಲೈಂಗಿಕ ಸಂಬಂಧ ನಿರಾಕರಣೆ ಕ್ರೂರತೆಗೆ ಸಮ'

ನವದೆಹಲಿ (ಪಿಟಿಐ): ಸಂಗಾತಿಯೊಂದಿಗೆ ಲೈಂಗಿಕ ಸಂಬಂಧ ಹೊಂದಲು ಉದ್ದೇಶಪೂರ್ವಕವಾಗಿ ನಿರಾಕರಿಸುವುದು ಕ್ರೂರತೆಗೆ ಸಮ ಎಂದು ದೆಹಲಿ ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಮದುವೆಯಾದ 35 ದಿನಕ್ಕೇ ಬೇರೆಬೇರೆಯಾದ ದಂಪತಿಗೆ ವಿಚ್ಛೇದನ ನೀಡಿದ್ದನ್ನು ಎತ್ತಿಹಿಡಿದ ನ್ಯಾಯಾಲಯ ಹೀಗೆ ಅಭಿಪ್ರಾಯಪಟ್ಟಿತು.

ವಿಚ್ಛೇದನ ನೀಡಿದ್ದ ಕೌಟುಂಬಿಕ ನ್ಯಾಯಾಲಯದ ತೀರ್ಪು ಪ್ರಶ್ನಿಸಿ ಪತ್ನಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಸುರೇಶ್ ಕುಮಾರ್ ಕೈತ್ ನೇತೃತ್ವದ ನ್ಯಾಯಪೀಠವು ತಿರಸ್ಕರಿಸಿತು.

ಇದೇ ಸಂದರ್ಭದಲ್ಲಿ, ಲೈಂಗಿಕತೆ ಇಲ್ಲದ ವಿವಾಹ ಸಂಬಂಧ ಅಸಹನೀಯ. ಲೈಂಗಿಕ ಸಂಬಂಧದ ಕುರಿತ ನಿರಾಶೆ ವೈವಾಹಿಕ ಸಂಬಂಧಕ್ಕೆ ಮಾರಕವಾಗುಷ್ಟು ಬೇರಾವ ವಿಷಯವೂ ಮಾರಕವಾಗುವುದಿಲ್ಲ' ಎಂದು ಹೇಳಿತು.

ದಂಪತಿ 2004ರಲ್ಲಿ ಹಿಂದೂ ಪದ್ಧತಿಯ ಪ್ರಕಾರ ಮದುವೆಯಾಗಿದ್ದರು. ಬಳಿಕ ಪತ್ನಿ ತವರು ಮನೆಗೆ ತೆರಳಿದವರು ವಾಪಸ್ ಬಂದಿರಲಿಲ್ಲ. ಹೀಗಾಗಿ ಪತಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು. ಈ ಬೆನ್ನಲ್ಲೇ ಪತ್ನಿಯೂ ವರದಕ್ಷಿಣೆ ಕಿರುಕುಳ ನೀಡಿದ್ದಾಗಿ ಪ್ರತಿದೂರು ನೀಡಿದ್ದರು.

ಪತಿ–ಪತ್ನಿ ಇಬ್ಬರೂ ಹೈಕೋರ್ಟ್ ಮೆಟ್ಟಿಲೇರಿದ್ದರು. ಮಾರ್ಚ್ 23, 22ರಂದು ಹೈಕೋರ್ಟ್ ಮದುವೆಯನ್ನು ಅಸಿಂಧುಗೊಳಿಸಿ ಆದೇಶ ನೀಡಿತ್ತು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Accounts & Finance

WANTED ACCOUNTS assistant with knowledge of tally. Work area at Peenya. Mail your resume at bangaloreacids@gmail.com

Drivers

ಆಟೋ ಚಾಲಕರು ಬೇಕಾಗಿದ್ದಾರೆ ಇಲೆಕ್ಟ್ರಿಕ್ ಆಟೋ ಬಾಡಿಗೆಗೆ ಲಭ್ಯವಿದೆ 'ಬ್ಯಾಟರಿ ವೆಚ್ಚ ಕಂಪನಿ ಬರಿಸುತ್ತದೆ' ಪಾರ್ಟ್ ಟೈಮ್ /ಫುಲ್ ಟೈಮ್ ಹಾಗು ನೈಟ್ ಶಿಫ್ಟ್ ಲಭ್ಯವಿದೆ ಆಕರ್ಷಕ ಸಂಬಳ 20000/- ವರೆಗೂ ಪಡೆಯಿರಿ ಕೂಡಲೇ ಸೇರಿಕೊಳ್ಳೋವವರಿಗೆ ಆಕರ್ಷಕ ಬೋನಸ್ ನೀಡಲಾಗುವುದು ಆಸಕ್ತಿಯುಳ್ಳವರು ಮಿಸ್ ಕಾಲ್ ನೀಡಿ 08068960971 / 8496991633

HAEID REQUIRED Experienced Educated 4WH Automatic car Driver at Rajajinagar Bangalore. Attractive package & immediate placement Contact:+91 6366443134

General

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು, ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. ರೂ.12,000- 17,000. 8951315839, 9880120052

ನಮ್ಮ ಸಂಸ್ಥೆಯ ಬೆಂಗಳೂರು ಮತ್ತು ಚಿಕ್ಕಮಗಳೂರಿನ ವಿದ್ಯಾರ್ಥಿನಿ ನಿಲಯಕ್ಕೆ ವೀರಶೈವ/ಲಿಂಗಾಯಿತ 35–50ರ ವಯೋಮಿತಿಯ ಮಹಿಳಾ ವಾರ್ಡನ್ ಮತ್ತು ಸಹಾಯಕ ಅಡುಗೆಯವರು ಬೇಕಾಗಿದ್ದಾರೆ. ಆಕರ್ಷಕ ಸಂಬಳ, ಊಟ ಮತ್ತು ವಸತಿ ಸೌಕರ್ಯವಿರುತ್ತದೆ. ವಿಧವೆ / ಅಸಹಾಯಕ ಮಹಿಳೆಯರಿಗೆ ಆದ್ಯತೆ ನೀಡಲಾಗುವುದು. ಆಸಕ್ತಿಯುಳ್ಳವರು ಈ ಕೆಳಗಿರುವ ವಿಳಾಸಕ್ಕೆ ಅರ್ಜಿ ಸಲ್ಲಿಸುವುದು ಅಥವಾ ಖುದ್ದಾಗಿ ಸಂಪರ್ಕಿಸಿ
ಗೌ. ಕಾರ್ಯದರ್ಶಿ
ಕರ್ನಾಟಕ ವೀರಶೈವ ವಿದ್ಯಾಭಿವೃದ್ಧಿ ಸಂಸ್ಥೆ (ರಿ.)
ನಂ.18/1 'ಕಲ್ಯಾಣ ಸಮುಚ್ಚಯ' 2ನೇ ಮಹಡಿ, 6ನೇ ಅಡ್ಡರಸ್ತೆ, ಗಾಂಧಿನಗರ, ಬೆಂಗಳೂರು–560009
ದೂ: 080 22266416

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ಬೇಕಾಗಿದ್ದಾರೆ: ರಾಜ್ಯಾದ್ಯಂತ ಕಂಪನಿ ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ. ಊಟ ವಸತಿ 18,500–47,000/–. PUC Degree. 8861041526, 9945791526

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 20,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು- 76 ತಕ್ಷಣ ಸಂಪರ್ಕಿಸಿ: 9606385001, 9606523307

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, ಟಿ.ವಿ.ಎಸ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ,ಪಿಯುಸಿ, ಡಿಗ್ರಿ, ITIನವರುಗಳು 16,600-65,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ 7259552930

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266 /6366430366

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

Wanted

ಬೆಂಗಳೂರಿನ ದೇವಸ್ಥಾನದಲ್ಲಿ ಕೆಲಸ ಮಾಡಲು ವೇದ ಮಂತ್ರಗಳನ್ನು ಅರಿತಿರುವ ಬ್ರಾಹ್ಮಣ ಸಹಾಯಕ ಅರ್ಚಕರು ಬೇಕಾಗಿದ್ದಾರೆ. ಸಂಪರ್ಕಿಸಿ: 7019132200, 080- 25300714

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಇಂಜಿನೀಯರ್ಸ್ ಗೃಹ ನಿರ್ಮಾಣ ಸಹಕಾರ ಸಂಘ ನಿ.,
ಸಿ.ಎ. ಸೈಟ್ ನಂ. 1, 8ನೇ ಮುಖ್ಯರಸ್ತೆ 2ನೇ ಅಡ್ಡರಸ್ತೆ, ಕಮಲಾನಗರ, ಬೆಂಗಳೂರು–560079.
ಸರ್ವ ಸದಸ್ಯರ ವಾರ್ಷಿಕ ಮಹಾಸಭೆ
ಮೇಲ್ಕಂಡ ಸಂಘದ 2022–23ನೇ ಸಾಲಿನ ಸರ್ವ ಸದಸ್ಯರುಗಳ ವಾರ್ಷಿಕ ಮಹಾಸಭೆಯನ್ನು ತಾ|| 24–09–2023ನೇ ಭಾನುವಾರ ಬೆಳಗ್ಗೆ 11.00 ಗಂಟೆಗೆ ಸಂಘದ ಆವರಣದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಎಸ್. ರಾಮಕೃಷ್ಣ ರವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿರುತ್ತದೆ. ಮಾನ್ಯ ಖಾಯಂ ಸದಸ್ಯರೆಲ್ಲರೂ ಸಕಾಲಕ್ಕೆ ದಯಮಾಡಿಸಬೇಕಾಗಿ ಕೋರುತ್ತೇವೆ.
ಸಹಿ/– ಕಾರ್ಯದರ್ಶಿ
ವಿ.ಸೂ. : ಆಹ್ವಾನ ಪತ್ರಿಕೆ ತಲುಪದ ಖಾಯಂ ಸದಸ್ಯರು ಇದನ್ನೇ ಆಹ್ವಾನ ಪತ್ರಿಕೆ ಎಂದು ತಿಳಿದು ಸಭೆಗೆ ಆಗಮಿಸಲು ಕೋರಿದೆ.

ಕರ್ನಾಟಕ ವಿಧಾನಮಂಡಲ ಕಾರ್ಯಾಲಯದ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ (ನಿ.)
ಕೊಠಡಿ ಸಂಖ್ಯೆ: 130, 1ನೇ ಮಹಡಿ, ಶಾಸಕರ ಭವನ–1, ಬೆಂಗಳೂರು–560001
ಕ್ರಸಂ: ಕ.ವಿ.ಮ.ಕಾ.ನೌ.ಗೃ.ನಿ.ಸ.ಸಂ (ನಿ.)AGM | 27 | 2023–24 06–09–2023
ಸರ್ವ ಸದಸ್ಯರ ಮಹಾಸಭೆಯ ಸೂಚನಾ ಪತ್ರ
ಮಾನ್ಯ ಸದಸ್ಯರುಗಳೇ,
ಕರ್ನಾಟಕ ವಿಧಾನಮಂಡಲ ಕಾರ್ಯಾಲಯದ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ 2022–23ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ಶುಕ್ರವಾರ ದಿನಾಂಕ: 22–09–2023 ರಂದು ಮಧ್ಯಾಹ್ನ 1:30ಕ್ಕೆ ಸಂಘದ ಅಧ್ಯಕ್ಷರಾದ ಶ್ರೀ ಅನಂತ.ಎ. ಅವರ ಅಧ್ಯಕ್ಷತೆಯಲ್ಲಿ, ಬಿ.ಚನ್ನಬಸಪ್ಪ ಸಭಾಂಗಣ, ಸಚಿವಾಲಯ ಕ್ಲಬ್ ಆವರಣ, ಕಬ್ಬನ್ ಪಾರ್ಕ್, ಬೆಂಗಳೂರು ಇಲ್ಲಿ ನಡೆಸಲಾಗುವುದು. ಆದುದರಿಂದ ಎಲ್ಲಾ ಸದಸ್ಯರು ವಾರ್ಷಿಕ ಮಹಾಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಮಹಾಸಭೆಯನ್ನು ಯಶಸ್ವಿಗೊಳಿಸಲು ಕೋರಲಾಗಿದೆ.
ಕಾರ್ಯಕಾರಿ ಮಂಡಳಿ ಆದೇಶದ ಮೇರೆಗೆ
ಸಹಿ/-, (ಟಿ.ಪಿ. ನಿತಿನ್‌ಗೌಡ), ವೇತನ ಕಾರ್ಯದರ್ಶಿ

Travel

17.11.2023 02.12.2023 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 04.11.2023 22.11.2023 08.12.2023 ದುಬೈ,ಅಬುದಾಬಿ 5 ದಿನಗಳು. 27.10.2023 06.12.2023 ನೇಪಾಳ 9 ದಿನಗಳು. 06.10.2023 23.12.2023 ಭೂತಾನ್ 8 ದಿನಗಳು. 09.10.2023 17.11.2023 11.12.2023 ಶ್ರೀಲಂಕಾ 6 ದಿನಗಳು. 04.10.2023 22.11.2023 06.12.2023 ರಾಜಸ್ಥಾನ್ 9 ದಿನಗಳು. 27.10.2023 25.11.2023 12.12.2023 ಗುಜರಾತ್ 8 ದಿನಗಳು 27.10.2023 27.11.2023 ಅಸ್ಸಾಂ,ಮೇಘಾಲಯ 9 ದಿನಗಳು 06.10.2023 11.11.2023 11.12.2023 ಕಾಶಿ,ಗಯಾ,ಅಲಹಾಬಾದ್ 7 ದಿನಗಳು. 07.10.2023 11.11.2023 ದೆಹಲಿ,ಆಗ್ರಾ,ಜೈಪುರ್ 6 ದಿನಗಳು. ಸಂಪರ್ಕಿಸಿ: ಜೈನ್ ಟ್ರಾವಲ್ಸ್ ಮಲ್ಲೇಶ್ವರ. ಬೆಂಗಳೂರು.03 9448402248 7022547922

ಭವಿಷ್ಯ

Astrology

ಸ್ತ್ರೀವಶೀಕರಣ, ಪುರುಷ ವಶೀಕರಣ, ಮಾಟಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಸಂಪರ್ಕಿಸಿ: ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967

★ಒಂದೇ ಕರೆಯಲ್ಲಿ★ ಸ್ತ್ರೀಪುರುಷ ವಶೀಕರಣ,ಹಣಕಾಸು ಮನೆತನ, ಇನ್ನೂ ಯಾವುದೇ ಸಮಸ್ಯೆಗಳಿಗೆ 2ಗಂಟೆಯಲ್ಲಿ 100% ಪರಿಹಾರ. ನಾರಾಯಣ ಆಚಾರ್ಯ.9880811806

ಪ್ರವಾಸ

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 25/10 ಗುಜರಾತ್, ಮಧ್ಯಪ್ರದೇಶ 4 ಜ್ಯೋತಿರ್ಲಿಂಗ ಪ್ಯಾಕೇಜ್. 22/10 ಹೈದರಬಾದ್ 4 ದಿನಗಳ ಪ್ಯಾಕೇಜ್ 9591017782, 9880621353

19/10/23 ಗುಜರಾತ್ ಟೂರ್ ವಿಮಾನದಲ್ಲಿ 34000/ ಮತ್ತು 3/12/23 ರಿಂದ ನೇಪಾಳ ಕಾಶಿ ಪ್ರಯಾಗ್ 26000/. ಶ್ರೀ ರಾಮ್ ಟೂರ್. 9108933383, 9606600383.

ಸೆಪ್ಟಂಬರ್ ಅಕ್ಟೋಬರ್ ತಿಂಗಳಲ್ಲಿ 8/13/21 ದಿನಗಳ ಕಾಶಿ,ಗಯಾ,ಪೂರಿಜಗನ್ನಾಥ್/ ಗಂಗೋತ್ರಿ,ಯಮನೋತ್ರಿ ಬದರಿನಾಥ್,ಕೇದಾರನಾಥ್ ದೆಹಲಿ/ 12 ದಿನಗಳ ಸೋಮನಾಥ್,ದ್ವಾರಕಾ ಮಹಾಕಾಳೇಶ್ವರ,ಮಾತೃಗಯಾ ಅಹಮದಾಬಾದ್ ಓಂಕಾರೇಶ್ವರ್ ಡಿಸೆಂಬರ್ ತಿಂಗಳಲ್ಲಿ 6 ದಿನಗಳ ಕನ್ಯಾಕುಮಾರಿ ರಾಮೇಶ್ವರ,ಮಧುರೈ 'ಶ್ರೀಸುಧಾ ಟ್ರಾವಲ್ಸ್' 9448119290 9019301300

10.10.2023ಮತ್ತು 10.11.2023 6ದಿನಗಳು ವಿಮಾನದಲ್ಲಿ ಅಲಹಾಬದ್,ಕಾಶಿ, ಗಯಾ,ಅಯೋಧ್ಯ (ಕೆಲವೇ ಸೀಟುಗಳಿವೆ)24000/ಪ್ರತಿ ತಿಂಗಳು ಅಂಡಮಾನ್ ಹವಳದ್ವೀಪ Land_Package15000/ ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್ 9845560219/ 9739847429

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಕೆಲಸ ಹುಡುಕಾಟ
ನಿಮ್ಮ ನೇಮಕಾತಿ ಅಗತ್ಯಗಳಿಗೆ ಪೂರಕ ವೇದಿಕೆ
JOB
ನಿಮ್ಮ ಕಂಪನಿಗೆ ಸೂಕ್ತವಾದ ಅಭ್ಯರ್ಥಿಗಳನ್ನು ಪಡೆಯಿರಿ...
ಈಗಲೇ ನಿಮ್ಮ ಜಾಹೀರಾತು ಬುಕ್ ಮಾಡಿರಿ!
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9886213331 |
+91 9900428036 | +91 9731810277 |
+91 9901641752 | 080-45557163/164

ತಿಂಗಳ ಹಿಂದೆಯಷ್ಟೇ ಬನ್ನೇರುಘಟ್ಟ ಉದ್ಯಾನಕ್ಕೆ ತಂದಿದ್ದ 37 ಜಿಂಕೆಗಳು

ವಾರದಲ್ಲಿ 13 ಜಿಂಕೆಗಳ ಸಾವು

ಪ್ರಜಾವಾಣಿ ವಾರ್ತೆ

ಆನೇಕಲ್: ಇಲ್ಲಿಯ ಬನ್ನೇರುಘಟ್ಟ ರಾಷ್ಟ್ರೀಯ ಜೈವಿಕ ಉದ್ಯಾನದಲ್ಲಿ ವಾರದಿಂದ ಈಚೆಗೆ ಒಟ್ಟು 13 ಜಿಂಕೆಗಳು ಮೃತಪಟ್ಟಿವೆ.

ಕೆಲವು ದಿನಗಳ ಹಿಂದೆಯಷ್ಟೇ ಮಾರಕ ಸೋಂಕಿನಿಂದ ಉದ್ಯಾನದಲ್ಲಿದ್ದ ಏಳು ಚಿರತೆ ಮರಿಗಳು ರಕ್ತಭೇದಿಯಿಂದ ಸಾವನ್ನಪ್ಪಿದ್ದವು. ಜಿಂಕೆಗಳ ಸಾವಿಗೂ ಸೋಂಕಿಗೂ ಸಂಬಂಧವಿಲ್ಲ ಎಂದು ಉದ್ಯಾನದ ಮೂಲಗಳು ತಿಳಿಸಿವೆ.

ಹಿಂಡುಗಳ ಕಾದಾಟ ಮತ್ತು ಜಂತುಹುಳು ಬಾಧೆಯಿಂದ ಜಿಂಕೆಗಳು ಮೃತಪಟ್ಟಿವೆ. ಕೆಲವು ಜಿಂಕೆಗಳ ಸಾವಿಗೆ ನಿಖರ ಕಾರಣ ತಿಳಿದಿಲ್ಲ. ಬಹುಶಃ ಹೃದಯಾಘಾತದಿಂದ ಅವು ಮೃತಪಟ್ಟಿರಬಹುದು ಎಂದು ಉದ್ಯಾನದ ಮೂಲಗಳು ತಿಳಿಸಿವೆ. ಸಾವನ್ನಪ್ಪಿದ ಕೆಲವು ಜಿಂಕೆಗಳ ಹೊಟ್ಟೆಯ ಕೆಳ ಭಾಗದಲ್ಲಿ ಭಾರಿ ಗಾತ್ರದ ಊತ ಕಾಣಿಸಿಕೊಂಡಿತ್ತು.

ಬೆಂಗಳೂರಿನ ಸೇಂಟ್ ಜಾನ್ಸ್ ಆಸ್ಪತ್ರೆಯ ಉದ್ಯಾನದಿಂದ ತರಲಾಗಿದ್ದ ಈ ಜಿಂಕೆಗಳನ್ನು ಹತ್ತು ದಿನ ಕ್ವಾರಂಟೈನ್ ಮಾಡಿ ವೈದ್ಯಕೀಯ ತಪಾಸಣೆ ಒಳಪಡಿಸಲಾಗಿತ್ತು. ಕ್ವಾರಂಟೈನ್ ಅವಧಿಯಲ್ಲಿಯೇ ಒಂಬತ್ತು ಜಿಂಕೆ ಮೃತಪಟ್ಟಿವೆ. ಸೋಮವಾರ ನಾಲ್ಕು ಜಿಂಕೆ ಮೃತಪಟ್ಟಿದ್ದು, ಇವುಗಳ ಸಾವಿಗೆ ನಿಖರ ಕಾರಣ ತಿಳಿದು ಬಂದಿಲ್ಲ.

ಬನ್ನೇರುಘಟ್ಟ ಉದ್ಯಾನದಲ್ಲಿ ಮೃತಪಟ್ಟ ಜಿಂಕೆಗಳ ಕಳೇಬರ

ಸೂಕ್ತ ರಕ್ಷಣೆ ಇಲ್ಲ ಎಂಬ ಕಾರಣಕ್ಕಾಗಿ ಬೆಂಗಳೂರಿನ ಸೇಂಟ್ ಜಾನ್ಸ್ ಆಸ್ಪತ್ರೆಯ ಉದ್ಯಾನದಲ್ಲಿ ಸಾಕಲಾಗಿದ್ದ 37 ಜಿಂಕೆಗಳನ್ನು ಆಗಸ್ಟ್ 17ರಂದು ಬನ್ನೇರುಘಟ್ಟ ಜೈವಿಕ ಉದ್ಯಾನಕ್ಕೆ ಹಸ್ತಾಂತರಿಸಲಾಗಿತ್ತು.

'ಜಿಂಕೆಗಳು ಅತ್ಯಂತ ಸೂಕ್ಷ್ಮ ಪ್ರಾಣಿಗಳು. ಒಂದು ಕಡೆಯಿಂದ ಮತ್ತೊಂದು ಕಡೆ ಸ್ಥಳಾಂತರಗೊಂಡಾಗ ಹೊಸ ಜಾಗಕ್ಕೆ ಹೊಂದಿಕೊಳ್ಳುವುದು ಕಷ್ಟ. ಕೆಲವೊಮ್ಮೆ ಹೃದಯಾಘಾತದಿಂದಲೂ ಸಾವನ್ನಪ್ಪುತ್ತವೆ' ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಸೂರ್ಯಸೇನ್ 'ಪ್ರಜಾವಾಣಿ'ಗೆ ತಿಳಿಸಿದರು.

ಕ್ವಾರಂಟೈನ್ ಜಾಗದಲ್ಲಿ ಗಂಡು ಜಿಂಕೆಗಳೇ ಹೆಚ್ಚಾಗಿದ್ದವು. ಇದು ಜಿಂಕೆಗಳ ಮಿಲನದ ಸಮಯವಾದ್ದರಿಂದ ಹೆಣ್ಣು ಜಿಂಕೆಗಾಗಿ ಪರಸ್ಪರ ಕಾದಾಟದಿಂದಾಗಿ ಹೆಚ್ಚಿನ ಗಂಡು ಜಿಂಕೆಗಳು ಮೃತಪಟ್ಟಿವೆ. ಕೆಲವೊಂದು ಹೊಟ್ಟೆಯಲ್ಲಿ ಜಂತುಹುಳು ಬಾಧೆಯಿಂದ ಮೃತಪಟ್ಟಿರಬಹುದು. ಉಳಿದ ಜಿಂಕೆಗಳಿಗೆ ಜಂತುಹುಳು ನಿವಾರಕ ಪುಡಿಯನ್ನು(ಡಿ ವರ್ಮಿಂಗ್ ಪೌಡರ್) ನೀರಿನಲ್ಲಿ ಮಿಶ್ರಣ ಮಾಡಿ ನೀಡಲಾಗುತ್ತಿದೆ. ಜಿಂಕೆಗಳ ಬಗ್ಗೆ ತುರ್ತು ನಿಗಾ ವಹಿಸಲಾಗಿದ್ದು ಪೌಷ್ಟಿಕ ಆಹಾರ ನೀಡಲಾಗುತ್ತಿದೆ ಎಂದರು.

ಜಿಂಕೆಗಳಿಗೆ ಓಡಾಡಲು ಸಾಕಷ್ಟು ವಿಶಾಲವಾದ ಜಾಗ ಬೇಕಾಗುತ್ತದೆ. ಸೇಂಟ್ ಜಾನ್ಸ್ ಆಸ್ಪತ್ರೆ ಉದ್ಯಾನದ ಕಿರಿದಾದ ಜಾಗದಲ್ಲಿದ್ದ ಕಾರಣ ಆರೈಕೆ ಕಷ್ಟವಾಗಿತ್ತು. ಹಾಗಾಗಿ ಎಲ್ಲವನ್ನೂ ಉದ್ಯಾನಕ್ಕೆ ಹಸ್ತಾಂತರಿಸಲಾಗಿತ್ತು ಎಂದು ಡಿಸಿಎಫ್ ಪ್ರಭಾಕರ್ ತಿಳಿಸಿದರು.

ಸೋಂಕಿನಿಂದ ಚೇತರಿಕೆ

ಸಾಮಾನ್ಯವಾಗಿ ಬೆಕ್ಕುಗಳಿಗೆ ತಗಲುವ ಮಾರಕ ಫೆಲಿನ್ ಪ್ಯಾನ್ಲೂಕೋಪೇನಿಯಾ (ಎಫ್‌ಪಿವಿ) ಸೋಂಕು ತಗುಲಿದ್ದ ಉದ್ಯಾನದ ನಾಲ್ಕು ಚಿರತೆ ಮರಿ ಮತ್ತು ಒಂದು ಸಿಂಹದ ಮರಿ ಚೇತರಿಸಿಕೊಂಡಿವೆ. ಎಲ್ಲ ಪ್ರಾಣಿಗಳಿಗೂ ಬೂಸ್ಟರ್ ಡೋಸ್ ನೀಡಲಾಗಿದ್ದು, ಹೊಸ ಪ್ರಕರಣ ವರದಿ ಆಗಿಲ್ಲ ಎಂದು ಸೂರ್ಯಸೇನ್ ತಿಳಿಸಿದ್ದಾರೆ. ಸೋಂಕು ತಗುಲಿದ್ದ ಒಟ್ಟು 11 ಚಿರತೆಗಳ ಪೈಕಿ ಕಳೆದ ವಾರ ಏಳು ಚಿರತೆ ಮರಿ ಮೃತಪಟ್ಟಿದ್ದವು. ಉದ್ಯಾನದಲ್ಲಿ ಈಚೆಗಷ್ಟೇ ಚಿರತೆ ಸಫಾರಿ ಆರಂಭಿಸಿ ಒಂಬತ್ತು ಚಿರತೆ ಮರಿಗಳನ್ನು ಬಿಡಲಾಗಿತ್ತು. ಉದ್ಯಾನದ ಪುನರ್ವಸತಿ ಆರೈಕೆ ಕೇಂದ್ರದಲ್ಲಿ ಒಟ್ಟು 80 ಚಿರತೆಗಳಿದ್ದವು.

'ವಿಶ್ವ ಪಾರಂಪರಿಕ ತಾಣ': ಬೇಲೂರು, ಹಳೆಬೀಡು, ಸೋಮನಾಥಪುರ

ಪ್ರಜಾವಾಣಿ ವಾರ್ತೆ

ಗದಗ: 'ವಿಶ್ವ ಪಾರಂಪರಿಕ ತಾಣಗಳ ಪಟ್ಟಿಗೆ ಐತಿಹಾಸಿಕ ತಾಣಗಳಾದ ಹಾಸನ ಜಿಲ್ಲೆಯ ಬೇಲೂರು, ಹಳೆಬೀಡು ಮತ್ತು ಮೈಸೂರು ಜಿಲ್ಲೆಯ ಸೋಮನಾಥಪುರ ದೇಗುಲ ಸೇರ್ಪಡೆಯಾಗಿದ್ದು, ಇದಕ್ಕೆ ಪ್ರಯತ್ನಿಸಿದ ಪ್ರಧಾನಿ ನರೇಂದ್ರ ಮೋದಿ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕೃತಜ್ಞತೆ ಸಲ್ಲಿಸುವೆ' ಎಂದು ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

'ಕನ್ನಡ ನಾಡಿನ ಕಲೆ, ಸಂಸ್ಕೃತಿ ಮತ್ತು ಪರಂಪರೆ ಬಿಂಬಿಸುವ ಈ ತಾಣಗಳಿಗೆ ವರ್ಷಗಳ ಹಿಂದೆಯೇ ಜಾಗತಿಕ ಹಿರಿಮೆ ಸಿಗಬೇಕಿತ್ತು. ಅದಕ್ಕಾಗಿ 2014ರಿಂದ ದೊಡ್ಡಮಟ್ಟದ ಪ್ರಯತ್ನ ನಡೆದಿತ್ತು' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

'ಈ ತಾಣಗಳ ಕುರಿತು ರಾಜ್ಯ ಸರ್ಕಾರವು 2018ರಲ್ಲಿ ಭಾರತೀಯ ಪುರಾತತ್ವ ಇಲಾಖೆಗೆ ಮಾಹಿತಿ ನೀಡಿತ್ತು. 2022ರಲ್ಲಿ ಅಂತರರಾಷ್ಟ್ರೀಯ ಪುರಾತನ ಸ್ಮಾರಕ ಮತ್ತು ಪ್ರದೇಶಗಳ ಸಮಿತಿಯು ಇಲ್ಲಿಗೆ ಭೇಟಿ ನೀಡಿ, ಐತಿಹಾಸಿಕ ಮತ್ತು ಪಾರಂಪರಿಕ ಮಹತ್ವದ ಬಗ್ಗೆ ವರದಿಯನ್ನು ಯುನೆಸ್ಕೊ ಸಂಸ್ಥೆಗೆ ಸಲ್ಲಿಸಿತ್ತು' ಎಂದರು.



ಎಚ್.ಕೆ.ಪಾಟೀಲ

'ಸೆಪ್ಟೆಂಬರ್ 18ರಂದು ಸೌದಿ ಅರೇಬಿಯಾದ ರಿಯಾದ್‌ನಲ್ಲಿ ನಡೆದ ವಿಶ್ವ ಪರಂಪರೆ ಸಮಿತಿಯ 45ನೇ ಅಧಿವೇಶನದಲ್ಲಿ ವಿಶ್ವ ಪರಂಪರೆಯ ತಾಣಗಳ ಪಟ್ಟಿಗೆ ಸೇರ್ಪಡೆ ಮಾಡಿರುವುದು ಘೋಷಿಸಲಾಯಿತು' ಎಂದು ಹೇಳಿದರು.

ವಿಶ್ವ ಪಾರಂಪರಿಕ ಪಟ್ಟಿಯಲ್ಲಿ ಶಾಂತಿನಿಕೇತನ: ಪಶ್ಚಿಮ ಬಂಗಾಳದ ಬಿರ್‌ಭೂಮ್ ಜಿಲ್ಲೆಯಲ್ಲಿ ನೊಬೆಲ್ ಪುರಸ್ಕೃತ ರವೀಂದ್ರನಾಥ ಠ್ಯಾಗೋರ್ 1901ರಲ್ಲಿ ಸ್ಥಾಪಿಸಿದ ಶಾಂತಿನಿಕೇತನ ಯುನೆಸ್ಕೊ ಪಾರಂಪರಿಕ ಪಟ್ಟಿಯಲ್ಲಿ ಸ್ಥಾನ ಪಡೆದಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ

ಕೊಪ್ಪ		ಶಿವಮೊಗ್ಗ		ತೀರ್ಥಹಳ್ಳಿ	
ಬೆಟ್ಟೆ	43009-51899	ಬೆಟ್ಟೆ	47633-52310	ಬೆಟ್ಟೆ	46899-52199
ಇಡಿ	41919-50399	ಗೋರಬಾಳು	17009-37233	ಇಡಿ	36369-50009
ಗೊರಬಲು	31839-36899	ರಾಶಿ	37599-48708	ಗೊರಬಲು	30169-37249
ಸರಕು	47899-76899	ಸರಕು	43869-81509	ರಾಶಿ	40168-50121
				ಸರಕು	50009-82200

ಒಪಿಎಸ್: ಎಚ್ಚರಿಸಿದ ಆರ್‌ಬಿಐ ಲೇಖನ

ಮುಂಬೈ (ಪಿಟಿಐ): ರಾಜ್ಯಗಳು ಹಳೆಯ ಪಿಂಚಣಿ ವ್ಯವಸ್ಥೆಗೆ (ಒಪಿಎಸ್) ಮರಳುತ್ತಿರುವುದು ಅವುಗಳ ಹಣಕಾಸಿನ ಒತ್ತಡವನ್ನು ಮಧ್ಯಮ ಅವಧಿಯಲ್ಲಿ ಅಥವಾ ದೀರ್ಘಾವಧಿಯಲ್ಲಿ ನಿಭಾಯಿಸಲು ಸಾಧ್ಯವಿಲ್ಲದ ಸ್ಥಿತಿಗೆ ಒಯ್ಯಬಹುದು ಎಂದು ಆರ್‌ಬಿಐ ಲೇಖನವೊಂದು ಎಚ್ಚರಿಸಿದೆ. ರಾಜ್ಯಗಳು ಒಪಿಎಸ್ ಕಡೆ ಮರಳುತ್ತಿರುವುದು 'ಹಿಮ್ಮುಖ ಚಲನೆಯ ಪ್ರಮುಖ ಹೆಜ್ಜೆ' ಎಂದು ಕೂಡ ಈ ಲೇಖನ ಹೇಳಿದೆ.

ಪಿಂಚಣಿ ವ್ಯವಸ್ಥೆಯಲ್ಲಿ ಸುಧಾರಣೆ ತರುವ ಕ್ರಮಗಳ ಭಾಗವಾಗಿ ಎನ್‌ಪಿಎಸ್ ಜಾರಿಗೆ ತರಲಾಯಿತು. ಆದರೆ ಒಪಿಎಸ್ ಜಾರಿಯಿಂದ ಆಗುವ ಹಣಕಾಸಿನ ಒಟ್ಟು ಹೊರೆಯು, ಎನ್‌ಪಿ ಎಸ್‌ನಿಂದ ಆಗುವ ಹೊರೆಗಿಂತ ನಾಲ್ಕೂವರೆ ಪಟ್ಟು ಹೆಚ್ಚಾಗಬಹುದು ಎಂದು ಲೇಖನದಲ್ಲಿ ಹೇಳಲಾಗಿದೆ. ಲೇಖನದಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯವು ಆರ್‌ಬಿಐನ ಅಭಿಪ್ರಾಯ ಅಲ್ಲ.

ರಾಜಸ್ಥಾನ, ಚತ್ತೀಸಗಢ, ಜಾರ್ಖಂಡ, ಪಂಜಾಬ್ ಮತ್ತು ಹಿಮಾಚಲ ಪ್ರದೇಶ ರಾಜ್ಯಗಳು ಒಪಿಎಸ್ ಜಾರಿಗೆ ತರುವುದಾಗಿ ಈಚೆಗೆ ಹೇಳಿವೆ. 'ಅಲ್ಪಾವಧಿಯಲ್ಲಿ ಪಿಂಚಣಿಗೆ ರಾಜ್ಯ ಸರ್ಕಾರಗಳು ನೀಡಬೇಕಿರುವ ಮೊತ್ತ ಕಡಿಮೆ ಆಗುವುದು ಒಪಿಎಸ್ ಕಡೆ ಮುಖ ಮಾಡಲು ಕಾರಣವಾಗಿರಬಹುದು. ಆದರೆ ದೀರ್ಘಾವಧಿಯಲ್ಲಿ ಪಿಂಚಣಿಗಾಗಿ ನೀಡಬೇಕಿರುವ ಮೊತ್ತವು, ಈಗಿನ ಉಳಿತಾಯವನ್ನು ಮರೆಮಾಚುವಂತೆ ಇರುತ್ತದೆ' ಎಂದು ಲೇಖನದಲ್ಲಿ ಹೇಳಲಾಗಿದೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ

ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಚಂದನ ಶಂಕರ, ವರಕೋಡು, ಮೈಸೂರು ಜಿಲ್ಲೆ

• ಪ್ರಶ್ನೆ: ನನ್ನ ಪತಿ ಸರ್ಕಾರಿ ನೌಕರಿಯಲ್ಲಿದ್ದಾರೆ. ಅವರು ತಿಂಗಳಲ್ಲಿ ಮೂರ್ನಾಲ್ಕು ಬಾರಿ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ, ಮಾರಾಟ ಮಾಡಲು ಉದ್ದೇಶಿಸಿದ್ದಾರೆ, ಅವಕಾಶವಿದೆಯೇ? ಇದರಿಂದ ಅವರ ಉದ್ಯೋಗಕ್ಕೆ ಏನಾದರೂ ತೊಂದರೆ ಆಗುತ್ತದೆಯೇ? ನಾನು ಗೃಹಿಣಿಯಾಗಿದ್ದು, ನನ್ನ ಹೆಸರಿನಲ್ಲಿ ಡಿಮ್ಯಾಟ್ ಖಾತೆ ಮಾಡಿಸಿ ಇಂಟ್ರಾ-ಡೆ ವಹಿವಾಟು ಮಾಡಿ ಹಣ ಗಳಿಸಬಹುದೇ? ಈ ಎರಡು ಸಮಸ್ಯೆಗಳಿಗೆ ಪರಿಹಾರ ನೀಡಿ.

ಉತ್ತರ: ಷೇರು ಮಾರುಕಟ್ಟೆಯಲ್ಲಿ ಎಲ್ಲಾ ವರ್ಗಗಳ ವ್ಯಕ್ತಿಗಳು ಹೂಡಿಕೆ ಮಾಡಬಹುದು. ಆದರೆ ಸರ್ಕಾರಿ ನೌಕರಿಯಲ್ಲಿರುವ ವ್ಯಕ್ತಿಗಳ ವಿಚಾರಕ್ಕೆ ಬಂದಾಗ, ಕೆಲವು ನಿರ್ಬಂಧಗಳನ್ನು ಅವರ ನಾಗರಿಕ ಸೇವಾ ನಿಯಮಗಳಲ್ಲಿ ಉಲ್ಲೇಖಿಸಲಾಗಿದೆ. ಸರ್ಕಾರಿ ನೌಕರಿಯಲ್ಲಿರುವ ವ್ಯಕ್ತಿಗಳ ವೃತ್ತಿ ಸಮಯಕ್ಕೆ ಧಕ್ಕೆಯಾಗಬಾರದು, ಆರ್ಥಿಕವಾಗಿ ಅನೇಕ ಮಾಹಿತಿಗಳು ಸರ್ಕಾರದ ಸೇವಾವಧಿಯಲ್ಲಿ ಅವರ ಗಮನಕ್ಕೆ ಬರುವುದರಿಂದ ಹಣದ ಆಮಿಷಗಳಿಗೆ ಅವರು ಒಳಗಾಗಬಾರದು ಎಂಬ ಕಾರಣಕ್ಕೆ ಇಂತಹ ಕೆಲವು ನಿರ್ಬಂಧಗಳನ್ನು ಹೇರಲಾಗಿದೆ.

ಕೇಂದ್ರೀಯ ನಾಗರಿಕ ಸೇವೆಗಳ ನಡವಳಿಕೆ ನಿಯಮಾವಳಿಯಲ್ಲಿ, ಯಾವುದೇ ಸರ್ಕಾರಿ ಹುದ್ದೆಯಲ್ಲಿರುವ ವ್ಯಕ್ತಿಗೆ ಅನ್ವಯಿಸುವ ನಿರ್ಬಂಧಗಳನ್ನು ಉಲ್ಲೇಖಿಸಲಾಗಿದೆ. ಇದರ ನಿಯಮ 16ರ ಅನ್ವಯ, ಯಾವುದೇ ಸರ್ಕಾರಿ ಉದ್ಯೋಗಿ ಷೇರು ಅಥವಾ ಇತರೆ ಹೂಡಿಕೆ ಉತ್ಪನ್ನದಲ್ಲಿ ಸ್ಪೆಕ್ಯುಲೇಟಿವ್ (ತ್ವರಿತ ದರ ಏರಿಳಿತ) ರೂಪದಲ್ಲಿ ವ್ಯವಹರಿಸುವುದನ್ನು ನಿರ್ಬಂಧಿಸಲಾಗಿದೆ. ಈ ನಿಯಮ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಅಥವಾ ಕೇಂದ್ರಾಡಳಿತ ಪ್ರದೇಶ, ಕಾರ್ಪೊರೇಶನ್, ಸರ್ಕಾರಿ ಕಂಪನಿಗಳು ಇತ್ಯಾದಿಗಳಲ್ಲಿ ಉದ್ಯೋಗ ಮಾಡುವ ಎಲ್ಲ ನೌಕರರಿಗೂ ಅನ್ವಯಿಸುತ್ತದೆ. ಆದರೆ ಕೇವಲ ಹೂಡಿಕೆಯ ದೃಷ್ಟಿಯಿಂದ ಮಾಡುವ ವ್ಯವಹಾರ ಇದರಲ್ಲಿ ಒಳಗೊಳ್ಳುವುದಿಲ್ಲ. ಕೆಲವೊಂದು ರೀತಿಯ ಹೂಡಿಕೆಗಳಿಗೆ ವಿನಾಯಿತಿಗಳನ್ನೂ ಕೊಡಲಾಗಿದೆ. ಉದಾಹರಣೆಗೆ, ಹಂತಹಂತವಾಗಿ ಷೇರುಗಳನ್ನು ದೀರ್ಘಾವಧಿಗಾಗಿ ಖರೀದಿಸಿ ಕೆಲವು ತಿಂಗಳ ಬಳಿಕ ಮಾರಾಟ ಮಾಡಿದಾಗ ಅದು ಹೂಡಿಕೆ ಎಂದೇ ಪರಿಗಣಿತವಾಗುತ್ತದೆ. ನಿಷೇಧ ಮಾಡಿರುವ ವಹಿವಾಟುಗಳ ವ್ಯಾಪ್ತಿಯಲ್ಲಿ ಕರೆನ್ಸಿ ಹಾಗೂ ಕಮಾಡಿಟಿ ವಹಿವಾಟು, ಫ್ಯೂಚರ್ಸ್ ಮತ್ತು ಆಪ್ಶನ್ ವ್ಯವಹಾರ ಅಥವಾ ಇಂಟ್ರಾಡೆ ಟ್ರೇಡಿಂಗ್ ಇತ್ಯಾದಿಗಳು ಬಹುಮುಖ್ಯವಾಗಿ ಬರುತ್ತವೆ. ಕಾರಣ ಇವೆಲ್ಲಾ ಪದೇ ಪದೇ ವ್ಯವಹರಿಸಲ್ಪಡುವ ಮಾರುಕಟ್ಟೆ ಉತ್ಪನ್ನಗಳಾಗಿವೆ.

ವ್ಯವಹಾರ ಹಾಗೂ ಹೂಡಿಕೆ ಎರಡೂ ಪದಗಳು ವಿಭಿನ್ನ ಉದ್ದೇಶ ಹಾಗೂ ಗುಣಲಕ್ಷಣಗಳನ್ನು ಹೊಂದಿವೆ. ನೋಂದಾಯಿತ ಷೇರು ಬ್ರೋಕರ್‌ಗಳು ಅಥವಾ ಇತರ ನೋಂದಾಯಿತ ಸಂಸ್ಥೆಗಳ ಮೂಲಕ ಮಾಡಲಾದ 'ಅಪರೂಪದ ವ್ಯವಹಾರ'ವನ್ನು ಹೂಡಿಕೆ ಎಂದು ಪರಿಗಣಿಸಿದ್ದಾರೆ. ಅದೇ ಒಂದು ವರ್ಷದ ಅವಧಿಯಲ್ಲಿ ಅನೇಕ ಬಾರಿ ವ್ಯವಹರಿಸಿದಾಗ ಅದು ಹೂಡಿಕೆಯ ವ್ಯಾಪ್ತಿ ಮೀರುತ್ತದೆ. ಇನ್ನು, ಎಷ್ಟು ಬಾರಿ ವ್ಯವಹರಿಸಬಹುದು ಎನ್ನುವ ನಿರ್ದಿಷ್ಟ ಮಾಹಿತಿಯನ್ನು ನಿಯಮಾವಳಿಯಲ್ಲಿ ನೀಡಿಲ್ಲದಿದ್ದರೂ, ಅದರ ಅರ್ಥ ಅನೇಕ ಬಾರಿ ಖರೀದಿ ಮಾರಾಟ ಮಾಡಬಹುದೆಂದಲ್ಲ. ದೀರ್ಘಾವಧಿಗೆ ಷೇರುಗಳಲ್ಲದೆ ಎಸ್.ಐ.ಪಿ, ಗೋಲ್ಡ್ ಬಾಂಡ್, ಆರ್‌ಬಿಐ ಬಾಂಡ್ ಮತ್ತು ಅಂತಹ ಇತರೆ ಹೂಡಿಕೆಗಳನ್ನು ದೀರ್ಘಾವಧಿ ಹೂಡಿಕೆ ಎಂದೇ ತಿಳಿಯಬಹುದು. ಈ ಹೂಡಿಕೆಗೂ ಆರ್ಥಿಕ ಮಿತಿ ಇದ್ದು 2019ರ ತಿದ್ದುಪಡಿಯಂತೆ ಕ್ಯಾಲೆಂಡರ್ ವರ್ಷದಲ್ಲಿ ಯಾವುದೇ ವರ್ಗದ ನೌಕರರಾಗಿದ್ದರೂ ತಮ್ಮ ಮೂಲ ವೇತನದ ಆರು ಪಟ್ಟು ಹೂಡಿಕೆಗೆ ಮುಕ್ತ ಅವಕಾಶವಿದೆ. ಇನ್ನೂ ಹೆಚ್ಚಿನ ಹೂಡಿಕೆ ಇದ್ದರೆ, ಅದನ್ನು ವರ್ಷಾಂತ್ಯವಾದೊಡನೆ ಘೋಷಿಸಬೇಕು.

ಯಾವುದೇ ವ್ಯವಹಾರವು ಮೇಲೆ ಉಲ್ಲೇಖಿಸಲಾದ ಸ್ವರೂಪದ್ದಾಗಿದೆಯೇ ಅಥವಾ ನಿರ್ಬಂಧದಲ್ಲಿ ಒಳಗೊಂಡ ವಹಿವಾಟು ಹೌದೇ ಅಲ್ಲವೇ ಎಂಬುದನ್ನು ನಿರ್ಣಯಿಸುವ ಅಧಿಕಾರ ಸರ್ಕಾರದ್ದಾಗಿದೆ. ಇದಕ್ಕಾಗಿ ಅಗತ್ಯವುಳ್ಳ ನಿರ್ಣಯಗಳನ್ನು ಸರ್ಕಾರದ ಅಧಿಕಾರಿಗಳು ಕೊಡಬಹುದಾಗಿರುತ್ತದೆ. ನಿಮ್ಮ ವಿಚಾರದಲ್ಲಿನ ವ್ಯವಹಾರ ಸೂಕ್ಷ್ಮತೆ ಇನ್ನೂ ಹೆಚ್ಚಿದ್ದಲ್ಲಿ ಸಂಬಂಧಪಟ್ಟ ಮೇಲಧಿಕಾರಿಗಳನ್ನು ಸಂಪರ್ಕಿಸಿ ನಿಮ್ಮ ಗೊಂದಲ ಪರಿಹರಿಸಿಕೊಳ್ಳಬಹುದು. ಇನ್ನು ಸಂಬಂಧಿಕರ ಮೂಲಕ ಅಥವಾ ಯಾವುದೇ ವ್ಯಕ್ತಿಗಳ ಮೂಲಕ ತಮ್ಮ ಖಾತೆಯನ್ನು ವ್ಯವಹಾರಕ್ಕೆ ಅನುವು ಮಾಡಿಕೊಡುವುದು, ಅವರ ಮೂಲಕ ವ್ಯವಹರಿಸುವುದು, ಅವರಿಗೆ ಆರ್ಥಿಕ ನೆರವು ನೀಡುವ ಮೂಲಕ ಪರೋಕ್ಷವಾಗಿ ವಹಿವಾಟು ಮಾಡುವುದೂ ನಿಷೇಧಿತ ವ್ಯವಹಾರದ ಪರಿಧಿಯಲ್ಲಿ ಬರುತ್ತದೆ. ನಿಮ್ಮ ವಿಚಾರದಲ್ಲಿ ನಿಮ್ಮ ಪತಿಯ ಆರ್ಥಿಕ ನೆರವಿಲ್ಲದೆ, ನಿಮ್ಮದೇ ಆದಾಯದ ಹಣ ಉಪಯೋಗಿಸಿ ವ್ಯವಹರಿಸಬಹುದು. ನೀವು ಯಾವುದೇ ಆನ್ಲೈನ್ ವೇದಿಕೆ ಮೂಲಕ ವ್ಯವಹರಿಸಿದರೂ, ಮೇಲೆ ಹೇಳಿರುವ ಯಾವ ರೀತಿಯ ನಿರ್ಬಂಧಿತ ವ್ಯವಹಾರ ಮಾಡುತ್ತೀರಿ ಎನ್ನುವುದಷ್ಟೆ ಇಲ್ಲಿ ವಿಮರ್ಶೆಗೆ ಒಳಪಡುವ ವಿಚಾರ.

ಎಂ.ವಿ. ಶ್ರೀಧರ್

• ಪ್ರಶ್ನೆ: ತಮ್ಮ ಹಿಂದಿನ ಅಂಕಣದಲ್ಲಿ (ಸೆಪ್ಟೆಂಬರ್ 6, 2023) ಆರ್‌ಬಿಐ ಉಗಮ್ ಜಾಲತಾಣದಲ್ಲಿ ಹತ್ತು ವರ್ಷ ಹಳೆಯ ಠೇವಣಿ ಬಗ್ಗೆಯೂ ತಿಳಿಯಬಹುದು ಎಂದು ತಿಳಿಸಿರುತ್ತೀರಿ. ನಾನು ಪ್ರಯತ್ನಿಸಿದಾಗ ಅಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಟ್ರಾವಂಕೋರ್‌ಗೆ ಸಂಬಂಧಿಸಿದ ವಿವರ ಇರಲಿಲ್ಲ. ನನ್ನ ಪ್ರಶ್ನೆ, ಈ ಬ್ಯಾಂಕ್ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ವಿಲೀನವಾಗಿರುವುದರಿಂದ ಈ ಬ್ಯಾಂಕ್ ಠೇವಣಿ ವಿವರ ಹೇಗೆ ಪಡೆಯುವುದು?

ಉತ್ತರ: ಯಾವುದೇ ಬ್ಯಾಂಕ್ ಅಥವಾ ಸಂಸ್ಥೆ ಇನ್ನೊಂದು ಸಂಸ್ಥೆಯೊಡನೆ ವಿಲೀನವಾಗುವುದು ಒಂದು ಸಹಜ ಹಾಗೂ ಕಾನೂನಾತ್ಮಕ ಪ್ರಕ್ರಿಯೆ. ಸ್ಟೇಟ್ ಬ್ಯಾಂಕ್ ಆಫ್ ಟ್ರಾವಂಕೋರ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ವಿಲೀನವಾದಾಗ ಇದರ ಎಲ್ಲ ಖಾತೆದಾರರ ವಿವರವೂ ಸಹಜವಾಗಿ ವರ್ಗಾವಣೆಯಾಗಿರುತ್ತದೆ. ಅದೇ ರೀತಿ ಹಿಂದಿನ ನಿಷ್ಕ್ರಿಯ ಖಾತೆಗಳ ವಿವರಗಳೂ ಅದರ ಉಸ್ತುವಾರಿ ಹಾಗೂ ಗ್ರಾಹಕ ಸಂಬಂಧಿ ವಿಚಾರಗಳೂ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾಗೆ ವರ್ಗಾವಣೆ ಆಗುತ್ತವೆ. ಹತ್ತು ವರ್ಷ ಹಳೆಯ ನಿಷ್ಕ್ರಿಯ ಖಾತೆ ಇದ್ದರೆ, ಅದೂ ಸಹಜವಾಗಿ ಆರ್‌ಬಿಐನ ಠೇವಣಿದಾರರ ಶಿಕ್ಷಣ ಮತ್ತು ಜಾಗೃತಿ ನಿಧಿಗೆ (DEAF) ವರ್ಗಾವಣೆಗೊಂಡಿರುತ್ತದೆ. ನಿಮ್ಮ ವಿಚಾರದಲ್ಲಿ ಸಂಬಂಧಪಟ್ಟ ಸ್ಥಳೀಯ ಶಾಖೆಗೆ ನಿಮ್ಮ ಹಳೆಯ ಖಾತೆಯ ವಿವರದೊಂದಿಗೆ ಭೇಟಿ ನೀಡಿ ಮಾಹಿತಿ ಪಡೆಯುವುದು ಒಳಿತು.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. **ವಿಳಾಸ:** ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75,v ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001. **ಇ-ಮೇಲ್:** businessdesk@prajavani.co.in

ಎಲ್‌ಐಸಿ: ₹3 ಲಕ್ಷದಿಂದ ₹5 ಲಕ್ಷಕ್ಕೆ ಹೆಚ್ಚಳ

ಏಜೆಂಟರ ಗ್ರ್ಯಾಚ್ಯುಟಿ ಮಿತಿ ಏರಿಕೆ

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ನೌಕರರು ಹಾಗೂ ಏಜೆಂಟರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಕೇಂದ್ರ ಹಣಕಾಸು ಸಚಿವಾಲಯವು ಸೋಮವಾರ ಹಲವು ಕ್ರಮಗಳಿಗೆ ಅನುಮೋದನೆ ನೀಡಿದೆ. ಗ್ರ್ಯಾಚ್ಯುಟಿ ಹಾಗೂ ಕುಟುಂಬ ಪಿಂಚಣಿ ಮಿತಿ ಹೆಚ್ಚಳ ಕೂಡ ಈ ಕ್ರಮಗಳಲ್ಲಿ ಸೇರಿದೆ.

ಎಲ್‌ಐಸಿ ಏಜೆಂಟರ ಗ್ರ್ಯಾಚ್ಯುಟಿ ಮಿತಿಯನ್ನು ₹3 ಲಕ್ಷದಿಂದ ₹5 ಲಕ್ಷಕ್ಕೆ ಹೆಚ್ಚು ಮಾಡಲಾಗಿದೆ ಎಂದು ಹಣಕಾಸು ಸಚಿವಾಲಯದ ಹೇಳಿಕೆ ತಿಳಿಸಿದೆ. ಮರುನೇಮಕ ಆಗಿರುವ ಏಜೆಂಟರು ನವೀಕರಣ ಕಮಿಷನ್ ಪಡೆಯಲು ಅರ್ಹರು ಎಂಬ ನಿಯಮ ಜಾರಿಗೆ ತರಲಾಗಿದೆ. ಇದರಿಂದ ಅವರ ಹಣಕಾಸಿನ ಸ್ಥಿರತೆ ಹೆಚ್ಚಲಿದೆ ಎಂದು ಸಚಿವಾಲಯ ಹೇಳಿದೆ.

ಏಜೆಂಟರಿಗೆ ಅನ್ವಯವಾಗುವ ಅವಧಿ ವಿಮೆಯನ್ನು ಈಗಿನ ₹3,000–10,000ದ ಮಿತಿಯಿಂದ ₹25,000–1,50,000ಕ್ಕೆ ಹೆಚ್ಚು ಮಾಡಲಾಗಿದೆ. ಇದರ ಪರಿಣಾಮವಾಗಿ, ಮೃತ ಏಜೆಂಟರ ಕುಟುಂಬದ ಸದಸ್ಯರಿಗೆ ಹೆಚ್ಚಿನ ನೆರವು ಸಿಗಲಿದೆ.

ಎಲ್‌ಐಸಿ ನೌಕರರಿಗೆ ಅನ್ವಯವಾಗುವಂತೆ, ಕುಟುಂಬ ಪಿಂಚಣಿಯನ್ನು ಎಲ್ಲರಿಗೂ ಶೇ 30ರ ದರಕ್ಕೆ ನಿಗದಿ ಮಾಡಲಾಗಿದೆ. ಎಲ್‌ಐಸಿ 13 ಲಕ್ಷಕ್ಕೂ ಹೆಚ್ಚಿನ ಏಜೆಂಟರನ್ನು, 1 ಲಕ್ಷಕ್ಕೂ ಹೆಚ್ಚಿನ ನೌಕರರನ್ನು ಹೊಂದಿದೆ.

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹143
ಆರ್‌ಎಸ್‌ಎಸ್-5	₹137
ಗುಡ್ ಲಾಟ್	₹125

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹302-516
ದ್ವಿತಳಿ (ಬಿ.ವಿ)	₹336-606

ಏಷ್ಯನ್ ಗೇಮ್ಸ್ ಫುಟ್‌ಬಾಲ್: ಆತಿಥೇಯ ಚೀನಾ ಎದುರು 1–5 ಗೋಲುಗಳ ಸೋಲು

ಮೊದಲ ಪಂದ್ಯದಲ್ಲಿ ಭಾರತಕ್ಕೆ ನಿರಾಸೆ

ಹಾಂಗ್‌ಝೌ, ಚೀನಾ (ಪಿಟಿಐ): ಸೂಕ್ತ ತಯಾರಿ ಇಲ್ಲದೆಯೇ ಕಣಕ್ಕಿಳಿದ ಭಾರತ ತಂಡ, ಏಷ್ಯನ್ ಗೇಮ್ಸ್ ಫುಟ್‌ಬಾಲ್ ಟೂರ್ನಿಯ ಮೊದಲ ಪಂದ್ಯದಲ್ಲಿ ಆತಿಥೇಯ ಚೀನಾ ಎದುರು 1-5 ಗೋಲುಗಳಿಂದ ಮುಗ್ಗರಿಸಿತು.

ಮಂಗಳವಾರ ನಡೆದ ಪಂದ್ಯದಲ್ಲಿ ಗಿಯಾವೊ ತಿಯಾನ್‌ಯಿ (17ನೇ ನಿ.), ದಾಯ್ ವೆಯಿಜುನ್ (51 ನೇ ನಿ.), ತಾವೊ ಕ್ವಿಯಾಂಗ್‌ಲಾಂಗ್ (72 ಮತ್ತು 75ನೇ ನಿ.) ಮತ್ತು ಹಾವೊ ಫಾಂಗ್ (90 + 2) ಅವರು ಚೀನಾ ತಂಡದ ಪರ ಗೋಲು ಗಳಿಸಿದರು. ಭಾರತ ತಂಡದ ಏಕೈಕ ಗೋಲನ್ನು ರಾಹುಲ್ ಕೆ.ಪಿ (45 + 1) ಅವರು ಗಳಿಸಿದರು.

ಮುಂದಿನ ಹಂತ ಪ್ರವೇಶಿಸಬೇಕಾದರೆ ಭಾರತ ತಂಡವು ಗುಂಪಿನಲ್ಲಿ ಇನ್ನುಳಿದ ಪಂದ್ಯಗಳಲ್ಲಿ ಬಾಂಗ್ಲಾದೇಶ ಮತ್ತು ಮ್ಯಾನ್ಮಾರ್ ತಂಡಗಳನ್ನು ಮಣಿಸಬೇಕು. ಇದೇ ಗುಂಪಿನ ಇನ್ನೊಂದು ಪಂದ್ಯದಲ್ಲಿ ಮ್ಯಾನ್ಮಾರ್ 4-2 ಗೋಲುಗಳಿಂದ ಬಾಂಗ್ಲಾದೇಶ ತಂಡವನ್ನು ಪರಾಭವಗೊಳಿಸಿತು.

ಭಾರತ ತಂಡದ ಆಟಗಾರರು ಸೋಮವಾರ ಸಂಜೆಯಷ್ಟೇ 'ಕ್ರೀಡಾ ಗ್ರಾಮ' ತಲುಪಿದ್ದರು. ಪ್ರಯಾಣದಿಂದ ಬಸವಳಿದಿದ್ದ ಆಟಗಾರರು ಸಾಕಷ್ಟು ವಿಶ್ರಾಂತಿ ಇಲ್ಲದೆಯೇ ಆಡಲಿಳಿದಿದ್ದರು.

ಮೊದಲ ಅವಧಿಯಲ್ಲಿ ಎದುರಾಳಿಗಳಿಗೆ ತಕ್ಕ ಪೈಪೋಟಿ ನೀಡಿದ ಭಾರತ, ಎರಡನೇ ಅವಧಿಯಲ್ಲಿ ಆಟದ ಮೇಲಿನ ಹಿಡಿತ ಕೈಬಿಟ್ಟಿತು. ಸುನಿಲ್ ಚೆಟ್ರಿ ಮತ್ತು ಸಂದೇಶ್ ಜಿಂಗನ್ ಅವರನ್ನು ಹೊರತುಪಡಿಸಿದರೆ, ಮಂಗಳವಾರ ಕಣಕ್ಕಿಳಿದ ಆಟಗಾರರಲ್ಲಿ ಬಹುತೇಕ ಮಂದಿ ಅನನುಭವಿಗಳೇ ಆಗಿದ್ದರು. ಜಿಂಗನ್ ಎಂದಿನ ಲಯದಲ್ಲಿ ಆಡಲು ವಿಫಲರಾದರು. ಚೆಟ್ರಿ 85 ನಿಮಿಷ ಕಣದಲ್ಲಿದ್ದರೂ, ಗೋಲು ಗಳಿಸಲು ಆಗಲಿಲ್ಲ. ಅವರಿಗೆ ನಿಖರ ಪಾಸ್‌ಗಳನ್ನು ನೀಡುವಲ್ಲಿ ಮಿಡ್‌ಫೀಲ್ಡರ್‌ಗಳು ಎಡವಿದರು. ಭಾರತದ ಪರ ರಾಹುಲ್ ಮಾತ್ರ ಗೋಲು ಗಳಿಸಲು ಯಶಸ್ವಿಯಾದರು. ಅಬ್ದುಲ್ ರಬೀಹ್ ನೀಡಿದ ಪಾಸ್‌ನಲ್ಲಿ ಚೆಂಡನ್ನು ನಿಯಂತ್ರಣಕ್ಕೆ ತೆಗೆದುಕೊಂಡು ಗುರಿ ಸೇರಿಸಿದರು.

ಏಷ್ಯನ್ ಗೇಮ್ಸ್‌ಗೆ ತಂಡದ ಆಯ್ಕೆ ಪ್ರಕ್ರಿಯೆ ವೇಳೆ ತಮ್ಮ ಆಟಗಾರರನ್ನು ಬಿಟ್ಟುಕೊಡಲು ಇಂಡಿಯನ್ ಸೂಪರ್ ಲೀಗ್‌ನ (ಐಎಸ್‌ಎಲ್) ಹೆಚ್ಚಿನ ಕ್ಲಬ್‌ಗಳು ಹಿಂದೇಟು ಹಾಕಿದ್ದವು. ಈ ಕಾರಣ ಎಐಎಫ್‌ಎಫ್, ಅನನುಭವಿಗಳೇ ಇರುವ ತಂಡವನ್ನು ಏಷ್ಯನ್ ಗೇಮ್ಸ್‌ಗೆ ಕಳುಹಿಸಿದೆ.

ಏಷ್ಯನ್ ಗೇಮ್ಸ್‌ನ ಉದ್ಘಾಟನೆ ಸೆ.23 ರಂದು ನಡೆಯಲಿದೆಯಾದರೂ, ಫುಟ್‌ಬಾಲ್ ಸೇರಿದಂತೆ ಕೆಲವು ತಂಡ ಕ್ರೀಡೆಗಳು ಮುಂಚಿತವಾಗಿಯೇ ಶುರುವಾಗಿವೆ.

ಭಾರತ ಮತ್ತು ಚೀನಾ ಆಟಗಾರರ ಪೈಪೋಟಿ –ಪಿಟಿಐ ಚಿತ್ರ

19th Asian Games Hangzhou 2022

ವಾಲಿಬಾಲ್ ತಂಡ ಶುಭಾರಂಭ

ಭಾರತ ವಾಲಿಬಾಲ್ ತಂಡವು ಶುಭಾರಂಭ ಮಾಡಿತು. ಮಂಗಳವಾರ ನಡೆದ ಪುರುಷರ ವಿಭಾಗದ 'ಸಿ' ಗುಂಪಿನ ಪಂದ್ಯದಲ್ಲಿ 25-14, 25-13, 25-19 ರಿಂದ ಕಾಂಬೋಡಿಯ ವಿರುದ್ಧ ಗೆದ್ದಿತು.

ಬುಧವಾರ ನಡೆಯುವ ಪಂದ್ಯದಲ್ಲಿ ಭಾರತ ತಂಡ, ವಿಶ್ವ ರ‍್ಯಾಂಕಿಂಗ್‌ನಲ್ಲಿ 27ನೇ ಸ್ಥಾನದಲ್ಲಿರುವ ಪ್ರಬಲ ದಕ್ಷಿಣ ಕೊರಿಯಾ ತಂಡವನ್ನು ಎದುರಿಸಲಿದೆ. ಈ ಬಾರಿ ಪುರುಷರ ವಿಭಾಗದಲ್ಲಿ ಒಟ್ಟು 19 ತಂಡಗಳು ಪಾಲ್ಗೊಂಡಿವೆ. ಜಪಾನ್, ಚೀನಾ ಮತ್ತು ದಕ್ಷಿಣ ಕೊರಿಯಾ ತಂಡಗಳು ಪದಕ ಗೆಲ್ಲುವ ನೆಚ್ಚಿನ ತಂಡಗಳು ಎನಿಸಿಕೊಂಡಿವೆ.

ಫುಟ್‌ಬಾಲ್: ಎಂಇಜಿ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೇಕ್ ಮುಜೀಬ್ (48ನೇ) ಗಳಿಸಿದ ಗೋಲಿನ ನೆರವಿನಿಂದ ಎಂಇಜಿ ಅಂಡ್ ಸೆಂಟರ್ ಎಫ್‌ಸಿ ತಂಡವು ಮಂಗಳವಾರ ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 1-0ಯಿಂದ ರಿಯಲ್ ಚಿಕ್ಕಮಗಳೂರು ಎಫ್‌ಸಿ ತಂಡವನ್ನು ಮಣಿಸಿತು.

ಮತ್ತೊಂದು ಪಂದ್ಯದಲ್ಲಿ ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡವು 5-0ಯಿಂದ ಯಂಗ್ ಚಾಲೆಂಜರ್ಸ್ ತಂಡವನ್ನು ಪರಾಭವಗೊಳಿಸಿತು. ಚೆಸ್ಟರ್ ಪೌಲ್ ಲಿಂಗ್ಡೊ (4, 15ನೇ) ಎರಡು ಗೋಲು ಗಳಿಸಿದರೆ, ರಿಭವ್ ಸರ್ದೇಸಾಯಿ (22ನೇ), ರಿಷಭ್ ಡೊಬ್ರಿಯಾಲ್ (47ನೇ), ಸೂರಜ್ ಹಡ್ಕೊಂಕರ್ (83) ತಲಾ ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು.

ಎಂಎಫ್‌ಎಆರ್ ತಂಡಕ್ಕೆ ಗೆಲುವು: ಪ್ರತೀಕ್ ಸ್ವಾಮಿ ಅವರ ಆಟದ ಬಲದಿಂದ ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ತಂಡವು 3-1ರಿಂದ ಎಎಸ್‌ಸಿ ಆ್ಯಂಡ್ ಸೆಂಟರ್ ಎಫ್‌ಸಿ ತಂಡವನ್ನು ಮಣಿಸಿತು.

ಸೋಮವಾರ ನಡೆದ ಪಂದ್ಯದಲ್ಲಿ ಎಂಎಫ್‌ಎಆರ್ ಪರ ಪ್ರತೀಕ್ ಸ್ವಾಮಿ 2 ಗೋಲು ಗಳಿಸಿದರೆ, ಬಿ.ಎಸ್. ಮೃಣಾಲ್ ಮುತ್ತಣ್ಣ ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು. ಎಎಸ್‌ಸಿ ಪರ ವಹೆಂಗಬಾಮ್ ನೀರಜ್ ಸಿಂಗ್ ಏಕೈಕ ಗೋಲು ತಂದಿತ್ತರು.

ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡದ ರಿಷಭ್ ಡೊಬ್ರಿಯಾಲ್ (ಬಲ) ಮತ್ತು ಯಂಗ್ ಚಾಲೆಂಜರ್ಸ್ ಎಫ್‌ಸಿಯ ಡೇವಿಡ್ ಲಾಲ್‌ರಿನ್‌ಸಂಗ (ಎಡ) ಅವರು ಪೈಪೋಟಿ ನಡೆಸುತ್ತಿರುವುದು –ಪ್ರಜಾವಾಣಿ ಚಿತ್ರ/ ಬಿ.ಎಚ್. ಶಿವಕುಮಾರ್

ಇನ್ನೊಂದು ಪಂದ್ಯದಲ್ಲಿ ಎಚ್‌ಎಎಲ್ ಎಫ್‌ಸಿ ತಂಡವು 5-0 ಯಿಂದ ಬೆಂಗಳೂರು ಡ್ರೀಮ್ ಯುನೈಟೆಡ್ ತಂಡವನ್ನು ಸೋಲಿಸಿತು.

ಭಾರತದ ಕುಸ್ತಿಪಟುಗಳಿಗೆ ನಿರಾಸೆ

ಬೆಲ್‌ಗ್ರೇಡ್ (ಪಿಟಿಐ): ಭಾರತದ ಮಹಿಳಾ ಕುಸ್ತಿಪಟು ನೇಹಾ ಶರ್ಮಾ ಅವರು ಇಲ್ಲಿ ನಡೆಯುತ್ತಿರುವ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕದ 'ಪ್ಲೇ ಆಫ್'ನಲ್ಲಿ ನಿರಾಸೆ ಅನುಭವಿಸಿದರು.

ಮಂಗಳವಾರ ನಡೆದ 55 ಕೆ.ಜಿ. ವಿಭಾಗದ 'ರಿಪೇಜ್' ಬೌಟ್‌ನಲ್ಲಿ ನೇಹಾ ಅವರು 7-4 ರಿಂದ ಉಕ್ರೇನ್‌ನ ಮರಿಯಾ ವಿನಿಕ್ ಅವರನ್ನು ಮಣಿಸಿದರು. ಕಂಚಿನ ಪದಕಕ್ಕಾಗಿ ನಡೆದ ಹಣಾಹಣಿಯಲ್ಲಿ ಅವರು ಜರ್ಮನಿಯ ಅನಸ್ತೇಸಿಯ ಬ್ಲೇವಸ್ ಎದುರು ಪರಾಭವಗೊಂಡರು. ತಾಂತ್ರಿಕ ಕೌಶಲ ಶ್ರೇಷ್ಠತೆಯ ಆಧಾರದಲ್ಲಿ ಬ್ಲೇವಸ್ ಅವರನ್ನು ವಿಜಯಿ ಎಂದು ಘೋಷಿಸಲಾಯಿತು.

ಸರಿತಾ (57 ಕೆ.ಜಿ ವಿಭಾಗ) ಮತ್ತು ದಿವ್ಯಾ (76 ಕೆ.ಜಿ) ಅವರು ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಎಡವಿದರು. ಅಂತಿಮ್ ಕುಂದು (65 ಕೆ.ಜಿ) ಮತ್ತು ನೀಲಂ (50 ಕೆ.ಜಿ.) ಅವರಿಗೂ ಪದಕ ದಕ್ಕಲಿಲ್ಲ.

ಮೊದಲ ಸುತ್ತಿನಲ್ಲಿ ವೆನಿಜುವೆಲದ ಬೆತ್‌ಜಬೆತ್ ಕೊಲ್ಮನರೆಜ್ ಅವರನ್ನು 6-1 ರಿಂದ ಮಣಿಸಿದ ಸರಿತಾ, ಮುಂದಿನ ಹಣಾಹಣಿಯಲ್ಲಿ ನೈಜೀರಿಯಾದ ಒಡುನಯೊ ಅಡೆಕುರೊಯೆ ಎದುರು 4-6 ರಿಂದ ಸೋತರು.

ಆರಂಭಿಕ ಸುತ್ತಿನಲ್ಲಿ ಟರ್ಕಿಯ ಮೆಹ್ತಪ್ ಗಲ್ಟೆಕಿನ್ ವಿರುದ್ಧ 7-5 ರಿಂದ ಗೆದ್ದ ದಿವ್ಯಾ, ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಕೆನಡಾದ ಜಸ್ಟಿನ್ ರಿನೇ ಕೈಯಲ್ಲಿ ಪರಾಭವಗೊಂಡರು.

ಹಾಂಗ್‌ಝೌನತ್ತ ಭಾರತ ಪುರುಷರ ಹಾಕಿ ತಂಡ

ಪದಕ ವಿಶ್ವಾಸದಲ್ಲಿ ಹರ್ಮನ್ ಬಳಗ

ಬೆಂಗಳೂರು (ಪಿಟಿಐ): ಏಷ್ಯನ್ ಕ್ರೀಡಾಕೂಟದಲ್ಲಿ ಆಡಲಿರುವ ಭಾರತ ಪುರುಷರ ಹಾಕಿ ತಂಡವು ಮಂಗಳವಾರ ಬೆಂಗಳೂರಿನಿಂದ ಹಾಂಗ್‌ಝೌನತ್ತ ಪ್ರಯಾಣ ಬೆಳೆಸಿತು.

ಭಾರತವು ಸೆ.24ರಂದು ಉಜ್ಬೇಕಿಸ್ತಾನ ವಿರುದ್ಧ ಮೊದಲ ಪಂದ್ಯ ಆಡಲಿದೆ. ಭಾರತ, ಪಾಕಿಸ್ತಾನ, ಜಪಾನ್, ಬಾಂಗ್ಲಾದೇಶ, ಸಿಂಗಪುರ ಮತ್ತು ಉಜ್ಬೇಕಿಸ್ತಾನ ತಂಡಗಳು 'ಎ' ಗುಂಪಿನಲ್ಲಿವೆ. ಕೊರಿಯಾ, ಮಲೇಷ್ಯಾ, ಚೀನಾ, ಒಮನ್, ಥಾಯ್ಲೆಂಡ್ ಮತ್ತು ಇಂಡೋನೇಷ್ಯಾ ತಂಡಗಳು 'ಬಿ' ಗುಂಪಿನಲ್ಲಿವೆ. ಗುಂಪುಗಳಲ್ಲಿ ಅಗ್ರಸ್ಥಾನ ಪಡೆಯುವ ಎರಡು ತಂಡಗಳು ಸೆಮಿಫೈನಲ್ ಪ್ರವೇಶಿಸಲಿವೆ.

ಭಾರತ ತಂಡವು ಸೆ.26, 28 ಮತ್ತು 30ರಂದು ಕ್ರಮವಾಗಿ ಸಿಂಗಪುರ, ಜಪಾನ್ ಮತ್ತು ಪಾಕಿಸ್ತಾನವನ್ನು ಎದುರಿಸಲಿದೆ. ಅ.2ರಂದು ಬಾಂಗ್ಲಾದೇಶ ವಿರುದ್ಧ ಗುಂಪು ಹಂತದ ಕೊನೆಯ ಪಂದ್ಯವನ್ನು ಆಡಲಿದೆ.

ಹರ್ಮನ್‌ಪ್ರೀತ್

ಹರ್ಮನ್‌ಪ್ರೀತ್ ಸಿಂಗ್ ಭಾರತ ತಂಡವನ್ನು ಮುನ್ನಡೆಸಲಿದ್ದು, ಹಾರ್ದಿಕ್ ಸಿಂಗ್ ಉಪನಾಯಕನಾಗಿದ್ದಾರೆ.

'ಏಷ್ಯನ್ ಗೇಮ್ಸ್‌ಗಾಗಿ ಕಟ್ಟುನಿಟ್ಟಾಗಿ ತಯಾರಿ ನಡೆಸಿದ್ದೇವೆ. ಕಳೆದ ತಿಂಗಳು ಚೆನ್ನೈನಲ್ಲಿ ನಡೆದ ಏಷ್ಯನ್ ಚಾಂಪಿಯನ್ಸ್ ಟ್ರೋಫಿಯಲ್ಲೂ ಉತ್ತಮ ಪ್ರದರ್ಶನ ನೀಡಿದ್ದೇವೆ. ಅದೇ ಆಟವನ್ನು ಅಲ್ಲೂ ಪ್ರದರ್ಶಿಸುವ ವಿಶ್ವಾಸ ಹೊಂದಿದ್ದೇವೆ' ಎಂದು ಹರ್ಮನ್‌ಪ್ರೀತ್ ಸಿಂಗ್ ಪ್ರತಿಕ್ರಿಯಿಸಿದ್ದಾರೆ.

'ಶಿಬಿರದಲ್ಲಿ ಪ್ರತಿಯೊಬ್ಬರೂ ಒಂದೇ ಗುರಿಯತ್ತ ಚಿತ್ತ ಹರಿಸಿ ಕಠಿಣ ಅಭ್ಯಾಸ ನಡೆಸಿದ್ದಾರೆ. ನಮ್ಮ ಗುಂಪಿನಲ್ಲಿ ಕಠಿಣ ಸ್ಪರ್ಧೆಯನ್ನು ಎದುರು ನೋಡುತ್ತಿದ್ದೇವೆ. ಪದಕದೊಂದಿಗೆ ಹಿಂತಿರುಗುವ ಗುರಿ ನಮ್ಮದು' ಎಂದು ಹಾರ್ದಿಕ್ ಸಿಂಗ್ ತಿಳಿಸಿದ್ದಾರೆ.

ಭಾರತ ತಂಡ: ಗೋಲ್‌ಕೀಪರ್: ಪಿ.ಆರ್. ಶ್ರೀಜೇಶ್, ಕ್ರಿಷನ್ ಪಾಠಕ್ **ಡಿಫೆಂಡರ್:** ವರುಣ್ ಕುಮಾರ್, ಅಮಿತ್ ರೋಹಿದಾಸ್, ಜರ್ಮನ್‌ಪ್ರೀತ್ ಸಿಂಗ್, ಹರ್ಮನ್‌ಪ್ರೀತ್ ಸಿಂಗ್ ಮತ್ತು ಸಂಜಯ್ **ಮಿಡ್‌ಫೀಲ್ಡರ್:** ನೀಲಕಂಠ ಶರ್ಮಾ, ಹಾರ್ದಿಕ್ ಸಿಂಗ್, ಮನ್‌ಪ್ರೀತ್ ಸಿಂಗ್, ವಿವೇಕ್ ಸಾಗರ್ ಪ್ರಸಾದ್, ಸುಮಿತ್, ಶಂಶೇರ್ ಸಿಂಗ್, **ಫಾರ್ವರ್ಡ್:** ಅಭಿಷೇಕ್, ಗುರ್ಜಂತ್ ಸಿಂಗ್, ಮನ್‌ದೀಪ್ ಸಿಂಗ್, ಸುಖಜೀತ್ ಸಿಂಗ್, ಲಲಿತ್ ಕುಮಾರ್ ಉಪಾಧ್ಯಾಯ

ಪುಣೆ ಡೆವಿಲ್ಸ್ ಸಹಮಾಲೀಕರ ಮೇಲೆ ಐಸಿಸಿ ಪ್ರಕರಣ ದಾಖಲು

ದುಬೈ (ಪಿಟಿಐ): ಎರಡು ವರ್ಷಗಳ ಹಿಂದೆ ನಡೆದಿದ್ದ ಎಮಿರೆಟ್ಸ್ ಟಿ10 ಕ್ರಿಕೆಟ್ ಲೀಗ್‌ನಲ್ಲಿ ಭ್ರಷ್ಟಾಚಾರದಲ್ಲಿ ತೊಡಗಿದ್ದ ಎಂಟು ಮಂದಿಯ ಮೇಲೆ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಪ್ರಕರಣ ದಾಖಲಿಸಿದೆ.

ಈ ಎಂಟು ಮಂದಿಯಲ್ಲಿ ಆಟಗಾರರು, ಅಧಿಕಾರಿಗಳು ಮತ್ತು ಭಾರತ ಮೂಲದ ಪುಣೆ ಡೆವಿಲ್ಸ್ ತಂಡದ ಸಹಮಾಲೀಕರಾದ ದಂಪತಿ ಪರಾಗ ಸಂಘ್ವಿ ಮತ್ತು ಕೃಷನ್ ಕುಮಾರ್ ಚೌಧರಿ ಕೂಡ ಸೇರಿದ್ದಾರೆ. ಇದೇ ತಂಡದ ಆಟಗಾರ, ಬಾಂಗ್ಲಾದೇಶದ ಮಾಜಿ ಕ್ರಿಕೆಟಿಗ ನಾಸೀರ್ ಹುಸೇನ್ ಅವರ ಮೇಲೂ ಭ್ರಷ್ಟಾಚಾರ ತಡೆ ಕಾಯ್ದೆ ಉಲ್ಲಂಘನೆಯ ದೂರು ದಾಖಲಾಗಿದೆ.

ಭಾರತ ಮೂಲದ ಮತ್ತೊಬ್ಬ ಬ್ಯಾಟಿಂಗ್ ಕೋಚ್ ಸನ್ನಿ ಧಿಲ್ಲೋನ್ ಕೂಡ ಆರೋಪಿಯಾಗಿದ್ದಾರೆ.

'2021ರಲ್ಲಿ ನಡೆದಿದ್ದ ಅಬುಧಾಬಿ ಟಿ10 ಕ್ರಿಕೆಟ್ ಲೀಗ್ ಪಂದ್ಯಗಳಲ್ಲಿ ಭ್ರಷ್ಟಾಚಾರ ತಡೆ ನಿಯಮ ಉಲ್ಲಂಘಿಸುವಂತಹ ಚಟುವಟಿಕೆಗಳಲ್ಲಿ ಇವರು ತೊಡಗಿದ್ದರು. ಅಂತರರಾಷ್ಟ್ರೀಯ ಮತ್ತು ದೇಶಿ ಪಂದ್ಯಗಳಲ್ಲಿ ಫಲಿತಾಂಶ, ಪಂದ್ಯ ದ ಪ್ರತಿಯೊಂದು ಹಂತದಲ್ಲಿ ಬೆಟ್ಟಿಂಗ್ ಮಾಡುವುದನ್ನು ನಿಷೇಧಿಸಿರುವ 2.2.1ರ ನಿಯಮದ ಪ್ರಕಾರ ಮೊಕದ್ದಮೆ ದಾಖಲಾಗಿದೆ' ಎಂದು ಐಸಿಸಿ ಪ್ರಕಟಣೆಯಲ್ಲಿ ತಿಳಿಸಿದೆ.

ಮಂಗೋಲಿಯ 15 ರನ್‌ಗಳಿಗೆ ಆಲೌಟ್!

ಹಾಂಗ್‌ಝೌ (ಪಿಟಿಐ): ಇಂಡೋನೇಷ್ಯಾ ಮಹಿಳಾ ತಂಡದವರು ಏಷ್ಯನ್ ಗೇಮ್ಸ್ ಟಿ20 ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಮಂಗೋಲಿಯ ವಿರುದ್ಧ 172 ರನ್‌ಗಳ ಜಯ ಸಾಧಿಸಿದರು.

ಮಂಗಳವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಇಂಡೊನೇಷ್ಯಾ 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 187 ರನ್ ಗಳಿಸಿತು.

ಸವಾಲಿನ ಗುರಿ ಬೆನ್ನಟ್ಟಿದ ಮಂಗೋಲಿಯ 10 ಓವರ್‌ಗಳಲ್ಲಿ ಕೇವಲ 15 ರನ್‌ಗಳಿಗೆ ಆಲೌಟಾಯಿತು. ಈ ತಂಡದ ಏಳು ಆಟಗಾರ್ತಿಯರು ಶೂನ್ಯಕ್ಕೆ ಔಟಾದರು.

'ಎ' ಗುಂಪಿನ ಪಂದ್ಯದಲ್ಲಿ ಇಂಡೊನೇಷ್ಯಾ ಪರ ನಿ ಲುಹ್ ದೇವಿ 48 ಎಸೆತಗಳಲ್ಲಿ 62 ರನ್ ಗಳಿಸಿದರು. 'ಬಿ' ಗುಂಪಿನ ಪಂದ್ಯದಲ್ಲಿ ಮಲೇಷ್ಯಾ, 22 ರನ್‌ಗಳಿಂದ ಹಾಂಗ್‌ಕಾಂಗ್ ವಿರುದ್ಧ ಗೆದ್ದಿತು.

ಐಸಿಸಿ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಟ್ರೋಫಿಯನ್ನು ಮಂಗಳವಾರ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ತರಲಾಗಿದ್ದು, ಕ್ರಿಕೆಟ್‌ಪ್ರೇಮಿಗಳು ಸೆಲ್ಫಿ ತೆಗೆದುಕೊಂಡರು –ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ.

ಭಾರತ– ಆಸ್ಟ್ರೇಲಿಯಾ ಸರಣಿ 22ರಿಂದ; ರೋಹಿತ್, ವಿರಾಟ್‌ಗೆ ವಿಶ್ರಾಂತಿ

ರಾಹುಲ್ ನಾಯಕ: ಮರಳಿದ ಅಶ್ವಿನ್

ನವದೆಹಲಿ (ಪಿಟಿಐ): ಏಷ್ಯಾ ಕಪ್ ಟೂರ್ನಿಯಲ್ಲಿ ಭರ್ಜರಿ ಶತಕ ಗಳಿಸಿದ್ದ ಕೆ.ಎಲ್. ರಾಹುಲ್ ಅವರಿಗೆ ಈಗ ಆಸ್ಟ್ರೇಲಿಯಾ ಎದುರಿನ ಏಕದಿನ ಕ್ರಿಕೆಟ್ ಸರಣಿಯಲ್ಲಿ ಭಾರತ ತಂಡವನ್ನು ಮುನ್ನಡೆಸುವ ಹೊಣೆ ಲಭಿಸಿದೆ. ಅನುಭವಿ ಆಫ್‌ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಅವರನ್ನು ತಂಡಕ್ಕೆ ಸೇರ್ಪಡೆ ಮಾಡಲಾಗಿದೆ.

ಇದೇ 22ರಿಂದ ಆರಂಭವಾಗಲಿರುವ ಸರಣಿಯ ಮೊದಲೆರಡು ಪಂದ್ಯಗಳಿಗೆ ಬಿಸಿಸಿಐ ತಂಡ ಪ್ರಕಟಿಸಿದೆ. ರಾಹುಲ್ ನಾಯಕತ್ವ ವಹಿಸಲಿದ್ದಾರೆ. ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಹಾಗೂ ಹಾರ್ದಿಕ್ ಪಾಂಡ್ಯ ಅವರಿಗೆ ವಿಶ್ರಾಂತಿ ನೀಡಲಾಗಿದೆ. ಏಕದಿನ ಸರಣಿಯ ಮೂರನೇ ಪಂದ್ಯಕ್ಕೆ ಇವರೆಲ್ಲರೂ ತಂಡಕ್ಕೆ ಮರಳುವರು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಅಮೋಘ ಲಯದಲ್ಲಿರುವ ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ಅವರಿಗೂ ವಿಶ್ರಾಂತಿ ಕೊಡಲಾಗಿದೆ.

ಕೆ.ಎಲ್. ರಾಹುಲ್

ಆರ್. ಅಶ್ವಿನ್

ಸರಣಿಯ ಮೂರನೇ ಮತ್ತು ಕೊನೆಯ ಪಂದ್ಯಕ್ಕೆ ಎಲ್ಲರೂ ಮರಳುವರು.

ಅಶ್ವಿನ್ 2022ರ ಜನವರಿಯಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಏಕದಿನ ಪಂದ್ಯ ಆಡಿದ್ದರು. ಅದರ ನಂತರ ಅವರಿಗೆ ಮತ್ತೆ ಅವಕಾಶ ಸಿಕ್ಕಿಲ್ಲ. ಈಚೆಗೆ ಗಾಯಗೊಂಡಿರುವ ಆಲ್‌ರೌಂಡರ್ ಅಕ್ಷರ್ ಪಟೇಲ್ ಅವರು ಸೆ.28ರೊಳಗೆ ಚೇತರಿಸಿಕೊಳ್ಳದಿದ್ದರೆ ಅಶ್ವಿನ್ ಅವರನ್ನು ವಿಶ್ವಕಪ್ ತಂಡಕ್ಕೆ ಸೇರ್ಪಡೆ ಮಾಡಿಕೊಳ್ಳುವ ಸಾಧ್ಯತೆ ಇದೆ.

‘ಅಶ್ವಿನ್ ಮತ್ತು ವಾಷಿಂಗ್ಟನ್ ಸುಂದರ್ ಅವರನ್ನು ಗಮನದಲ್ಲಿಟ್ಟುಕೊಂಡಿದ್ದೇವೆ. ಅಕ್ಷರ್ ಫಿಟ್ ಆಗದಿದ್ದರೆ ಇಬ್ಬರಲ್ಲಿ ಒಬ್ಬರನ್ನು ಸೇರ್ಪಡೆ ಮಾಡಿಕೊಳ್ಳಬಹುದು. ಆದರೆ ಅಕ್ಷರ್ ಫಿಟ್ ಆಗುವ ಭರವಸೆ ಇದೆ’ ಎಂದು ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರ್ಕರ್ ಹೇಳಿದ್ದಾರೆ.

ವಿಶ್ವಕಪ್ ಟೂರ್ನಿಗಾಗಿ ಈಚೆಗೆ ಪ್ರಕಟಿಸಲಾದ 15 ಆಟಗಾರರ ಪಟ್ಟಿಯಲ್ಲಿ ಅಶ್ವಿನ್ ಅವರಿಗೆ ಸ್ಥಾನ ಕೊಟ್ಟಿರಲಿಲ್ಲ. ಅನುಭವಿ ಆಲ್‌ರೌಂಡರ್ ಆಗಿರುವ ಅಶ್ವಿನ್ ಅವರನ್ನು ಆಯ್ಕೆ ಪರಿಗಣಿಸದಿರುವ ಕುರಿತು ಬಿಸಿಸಿಐ ವಿರುದ್ಧ ಬಹಳಷ್ಟು ಟೀಕೆಗಳೂ ಕೇಳಿಬಂದಿದ್ದವು.

ತಂಡ (ಮೊದಲೆರಡು ಏಕದಿನ ಪಂದ್ಯ): ಕೆ.ಎಲ್. ರಾಹುಲ್ (ನಾಯಕ), ರವೀಂದ್ರ ಜಡೇಜ (ಉಪನಾಯಕ), ಋತುರಾಜ್ ಗಾಯಕವಾಡ, ಶುಭಮನ್ ಗಿಲ್, ಶ್ರೇಯಸ್ ಅಯ್ಯರ್, ಸೂರ್ಯಕುಮಾರ್ ಯಾದವ್, ತಿಲಕ್ ವರ್ಮಾ, ಇಶಾನ್ ಕಿಶನ್ (ವಿಕೆಟ್‌ಕೀಪರ್), ಶಾರ್ದೂಲ್ ಠಾಕೂರ್, ವಾಷಿಂಗ್ಟನ್ ಸುಂದರ್, ಆರ್. ಅಶ್ವಿನ್, ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ಪ್ರಸಿದ್ಧ ಕೃಷ್ಣ.

ಸಿಗದ ವೀಸಾ: ಚೆಸ್ ಸ್ಪರ್ಧಿಗಳ ಪ್ರಯಾಣ ಮೊಟಕು

ಚೆನ್ನೈ (ಎಟಿಪಿ): ನಿಗದಿತ ಸಮಯದಲ್ಲಿ ವೀಸಾ ದೊರೆಯದ ಕಾರಣ ಭಾರತದ ಐವರು ಸ್ಪರ್ಧಿಗಳು ಮೆಕ್ಸಿಕೊ ಸಿಟಿಯಲ್ಲಿ ನಡೆಯಲಿರುವ ಫಿಡೆ ವಿಶ್ವ ಜೂನಿಯರ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳುವ ಅವಕಾಶ ಕಳೆದುಕೊಂಡಿದ್ದಾರೆ.

ಸೆ.22 ರಿಂದ ಅ.2 ರ ವರೆಗೆ ನಡೆಯುವ ಟೂರ್ನಿಗೆ ಭಾರತದ 12 ಸ್ಪರ್ಧಿಗಳು ತೆರಳಬೇಕಿತ್ತು. ಆದರೆ ಐವರನ್ನು ಹೊರತುಪಡಿಸಿ, ಇನ್ನುಳಿದ ಏಳು ಮಂದಿ ಮಂಗಳವಾರ ಬೆಳಿಗ್ಗೆ ಮೆಕ್ಸಿಕೊಗೆ ಪ್ರಯಾಣ ಬೆಳೆಸಿದ್ದಾರೆ.

ವೃಶಾಂಕ್ ಚೌಹಾನ್, ಅರುಣ್ ಕಟಾರಿಯ, ಭಾಗ್ಯಶ್ರೀ ಪಾಟೀಲ್, ಪ್ರಣೀತ್ ವಿ., ಫೆಮಿಲ್ ಚೆಲ್ಲದುರೈ ಮತ್ತು ಕೋಚ್‌ಗಳಾದ ಪ್ರವೀಣ್ ತಿಪ್ಸೆ ಹಾಗೂ ಕಿರಣ್ ಅಗರವಾಲ್ ಅವರಿಗೆ ವೀಸಾ ಲಭಿಸಿಲ್ಲ.

ಇದರಿಂದ ಕೋಚ್‌ಗಳನ್ನು ಕೊನೆಯ ಕ್ಷಣದಲ್ಲಿ ಬದಲಿಸಲಾಗಿದ್ದು, ಮೆಕ್ಸಿಕೊ ವೀಸಾ ಹೊಂದಿದ್ದ ಸಿಆರ್‌ಜಿ ಕೃಷ್ಣ ಮತ್ತು ತಾರಿಣಿ ಗೋಯಲ್ ಅವರು ತಂಡದ ಜತೆ ತೆರಳಿದ್ದಾರೆ.

ಇದೀಗ ಬಾಲಕಿಯರ ವಿಭಾಗದಲ್ಲಿ ರಕ್ಷಿತಾ ರವಿ, ಬಿ.ಮೌನಿಕಾ ಅಕ್ಷಯಾ, ಅಮೂಲ್ಯ ಗುರುಪ್ರಸಾದ್ ಹಾಗೂ ಬಾಲಕರ ವಿಭಾಗದಲ್ಲಿ ಹರ್ಷವರ್ಧನ್ ಜಿ.ಬಿ., ಪ್ರಣವ್ ಆನಂದ್, ದುಷ್ಯಂತ್ ಶರ್ಮಾ ಮತ್ತು ವಿಘ್ನೇಶ್ ಬಿ. ಅವರು ಭಾರತ ತಂಡವನ್ನು ಪ್ರತಿನಿಧಿಸಲಿದ್ದಾರೆ. ಇದೇ ಟೂರ್ನಿ ಕಳೆದ ವರ್ಷ ಇಟಲಿಯಲ್ಲಿ ನಡೆದಿದ್ದಾಗ ಭಾರತದ 13 ಸ್ಪರ್ಧಿಗಳು ಪಾಲ್ಗೊಂಡಿದ್ದರು.

‘ವೀಸಾ ಪಡೆಯಲು ಅಗತ್ಯವಿದ್ದ ಎಲ್ಲ ದಾಖಲೆಗಳನ್ನು ನೀಡಿದ್ದರೂ, ಐವರಿಗೆ ವೀಸಾ ದೊರೆಯಲಿಲ್ಲ. ಇದರ ಹಿಂದಿನ ಕಾರಣ ಏನೆಂಬುದು ಸ್ಪಷ್ಟವಿಲ್ಲ. ನಮ್ಮ ಕಡೆಯಿಂದ ಸಾಧ್ಯವಿದ್ದ ಎಲ್ಲ ಪ್ರಯತ್ನಗಳನ್ನೂ ಮಾಡಿದ್ದೇವೆ’ ಎಂದು ಫಿಡೆ ಸಲಹಾ ಮಂಡಳಿ ಚೇರ್‌ಮನ್ ಭರತ್ ಸಿಂಗ್ ಚೌಹಾನ್ ಹೇಳಿದರು.

ಬಾಲಕಿಯರ ರಾಷ್ಟ್ರೀಯ ಫುಟ್‌ಬಾಲ್ ಟೂರ್ನಿ

ಕರ್ನಾಟಕಕ್ಕೆ ಮಣಿದ ಮಧ್ಯಪ್ರದೇಶ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಆತಿಥೇಯ ಕರ್ನಾಟಕ ತಂಡವು ಇಲ್ಲಿ ನಡೆಯುತ್ತಿರುವ 13 ವರ್ಷದೊಳಗಿನವರ ಸಬ್ ಜೂನಿಯರ್ ರಾಷ್ಟ್ರೀಯ ಬಾಲಕಿಯರ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಎರಡನೇ ಗುಂಪು ಹಂತದ ಪಂದ್ಯದಲ್ಲಿ ಮಧ್ಯಪ್ರದೇಶ ವಿರುದ್ಧ 5–0 ಗೋಲುಗಳಿಂದ ಜಯಿಸಿತು.

ಸೋಮವಾರ ನಡೆದ ಪಂದ್ಯದಲ್ಲಿ ಕರ್ನಾಟಕವು ಪ್ರಥಮಾರ್ಧದಲ್ಲಿ ನಾಲ್ಕು ಗೋಲುಗಳ ಮುನ್ನಡೆ ಗಳಿಸಿತು. ಟಿಯಾ ಝುಮೊರಾ ಫರ್ನಾಂಡಿಸ್ (17, 28 ಮತ್ತು 34ನೇ ನಿಮಿಷ) ಮೂರು ಗೋಲು ದಾಖಲಿಸಿ ಮಿಂಚಿದರು. ರಿಯಾನಾ ಲಿಜ್ ಜಾಕೋಬ್ (54ನೇ ನಿಮಿಷ) ಮತ್ತು ಆದ್ಯಾ ಬಿಂಜೋಲ (21ನೇ ನಿಮಿಷ) ಉಳಿದ ಗೋಲು ತಂದುಕೊಟ್ಟರು.

ಕರ್ನಾಟಕ ತಂಡದ ಟಿಯಾ ಝುಮೊರಾ ಫರ್ನಾಂಡಿಸ್ ಚೆಂಡನ್ನು ಗುರಿ ಸೇರಿಸಲು ಪ್ರಯತ್ನಿಸಿದರು

ಎದುರಾಳಿ ತಂಡದವರು ಗೋಲಿನ ಖಾತೆ ತೆರೆಯದ್ದರಿಂದ ಅತಿಥೇಯ ತಂಡಕ್ಕೆ ನಿರಾಯಾಸವಾಗಿ ಗೆಲುವು ದಕ್ಕಿತು.

ಮಂಗಳವಾರ ನಡೆದ ಮತ್ತೊಂದು ಪಂದ್ಯದಲ್ಲಿ ವಂದನಾ ನಾಯ್ಕ 6, 29 ಮತ್ತು 37ನೇ ನಿಮಿಷದಲ್ಲಿ ಗಳಿಸಿದ ಮೂರು ಗೋಲುಗಳ ನೆರವಿನಿಂದ ಒಡಿಶಾ ತಂಡವು 5–1 ಗೋಲುಗಳಿಂದ ತೆಲಂಗಾಣ ವಿರುದ್ಧ ಜಯಿಸಿತು. ಈ ತಂಡದ ರಿತು ಬಿ. (53 ಮತ್ತು 62ನೇ ನಿಮಿಷ) ಇನ್ನೆರಡು ಗೋಲು ಗಳಿಸಿದರು.

ಮುಂಬೈ ಸಿಟಿ ಎಫ್‌ಸಿಗೆ ನಿರಾಸೆ

ಪುಣೆ (ಪಿಟಿಐ): ಮುಂಬೈ ಸಿಟಿ ಎಫ್‌ಸಿ ತಂಡ, ಎಎಫ್‌ಸಿ ಚಾಂಪಿಯನ್ಸ್ ಲೀಗ್ (ಎಸಿಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ತನ್ನ ಅಭಿಯಾನ ವನ್ನು ಸೋಲಿನೊಂದಿಗೆ ಆರಂಭಿಸಿತು.

ಸೋಮವಾರ ಇಲ್ಲಿ ನಡೆದ ಪಂದ್ಯದಲ್ಲಿ ಮುಂಬೈ ತಂಡ 0–2 ಗೋಲುಗಳಿಂದ ಇರಾನ್‌ನ ನಸಾಜಿ ಮಜಂದರನ್ ಕ್ಲಬ್ ಎದುರು ಪರಾಭವಗೊಂಡಿತು. ಎಹ್ಸಾನ್ ಹೊಸೇನಿ (34ನೇ ನಿ.) ಮತ್ತು ಮೊಹಮ್ಮದ್‌ರೆಜಾ ಅಝಾದಿ (62ನೇ ನಿ.) ಅವರು ನಸಾಜಿ ಪರ ಗೋಲು ಗಳಿಸಿದರು.

ಆಕ್ರಮಣಕಾರಿ ಪ್ರದರ್ಶನ ನೀಡಿದ ಮುಂಬೈ ತಂಡ ಗೋಲು ಗಳಿಸಲು ಕೆಲವೊಂದು ಉತ್ತಮ ಪ್ರಯತ್ನ ನಡೆಸಿತಾದರೂ ಯಶಸ್ಸು ದೊರೆಯಲಿಲ್ಲ. 9ನೇ ನಿಮಿಷದಲ್ಲಿ ಲಾಲ್‌ಲಿಯಾನ್‌ಜುವಾಲ ಚಾಂಗ್ಟೆ ಗೋಲು ಗಳಿಸುವ ಅವಕಾಶ ಹಾಳುಮಾಡಿಕೊಂಡರು.

ವಿಶ್ವಕಪ್ ಶೂಟಿಂಗ್: ನಿಶ್ಚಲ್‌ಗೆ ಬೆಳ್ಳಿ

ನವದೆಹಲಿ (ಪಿಟಿಐ): ಭಾರತದ ಯುವ ಶೂಟರ್ ನಿಶ್ಚಲ್ ಅವರು ರಿಯೊ ಡಿ ಜನ್ಸೈರೊದಲ್ಲಿ ಕೊನೆಗೊಂಡ ಐಎಸ್‌ಎಸ್‌ಎಫ್ ವಿಶ್ವಕಪ್‌ನ ಮಹಿಳೆಯರ 50 ಮೀ. ರೈಫಲ್ ತ್ರಿ ಪೊಸಿಷನ್‌ನಲ್ಲಿ ಬೆಳ್ಳಿ ಗೆದ್ದುಕೊಂಡರು.

ಕೂಟದ ಅಂತಿಮ ದಿನವಾದ ಸೋಮವಾರ ನಡೆದ ಸ್ಪರ್ಧೆಯ ಫೈನಲ್‌ನಲ್ಲಿ ಅವರು 458.0 ಪಾಯಿಂಟ್ಸ್‌ಗಳೊಂದಿಗೆ ಎರಡನೇ ಸ್ಥಾನ ಪಡೆದರು. ನಾರ್ವೆಯ ಜಾನೆಟ್ ಹೆಗ್ ಡುಯೆಸ್ಟ್ (461.5) ಚಿನ್ನ ಗೆದ್ದುಕೊಂಡರು. ಹರಿಯಾಣದ ಶೂಟರ್‌ಗೆ ಸೀನಿಯರ್ ವಿಭಾಗದಲ್ಲಿ ವಿಶ್ವಕಪ್‌ನಲ್ಲಿ ದೊರೆತ ಮೊದಲ ಪದಕ ಇದು.

‘ಸೀನಿಯರ್ ವಿಭಾಗದಲ್ಲಿ ಇದು ನನ್ನ ಮೊದಲ ವಿಶ್ವಕಪ್ ಫೈನಲ್ ಆಗಿತ್ತು. ಪದಕ ಗೆದ್ದಿರುವುದು ಸಂತಸ ಉಂಟುಮಾಡಿದೆ’ ಎಂದು ನಿಶ್ಚಲ್ ಪ್ರತಿಕ್ರಿಯಿಸಿದರು.

ರಾಷ್ಟ್ರೀಯ ದಾಖಲೆ: ನಿಶ್ಚಲ್ ಅವರು ಅರ್ಹತಾ ಸುತ್ತಿನಲ್ಲಿ 592 ಪಾಯಿಂಟ್ಸ್ ಕಲೆಹಾಕಿ ರಾಷ್ಟ್ರೀಯ ದಾಖಲೆ ತಮ್ಮದಾಗಿಸಿಕೊಂಡಿದ್ದರು. ಅಂಜುಮ್ (591) ಕಳೆದ ವರ್ಷ ಕೈರೊದಲ್ಲಿ ನಡೆದಿದ್ದ ಪ್ರೆಸಿಡೆಂಟ್ಸ್ ಕಪ್‌ನಲ್ಲಿ ಮಾಡಿದ್ದ ದಾಖಲೆಯನ್ನು ಮುರಿದರು. ವಿಶ್ವಕಪ್‌ನಲ್ಲಿ ಕಣದಲ್ಲಿದ್ದ ಅಂಜುಮ್ 586 ಪಾಯಿಂಟ್ಸ್‌ಗಳೊಂದಿಗೆ 10ನೇ ಸ್ಥಾನ ಪಡೆದು, ಫೈನಲ್ ಪ್ರವೇಶಿಸಲು ವಿಫಲರಾದರು.

ಅಂತಿಮ ದಿನ ಕಣದಲ್ಲಿದ್ದ ಭಾರತದ ಮತ್ತೊಬ್ಬ ಶೂಟರ್ ಗುರುಪ್ರೀತ್ ಸಿಂಗ್, ಪುರುಷರ 25 ಮೀ. ರ್‍ಯಾಪಿಡ್ ಫೈರ್ ಪಿಸ್ತೂಲ್ ವಿಭಾಗದಲ್ಲಿ ಫೈನಲ್ ಪ್ರವೇಶಿಸಲು ವಿಫಲರಾದರು. ಅವರು 15ನೇ ಸ್ಥಾನ ಗಳಿಸಿದರು.

ನಿಶ್ಚಲ್ –ಎನ್‌ಆರ್‌ಎಐ ಚಿತ್ರ

16 ಶೂಟರ್‌ಗಳನ್ನು ಒಳಗೊಂಡಿದ್ದ ಭಾರತ ತಂಡವು ಈ ಕೂಟದಲ್ಲಿ ಎರಡು ಪದಕಗಳೊಂದಿಗೆ ತನ್ನ ಅಭಿಯಾನ ಕೊನೆಗೊಳಿಸಿದೆ. ಇಳವೆನಿಲ್ ವಾಳರಿವನ್ ಅವರು ಮಹಿಳೆಯರ 10 ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದಿದ್ದರು.

ನೆಟ್‌ಬಾಲ್: ರಾಜ್ಯ ತಂಡಕ್ಕೆ ನಂದಿನಿ ನಾಯಕಿ

ಬೆಂಗಳೂರು: ಎಲ್.ಜಿ. ನಂದಿನಿ ಅವರು ಸೆ.21ರಿಂದ 25ರ ವರೆಗೆ ಹರಿಯಾಣದಲ್ಲಿ ನಡೆಯಲಿರುವ 41ನೇ ರಾಷ್ಟ್ರೀಯ ಮಹಿಳೆಯರ ನೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ ತಂಡವನ್ನು ಮುನ್ನಡೆಸಲಿದ್ದಾರೆ.

ನಂದಿನಿ

ತಂಡ ಹೀಗಿದೆ: ಎಲ್.ಜಿ. ನಂದಿನಿ (ನಾಯಕಿ), ಬಿ.ಆರ್. ಸುರಭಿ (ಉಪನಾಯಕಿ), ಕೆ.ಎಸ್. ಗಗನಾ, ಎಲ್.ಜಿ. ಮಾನಸಾ, ಎಸ್. ಶಿವಲೀಲಾ, ಎಚ್. ಮಾನಸವಿ, ಎಸ್. ಮಹೇಶ್ವರಿ, ಎಸ್. ರಶ್ಮಿ, ಎಸ್. ಸ್ವಾತಿ, ಸುರಕ್ಷಾ, ಹರ್ಷಿತಾ, ಕೆ. ಸ್ನೇಹಾ, ಗಿರೀಶ್ (ಕೋಚ್).

ರ್‍ಯಾಂಕಿಂಗ್: 3ನೇ ಸ್ಥಾನದಲ್ಲಿ ಭಾರತ ಪುರುಷರ ಹಾಕಿ ತಂಡ

ಲೂಸನ್, ಸ್ವಿಟ್ಜರ್ಲೆಂಡ್ (ಪಿಟಿಐ): ಭಾರತ ಪುರುಷರ ಹಾಕಿ ತಂಡವು ಅಂತರರಾಷ್ಟ್ರೀಯ ಹಾಕಿ ಫೆಡರೇಷನ್ (ಎಫ್‌ಐಎಚ್) ಸೋಮವಾರ ಬಿಡುಗಡೆ ಮಾಡಿದ ವಿಶ್ವ ರ್‍ಯಾಂಕಿಂಗ್ ಪಟ್ಟಿಯಲ್ಲಿ ಮೂರನೇ ಸ್ಥಾನ ಪಡೆದಿದೆ.

ಕಳೆದ ತಿಂಗಳು ನಡೆದ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದ ಬಳಿಕ 2771 ಅಂಕಗಳೊಂದಿಗೆ 16 ತಿಂಗಳ ನಂತರ ಮತ್ತೆ ಮೂರನೇ ಸ್ಥಾನಕ್ಕೆ ಭಾರತ ಮರಳಿದೆ. ಭಾರತ ಆಡಿರುವ ಕೊನೆಯ ಏಳು ಪಂದ್ಯಗಳಲ್ಲಿ 6ರಲ್ಲಿ ಗೆದ್ದರೆ, ಒಂದು ಪಂದ್ಯವನ್ನು ಡ್ರಾ ಮಾಡಿಕೊಂಡಿದೆ.

ನೆದರ್‌ಲೆಂಡ್ಸ್ ತಂಡವು (3113 ಅಂಕ) ಅಗ್ರಸ್ಥಾನದಲ್ಲಿ ಮುಂದುವರಿದಿದೆ. ಈಚೆಗೆ ನಡೆದ ಯುರೋಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆಲ್ಲುವ ಜತೆಗೆ ಎಫ್‌ಐಎಚ್ ಹಾಕಿ ಪ್ರೊ ಲೀಗ್‌ನಲ್ಲಿ ಚಾಂಪಿಯನ್, ಹಾಕಿ ವಿಶ್ವಕಪ್‌ನಲ್ಲಿ ಕಂಚಿನ ಪದಕವನ್ನು ನೆದರ್‌ಲೆಂಡ್ಸ್ ಜಯಿಸಿತ್ತು.

ಬೆಲ್ಜಿಯಂ (2989) ಎರಡನೇ ಸ್ಥಾನದಲ್ಲಿ ಮುಂದುವರಿದರೆ, ಜರ್ಮನಿ (2689) ಮತ್ತು ಆಸ್ಟ್ರೇಲಿಯಾ (2544) ಕ್ರಮವಾಗಿ ಐದು ಮತ್ತು ಆರನೇ ಸ್ಥಾನದಲ್ಲಿವೆ. ಅರ್ಜೆಂಟೀನಾ (2350), ಸ್ಪೇನ್ (2347)ಗಿಂತ ಒಂದು ಸ್ಥಾನ ಬಡ್ತಿ ಪಡೆದು ಏಳನೇ ಸ್ಥಾನ ತಲುಪಿದೆ.

ಏಳನೇ ಸ್ಥಾನದಲ್ಲಿ ಮಹಿಳಾ ತಂಡ: ಭಾರತ ಮಹಿಳೆಯರ ಹಾಕಿ ತಂಡವು (2325) ರ್‍ಯಾಂಕಿಂಗ್ ಪಟ್ಟಿಯಲ್ಲಿ 7ನೇ ಸ್ಥಾನದಲ್ಲಿದೆ. ಇಲ್ಲೂ ನೆದರ್‌ಲೆಂಡ್ಸ್ ತಂಡ (3422) ಅಗ್ರಸ್ಥಾನದಲ್ಲಿದೆ.

ಆಸ್ಟ್ರೇಲಿಯಾ (2818) ಮತ್ತು ಅರ್ಜೆಂಟೀನಾ (2767) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನಗಳಲ್ಲಿದ್ದರೆ, ಬೆಲ್ಜಿಯಂ (2609) ನಾಲ್ಕನೇ, ಜರ್ಮನಿ (2574) ಐದನೇ ಸ್ಥಾನದಲ್ಲಿವೆ.

THE TRUST OF HERO
Hero WORLD'S NO.1 22 YEARS IN A ROW## MOTORCYCLE & SCOOTER COMPANY
Exchange Powered By Wheels of Trust^^ SCAN FOR BEST RESALE VALUE
REVOLUTIONARY i3S TECHNOLOGY
INDIA'S FIRST 5 YEAR WARRANTY* *Conditions apply
Hero MotoCorp Ltd. Regd. Office: The Grand Plaza, Plot No.2, Nelson Mandela Road, Vasant Kunj - Phase -II, New Delhi - 110070, India. | CIN: L35911DL1984PLC017354 | For further information, contact your nearest Hero MotoCorp authorised outlet or call our toll-free no.: 1800 266 0018 or visit us on www.HeroMotoCorp.com.
Accessories and features shown may not be a part of standard fitment. Always wear a helmet while riding a two-wheeler. ##Highest sales for any 2 Wheeler Corporate Entity in the world for Calendar Year 2022 – Data Source: DNA Consult & Advisory's report Assessment of Global Two Wheelers Market (CY22). ^^Based on offers from empaneled dealers on Wheels of Trust platforms. *Finance scheme is at the sole discretion of financiers & subject to its respective terms & conditions. Offer is for limited period or till stocks last. Offer is available at select dealerships only. #This scheme is applicable only for teachers subjective to its terms and conditions.Terms & Conditions apply. For more details, please visit your nearest authorized Hero outlet.
BUY ONLINE AT eshop.heromotocorp.com
CALL TOLL-FREE 1800 266 0018
70116 70116
AUTHORIZED DEALERS: BENGALURU: PEENYA: SAI HERO: 9289922830. **MAGADI ROAD:** POORNA HERO: 9289923212. **KAMAKSHIPALYA:** POORNA MOTORS: 9606922534. **BANASHANKARI:** SAI HERO: 9289922476. **JP NAGAR:** SAI HERO: 9900236280. **BANASWADI:** BHAGATH HERO: 9289922738. **HOSKOTE:** BHAGATH HERO: 8884600051. **KR PURAM:** BHAGATH HERO: 7829488706. **HOSUR ROAD:** RT KRISHNA HERO: 9289923177. **JIGANI:** RT KRISHNA HERO: 8762860999. **BYATARAYANAPURA:** BIMAL HERO: 9289922863. **RT NAGAR:** BIMAL HERO: 9535327710. **DODDABALLAPUR:** BIMAL HERO: 9742202125. **LALBAGH ROAD:** PRAKASH HERO: 9289922117. **RAJAJI NAGAR:** MAX HERO: 9289923023. **MARATHALLI:** VAAYURATHA HERO: 9289923811. **TUMKUR:** SAI HERO: 9289922986. **BH ROAD:** SAI HERO: 7022752841. **TIPTUR:** SAI HERO: 9164840456. **KUNIGAL:** SAI HERO: 7022752858. **SHIMOGA:** MYTHRI HERO: 9289922635. SREE KARTHIK HERO: 9289922509. **CHICKMAGALUR:** NAYANA HERO: 9289922120. **SAGAR:** PRAJWAL HERO: 9289922399. **UDUPI:** SHAKTI HERO: 9821696225. **MANGALORE:** TRIBHUVAN HERO: 9289923203. WEST COAST HERO: 9289922606. **DAVANAGERE:** PRAKASHA HERO: 9289922501. RUTVI HERO: 9289923174. **CHITRADURGA:** MAHESH HERO: 9289922126. **MYSORE:** SHAH MYSORE HERO: 9289922518. DYUTHI MYSORE HERO (B.M. HOSPITAL): 9289922475. **NANJANGUD:** DYUTHI HERO: 9742885252. **CHAMARAJNAGAR:** YEPIYES HERO: 9289922828. **HASSAN:** VENKATESHWARA HERO: 9289922121. **MANDYA:** DAYANAND HERO: 9289922123.
FCB INTERFACE/0550/SEP 2023/KANNAD